Yojana (Kannada) October 2015 Date of Publication: 30th Sept. Posted on 10th Oct. at Bengaluru PSO BG - 560026 ISSN 0971-8737
"Registered" Reg.No.RNP/KA/BGS/2024/2013-2015 Total No. of Pages : 72 + 4 Cover Pages Regd.No. RNI 43034/85


# ಹರಿಪ್ರಸಾದ್

## ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

# KAS 2016

## PRE-CUM-MAINS BATCHES

## NEW BATCH STARTS FROM SEPT. 27, 2015 SUN @ 10 AM

ಕನ್ನಡ ಮಾಧ್ಯಮದಲ್ಲಿ ಬೋಧಿಸಲಾಗುವುದು

ಸ್ಪರ್ಧಾರ್ಥಿಗಳೇ ಪೂರ್ವಭಾವಿ ಪರೀಕ್ಷೆಯ ನಂತರ ಮುಖ್ಯ ಪರೀಕ್ಷೆಯ ಅವಧಿ ತುಂಬಾ ಕಡಿಮೆ (2 ರಿಂದ 3 ತಿಂಗಳು) ಇರುತ್ತದೆ. ಮುಖ್ಯ ಪರೀಕ್ಷೆಯಲ್ಲಿ ಐದು ಸಾಮಾನ್ಯ ಅಧ್ಯಯನ ಪತ್ರಿಕೆಗಳಿದ್ದು, ಸಿದ್ಧತೆಗೆ ಕನಿಷ್ಠ 6 ರಿಂದ 8 ತಿಂಗಳು ಕಾಲ ಬೇಕಾಗುತ್ತದೆ. ಮುಖ್ಯ ಪರೀಕ್ಷೆಗೆ ವಿಷಯದ ವಿಸ್ತೃತ ಮತ್ತು ಆಳವಾದ ಅಧ್ಯಯನ, ಅದರ ಜೊತೆಗೆ ವಿಶ್ಲೇಷಣಾತ್ಮಕವಾಗಿ ಕೂಡ ಅರ್ಥೈಸಿಕೊಳ್ಳಬೇಕಾಗುತ್ತದೆ. ಇದನ್ನೆಲ್ಲಾ ಮನಗೊಂಡು ಮುಂಬರುವ KAS ಪರೀಕ್ಷೆಗೆ ಅನುಕೂಲವಾಗುವಂತೆ, (Prelims cum Mains) ತರಬೇತಿಯನ್ನು ರೂಪಿಸಿಕೊಂಡಿರುತ್ತೇವೆ. ಆಸಕ್ತ ಅಭ್ಯರ್ಥಿಗಳು ಈ ತರಬೇತಿ ಕಾರ್ಯಕ್ರಮಕ್ಕೆ ಸೇರಿಕೊಳ್ಳಬಹುದು.

New Pre-cum-Mains Batch from Sept. 27 2015



G. HARIPRASAD
DIRECTOR

# 6, 4th Cross, 5th Main, B/h. Hampinagar Post Office, (Next to SBM), Vijayanagar 2nd Stage, Bangalore-104
Ph: 080-23354445, 9740472728, 9482013522


Printed & Published by Dr. Sadhana Rout, Additional Director General and Head on behalf of Publications Division Soochna Bhawan, C.G.O. Complex, Lodhi Road, New Delhi - 110 003. & Printed at Omkar Offset Printers, 3/3, 1st Main Road, New Tharagupet, Bengaluru - 560 002. Ph. : 080-26708186/7 and Published at 1st Floor, 'F' Wing, Kendriya Sadana, Koramangala, Bengaluru - 560 034. Ph : 080 2553 7244 Chief Editor : Deepika Kachhal, Senior Editor : B.S. Meenakshi.

# ಯೋಜನಾ

ಅಕ್ಟೋಬರ್ 2015 ಅಭಿವೃದ್ಧಿ ಮಾಸಪತ್ರಿಕೆ ₹ 20 /-

ವಿಶೇಷ ಸಂಚಿಕೆ

## ಕೌಶಲ್ಯಾಭಿವೃದ್ಧಿ: ಏರು ಹಾದಿಯಲ್ಲಿ

ಕೌಶಲ್ಯಾಭಿವೃದ್ಧಿ ಮರುವ್ಯಾಖ್ಯಾನ
ದಿಲೀಪ್ ಚಿನಾಯ್

ತಂತ್ರಜ್ಞಾನ ಹಾಗೂ ಕೌಶಲ್ಯ
ಅರುಣ್ ಮೈರಾ, ಮದನ್ ಪದಕಿ


ಉದ್ಯೋಗಾರ್ಹತೆ ಹೆಚ್ಚಿಸಲು ತರಬೇತಿ
ಸುನೀತಾ ಸಂಘಿ

ವಿಶೇಷ ಲೇಖನ
ನಮ್ಮ ಪರಂಪರೆಯ ಕೈ ಮಗ್ಗದ ರಕ್ಷಣೆ
ಮೋನಿಕಾ ಎಸ್ ಗಾರ್ಗ್

ಕೇಂದ್ರ ಪ್ರಜ್ಞೆ
ಕರಕುಶಲ ಕಲೆ ಮತ್ತು ಶಿಕ್ಷಣ
ಗಾಂಧೀಜಿಯೊಂದಿಗಿನ ಸಂವಾದ



ಜ್ಞಾನಾರ್ಜನೆಗಾಗಿ...
ಯೋಜನಾ – ಕನ್ನಡ ಮಾಸ ಪತ್ರಿಕೆ
ಚಂದಾದಾರರಾಗಿ




ವಿಳಾಸ

**ಯೋಜನಾ – ಕನ್ನಡ**

ಮೊದಲನೆ ಅಂತಸ್ತು,
'ಎಫ್' ವಿಂಗ್, ಕೇಂದ್ರೀಯ ಸದನ,
ಕೋರಮಂಗಲ, ಬೆಂಗಳೂರು – 560 034.
✆ : 25537244
e-mail : yojanakannada@yahoo.com

**ಚಂದಾ ವಿವರ**

| | |
|---|---|
| ಒಂದು ವರ್ಷಕ್ಕೆ | ರೂ. 100/- |
| ಎರಡು ವರ್ಷಗಳಿಗೆ | ರೂ. 180/- |
| ಮೂರು ವರ್ಷಗಳಿಗೆ | ರೂ. 250/- |

ಚಂದಾ ಹಣವನ್ನು ಮನಿ ಆರ್ಡರ್- ಎಂ ಓ ಮೂಲಕವೇ ನಮ್ಮ ವಿಳಾಸಕ್ಕೆ ಕಳಿಸಿದರೆ ಉತ್ತಮ. ಎಂ ಓ ಕಳಿಸಿದ ಒಂದು ವಾರದ ಒಳಗೆ ನಮ್ಮ ಕಚೇರಿಯನ್ನು ಸಂಪರ್ಕಿಸಿ ನಿಮ್ಮ ವಿಳಾಸ-ವಿವರಗಳನ್ನು ದೃಢೀಕರಿಸಿಕೊಳ್ಳಬೇಕಾಗಿ ಕೋರಲಾಗಿದೆ.

ಪತ್ರಿಕೆ ಸರಿಯಾಗಿ ತಲುಪಲು
ಚಂದಾದಾರರು, ಅಂಚೆ ಪಿನ್‌ಕೋಡ್ ಒಳಗೊಂಡ
ತಮ್ಮ ಪೂರ್ಣ ವಿಳಾಸ ಒದಗಿಸಬೇಕು.

# ಇ ಅವತರಣಿಕೆಯಲ್ಲಿ ಮಹಾತ್ಮಾಗಾಂಧಿ ಕೃತಿ ಸಂಗ್ರಾಹ್ಯ

ಸುಮಾರು 55,000 ಪುಟಗಳಷ್ಟಿರುವ 100 ಸಂಪುಟಗಳ ಮಹಾತ್ಮಾ ಗಾಂಧೀಜಿಯವರ ಕೃತಿ ಸಂಗ್ರಾಹ್ಯ (ಸಿಡಬ್ಲ್ಯುಎಂಜಿ) ಈಗ ವಿದ್ಯುನ್ಮಾನ ಅವತರಣಿಕೆಯಲ್ಲಿ ಲಭ್ಯ. ಜನರಿಗೆ, ಸುಲಭವಾಗಿ ಲಭ್ಯವಾಗುವ ಇ–ಅವತರಣಿಕೆಯನ್ನು ಕೇಂದ್ರ ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರ ಹಾಗೂ ವಾರ್ತಾ ಮತ್ತು ಪ್ರಸಾರ ಖಾತೆ ಸಚಿವ ಶ್ರೀ ಅರುಣ್ ಜೈಟ್ಲಿ ಸೆಪ್ಟೆಂಬರ್ 8 2015 ರಂದು ದೆಹಲಿಯಲ್ಲಿ ಬಿಡುಗಡೆ ಮಾಡಿದರು. ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವ ಕ. ರಾಜ್ಯವರ್ಧನ್ ರಾಠೋಡ್ (ನಿ) ಉಪಸ್ಥಿತಿಯಲ್ಲಿ ಗಾಂಧಿ ಶಾಂತಿ ಪ್ರತಿಷ್ಠಾನ ಆಶ್ರಯದಲ್ಲಿ ನಡೆದ ಸಮಾರಂಭದಲ್ಲಿ ಈ ಅವತರಣಿಕೆ ಬಿಡುಗಡೆಗೊಳಿಸಲಾಯಿತು.




ವಾರ್ತಾ ಮತ್ತು ಪ್ರಸಾರ ಹಾಗೂ ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರ ಖಾತೆ ಸಚಿವ ಶ್ರೀ ಅರುಣ್ ಜೈಟ್ಲಿ ಅವರು, ಮಹಾತ್ಮಾ ಗಾಂಧಿ ಕೃತಿ ಸಂಗ್ರಾಹ್ಯದ (ಸಿಡಬ್ಲ್ಯುಎಂಜಿ) ಇ ಅವತರಣಿಕೆಯನ್ನು ಬಿಡುಗಡೆ ಮಾಡುತ್ತಿರುವುದು ಚಿತ್ರದಲ್ಲಿ ವಾರ್ತಾ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವ ಕ. ರಾಜ್ಯವರ್ಧನ್ ರಾಠೋಡ್ (ನಿ) ಹಾಗೂ ಪ್ರಖ್ಯಾತ ಗಾಂಧಿ ವಿಚಾರ ಪಂಡಿತೆ ಕುಮಾರಿ ದೀನಾಬೆನ್ ಪಟೇಲ್ ಅವರನ್ನು ಕಾಣಬಹುದು.

ಇದೇ ಸಂದರ್ಭದಲ್ಲಿ ಗಾಂಧಿ ಹೆರಿಟೇಜ್ ಪೋರ್ಟಲ್ ಮೇಲೆ ಇ–ಅವತರಣಿಕೆಯ ಅಪ್‌ಲಿಂಕ್‌ನ್ನು ಕೂಡಾ ಸಚಿವರು ನೆರವೇರಿಸಿದರು. ಭಾರತ ಸರ್ಕಾರದ ಸಂಸ್ಕೃತಿ ಖಾತೆ ನೆರವಿನೊಂದಿಗೆ ಸಾಬರಮತಿ ಆಶ್ರಮ ಸಂರಕ್ಷಣೆ ಮತ್ತು ಸ್ಮಾರಕ ಪ್ರತಿಷ್ಠಾನ ಈ ಪೋರ್ಟಲ್ ಅನ್ನು ನಿರ್ವಹಿಸುತ್ತಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಶ್ರೀ ಜೈಟ್ಲಿ ಅವರು, ಮಹಾತ್ಮಾಗಾಂಧಿಯವರ ಕೃತಿ ಸಂಗ್ರಾಹ್ಯದ ಡಿಜಿಟಲೀಕರಣ – ರಾಷ್ಟ್ರೀಯ ಪರಂಪರೆ ಸಂರಕ್ಷಣೆ ಹಾಗೂ ಮಾಹಿತಿ ಪ್ರಸಾರದಲ್ಲಿ ಮಹತ್ವದ ಸಾಧನವಾಗಿದೆ ಎಂದರು. ಸಂಗ್ರಾಹ್ಯದ ಇ ಯೋಜನೆಯ ಪ್ರಾಮುಖ್ಯತೆ ಒತ್ತಿ ಹೇಳಿದ ಅವರು ಇದು ಸ್ವತಃ ಗಾಂಧೀಜಿಯವರೇ ಸ್ಥಾಪಿಸಿ, ಪೋಷಿಸಿದ ಸಂಸ್ಥೆಯ ಸಹಯೋಗದಿಂದ ನೆರವೇರುತ್ತಿರುವ ಯೋಜನೆಯಾಗಿದೆ ಎಂದರು. ಈ ಅವಿಸ್ಮರಣೀಯ ಕಾರ್ಯದ ಹಿಂದಿ ಅವತರಣಿಕೆ – ಸಂಪೂರ್ಣ ಗಾಂಧಿ ವಾಙ್ಮಯವನ್ನು ಸದ್ಯದಲ್ಲೆ ಡಿಜಿಟಲೀಕರಣ ಮಾಡಲಾಗುವುದೆಂದು ಅವರು ಪ್ರಕಟಿಸಿದರು.

ಮಹಾತ್ಮಾಗಾಂಧಿಯವರ ಕೃತಿ ಸಂಗ್ರಾಹ್ಯದ, ವಿದ್ಯುನ್ಮಾನ ಅವತರಣಿಕೆ ವಿಷಯಕ್ಕೆ ಸಂಬಂಧಿಸಿದಂತೆ ಪ್ರಕಾಶನ ವಿಭಾಗ 2011ರ ಸೆಪ್ಟೆಂಬರ್‌ನಲ್ಲಿ ಅಹಮದಾಬಾದಿನ ಗುಜರಾತ್ ವಿದ್ಯಾಪೀಠದೊಂದಿಗೆ ತಿಳಿವಳಿಕೆ ಒಪ್ಪಂದ ಮಾಡಿಕೊಂಡಿತ್ತು. ಗುಜರಾತ್ ವಿದ್ಯಾಪೀಠದ ಮಾಜಿ ಕುಲಪತಿ ಹಾಗೂ ಗಾಂಧಿ ವಿಚಾರಧಾರೆ ವಿಶೇಷಜ್ಞ ಪ್ರೊ. ಸುದರ್ಶನ್ ಅಯ್ಯಂಗಾರ್, ಗಾಂಧಿ ವಿಚಾರ ಪಂಡಿತೆ, ಕುಮಾರಿ ದೀನಾಬೆನ್ ಪಟೇಲ್, ಸಾಬರಮತಿ ಆಶ್ರಮ ಸಂರಕ್ಷಣೆ ಮತ್ತು ಸ್ಮಾರಕ ಟ್ರಸ್ಟ್‌ನ ನಿರ್ದೇಶಕ ಶ್ರೀ ತ್ರಿದೀಪ್ ಸುಹೃದ್ ಅವರನ್ನೊಳಗೊಂಡ ಸಮಿತಿ ಈ ಕಾರ್ಯದ ಉಸ್ತುವಾರಿ ವಹಿಸಿ, ಎಲ್ಲ ಅಂಶಗಳಲ್ಲಿ ಅಧಿಕೃತ ವಿಚಾರಗಳನ್ನು ಖಾತರಿಪಡಿಸಿದೆ.

ಮಹಾತ್ಮಾ ಗಾಂಧಿ ಕೃತಿ ಸಂಗ್ರಾಹ್ಯವನ್ನು ಪ್ರಕಾಶನ ವಿಭಾಗ 1956–94ರ ಅವಧಿಯಲ್ಲಿ ಹೊರತಂದಿದೆ. ಇದು ಗಾಂಧೀಜಿಯವರ, ಮಾತು–ಕೃತಿ ಎರಡನ್ನೂ ಒಳಗೊಂಡ ಅಪೂರ್ವ ಪುಸ್ತಿಕೆಯಾಗಿದೆ. ಗಾಂಧೀಜಿಯವರು 1884 ರಿಂದ ಹಿಡಿದು ತಮ್ಮ ಕೊನೆಯುಸಿರಿನವರೆಗೆ ಅಂದರೆ, ಜನವರಿ 30, 1948ರ ಅವಧಿಯಲ್ಲಿ ವರ್ಷವಿಡಿ ಪ್ರತಿದಿನ, ಆಡಿದ ಮಾತು, ಕೃತಿಗಳು ಇಲ್ಲಿ ಮೂಡಿ ಬಂದಿವೆ. ವಿಶ್ವದಾದ್ಯಂತ ಹಂಚಿ ಹೋಗಿದ್ದ ಗಾಂಧೀಜಿಯವರ ಮಾತು – ಕೃತಿಗಳನ್ನು ಅಧ್ಯಯನ ದೃಷ್ಟಿಯಿಂದ ಸಂಗ್ರಹಿಸಿ, ಕಲೆ ಹಾಕಿ ನಿರೂಪಿಸಿದ ಕೃತಿ ಇದಾಗಿದೆ.

ಅಕ್ಟೋಬರ್ 2015 ಸಂಚಿಕೆ – 3 ಸಂಪುಟ – 31

# ಯೋಜನಾ

ಮುಖ್ಯ ಸಂಪಾದಕಿ
**ದೀಪಿಕಾ ಕಚ್ಚಲ್**

ಹಿರಿಯ ಸಂಪಾದಕಿ
**ಬಿ.ಎಸ್. ಮೀನಾಕ್ಷಿ**

ಸಂಪಾದಕಿ
**ಬಿ.ಕೆ. ಕಿರಣ್ಮಯಿ**

ವಿಳಾಸ
ಯೋಜನಾ – ಕನ್ನಡ,
ಪ್ರಕಾಶನ ವಿಭಾಗ,
ಸಮಾಚಾರ ಮತ್ತು ಪ್ರಸಾರ ಸಚಿವಾಲಯ,
ಭಾರತ ಸರ್ಕಾರ,
ಮೊದಲನೆಯ ಅಂತಸ್ತು, 'ಎಫ್'ವಿಂಗ್,
ಕೇಂದ್ರೀಯ ಸದನ, ಕೋರಮಂಗಲ,
ಬೆಂಗಳೂರು – 560 034.
ದೂರವಾಣಿ : 080 – 25537244.
E-mail : yojanakannada@yahoo.com

## ಈ ಸಂಚಿಕೆಯಲ್ಲಿ ..........

ಸಂಪಾದಕೀಯ ........ 2

ಕೌಶಲ್ಯಾಭಿವೃದ್ಧಿ ಮರು ವ್ಯಾಖ್ಯಾನ ........ 3
*** ದಿಲೀಪ್ ಚೆನಾಯ್**

ತಂತ್ರಜ್ಞಾನ ಹಾಗೂ ಕೌಶಲ್ಯ ........ 6
*** ಅರುಣ್ ಮೈರಾ ಮತ್ತು ಮದನ್ ಪದಕಿ**

ಉದ್ಯೋಗಾರ್ಹತೆ ಹೆಚ್ಚಿಸಲು ತರಬೇತಿ ........ 13
*** ಸುನೀತಾ ಸಂಘಿ**

ಕೌಶಲದ ಅಭಿವೃದ್ಧಿಯ ಅನಿವಾರ್ಯತೆ ........ 18
*** ಎಸ್.ಎಸ್. ಮಂಥ**

ಸಂಪನ್ಮೂಲ ಮತ್ತು ಸಾಮರ್ಥ್ಯ ........ 24
*** ಪ್ರೊ. ಮನೋಜ್ ಜೋಷಿ, ಡಾ. ಅರುಣ್ ಬಹದ್ದೂರಿಯ, ಡಾ. ಶೈಲಜ ದೀಕ್ಷಿತ್**

ವೃತ್ತಿಶಿಕ್ಷಣ: ಸವಾಲು ಹಾಗೂ ಶಿಫಾರಸು ........ 28
*** ಡಾ. ಸ್ವಾತಿ ಮುಜುಂದಾರ್**

ಮಹಿಳೆಯರ ಕೌಶಲ್ಯ ಬಳಕೆ; ನಿಜವಾದ ಸವಾಲು ........ 31
*** ದೇವನಾಥನ್**

ಕೌಶಲ್ಯ ಮತ್ತು ಮಾನವ ಸಂಪನ್ಮೂಲ ........ 34
*** ಸಚಿನ್ ಅಧಿಕಾರಿ**

ನಮ್ಮ ಪರಂಪರೆಯ ಕೈಮಗ್ಗದ ರಕ್ಷಣೆ ........ 37
*** ಮೋನಿಕಾ ಎಸ್. ಗಾರ್ಗ್**

ಕರಕುಶಲ ಕಲೆ ಮತ್ತು ಶಿಕ್ಷಣ ........ 43

ಕೃಷಿ ಕೌಶಲ್ಯಗಳು – ಒಂದು ಪರಿಕಲ್ಪನೆ ........ 46
*** ಡಾ. ಶಿವಾನಂದ ಹೊಸಮನಿ**

ಯುವ ಶಕ್ತಿ : ಅವಕಾಶ ಮತ್ತು ಸವಾಲು ........ 52
*** ಡಾ. ಎಂ. ಲಕ್ಷ್ಮಣ**

ಕೌಶಲ ಅಭಿವೃದ್ಧಿಯ ಮಹತ್ವ ........ 57
*** ಅಕ್ಕಿಮಂಗಲ ಸುರೇಶ**

ಗಾಂಧೀ –ಚರಕ – ಸಹಕಾರ – ಸ್ವಾವಲಂಬನೆ ........ 61
*** ಎಸ್.ಸಿ. ದೇವರಮನಿ**

ಭದ್ರ ಭವಿಷ್ಯಕ್ಕಾಗಿ ........ 64
*** ಹಾಲಸ್ವಾಮಿ ಆರ್. ಎಸ್.**

ಮಂಡ್ಯ : ಸಂಪೂರ್ಣ ಸ್ವಚ್ಛತೆಯೆಡೆಗೆ ........ 66
*** ರಾಜು**

ಬೀದರ ಖರೇಜ್ : ಪ್ರವಾಸೋದ್ಯಮಕ್ಕೆ ಹೊಸಬಲ ........ 69
*** ರವಿರಾಜ್ ಎಚ್.ಜಿ**

ನಿಮಗಿದು ತಿಳಿದಿದೆಯೇ? ........ 71

ವಾರ್ತಾ ವಿಶೇಷ ........ 72

ಮುಖಪುಟ ವಿನ್ಯಾಸ : ಗಜಾನನ ಪಿ. ದೋಪೆ

ಯೋಜನೆಯ ಸಂದೇಶವನ್ನು ಎಲ್ಲ ಜನಗಳಿಗೆ ಮುಟ್ಟಿಸಲು, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಎಲ್ಲ ಸಮಸ್ಯೆಗಳ ಬಗ್ಗೆ ಪ್ರಾಮಾಣಿಕ ಚರ್ಚೆ ಕೈಗೊಳ್ಳುವುದನ್ನು ಯೋಜನಾ ಉತ್ತೇಜಿಸುತ್ತದೆ. ಭಾರತ ಸರ್ಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದಿಂದ ಪ್ರಕಟಿತವಾದರೂ, ಯೋಜನಾ ಕೇವಲ ಅಧಿಕೃತ ದೃಷ್ಟಿಕೋನವನ್ನು ಬಿಂಬಿಸುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಕನ್ನಡ, ಇಂಗ್ಲೀಷ್, ಹಿಂದಿ, ಅಸ್ಸಾಮಿ, ಗುಜರಾತಿ, ಬಂಗಾಲಿ, ಮಲಯಾಳಂ, ಮರಾಠಿ, ತಮಿಳು, ತೆಲುಗು, ಒರಿಯಾ, ಪಂಜಾಬಿ ಮತ್ತು ಉರ್ದು ಭಾಷೆಯಲ್ಲಿ ಯೋಜನಾ ಪ್ರಕಟವಾಗುತ್ತಿದೆ.

**ಚಂದಾ ವಿವರ**

| | |
|---|---|
| ಒಂದು ವರ್ಷಕ್ಕೆ | 100.00 |
| ಎರಡು ವರ್ಷಗಳಿಗೆ | 180.00 |
| ಮೂರು ವರ್ಷಗಳಿಗೆ | 250.00 |


**ಚಂದಾ ಹಣವನ್ನು ಮನಿಯಾರ್ಡರ್ ಮೂಲಕವೇ ನಮ್ಮ ವಿಳಾಸಕ್ಕೆ ಕಳಿಸಿರಿ.**

**ಒಂದು ಪಕ್ಷ ಡಿಮಾಂಡ್ ಡ್ರಾಫ್ಟ್ ಕಳಿಸುವುದಾದರೆ ಅದನ್ನು PUBLICATIONS DIVISION, MINISTRY OF I & B, GOVERNMENT OF INDIA ಹೆಸರಿನಲ್ಲಿ CHENNAI ನಲ್ಲಿ ಸಂದಾಯವಾಗುವಂತೆ ಪಡೆದು ಅದನ್ನು ನಮ್ಮ ವಿಳಾಸಕ್ಕೆ ಕಳುಹಿಸಬೇಕು.**

**ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಲೇಖಕರವು. ಅವರು ಪ್ರತಿನಿಧಿಸುವ ಸಂಸ್ಥೆ ಅಥವಾ ಸರ್ಕಾರದ ಅಭಿಪ್ರಾಯವಲ್ಲ. ಯೋಜನಾ ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹಿರಾತುಗಳ ಯಥಾರ್ಥತೆ ಆಯಾ ಸಂಸ್ಥೆಗಳ ಹೊಣೆಗಾರಿಕೆಯಾಗಿರುತ್ತದೆ. ಚಿತ್ರಗಳು ಸಾಂದರ್ಭಿಕ.**

ಮುಖ್ಯ ಸಂಪಾದಕರ ಲೇಖನಿಯಿಂದ

## ಕೌಶಲ್ಯ ಭಾರತ, ಯಶಸ್ವಿ ಭಾರತ




ಮಾಯ ಮಾಟಗಳಿಂದ ಯಶಸ್ಸು ಲಭಿಸುವುದಿಲ್ಲ. ಅದಕ್ಕೆ ಪರಿಶ್ರಮ, ಕೌಶಲ್ಯ, ಜಾಣ್ಮೆ ಬೇಕು. ಈ ಯಶಸ್ವಿ ಸೂತ್ರಗಳು ಸಾರ್ವಕಾಲಿಕ. ಅದು ಯುವ ಜನಾಂಗ ಸೇರಿದಂತೆ ಎಲ್ಲ ವರ್ಗಕ್ಕೂ ಅನ್ವಯಿಸುತ್ತದೆ. ದೇಶದ ಯುವ ಶಕ್ತಿಗೆ ಸರಿಯಾದ ರೂಪುರೇಷೆಯುಳ್ಳ ಕೌಶಲ್ಯ ತರಬೇತಿಯ ಮಾರ್ಗದರ್ಶನ ನೀಡಿದರೆ ಅವರು ಸಾಮಾಜಿಕ ಆರ್ಥಿಕ ಬದಲಾವಣೆ, ಮಾರ್ಪಾಡು ತರಬಲ್ಲ ಚಾಲಕ ಶಕ್ತಿಯಾಗುತ್ತಾರೆ. ಕೌಶಲ್ಯ ಅಭಿವೃದ್ಧಿ ಹಾಗೂ ಉದ್ಯೋಗ – ಇವೆರಡೂ ಯುವಶಕ್ತಿಯನ್ನು ಕ್ರೋಢೀಕರಿಸಬಲ್ಲವು. ಭಾರತ, ವಿಶ್ವದಲ್ಲೆ ಅತಿ ದೊಡ್ಡ ಯುವ ಪಡೆಯನ್ನು ಹೊಂದಿದರೂ ಉದ್ಯೋಗದಾತರು ಕೌಶಲಯುತ ಯುವ ಜನರ ಕೊರತೆಯನ್ನು ಎದುರಿಸುತ್ತಿದ್ದಾರೆ. ನಿರ್ದಿಷ್ಟ ಕೆಲಸಗಳಿಗೆ ನಿರ್ದಿಷ್ಟ ನಿಪುಣರ ಕೊರತೆ ಇದೆ.

2014ರ ಲೇಬರ್ ಬ್ಯೂರೊ ವರದಿ ಪ್ರಕಾರ ಭಾರತದ ಕಾರ್ಯಪಡೆಯಲ್ಲಿ ಕೇವಲ ಶೇ. 2 ರಷ್ಟು ಭಾಗ ಮಾತ್ರ ಕುಶಲ ಕಾರ್ಯಪಡೆ ಎನಿಸಿದೆ. ಸಾಂಪ್ರದಾಯಿಕ ಶಿಕ್ಷಣ ಪೂರೈಸಿ ಹೊರಬರುವ ಯುವ ಜನತೆಗೆ ಉದ್ಯೋಗ ಒದಗಿಸುವುದೇ ಒಂದು ಸವಾಲಿನ ವಿಷಯವಾಗಿದೆ. ವಿಶ್ವವಿದ್ಯಾಲಯ, ಕಾಲೇಜುಗಳಿಂದ ಹೊರಬರುವ ಯುವಜನರ ಪ್ರತಿಭೆಗೂ ಅವರನ್ನು ಉದ್ಯೋಗಿಗಳನ್ನಾಗಿಸಲು ಅಗತ್ಯವಿರುವ ಕೌಶಲ್ಯಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಗುಣಮಟ್ಟ – ವರಸೆ ಎರಡರಲ್ಲೂ ಭಿನ್ನತೆ ಇದೆ. ಇಂಗ್ಲೀಷ್‌ನಲ್ಲಿ ವ್ಯವಹರಿಸಬಲ್ಲ ಈ ಯುವಕ – ಯುವತಿಯರು ಜಗತ್ತಿನ ಎಲ್ಲ ಅಗತ್ಯಗಳನ್ನು ಪೂರೈಸಬಲ್ಲ ಸಾಮರ್ಥ್ಯ ಹೊಂದಿದ್ದಾರೆ. ಅವರಿಗೆ ಸೂಕ್ತ ಕೌಶಲ್ಯ ಅಭಿವೃದ್ಧಿ ಮತ್ತು ತಾಂತ್ರಿಕ ತರಬೇತಿಯ ಅವಶ್ಯಕತೆ ಇದೆಯಷ್ಟೆ.

ಇದಕ್ಕಾಗಿ ಭಾರತ ಸರ್ಕಾರ ಕೌಶಲ್ಯ ಭಾರತ – ಸ್ಕಿಲ್ ಇಂಡಿಯಾ ಕಾರ್ಯಕ್ರಮ ಹಮ್ಮಿಕೊಂಡಿದೆ. ಉದ್ಯೋಗ ಗಿಟ್ಟಿಸಿಕೊಡಬಲ್ಲ ಕೌಶಲ್ಯದಿಂದ ಯುವ ಜನತೆಯನ್ನು ಸನ್ನದ್ಧಗೊಳಿಸುವುದು ಯೋಜನೆಯ ಉದ್ದೇಶ.

ಎಲ್ಲ ಹಂತದಲ್ಲೂ ಎಲ್ಲರನ್ನೂ ಒಳಗೊಂಡ ಅಭಿವೃದ್ಧಿ ಸಾಧಿಸಲು ಕೌಶಲ್ಯಾಭಿವೃದ್ಧಿಯನ್ನು ಶಿಕ್ಷಣ ತರಬೇತಿ ಮತ್ತು ಉದ್ಯೋಗಗಳೊಂದಿಗೆ ಹೊಂದಿಸಿಕೊಳ್ಳಬೇಕಾಗುತ್ತದೆ. ಈ ಮೂಲ ಅವಶ್ಯಕತೆ ಪೂರೈಸುವಲ್ಲಿ ಖಾಸಗಿ ರಂಗಗಳನ್ನು ಸ್ವಯಂ ಸೇವಾ ಸಂಸ್ಥೆಗಳನ್ನು, ಶೈಕ್ಷಣಿಕ ಸಂಸ್ಥೆಗಳನ್ನು, ಕೌಶಲ್ಯ ತರಬೇತಿ ನೀಡಿಕೆ, ಯೋಜನೆಯೊಂದಿಗೆ ಕೌಶಲ್ಯ ಭಾರತವನ್ನಾಗಿಸುವ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಬೇಕು. ಈ ದಿಸೆಯಲ್ಲಿ ಎಲ್ಲ ವರ್ಗಗಳಿಗೂ ಸಮಾನ ಪ್ರಾಮುಖ್ಯತೆ ದೊರಕಿಸಬೇಕು. ಯುವ ಜನತೆಯನ್ನು ನೈಪುಣ್ಯರನ್ನಾಗಿಸುವಲ್ಲಿ ವೃತ್ತಿಪರ ಮಾರ್ಗದರ್ಶನಕ್ಕೆ ಅಗ್ರಪಟ್ಟ ದೊರಕಿಸಬೇಕು. ಅದೇ ವೇಳೆ, ಮಹಿಳೆಯರು, ಅವಕಾಶ ವಂಚಿತರು ಹಾಗೂ ಬುಡಕಟ್ಟು ವರ್ಗದ ಜನರಿಗೆ ಅವರವರ ಆಸಕ್ತಿಗಳಿಗೆ ತಕ್ಕಂತೆ ಸಿದ್ಧ ತರಬೇತಿ ನೀಡಬೇಕಾಗುತ್ತದೆ. ಕೌಶಲ್ಯ ಭಾರತ ನಿರೂಪಿಸುವಲ್ಲಿ, ಕೌಟುಂಬಿಕ ಸಮಸ್ಯೆಗಳೂ, ಸಹಜವಾಗಿ ಎದುರಾಗುತ್ತವೆ. ಇದನ್ನು ನಾವು ನಿರೀಕ್ಷಿಸಿರಬೇಕಾಗುತ್ತದೆ. ಯಾವುದೇ ಕಾರ್ಯಕ್ರಮದ ಯಶಸ್ವಿ ಜಾರಿಯಲ್ಲೂ ಈ ಮುಂಜಾಗ್ರತೆ ಇರಲೇ ಬೇಕಾಗುತ್ತದೆ.

ಭಾರತ ಈಗಾಗಲೇ ಉನ್ನತ ಆರ್ಥಿಕ ಬೆಳವಣಿಗೆಯ ಪಥದಲ್ಲಿದೆ. ಈ ಚಲನೆಯನ್ನು ತೀವ್ರಗೊಳಿಸಲು ಜಾಗತಿಕ ಆರ್ಥಿಕ ಪರಿಸ್ಥಿತಿಯನ್ನು ಗಮನವಿಟ್ಟುಕೊಂಡ ಕೌಶಲ್ಯ ತರಬೇತಿ ಬಗ್ಗೆ ಲಕ್ಷ್ಯ ವಹಿಸಬೇಕಾಗಿದೆ. ತರಬೇತಿ ಸೌಲಭ್ಯ ಒದಗಿಸುವುದಷ್ಟೇ ಅಲ್ಲದೆ, ಅದರ ಗುಣಮಟ್ಟ ಕಾಪಾಡಿಕೊಂಡು ಬರುವ ಹೊಣೆಗಾರಿಕೆ ಇದೆ. ಇದು ಅಂತಾರಾಷ್ಟ್ರೀಯ ವೇದಿಕೆಯಲ್ಲೂ ಸ್ಪರ್ಧಿಸುವಲ್ಲಿ ತಾಳಿಕೆ ಬರುವ ತರಬೇತಿಯಾಗಿರಬೇಕು.

ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯೋಗಶೀಲತೆ ಕುರಿತಾದ 2015ರ ರಾಷ್ಟ್ರೀಯ ನೀತಿ, ಕೌಶಲ ಭಾರತ ನಿರೂಪಣೆಯ ತೀವ್ರತೆ, ಗುಣಮಟ್ಟ ಮತ್ತು ಸುಸ್ಥಿರತೆಯ ಸವಾಲುಗಳನ್ನು ಎದುರಿಸಬಲ್ಲ ಚೌಕಟ್ಟನ್ನು ಹೊಂದಿದೆ. ರಾಷ್ಟ್ರೀಯ ಅಂತಾರಾಷ್ಟ್ರೀಯ – ಎರಡೂ ಮಟ್ಟಗಳಲ್ಲಿ ಕೌಶಲ್ಯ, ಸಂಪರ್ಕ ಕಲ್ಪಿಸುವ ಆಶಯ ಹೊಂದಿದೆ. ಸರ್ಕಾರದ ಇತ್ತೀಚಿನ ಉಪಕ್ರಮಗಳು ಇದಕ್ಕೆ ಒಂದು ರೀತಿಯ 'ಆಂದೋಲನದ' ಸ್ವರೂಪ ತಂದು ಕೊಟ್ಟಿವೆ. ಈ ಪ್ರಯತ್ನಗಳು ಫಲ ಕೊಡಲು ಕಾಲಾವಕಾಶಬೇಕು. ಒಂದು ಅವಧಿಯ ನಂತರ ಕೌಶಲ್ಯ ಭಾರತ, ನೆಮ್ಮದಿ, ಆರೋಗ್ಯ, ಸಮೃದ್ಧಿ ತಂದು ಕೌಶಲ್ಯ ಭಾರತದೊಂದಿಗೆ ಕುಶಲ ಭಾರತವನ್ನೂ ಮಾಡಬಲ್ಲದು. ❑

# ಕೌಶಲ್ಯಾಭಿವೃದ್ಧಿ ಮರು ವ್ಯಾಖ್ಯಾನ

* ದಿಲೀಪ್ ಚೆನಾಯ್



**ಕೌಶಲ್ಯಾಭಿವೃದ್ಧಿ ಕ್ಷೇತ್ರದಲ್ಲಿ ಉತ್ತಮ ವಾತಾವರಣ ನೆಲೆಸುತ್ತಿದೆ. ಪ್ರಗತಿಪರ ಭಾರತಕ್ಕೆ ಅಗತ್ಯವಾದ ಕೌಶಲ್ಯ ವ್ಯವಸ್ಥೆಯತ್ತ ದೇಶ ಪ್ರಸ್ತುತ ಸಾಗುತ್ತಿದೆ. "ಕೌಶಲ್ಯ ಭಾರತ – ಕುಶಲ ಭಾರತ" ಗುರಿ ಸಾಧನೆಗೆ ಇದು ಸಕಾಲವಾಗಿದ್ದು, ಆ ನಿಟ್ಟಿನಲ್ಲಿ ಎಲ್ಲರೂ ಒಗ್ಗೂಡಿ ಕಾರ್ಯೋನ್ಮುಖವಾಗಬೇಕಿದೆ.**

ಭಾರತೀಯ ರಿಸರ್ವ್ ಬ್ಯಾಂಕ್ ಇತ್ತೀಚೆಗೆ ಪ್ರಕಟಿಸಿದ 2014–15ನೇ ಸಾಲಿನ ವಾರ್ಷಿಕ ವರದಿಯಲ್ಲಿ ದೇಶದ ಅಭಿವೃದ್ಧಿ ಸೂಚ್ಯಂಕ ಕ್ರಮೇಣ ಸುಧಾರಿಸುತ್ತಿರುವುದು ಕಂಡುಬರುತ್ತದೆ. ಜತೆಗೆ ನೈಜಸ್ಥಿತಿಗಳನ್ನು ಗಮನಿಸಿದರೆ ಜಿಡಿಪಿ ದರ ಶೇಕಡ 7.6ರಷ್ಟು ಆಗಬಹುದೆಂದು ಅಂದಾಜಿಸಲಾಗಿದೆ. ಆ ವರದಿ ಪ್ರಕಾರ ಹೂಡಿಕೆದಾರರಲ್ಲಿ ವಿಶ್ವಾಸ ಇಮ್ಮಡಿಯಾಗಿದ್ದು, ಕೇಂದ್ರ ಬಜೆಟ್‌ನಲ್ಲಿ ಮೂಲಸೌಕರ್ಯ ವೃದ್ಧಿಗೆ ಹೆಚ್ಚಿನ ಹಣ ಹೂಡಿಕೆ ಸೇರಿದಂತೆ ಹಲವು ಉತ್ತೇಜನ ಕ್ರಮಗಳನ್ನು ಪ್ರಕಟಿಸಲಾಗಿದೆ. ಇದು ಖಾಸಗಿ ಹೂಡಿಕೆ ಆಕರ್ಷಿಸಲು ಮತ್ತು ಗ್ರಾಹಕರ ಹಿತಾಸಕ್ತಿ ಕಾಯಲು ಹಾಗೂ ವಿಶೇಷವಾಗಿ ಹಣದುಬ್ಬರ ನಿಯಂತ್ರಿಸಲು ಸಾಧ್ಯವಾಗುತ್ತದೆ. ಜಾಗತಿಕ ಮಟ್ಟದಲ್ಲಿ ಹಲವು ದೇಶಗಳು ಆರ್ಥಿಕ ಹಿಂಜರಿತ ಅನುಭವಿಸುತ್ತಿದ್ದರೂ ಸಹ ಈ ಎಲ್ಲ ಬೆಳವಣಿಗೆ ಸೂಚ್ಯಂಕಗಳನ್ನು ಗಮನಿಸಿದರೆ ಭಾರತದ ಭವಿಷ್ಯ ಉಜ್ವಲವಾಗಿದೆ ಮತ್ತು ಅದು ಉತ್ತಮ ಸ್ಥಿತಿಯಲ್ಲಿದೆ ಎಂಬುದು ಕಂಡುಬರುತ್ತದೆ. ಅತ್ಯಂತ ವೇಗವಾಗಿ ಬೆಳೆಯುತ್ತಿರುವ ರಾಷ್ಟ್ರಗಳಲ್ಲಿ ಭಾರತ ದೇಶದಲ್ಲಿ ಮಾತ್ರ ಜಿಡಿಪಿ ದರ ಸುಧಾರಿಸುತ್ತಿರುವುದು ಕಂಡುಬರುತ್ತದೆ.

ಇದಕ್ಕೆ ಕಾರಣ ಸರ್ಕಾರ ಈಗಾಗಲೇ ಆ ಕುರಿತ ಎಲ್ಲ ಕ್ರಮಗಳನ್ನು ಕೈಗೊಂಡಿರುವುದು. ಸರ್ಕಾರ ಈಗಾಗಲೇ ದೇಶದಲ್ಲಿ ವಸ್ತುಗಳನ್ನು ಉತ್ಪಾದಿಸಿ, ವಿದೇಶದಲ್ಲಿ ಅವುಗಳನ್ನು ಮಾರಲು ಉತ್ಪಾದನಾ ವಲಯಕ್ಕೆ ಅಗತ್ಯ ಬಂಡವಾಳ ಹೂಡಿಕೆಗೆ ದೇಶೀಯ ಹಾಗೂ ವಿದೇಶಿ ಹೂಡಿಕೆದಾರರನ್ನು ಆಕರ್ಷಿಸಲು ಎಫ್‌ಡಿಐ ನಿಯಮಗಳಿಂದ ವಿನಾಯಿತಿ ನೀಡಿದೆ. ಮೇಕ್ ಇನ್ ಇಂಡಿಯಾ ಅಭಿಯಾನದ ಮೂಲಕ ನಾನಾ ವಲಯಗಳಲ್ಲಿ ಉತ್ಪಾದನಾ ಚಟುವಟಿಕೆ ಹೆಚ್ಚಾಗುವ ನಿರೀಕ್ಷೆ ಇದೆ. ಜತೆಗೆ ಆ ಮೂಲಕ ಅದು ಜಿಡಿಪಿ ಹೆಚ್ಚಳಕ್ಕೂ ನೆರವಾಗಲಿದೆ. ಉತ್ಪಾದನಾ ವಲಯದ ಚಟುವಟಿಕೆಗಳು ಹೆಚ್ಚುವ ಸಾಧ್ಯತೆ ಇರುವುದರಿಂದ ಸಹಜವಾಗಿಯೇ ಹೆಚ್ಚಿನ ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತವೆ. ದೇಶಕ್ಕೆ ಅಗತ್ಯವಿರುವ ಕೌಶಲ್ಯ ಹೊಂದಿದ ಕಾರ್ಮಿಕರನ್ನು ಸಜ್ಜುಗೊಳಿಸಬೇಕಾಗಿದೆ. ಇದಕ್ಕೆ ಅನುಕೂಲವಾಗುವಂತೆ ಇತ್ತೀಚೆಗೆ ಕೇಂದ್ರ ಸರ್ಕಾರ ಕೌಶಲ್ಯ ಭಾರತ ಯೋಜನೆಯನ್ನು ಆರಂಭಿಸಿದೆ. ಈ ಯೋಜನೆ ಮೇಕ್ ಇನ್ ಇಂಡಿಯಾ, ಡಿಜಿಟಲ್ ಇಂಡಿಯಾ ಮತ್ತು ಸ್ಮಾರ್ಟ್ ಸಿಟಿ ಸೇರಿದಂತೆ ಹಲವು ಮಹತ್ವಾಕಾಂಕ್ಷೆಯ ರಾಷ್ಟ್ರೀಯ ಯೋಜನೆಗಳಿಗೆ ಪೂರಕವಾಗಲಿದೆ. ಉದ್ಯೋಗಾವಕಾಶಗಳು ಮತ್ತು ಕೌಶಲ್ಯ ಹೊಂದಿದ ಕಾರ್ಮಿಕರಿಂದ ಮಾತ್ರ ಈ ಎಲ್ಲ ರಾಷ್ಟ್ರೀಯ ಯೋಜನೆಗಳು ಯಶಸ್ವಿಯಾಗಲು ಸಾಧ್ಯ. ಇದರಿಂದ ಮಾತ್ರ ಭಾರತದ ಆರ್ಥಿಕ ಪ್ರಗತಿ, ಜಿಡಿಪಿ ಹೆಚ್ಚಳ ಹಾಗೂ ತಲಾ ಆದಾಯ ಹೆಚ್ಚಾಗಲಿದೆ. ದೇಶದ ಯುವಜನತೆ ಸರಿಯಾದ ದಿಕ್ಕಿನಲ್ಲಿ ನಡೆದು, ದೇಶದ ಜನಸಂಖ್ಯೆ ಶಕ್ತಿಯನ್ನು ಸರಿಯಾಗಿ ಬಳಸಿಕೊಂಡರೆ ಅದು ಎಲ್ಲರ ವೈಯಕ್ತಿಕ ಹಾಗೂ ವೃತ್ತಿ ಬೆಳವಣಿಗೆಗೂ ಸಹಕಾರಿಯಾಗಲಿದೆ. ಪ್ರಸ್ತುತ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಅತ್ಯಾಧುನಿಕ ಹಾಗೂ ತಾಂತ್ರಿಕ ಬೆಳವಣಿಗೆಯ ಶಿಕ್ಷಣ ನೀಡುವ ವ್ಯವಸ್ಥೆ ಎಬ್ಬಿಸಿರುವ ಬಿರುಗಾಳಿಯನ್ನು

* ನಿರ್ವಹಣಾ ನಿರ್ದೇಶಕರು ಮತ್ತು ಮುಖ್ಯ ನಿರ್ವಹಣಾ ಅಧಿಕಾರಿ, ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನಿಗಮ. Email : dilip.chenoy@nsdcindia.org

ಎದುರಿಸಲು ಸಜ್ಜಾಗುತ್ತಿವೆ. ಭಾರತದ ಶಿಕ್ಷಣ ವ್ಯವಸ್ಥೆ ಮಾತ್ರ ಇನ್ನೂ ಪಠ್ಯಕ್ರಮ ಸುಧಾರಣೆಯಲ್ಲೇ ತೊಡಗಿದೆ. ಇತ್ತೀಚೆಗೆ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿರುವ ಸರ್ಕಾರ ಕೈಗೊಂಡಿರುವ ಕೆಲವು ದಿಟ್ಟ ನಿರ್ಧಾರಗಳು ದೇಶದ ಯುವಜನತೆಯನ್ನು ಸರಿಯಾದ ದಿಕ್ಕಿನಲ್ಲಿ ಕೊಂಡೊಯ್ಯಲು ಸಹಕಾರಿಯಾಗಲಿದೆ. ದುರದೃಷ್ಟವೆಂದರೆ ಇಲ್ಲಿಯವರೆಗೂ ನಾವು ಶಿಕ್ಷಣದ ಬಗ್ಗೆ ಗಮನ ಕೇಂದ್ರೀಕರಿಸುತ್ತಿದ್ದೇವೆ ಹೊರತು, ಒಟ್ಟಾರೆ ಕೌಶಲ್ಯಾಭಿವೃದ್ಧಿಯ ಬಗ್ಗೆ ಗಮನಹರಿಸಿಲ್ಲ ಆದರೆ, ಆ ಬಗ್ಗೆ ಗಮನಹರಿಸಲು ಇದು ಸಕಾಲ. ನಾವು ಜಾಗತಿಕ ಶಕ್ತಿಯಾಗಿ ರೂಪುಗೊಳ್ಳಬೇಕಾದರೆ, ನಮ್ಮ ಪ್ರಬಲ ಜನಸಂಖ್ಯೆಯನ್ನು ನಾವು ಸರಿಯಾಗಿ ಬಳಸಿಕೊಳ್ಳಬೇಕು. ಮುಂದಿನ 5 ರಿಂದ 10 ವರ್ಷಗಳು ನಮ್ಮ ದೇಶದ ಪಾಲಿಗೆ ನಿಜಕ್ಕೂ ಸವಾಲಿನ ವರ್ಷಗಳಾಗಿವೆ. ಅವುಗಳನ್ನು ಸಮರ್ಥವಾಗಿ ಎದುರಿಸಿ, ಸಿಕ್ಕ ಅವಕಾಶಗಳನ್ನು ಸರಿಯಾಗಿ ಬಳಸಿಕೊಂಡರೆ ಭಾರತ ಜಾಗತಿಕ ಮಟ್ಟದಲ್ಲಿ 'ಮಾನವ ಸಂಪನ್ಮೂಲ ರಾಜಧಾನಿ'ಯಾಗಿ ರೂಪುಗೊಳ್ಳಲಿದೆ.

ಭಾರತ ಇಲ್ಲಿಯವರೆಗೆ ತನ್ನ ಜನಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು ಯಾವುದೇ ಯೋಜನೆಗಳನ್ನು ರೂಪಿಸಿರಲಿಲ್ಲ, ಇದೀಗ ಅಂತಹ ಕಾರ್ಯ ನಡೆದಿದೆ. 2013ರ ಸೆಪ್ಟೆಂಬರ್‌ನಲ್ಲಿ ಬಿಡುಗಡೆ ಮಾಡಲಾದ ಜನಗಣತಿಯ ಅಂಕಿ–ಅಂಶಗಳ ಪ್ರಕಾರ ಭಾರತ ಯುವರಾಷ್ಟ್ರ, ಹೆಚ್ಚಿನ ಜನಸಂಖ್ಯೆ 15 ರಿಂದ 24 ವಯಸ್ಸಿನವರು. ಭಾರತದಲ್ಲಿ ಯುವಜನತೆ ಹೆಚ್ಚಿರುವುದರಿಂದ ಅವರಿಗೆ ಸುಸ್ಥಿರ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಕೆಲಸ ಅತಿ ಪ್ರಮುಖವಾಗಿ ಆಗಬೇಕಾಗಿದೆ. ಅದಕ್ಕೆ ಆರ್ಥಿಕ ಪ್ರಗತಿಯೂ ಪೂರಕವಾಗಿ ಕೆಲಸ ಮಾಡಬೇಕು. ಉದ್ಯಮದ ಸವಾಲುಗಳನ್ನು ಎದುರಿಸುವಂತಾಗಬೇಕು.




ಭಾರತ ದೇಶ ಮತ್ತೊಂದು ಗಮನಾರ್ಹ ಅವಕಾಶವೆಂದರೆ ಅದು ತನ್ನ ಉತ್ಪಾದನಾ ವಲಯವನ್ನು (15 ರಿಂದ 60 ವರ್ಷದೊಳಗಿನ ಜನಸಂಖ್ಯೆ) ಮುಂದಿಟ್ಟುಕೊಂಡು ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳೊಂದಿಗೆ ಒಪ್ಪಂದ ಮಾಡಿಕೊಳ್ಳುತ್ತಿರುವುದು. ಈ ಅವಕಾಶವನ್ನು ಗಮನಿಸಿ ಅರ್ಥಪೂರ್ಣ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಮೂಲಕ ದೇಶದ ಆರ್ಥಿಕತೆಯನ್ನು ಇನ್ನಷ್ಟು ಅಭಿವೃದ್ಧಿಗೊಳಿಸಬಹುದು. 2022ರ ವೇಳೆಗೆ ಜಾಗತಿಕ ದುಡಿಯುವ ಜಸಂಖ್ಯೆಯಲ್ಲಿ ಸುಮಾರು ಶೇಕಡ 15 ರಿಂದ 17ರಷ್ಟು ಭಾರತೀಯರಾಗಿರುತ್ತಾರೆ.

ಇಂದಿನ ಈ ಅಂಕಿಅಂಶಗಳನ್ನು ಗಮನಿಸಿದರೆ 2040ರ ವೇಳೆಗೆ ಭಾರತದ ದುಡಿಯುವ ಜನಸಂಖ್ಯೆ ಚೀನಾದ ದುಡಿಯುವ ಜನಸಂಖ್ಯೆಯನ್ನು ಹಿಂದಿಕ್ಕಲಿದೆ. ಒಟ್ಟಾರೆ ದುಡಿಯುವ ಜನಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡರೆ ಭಾರತಕ್ಕೆ ಉತ್ತಮ ಅನುಕೂಲ ಇರುವುದು ಸ್ಪಷ್ಟವಾಗುತ್ತದೆ.

ದುಡಿಯುವ ಜನಸಂಖ್ಯೆ ಎಂದರೆ ಆರ್ಥಿಕ ಬೆಳವಣಿಗೆಗೆ ಪೂರಕವಾಗಿರುವವರು ಎಂದರ್ಥ. ಆದರೆ ಕೇವಲ ದುಡಿಯುವ ಜನಸಂಖ್ಯೆ ಹೆಚ್ಚಳವನ್ನೇ ನಂಬಿ ನಾವು ಭವಿಷ್ಯ ಉಜ್ವಲವಾಗುತ್ತದೆ ಎಂದು ಕೂರುವಂತಿಲ್ಲ, ನಮ್ಮ ದೇಶದ ಒಟ್ಟಾರೆ ಜನಸಂಖ್ಯೆಯಲ್ಲಿ ಸುಮಾರು 500 ಮಿಲಿಯನ್ ದುಡಿಯುವ ವರ್ಗವಿದ್ದು, ಅದರಲ್ಲಿ ಶೇಕಡ 14ರಷ್ಟು ಮಾತ್ರ ಅಧಿಕೃತವಾಗಿ ಆರ್ಥಿಕತೆಯಲ್ಲಿ ತೊಡಗಿದ್ದಾರೆ. ಶೇಕಡ 86ರಷ್ಟು ಜನಸಂಖ್ಯೆ ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದಾರೆ. ಈ ಜನರಿಗೆ ಯಾವುದೇ ತರಬೇತಿ ಇಲ್ಲ ಹಾಗೂ ಉದ್ಯೋಗ ಮಾರುಕಟ್ಟೆ ಅವರನ್ನು ಗುರುತಿಸುವುದಿಲ್ಲ, ಇದು ಬಹುದೊಡ್ಡ ಸವಾಲಾಗಿದೆ.

ಶಿಕ್ಷಣ, ಕೌಶಲ್ಯ ತರಬೇತಿ ಮತ್ತು ಉದ್ಯೋಗದ ನಡುವೆ ಭಾರೀ ಕಂದಕವಿದೆ. ಮೆಕೆನ್ಸಿ ವರದಿ ಪ್ರಕಾರ ಶೇಕಡ 54ರಷ್ಟು ಯುವಕರು ತಮ್ಮ ಪ್ರೌಢಶಿಕ್ಷಣ ಸುಧಾರಿಸಿಕೊಂಡರೆ ಉದ್ಯೋಗಾವಕಾಶಗಳಲ್ಲಿ ಸುಧಾರಣೆಯಾಗುತ್ತದೆ ಎಂದು ಹೇಳಿದ್ದಾರೆ. ಶೇಕಡ 56ರಷ್ಟು ವಿದ್ಯಾರ್ಥಿಗಳು ಪ್ರೌಢಶಿಕ್ಷಣ ಮತ್ತು ಉನ್ನತ ಶಿಕ್ಷಣದ ನಡುವೆ ಶಿಕ್ಷಣ ತೊರೆಯುತ್ತಾರೆ. ಈ ಎಲ್ಲ ಅಂಕಿ–ಅಂಶಗಳನ್ನು ನಂಬುವುದಾದರೆ ಕೆಲವೇ ಕೆಲವು ವರ್ಗದ ವಿದ್ಯಾರ್ಥಿಗಳು ಉದ್ಯೋಗವನ್ನು ಪಡೆಯುತಿದ್ದಾರೆ ಮತ್ತು ತರಬೇತಿ ಹೊಂದುತ್ತಿದ್ದಾರೆ. ಇದೇ ವರದಿ ಹೇಳುವಂತೆ ಶೇಕಡ 53ರಷ್ಟು ಭಾರತೀಯ ಸಂಸ್ಥೆಗಳು, ಕೌಶಲ್ಯ ತರಬೇತಿ ಹೊಂದಿದ ಜನರು ಉದ್ಯೋಗಕ್ಕೆ ಸಿಗುತ್ತಿಲ್ಲ ಎಂದು ಹೇಳಿವೆ. ಇದರಿಂದಾಗಿ ಸ್ಪಷ್ಟವಾಗುವ ಅಂಶವೆಂದರೆ ಭಾರತೀಯ ಯುವಕರ ಆಶೋತ್ತರಗಳು ಮತ್ತು ನಿರೀಕ್ಷೆಗಳು ಹಾಗೂ ಉದ್ಯೋಗಾವಕಾಶ ನೀಡುವ ಕಂಪನಿಗಳ ನಿರೀಕ್ಷೆಗಳ ನಡುವೆ ಅಂತರವಿರುವುದು. ದೇಶ ಎದುರಿಸುತ್ತಿರುವ ಇನ್ನೊಂದು ಪ್ರಮುಖ ಸವಾಲೆಂದರೆ 25 ವರ್ಷದೊಳಗಿನವರ ಜನಸಂಖ್ಯೆ ಒಟ್ಟಾರೆ ಜನಸಂಖ್ಯೆಯ ಶೇಕಡ 50ರಷ್ಟಿದ್ದು, ಅವರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸುವುದು.



ದೇಶಕ್ಕೆ ಈಗ ಕೌಶಲ್ಯ ತರಬೇತಿ ಹಾಗೂ ಅದರ ಪ್ರಾಮುಖ್ಯತೆ ಅರ್ಥವಾಗಿದೆ. ಎಲ್ಲ ಕೈಗಾರಿಕೆಗಳು, ಸಚಿವಾಲಯಗಳು, ರಾಜ್ಯಗಳು, ಕಾರ್ಪೊರೇಟ್ ಸಂಸ್ಥೆಗಳು ಮತ್ತು ವ್ಯಕ್ತಿಗಳು ಜಂಟಿಯಾಗಿ ಭಾರತವನ್ನು ಜಗತ್ತಿನ ಕೌಶಲ್ಯ ರಾಜಧಾನಿಯನ್ನಾಗಿ ಮಾಡಲು ಒಗ್ಗೂಡಿ ಶ್ರಮಿಸುತ್ತಿವೆ.

ಈ ಹಂತದಲ್ಲಿ ಕೌಶಲ್ಯಾಭಿವೃದ್ಧಿ ಅಲೆ ಸಕಾರಾತ್ಮಕವಾಗಿ ಕಾಣಿಸುತ್ತಿದೆ. ಇದು ಜಾಗತಿಕ ಮಾರುಕಟ್ಟೆಯಲ್ಲಿ ಭಾರತ ಪ್ರಬಲ ಶಕ್ತಿಯಾಗಿ ಹೊರಹೊಮ್ಮಲು ನೆರವಾಗಲಿದೆ ಮತ್ತು ಅದು ತನ್ನ ಬಂಡವಾಳ ಹೂಡಿಕೆ ಆಕರ್ಷಣೆ ಮನವಿಗೂ ಸಹಕಾರಿಯಾಗಲಿದೆ.

ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಮೊದಲ ದಿಟ್ಟ ಕ್ರಮವೆಂದರೆ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಕುರಿತಂತೆ ಪ್ರತ್ಯೇಕ ಸಚಿವಾಲಯವನ್ನು ಸ್ಥಾಪಿಸಿದ್ದು, ದೇಶದಲ್ಲಿ ಈಗಾಗಲೇ ಎನ್‌ಎಸ್‌ಡಿಸಿ ಮೂಲಕ ಕೌಶಲ್ಯಾಭಿವೃದ್ಧಿ ವ್ಯವಸ್ಥೆ ಚಾಲನೆಯಲ್ಲಿದೆ.

ಅದರಲ್ಲಿ 37 ವಲಯಗಳ ಕೌಶಲ್ಯ ಮಂಡಳಿಗಳು, 235 ತರಬೇತಿ ಪಾಲುದಾರ ಸಂಸ್ಥೆಗಳು ಹಾಗೂ ದೇಶಾದ್ಯಂತ 450ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಹರಡಿರುವ 3 ಸಾವಿರದ 611 ತರಬೇತಿ ಕೇಂದ್ರಗಳಿವೆ. ಮತ್ತೊಂದು ದಿಟ್ಟ ಕ್ರಮವೆಂದರೆ ಈಗಿರುವ ಪದ್ಧತಿಯನ್ನು ಇನ್ನಷ್ಟು ಬಲವರ್ಧನೆಗೊಳಿಸಿ ಅದಕ್ಕೆ ನಿರ್ದಿಷ್ಟ ನೀತಿಗಳನ್ನು ರೂಪಿಸಲು ಸರ್ಕಾರ ನೆರವು ಮತ್ತು ಮಾರ್ಗದರ್ಶನ ನೀಡುತ್ತಿರುವುದು. ಎನ್ಎಸ್‌ಡಿಸಿ, ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯ (ಎಂಎಸ್‌ಡಿಇ) ನೆರವಿನಲ್ಲಿ ಕೆಲಸ ಮಾಡುತ್ತಿದ್ದು, ಬೇರೆ ಬೇರೆ ಉದ್ಯೋಗಗಳಿಗೆ ಅಗತ್ಯ ಮಾನದಂಡಗಳನ್ನು ನಿಗದಿಪಡಿಸಿ, ಆ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿರುವುದು ಅಲ್ಲದೆ ಪ್ರತ್ಯೇಕ ವಲಯಗಳಿಗೆ ಅಗತ್ಯವಾದ ವೃತ್ತಿಪರ ತರಬೇತಿಗೆ ಮಾನದಂಡ ಮತ್ತು ಪಠ್ಯಕ್ರಮವನ್ನೂ ಸಹ ರೂಪಿಸಲಾಗುತ್ತದೆ. ಇಲ್ಲಿಯವರೆಗೆ ಎನ್ಎಸ್‌ಡಿಸಿ 5.5 ಮಿಲಿಯನ್ ಜನರಿಗೆ ಕೌಶಲ್ಯ ತರಬೇತಿ ನೀಡಿದ್ದು, ಅವರಲ್ಲಿ ಶೇಕಡ 61ರಷ್ಟು ಜನರಿಗೆ ಉದ್ಯೋಗಾವಕಾಶ ಲಭಿಸಿದೆ. ಇದಕ್ಕೆ ಅತ್ಯಂತ ವೇಗ ನೀಡಿದರೆ, ಉದ್ಯಮದಲ್ಲಿರುವ ಅಂತರವನ್ನು ತಗ್ಗಿಸಲು ಸಹಕಾರಿಯಾಗಲಿದೆ.

ಮತ್ತೊಂದೆಡೆ ಕೌಶಲ್ಯ ಭಾರತ ಯೋಜನೆ ಮತ್ತು ಕೌಶಲ್ಯ ನೀತಿಯಿಂದ



2022ರವೇಳೆಗೆ ದೇಶದ 40 ಕೋಟಿ ಯುವಜನರಿಗೆ ಕೌಶಲ್ಯ ತರಬೇತಿ ನೀಡುವ ಗುರಿ ಹೊಂದಲಾಗಿದೆ. ಆರ್ಥಿಕ ಸಬಲೀಕರಣಕ್ಕೆ ಪೂರಕವಾದ ವಾತಾವರಣ ನಿರ್ಮಿಸುವ ಮುನ್ನೋಟವನ್ನು ಈ ನೀತಿ ಒಳಗೊಂಡಿದೆ. ಕೌಶಲ್ಯ ಹೊಂದಿದ ಮಾನವ ಸಂಪನ್ಮೂಲಕ್ಕೆ ಅಗತ್ಯವಿರುವ ಉದ್ಯೋಗಾವಕಾಶಗಳು ಲಭ್ಯವಿವೆ, ಉದ್ದಿಮೆಗಳು ಗುರುತಿಸುವ ಮಾನದಂಡವಿರುವ ಅನ್ವೇಷಣಾಗುಣವಿರುವ ಮಾನವ ಸಂಪನ್ಮೂಲ ಅಭಿವೃದ್ಧಿಗೊಳಿಸಬೇಕು. ಅದು ಆದಾಯವನ್ನು ವೃದ್ಧಿಸುವ ಜೊತೆಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸಿ ದೇಶದ ಎಲ್ಲ ಜನರು ಸುಸ್ಥಿರ ಜೀವನೋಪಾಯ ನಡೆಸಲು ಸಹಕಾರಿಯಾಗಲಿದೆ.

ಪ್ರಸ್ತುತ 70ಕ್ಕೂ ಹೆಚ್ಚು ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳು ಚಾಲ್ತಿಯಲ್ಲಿವೆ, ಪ್ರತಿಯೊಂದಕ್ಕೂ ತನ್ನದೇ ಆದ ಅರ್ಹತಾ ಮಾನದಂಡ, ತರಬೇತಿ ಅವಧಿ, ತರಬೇತಿ ವೆಚ್ಚ, ಫಲಿತಾಂಶ, ನಿರ್ವಹಣಾ ಮತ್ತು ನಿಗಾ ವ್ಯವಸ್ಥೆ ಇದೆ. ಆ ನಿಟ್ಟಿನಲ್ಲಿ ನೀತಿ ಪರಿಷ್ಕರಣೆ ಕೇಂದ್ರ ಸರ್ಕಾರ ಇಟ್ಟಿರುವ ಅತಿ ದೊಡ್ಡ ಹೆಜ್ಜೆಯಾಗಿದೆ, ಕೌಶಲ್ಯಾಭಿವೃದ್ಧಿಯಲ್ಲಿ ಇಡೀ ವ್ಯವಸ್ಥೆಯನ್ನು ಸಮಗ್ರವಾಗಿ ಬದಲಾಯಿಸುವ ಕೆಲಸ ನಡೆದಿದೆ. ಅದರ ಸಾಧಕ–ಬಾಧಕಗಳು, ಅದಕ್ಕೆ ನಿಧಿ ಅಥವ ನೆರವು ಒದಗಿಸುವುದು, ಮೂರನೇ ವ್ಯಕ್ತಿಯಿಂದ ಪ್ರಮಾಣೀಕೃತ ವ್ಯವಸ್ಥೆ, ನಿಗಾ ವ್ಯವಸ್ಥೆ ಹಾಗೂ ತರಬೇತಿದಾರರನ್ನು ಆಯ್ಕೆ ಮಾಡುವುದು ಮತ್ತು ಅಂತಿಮವಾಗಿ ಏಕರೂಪದ ಗುರಿ ಸಾಧಿಸುವ ಉದ್ದೇಶವಿದೆ.

ಸರ್ಕಾರದ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ತಮ್ಮ ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್ಆರ್) ಹೆಸರಿನಲ್ಲಿ ಕಾರ್ಪೊರೇಟ್ ಸಂಸ್ಥೆಗಳು ಹಾಗೂ ಖಾಸಗಿ ಸಾರ್ವಜನಿಕ ಕಂಪನಿಗಳು ಹೆಚ್ಚಿನ ಪ್ರಮಾಣದಲ್ಲಿ ತೊಡಗಿಕೊಳ್ಳುತ್ತಿರುವುದನ್ನು ಉದ್ಯಮವೂ ಗಮನಿಸುತ್ತಿದೆ. ಕೌಶಲ್ಯವೃದ್ಧಿ ಯೋಜನೆಗಳಲ್ಲಿ ಸಹಭಾಗಿತ್ವ ಹೊಂದುವ ಜೊತೆಗೆ ಹಣಕಾಸಿನ ನೆರವು ನೀಡುವುದು, ಮೂಲಸೌಕರ್ಯ ಒದಗಿಸುವುದು, ಕಳಪೆ ಕಲಿಯುವಿಕೆಯನ್ನು ಗುರುತಿಸುವುದು, ರಾಷ್ಟ್ರೀಯ ಅರ್ಹತಾ ಚೌಕಟ್ಟು ಪಾಲಿಸುವುದು ಮತ್ತು ಔದ್ಯೋಗಿಕ ಮಾನದಂಡಗಳನ್ನು ಅನುಸರಿಸುವ ಕೆಲಸವನ್ನು ಅವು ಮಾಡುತ್ತಿವೆ. ಪವರ್ ಗ್ರಿಡ್, ಎನ್‌ಟಿಪಿಸಿ, ಕೋಲ್ ಇಂಡಿಯಾ, ಅಂಬುಜಾ ಸಿಮೆಂಟ್ಸ್, ಎಸ್ಸಾರ್, ಸಿಐಎಫ್‌ಸಿಎಲ್ ಮತ್ತು ಕೋಕಾ ಕೋಲಾ ಮೊದಲಾದ ಹೆಸರಾಂತ ಕಂಪನಿಗಳು ಈ ಕೆಲಸಕ್ಕೆ ಸಾಥ್ ನೀಡಿವೆ. ಸಾರ್ವಜನಿಕ ವಲಯದ ಉದ್ದಿಮೆಗಳೂ ಸಹ ತಮ್ಮ ಪ್ರತ್ಯೇಕ ಕಾರ್ಯತಂತ್ರದೊಂದಿಗೆ ಕೌಶಲ್ಯಾಭಿವೃದ್ಧಿಗೆ ಕೈ ಜೋಡಿಸಿವೆ. ಈ ಉದ್ದೇಶಕ್ಕಾಗಿ ಸಾರ್ವಜನಿಕ ವಲಯದ ಕಂಪನಿಗಳಾದ ಪವರ್‌ಗ್ರಿಡ್, ಕೋಲ್ ಇಂಡಿಯಾ ಮತ್ತು ಎನ್‌ಟಿಪಿಸಿ 200ಕೋಟಿಗೂ ಅಧಿಕ ಹಣವನ್ನು ದೇಣಿಗೆಯಾಗಿ ನೀಡಿವೆ.



ಮತ್ತೊಂದೆಡೆ ಕೇಂದ್ರ ಸರ್ಕಾರ, ತನ್ನ ಮಹತ್ವಾಕಾಂಕ್ಷೆ ಯೋಜನೆಗಳಾದ ಪ್ರಧಾನಮಂತ್ರಿ ಕೌಶಲ್ಯ ವಿಕಾಸ ಯೋಜನಾ (ಪಿಎಂಕೆವಿವೈ)ದ ಮೂಲಕ ಕೌಶಲ್ಯ ಸಾಲ ಯೋಜನೆ ಆರಂಭಿಸಿದೆ. ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನಾ (ಡಿಡಿಯು–ಜಿಕೆವೈ) ನಿಂದ ನಯಿ ಮಂಜಿಲ್ ಮತ್ತು ಸಾಲ ಖಾತರಿ ನಿಧಿ ಸ್ಥಾಪಿಸಿ ಕೌಶಲ್ಯಾಭಿವೃದ್ಧಿಗೆ ಸಾಂಸ್ಥಿಕ ಸಾಲ, ಅನ್ವೇಷಣೆಗೆ ಪ್ರೋತ್ಸಾಹ ಮತ್ತು ಗುಣಮಟ್ಟ ಕಾಯ್ದುಕೊಳ್ಳಲು ನೆರವು ನೀಡಲಾಗುತ್ತಿದೆ. ಪಿಎಂಕೆವಿವೈ ಯೋಜನೆ ಮೂಲಕ ಕೌಶಲ್ಯಹೊಂದಿದ ಯುವಕರಿಗೆ ನಗದು ಪ್ರೋತ್ಸಾಹ ನೀಡಲಾಗುತ್ತಿದೆ, ಅದು ಅವರಿಗೆ ಉದ್ಯೋಗಾವಕಾಶ ಹೆಚ್ಚಿಸುತ್ತದಲ್ಲದೆ, ಅವರ ಉತ್ಪಾದನೆಯೂ ಹೆಚ್ಚಾಗಲಿದೆ. ವ್ಯಕ್ತಿಗಳ ವೈಯಕ್ತಿಕ ಕೌಶಲ್ಯವನ್ನೂ ಸಹ ಅದು ಗುರುತಿಸಲಿದೆ. ಮುಂದಿನ ಒಂದು ವರ್ಷದಲ್ಲಿ ದೇಶದ 24 ಲಕ್ಷ ಯುವಕರಿಗೆ ಈ ಯೋಜನೆಯ ಪ್ರಯೋಜನ ತಲುಪಿಸುವ ಗುರಿ ಹೊಂದಲಾಗಿದೆ.

ಒಟ್ಟಾರೆ, ಕೌಶಲ್ಯಾಭಿವೃದ್ಧಿ ಕ್ಷೇತ್ರದಲ್ಲಿ ಉತ್ತಮ ವಾತಾವರಣ ನೆಲೆಸುತ್ತಿದೆ. ಪ್ರಗತಿಪರ ಭಾರತಕ್ಕೆ ಅಗತ್ಯವಾದ ಕೌಶಲ್ಯ ವ್ಯವಸ್ಥೆಯತ್ತ ದೇಶ ಪ್ರಸ್ತುತ ಸಾಗುತ್ತಿದೆ. "ಕೌಶಲ್ಯ ಭಾರತ – ಕುಶಲ ಭಾರತ" ಗುರಿ ಸಾಧನೆಗೆ ಇದು ಸಕಾಲವಾಗಿದ್ದು, ಆ ನಿಟ್ಟಿನಲ್ಲಿ ಎಲ್ಲರೂ ಒಗ್ಗೂಡಿ ಕಾರ್ಯೋನ್ಮುಖವಾಗಬೇಕಿದೆ. ಆರ್ಥಿಕ ಸ್ಥಿತಿಯಲ್ಲಿ ಪ್ರಗತಿ ಕಾಣುತ್ತಿದ್ದೇವೆ. ಇದೀಗ ಕೌಶಲ್ಯ ಭಾರತ ಅಭಿಯಾನದೊಂದಿಗೆ ನಮ್ಮ ಧೋರಣೆ ಸವಿಸ್ತಾರವಾಗಿ ಹರಡುತ್ತಿದೆ ಮತ್ತು ಅದು ಹೆಚ್ಚು ಪರಿಣಾಕಾರಿಯಾಗಿ ಕಂಡು ಬರುತ್ತಿದೆ. ಈಗ ಎದುರಾಗಿರುವ ಮತ್ತೊಂದು ಸವಾಲು ಎಂದರೆ, ಕೈಗಾರಿಕೆಗಳ ಬೇಡಿಕೆಗೆ ಅನುಗುಣವಾಗಿ ತರಬೇತಿ ಸಾಮರ್ಥ್ಯವನ್ನು ಸೃಷ್ಟಿಸುವುದು. ಆನಂತರ ಕೌಶಲ್ಯ ಹೊಂದಿದವರಿಗೆ ಉದ್ಯೋಗವಕಾಶಗಳನ್ನು ಸೃಷ್ಟಿಸುವ ಅಗತ್ಯವೂ ಇದೆ. ❑

# ತಂತ್ರಜ್ಞಾನ ಹಾಗೂ ಕೌಶಲ್ಯ

* ಅರುಣ್ ಮೈರಾ
** ಮದನ್ ಪದಕಿ



**ರಾಷ್ಟ್ರೀಯ ಉದ್ಯಮದ ಮುಖ್ಯಗುರಿಯಲ್ಲಿ ಕೌಶಲ್ಯಕ್ಕೇ ಹೆಚ್ಚಿನ ಮಹತ್ವ ನೀಡುವ ಜತೆ ಉದ್ಯೋಗವನ್ನುಳ್ಳ ನಾನಾ ರೀತಿಯ ಉದ್ಯಮಗಳನ್ನು ರೂಪಿಸುವ ಗುರಿಯನ್ನು ಹೊಂದಬೇಕು. ಉದ್ಯಮಗಳ ಅಭಿವೃದ್ಧಿಯ ಜೊತೆ ಜೊತೆಯಲ್ಲೇ ಅಗತ್ಯವಿರುವ ಕೌಶಲ್ಯಾಭಿವೃದ್ಧಿಯ ನಿರ್ಣಾಯಕ ಅಂಶಗಳು ಉದ್ಯಮಗಳೊಳಗೆ ಸೇರಿರಬೇಕು.**

ಪ್ರಪಂಚದ ಇತರೆ ಯಾವುದೇ ದೇಶಕ್ಕಿಂತ ಹೆಚ್ಚಾಗಿ, ಭಾರತ ದೇಶವು ಯುವಜನರಿಗೆ ಸಾಕಷ್ಟು ಸೌಕರ್ಯಗಳಿವೆ ಎಂಬುದನ್ನು ಖಾತ್ರಿ ಮಾಡಿಕೊಳ್ಳಬೇಕು. ಅರ್ಥಶಾಸ್ತ್ರಜ್ಞರೇ ಸೂಚಿಸಿರುವಂತೆ ಜಾಗತಿಕವಾಗಿ ಜನಸಂಖ್ಯಾ ಒಲವು – ಪ್ರವೃತ್ತಿಗಳು ಕಂಡುಕೊಂಡಿರುವಂತೆ ತಮ್ಮ ತಮ್ಮ ಆರ್ಥಿಕತೆಯನ್ನು ಬೆಂಬಲಿಸುವ ದುಡಿಯುವ ವಯಸ್ಸಿನ ಜನರಲ್ಲಿ ಕೊರತೆಯುಂಟಾಗುವುದನ್ನು, ಜಾಗತಿಕವಾಗಿ ಶ್ರೀಮಂತ ರಾಷ್ಟ್ರಗಳ (ಚೀನಾ ದೇಶವನ್ನೊಳಗೊಂಡಂತೆ)ಲ್ಲೇ ಕಾಣಬಹುದಾಗಿದೆ. ಅದೇ ಹೊತ್ತಿನಲ್ಲಿ ಭಾರತ ದೇಶವು ದುಡಿಯುವ ವಯಸ್ಸಿನ ಜನರಿಗೆ ಸಂಬಂಧಿಸಿದಂತೆ 'ಗಜಗರ್ಭ'ವನ್ನು ಹೊತ್ತು ನಿಂತಿದೆ. 18 ವರ್ಷದ ಒಳಗಿದ್ದು, ದುಡಿಯುವವರ ಸಂಖ್ಯೆ 470 ಮಿಲಿಯನ್ ಇದೆ. 2014 ರ ಸರ್ಕಾರದ ಆರ್ಥಿಕ ಸಮೀಕ್ಷೆಯ ಪ್ರಕಾರ ಪ್ರತಿವರ್ಷ 63 ಮಿಲಿಯನ್ ಜನರು ಭಾರತದಲ್ಲಿ ದುಡಿಯುವ ವಯಸ್ಸಿನ ಜನರ ಗುಂಪಿಗೆ ಹೊಸದಾಗಿ ಸೇರ್ಪಡೆಯಾಗುತ್ತಾರೆ.

ಪ್ರವರ್ಧಮಾನಕ್ಕೆ ಬರುತ್ತಿರುವ ಯುವ ಜನಾಂಗದ ಹೆಚ್ಚಳದಿಂದ ಜನಸಂಖ್ಯಾ ಲಾಭಾಂಶ ಪಡೆದುಕೊಳ್ಳುವ ಸಂಭಾವ್ಯತೆ ಭಾರತಕ್ಕಿದೆಯೆಂದು ಉದಾಹರಿಸಬಹುದಾದರೂ, ಅದರದ್ದು ಸಾಮಾನ್ಯವಾಗಿ ಜೊತೆಯಲ್ಲಿ ಸಹಕರಿಸುವ ಸವಾರನಿಲ್ಲದ ಸ್ಥಿತಿಯಂತಾಗಿದೆ. ಭಾರತದ ಯುವಜನಾಂಗ ಆದಾಯ ಗಳಿಸಲು ಸಮರ್ಥವಾಗಿದ್ದಲ್ಲಿ, ಅದರಿಂದ ಅವರು ವೆಚ್ಚ ಮಾಡಲಾಗದಿದ್ದಲ್ಲಿ. ಹಾಗೆಯೇ ಉಳಿತಾಯ ಮಾಡಲಾಗದೇ ಇದ್ದಲ್ಲಿ, ಇದೆಲ್ಲದರಿಂದಲೇ ದೇಶದ ಆರ್ಥಿಕ ಬೆಳವಣಿಗೆಯನ್ನು ವೃದ್ಧಿಗೊಳಿಸದೇ ಇದ್ದಲ್ಲಿ ಭಾರತವು ಜನಸಂಖ್ಯಾ ಲಾಭಾಂಶವನ್ನು ಸಾಕ್ಷಾತ್ಕರಿಸಿಕೊಳ್ಳುವುದು ಸಾಧ್ಯವಿಲ್ಲ. ನಿಜಕ್ಕೂ ಯುವಜನಾಂಗವು ಗಳಿಸುವ ಹಾಗೆಯೇ ವ್ಯಯಮಾಡುವ ಸಾಕಷ್ಟು ಅವಕಾಶಗಳನ್ನು ಪಡೆಯದೇ ಇದ್ದಲ್ಲಿ ಹಾಗೆಯೇ ತಾವು ಬಯಸಿದ ಬದುಕನ್ನು ಸಾಕಾರಗೊಳಿಸಲು ಆಗದೇ ಇದ್ದಲ್ಲಿ, ಬೃಹತ್ ಪ್ರಮಾಣದ ಸಾಮಾಜಿಕ ಅಶಾಂತಿ ಭಾರತೀಯ ಯುವಕರಲ್ಲಿ ತಲೆದೋರಲಿದೆ. ಯುವಕರಲ್ಲಿನ ಮಾನಸಿಕ ಪ್ರಕ್ಷುಬ್ಧತೆಯು ಬೆಳೆಯುತ್ತಿರುವ ಸೂಚನೆಗಳು ಸ್ಪಷ್ಟವಾಗಿ ಗೋಚರವಾಗುತ್ತಿದ್ದು, ಅದು ಹುದ್ದೆಗಳ ಮೀಸಲಾತಿ ಬೇಡಿಕೆಯಲ್ಲಿ, ಅಭಿವೃದ್ಧಿಗೊಳ್ಳುತ್ತಿರುವ ನಗರಕೇಂದ್ರಿತ ಪ್ರದೇಶಗಳಿಗೆ ಯುವಕರು ಹಾಗೆಯೇ ವಲಸೆಗೊಳ್ಳುತ್ತಿರುವಲ್ಲಿ ಮತ್ತು ನಗರಗಳಲ್ಲಿ ಯುವಕರು ಹಿಂಸೆಯಲ್ಲಿ ತೊಡಗುವಿಕೆಯಲ್ಲಿ ಪರ್ಯಾವಸಾನಗೊಳ್ಳುವಲ್ಲಿ ಪ್ರಕಟಗೊಳ್ಳುತ್ತಿದೆ.

ಭಾರತ ಸರ್ಕಾರವು ತನ್ನ ಯುವಜನಾಂಗಕ್ಕೆ ಉದ್ಯೋಗ ಸೃಷ್ಟಿಸುವ ಅವಕಾಶಗಳ ಅನಿವಾರ್ಯತೆಯನ್ನು ಮನಗಂಡು ಅದನ್ನು ಚೆನ್ನಾಗಿ ಬಳಸಿಕೊಳ್ಳುತ್ತಿದೆ. ಕೌಶಲ್ಯ ಅಭಿವೃದ್ಧಿ ನಿಯೋಗದ ಮೂಲಕ ಹಾಗೆಯೇ 500 ಮಿಲಿಯನ್ ವ್ಯಕ್ತಿಗಳನ್ನು ಕುಶಲಿಗಳನ್ನಾಗಿಸುವ ಕಾರ್ಯಸಾಧ್ಯತೆಯ ಮೂಲಕ 'ಮೇಕ್ ಇನ್ ಇಂಡಿಯಾ' ಅನ್ನು ಘೋಷಿಸಿದೆ. ಚೀನಾ ದೇಶವು ಕ್ರಮೇಣ ತನ್ನ ಕಾರ್ಖಾನೆಗಳನ್ನು ಪ್ರಪಂಚಕ್ಕೆ ಬಿಟ್ಟುಕೊಡುತ್ತಿದೆ. ಚೀನಾ

* ಕುಲಪತಿ, ಕೇಂದ್ರೀಯ ವಿಶ್ವವಿದ್ಯಾಲಯ, ಹಿಮಾಚಲ ಪ್ರದೇಶ. Email : arun.maira@gmail.com
** ಹೆಡ್ ಹೆಲ್ಡ್ ಹೈ ಸರ್ವೀಸಸ್‌ನ ಸಹ ಸ್ಥಾಪಕರು ಮತ್ತು ಸಿ.ಇ.ಓ. Email : madan@head_held-high.com

ದೇಶದ ಸಂಭಾವನೆಗಳು ಏರಿಕೆಯಾಗುತ್ತಾ, ಚೀನೀಯರ ಹಣ ಚಲಾವಣೆ ವರ್ಧಿಸುತ್ತಾ ಹಾಗೆಯೇ ಯುವಜನರೇ ಕಡಿಮೆಯಾಗುತ್ತಿರುವ ಆಂತರಿಕ ಜನಸಂಖ್ಯಾ ಸವಾಲಿನಿಂದಾಗಿಯೂ ಕೂಡ, ಭಾರತವು ಇಡೀ ವಿಶ್ವಕ್ಕೆ ಸಾಧ್ಯತೆಯುಳ್ಳ ಕಾರ್ಖಾನೆಯಾಗುವ ಅವಕಾಶವನ್ನು ಬಳಸಿಕೊಳ್ಳಬೇಕಾಗಿ ಬಂದಿದೆ. ಆರ್ಥಿಕ ಬೆಳವಣಿಗೆಯ ಮಾದರಿಯನ್ನು ಭಾರತವು ಬದಲಾಯಿಸಿಕೊಳ್ಳದೆ ಇದ್ದ ಪಕ್ಷದಲ್ಲಿ ಹಾಗೆಯೇ ಅದರ ಸದುದ್ದೇಶವುಳ್ಳ ಕಾರ್ಯಕ್ರಮಗಳು ಕಾರ್ಯಗತಗೊಳ್ಳುವಲ್ಲಿ ಉತ್ತಮ ರೀತಿಯ ಗೊತ್ತು–ಗುರಿಗಳನ್ನು ಅಳವಡಿಸಿಕೊಳ್ಳದೇ ಹೋದ ಪಕ್ಷದಲ್ಲಿ ಅದಕ್ಕಿರುವ ಆತಂಕ ದೂರವಾಗುವುದಿಲ್ಲ. ಭಾರತವು ತನ್ನ ಹಳೇ ಜಾಡನ್ನು ಬದಲಾಯಿಸದೇ ಇದ್ದಲ್ಲಿ ಅದಕ್ಕೆ ಸಮಸ್ಯೆ ತಪ್ಪಿದ್ದಲ್ಲ ಎಂಬ ಆತಂಕಕ್ಕೆ ಸಾಕ್ಷ್ಯಾಧಾರಗಳಿವೆ. ಭಾರತದ ಜಿ.ಡಿ.ಪಿ. ಅಭಿವೃದ್ಧಿಯು 1990 ರ ಆರ್ಥಿಕ ಸುಧಾರಣೆಯ ಕಾಲದಿಂದಲೂ ಸರಾಸರಿಯಲ್ಲಿ ಪ್ರಭಾವಶಾಲಿಯಾಗಿದ್ದು, ಬೇರೆ ಅಭಿವೃದ್ಧಿಶೀಲ ದೇಶಗಳಿಗಿಂತ ಜಿ.ಡಿ.ಪಿ. ಯಲ್ಲಿನ ಪ್ರತಿ ಶೇಕಡಾ ಹೆಚ್ಚಳಕ್ಕೆ ಕೇವಲ ಒಂದಿಷ್ಟು ಉದ್ಯೋಗಗಳನ್ನು ಮಾತ್ರ ಸೃಷ್ಟಿಸುವ ಹಾಗೆ ಕಂಡುಬರುತ್ತದೆ. ಇದು ಬಾಸ್ಟನ್ ಕನ್ಸಲ್ಟಿಂಗ್ ಗ್ರೂಪ್‌ನವರ ಅಂತಾರಾಷ್ಟ್ರೀಯ ತುಲನೆಯುಳ್ಳ ಸುಸ್ಥಿತಿಯ ಆರ್ಥಿಕ ಅಭಿವೃದ್ಧಿ ಬೆಲೆ ಅಂದಾಜು ವಿಶ್ಲೇಷಣೆ ಆಗಿದ್ದು, ಒಂದು ಉದಾಹರಣೆಯಾಗಿದೆ ಇದನ್ನು ಇತರೆ ವಿಶ್ಲೇಷಣೆಗಳು ಸಹ ಪುಷ್ಟೀಕರಿಸುತ್ತವೆ.

ಈ ಲೇಖನದಲ್ಲಿ, ಭಾರತದಲ್ಲಿ ಹೆಚ್ಚು ತ್ವರಿತಗತಿಯಲ್ಲಿ ಉದ್ಯೋಗ ಸೃಷ್ಟಿಗೆ ಅಗತ್ಯವಿರುವ ಮನೋರೂಢ ಹಾಗೂ ಸಾಂಸ್ಥಿಕ ರಚನೆಗಳಲ್ಲಿ ಆಗಬೇಕಾಗಿರುವ ಬದಲಾವಣೆಗಳನ್ನು ಕುರಿತು ವಿವರಣೆ ನೀಡುತ್ತೇವೆ. ಅದಕ್ಕೆ ಮೊದಲು ಹುದ್ದೆಗಳು ಹಾಗೂ ಕೌಶಲ್ಯಗಳನ್ನು ಹುಟ್ಟು ಹಾಕುವ ಜಾಗತಿಕ (ಭಾರತವೂ ಸೇರಿ) ಪರಿಸರವನ್ನು ರೂಪಿಸುತ್ತಿರುವ ಪ್ರಭಾವಶಾಲಿ ಶಕ್ತಿಗಳನ್ನು ವಿವರಿಸುತ್ತೇವೆ ಹಾಗೆಯೇ ತಂತ್ರಜ್ಞಾನವು ಹೇಗೆ ಪರಿಸರವನ್ನು ಪರಿವರ್ತಿಸುತ್ತಾ ಹಳೆಯ ಮಾದರಿಗಳನ್ನು ನಿಶ್ಚಯಗೊಳಿಸುತ್ತವೆ ಎಂಬುದನ್ನು ವಿಶ್ಲೇಷಿಸುತ್ತೇವೆ. ಇದಾದ ನಂತರ, ಭಾರತದೇಶವು ತನ್ನ ಸಂದರ್ಭವನ್ನು ಬಳಸಿಕೊಳ್ಳಲು ಅಗತ್ಯವಿರುವ ಮನೋರೂಢಿ ಹಾಗೂ ಸಾಂಸ್ಥಿಕರಚನೆಗಳಿಗೆ ಬೇಕಾಗಿರುವ ಬದಲಾವಣೆಗಳನ್ನು ಕುರಿತು ವಿವರಣೆ ನೀಡುತ್ತೇವೆ. ಕೊನೆಯದಾಗಿ, ಕೌಶಲ್ಯ ಅಭಿವೃದ್ಧಿ ಪ್ರಕ್ರಿಯೆಗೆ ಸಂಬಂಧಪಟ್ಟ ಮನೋರೂಢಿ ಹಾಗೂ ರಚನೆಗಳಿಗೆ ಅಗತ್ಯವಿರುವ ಬದಲಾವಣೆಯನ್ನು ಕುರಿತಂತೆ ದೃಷ್ಟಾಂತಗಳನ್ನೊಳಗೊಂಡ ಉದಾಹರಣೆಗಳನ್ನು ನೀಡುತ್ತೇವೆ.

### ಭಾರತದ ಹುದ್ದೆಗಳು, ಉದ್ಯಮಗಳು, ತಂತ್ರಜ್ಞಾನ, ಕೌಶಲ್ಯ (ಜೆಇಟಿಎಸ್) ಪರಿಸರ ವ್ಯವಸ್ಥೆಯನ್ನು ರೂಪಿಸುವ ಚಾಲನಶಕ್ತಿಗಳು

ಹುದ್ದೆಗಳು – ಕೌಶಲ್ಯಗಳ ಪರಿಸರ ವ್ಯವಸ್ಥೆಗಳ ಮೇಲೆ ಬಲಯುತವಾದ ಶಕ್ತಿಯೊಂದು ಒತ್ತಾಯ ಹಾಕುತ್ತಿದ್ದು, ಆ ಒತ್ತಡವು ಬಹಳ ತೀವ್ರಗತಿಯಲ್ಲಿ ತುಂಬಾ ಮಹತ್ತರವಾದದ್ದನ್ನು ಮಾಡಬೇಕೆನ್ನುವುದಾಗಿದೆ. ಇದೇ ಕಾರಣವಾಗಿ ಭಾರತದ ಜನಸಂಖ್ಯಾ. ಲಾಭಾಂಶವು ಜನಸಂಖ್ಯಾ ಅನರ್ಥಕಾರಿಯಾಗಿ ತಿರುವು ಪಡೆದುಕೊಂಡುಬಿಟ್ಟೀತು ಎನ್ನುವ ಆತಂಕವೂ ಹಲವರಲ್ಲಿ ಇದೆ. ದೊಡ್ಡ ಒತ್ತಡ ಹಾಕಿ ತೀವ್ರವಾಗಿ ಮಾಡುವ ಪ್ರಯತ್ನ ಎಲ್ಲಿರುತ್ತದೆಯೋ, ಅದು ಯಾವುದೇ ಆಗಿರಲಿ ಅದಕ್ಕೆ ಸ್ಪಂದಿಸುವ ಕ್ರಿಯೆಯೆಂದು ಹೆಚ್ಚಿನ ಸಂಪನ್ಮೂಲಗಳನ್ನು ಒದಗಿಸುವುದು ಹಾಗೆಯೇ ಹೆಚ್ಚೆಚ್ಚು ಅಧಿಕಾರವನ್ನು ಬಳಸುವುದು ಸಾಮಾನ್ಯ ವಿಷಯವೇ ಆದರೂ ಇಲ್ಲಿನ ದೃಷ್ಟಿಕೋನ, ಮಾರ್ಗದಲ್ಲಿ ಯಾವ ಬದಲಾವಣೆಯೂ ಇಲ್ಲ. ಸಮಸ್ಯೆಯಾವಾಗುವುದೆಂಬ ನಿರೀಕ್ಷೆಯಿಂದ ಹೆಚ್ಚೆಚ್ಚು ಸಂಪನ್ಮೂಲಗಳನ್ನು ಹಾಗೂ ಅಧಿಕಾರವನ್ನು ಬಳಸಲಾಗಿದೆ. ಆದಾಗ್ಯೂ ಆಲ್‌ಬರ್ಟ್ ಐನ್‌ಸ್ಟೀನ್ ಹೇಳಿದಂತೆ, ಪರಿಹರಿಸಲಾಗದ ಸಮಸ್ಯೆಯೊಂದನ್ನು ಹಳೆಯ ಮಾರ್ಗ ಅನುಸರಿಸುವುದರಿಂದ ಬಗೆಹರಿಸಲಾಗುವುದಿಲ್ಲ.

ಜಗತ್ತಿನಾದ್ಯಂತ ಜೆಇಟಿಎಸ್ ಪರಿಸರ ವ್ಯವಸ್ಥೆಯನ್ನು ಪರಿಣಮಿಸುತ್ತಿರುವ ಎರಡನೇ ಬೃಹತ್ ಸ್ಥಿತಿಯೆಂದರೆ ಅದು ಅನಿಶ್ಚಿತತೆ. ಉದ್ಯಮ ಹಾಗೂ ಹುದ್ದೆಗಳ ನಿರ್ದಿಷ್ಟ ಆಕಾರಗಳು ಹೊಸ ತಂತ್ರಜ್ಞಾನದಿಂದ ಬದಲಾಗುತ್ತವೆ. ಕೈಗಾರಿಕೆಗಳು ಆಮೂಲಾಗ್ರವಾಗಿ ಪರಿವರ್ತನೆಗೆ ಒಳಗಾಗುತ್ತವೆ. ಚಿಲ್ಲರೆ ಮಾರಾಟ, ಪ್ರಕಟಣೆ, ಸಾರ್ವಜನಿಕ ಸಾರಿಗೆ ವ್ಯವಸ್ಥೆ,



ದೂರಸಂಪರ್ಕ ವ್ಯವಸ್ಥೆ ಮುಂತಾದವು ಪರಿವರ್ತನೆಗೆ ಒಳಗಾಗುತ್ತವೆ. ಅಂಕಿ–ಬಳಕೆ ತಂತ್ರಜ್ಞಾನಗಳು ಹಾಗೂ ಸ್ವಯಂಚಾಲಿತ ಯಂತ್ರಜ್ಞಾನ ಅನ್ವಯಿಕೆಯಿಂದ ಉತ್ಪಾದನೆ ಕೂಡ ಪರಿವರ್ತಿತಗೊಳ್ಳುತ್ತಿದೆ. ಉದಾ: ಈಗ 3ಡಿ ಪ್ರಿಂಟರ್‌ಅನ್ನು ಉಪಯೋಗಿಸುವ ಸಣ್ಣ ಘಟಕಗಳು ತಮ್ಮಲ್ಲಿನ ವಿಶೇಷ ಯಂತ್ರ ಬಳಕೆಯಿಂದಾಗಿ, ಬೃಹತ್ ಕೈಗಾರಿಕೆಗಳಲ್ಲಿನ ಸಾಮರ್ಥ್ಯವಿರುವ ವ್ಯಾಪ್ತಿ ಹೊಂದಿರುತ್ತವೆ. ತಂತ್ರಜ್ಞಾನವನ್ನು ತ್ವರಿತಗತಿಯಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ ಹಾಗೂ ನವೀನ ರೀತಿಯಲ್ಲಿ ಅಳವಡಿಸಲಾಗುತ್ತಿದೆ. ಮುಂದಣ ಹತ್ತು ವರ್ಷಗಳಲ್ಲಿ ಕಾರ್ಖಾನೆಗಳ ಆಕಾರ ಮತ್ತು ಕೈಗಾರಿಕೆಗಳ ಸೇವೆಗಳು ಯಾವ ರೀತಿಯಲ್ಲಿರುತ್ತದೆಂದು ಮುಂಗಾಣುವುದು ತುಂಬಾ ಕಷ್ಟವಾಗಿಬಿಟ್ಟಿದೆ. ಹಾಗೂ ಅವುಗಳಲ್ಲಿ ಹುದ್ದೆಗಳ ರೀತಿ ಯಾವ ರೀತಿಯದು, ಅವುಗಳಿಗೆ ಅಗತ್ಯವಿರುವ ನಿಶ್ಚಿತವಾದ ಕೌಶಲ್ಯ ಯಾವುದೆಂಬುದನ್ನು ಈಗಲೇ ಹೇಳುವುದು ಸಾಧ್ಯವಿಲ್ಲ. ತಂತ್ರಜ್ಞಾನದ ಪರಿಣಾಮದಿಂದಾಗಿ, ಎಲ್ಲಿ ಉತ್ಪಾದನೆ ಹಾಗೂ ಸೇವಾ ಉದ್ಯಮಗಳು ಹೊಸ ಮಾರ್ಪಾಡು ಪಡೆಯುವುದೋ ಅಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಅಗತ್ಯವಿರುವುದನ್ನು ಪೂರೈಸುವ ಹೆಚ್ಚುವರಿ ಭಾರತೀಯ ಕಾರ್ಯಪಡೆಯನ್ನು ಸಿದ್ಧಗೊಳಿಸುವುದರಲ್ಲೂ ಈ ಅನಿಶ್ಚಿತತೆ ಸಮಸ್ಯೆಯಾಗಲಿದೆ. ತಂತ್ರಜ್ಞಾನವು ಭಾರತೀಯ ಉದ್ಯಮಗಳನ್ನು ಸಹ ಪರಿವರ್ತಿಸಲೇಬೇಕು, ಪರಿವರ್ತಿಸುತ್ತದೆ ಹಾಗೂ ಬಹು ತೊಡಕಿನ ವಿಷಯವೆಂದರೆ ಭಾರತದಲ್ಲಿ ಯಾವ ರೀತಿಯ ಕೆಲಸಕ್ಕೆ ಯಾವ ಕೌಶಲ್ಯದ ಅಗತ್ಯವಿದೆ ಎಂಬುದನ್ನು ಖಚಿತವಾಗಿ ಅಂದಾಜು ಮಾಡುವುದು ಮತ್ತು ಈ ರೀತಿಯ ಪ್ರತಿಯೊಂದು ಕೆಲಸಕ್ಕೂ ಅಗತ್ಯವಿರುವ ಸಂಖ್ಯೆ ಎಷ್ಟೆಂಬುದನ್ನು ತಿಳಿಯುವುದು.

ಮೂರನೆಯ ಪ್ರಭಾವಶಾಲಿ ಅಂಶವೆಂದರೆ, ಭಾರತದಲ್ಲಿ ಈಗಾಗಲೇ

ಬಹಳ ಬಲಿಷ್ಠವಾಗುತ್ತಿರುವ, ಗ್ರಾಮೀಣ ಭಾರತದಲ್ಲಿನ ಉದ್ಯೋಗ ಸೃಷ್ಟಿಯ ಅಗತ್ಯ. ಉತ್ಪಾದನೆಯು ಸುಧಾರಣೆಗೊಂಡಂತೆಲ್ಲಾ ವ್ಯವಸಾಯದಲ್ಲಿನ ಕೆಲಸಕ್ಕೆ ಅಗತ್ಯವಿರುವ ಜನರ ಸಂಖ್ಯೆ ಕಡಿಮೆಯಾಗುತ್ತದೆ. ಹಾಗೆಯೇ ಆದಾಯವೂ ಅಧಿಕಗೊಂಡಿರುತ್ತದೆ. ಕೃಷಿ ಸಂಬಂಧಿ ಉತ್ಪಾದನೆಯು ಹೆಚ್ಚಾಗಬೇಕು ಆದರೆ ಕೃಷಿಯೇ ಉದ್ಯೋಗ ಹುಟ್ಟಿಸುವಂಥದ್ದಲ್ಲ. ಈ ಕಾರಣದಿಂದಲೇ ಯುವಪೀಳಿಗೆಯು ತಮ್ಮ ಬದುಕನ್ನು ಹುಡುಕಿಕೊಂಡು ತಕ್ಷಣ ಕಾರ್ಯಭಾರವುಳ್ಳ ಹಾಗೂ ತೀವ್ರವಾಗಿ ಬೆಳೆಯುತ್ತಿರುವ ನಗರದ ಕಡೆ ಹರಿದುಬಿಡುತ್ತದೆ. ಈಗ ನಿಭಾಯಿಸುತ್ತಿರುವುದಕ್ಕಿಂತ ಹೆಚ್ಚಿನ ಸಂಖ್ಯೆಯ ಜನರಿಗೆ ಉತ್ತಮ ವಸತಿ, ನೀರು, ಒಳಚರಂಡಿ (ನೈರ್ಮಲ್ಯ), ಸಾರಿಗೆ ಮತ್ತು ರಕ್ಷಣಾವ್ಯವಸ್ಥೆಗಳನ್ನು ಪಟ್ಟಣ ಹಾಗೂ ನಗರಗಳಲ್ಲಿ ಒದಗಿಸಲು ಸಿದ್ಧವಾಗಬೇಕಾಗಿದೆ. ಹಿಂಬಾಕಿ ಇರುವ ನಾಗರೀಕ ಸೌಲಭ್ಯಗಳು ಈಗಲೇ ಬೇಕಾದಷ್ಟಿದೆ. ಈ ಅಗತ್ಯಗಳನ್ನು ಪೂರೈಸಲೆಂದೇ ಭಾರತ ಸರ್ಕಾರವು



ಸ್ಮಾರ್ಟ್‌ಸಿಟಿ ಹಾಗೂ ಅಮೃತ್‌ನಂಥ ಕಾರ್ಯಕ್ರಮಗಳನ್ನು ಉತ್ತೇಜಿಸುತ್ತಿದೆ. ಇಷ್ಟಾದರೂ, ಮುಂದಿನ ಹತ್ತುವರ್ಷ ಹಾಗೂ ಅದಕ್ಕಿಂತ ಹೆಚ್ಚಿನ ಅವಧಿಯಲ್ಲಿ ಭಾರತದಲ್ಲಿ ಉದ್ಯೋಗ ಬಯಸುವ ಹೆಚ್ಚಿನ ಸಂಖ್ಯೆಯ ಯುವಪೀಳಿಗೆಗೆ ಉತ್ತಮ ಸೌಲಭ್ಯಗಳನ್ನು ಹಾಗೂ ಜೀವನೋಪಾಯವನ್ನು ಭಾರತೀಯ ನಗರಗಳು ಒದಗಿಸಲಾರವು ಎಂದು ಹೇಳುವುದೇ ಕ್ಷೇಮ ಎಂದೆನಿಸುತ್ತದೆ. ಆದ್ದರಿಂದಲೇ, ಆಧುನಿಕ ಉದ್ಯೋಗಗಳ ಮೂಲಕ ಗ್ರಾಮೀಣ ಯುವಜನರ ನಿರೀಕ್ಷೆಗಳನ್ನು ಸಾಕಾರಗೊಳಿಸುವುದಕ್ಕೆ ಬೇಕಾದ ಸ್ಥಿರವಾದ ಹಾಗೂ ಗೌರವಯುತ ಜೀವನೋಪಾಯವನ್ನು ಒದಗಿಸಲು ಗ್ರಾಮೀಣ ಭಾರತದಲ್ಲಿನ ಪರಿಸರ ವ್ಯವಸ್ಥೆ ರೂಪಿಸುವಿಕೆಯನ್ನು ಬಲಗೊಳಿಸಬೇಕಾಗಿದೆ.

ಭಾರತವು ಹಳ್ಳಿಗೆ ವಿರುದ್ಧ ಪಟ್ಟಣ, ಗ್ರಾಮೀಣಕ್ಕೆ ವಿರುದ್ಧ ನಗರವೆನ್ನುವ ವೈಚಾರಿಕ ಚರ್ಚೆಗಳನ್ನು ದಾಟಿ ಮುಂದೆ ಮುಂದೆ ಸಾಗಬೇಕಾಗಿದೆ. ಉತ್ತಮ ಜೀವನೋಪಾಯವುಳ್ಳ ಪರಿಸರ ವ್ಯವಸ್ಥೆಯು ನಗರ ಹಾಗೂ ಹಳ್ಳಿಗಳೆರಡಕ್ಕೂ ಬೇಕಾಗಿದೆ. ಈ ಮೊದಲು ತಿಳಿಸಿದಂತೆ ತಂತ್ರಜ್ಞಾನದಿಂದ ಬದಲಾಗುತ್ತಿದ್ದರೂ ಕೂಡ, ಪ್ರಪಂಚದಾದ್ಯಂತ ಆಧುನಿಕ ಉದ್ಯೋಗ ನೀಡುವಿಕೆ ಹಾಗೂ ನಗರ ಪ್ರದೇಶಗಳಲ್ಲಿ ವೃತ್ತಿಪರತೆಗೆ ಸಂಬಂಧಿಸಿದಂತೆ ಪರಿಹಾರೋಪಾಯಗಳನ್ನು ಕಂಡುಕೊಳ್ಳುತ್ತಿರುವುದು ಎಲ್ಲರಿಗೂ ತಿಳಿದ ಸಂಗತಿಯಾಗಿದ್ದರೂ ಕೂಡ, ಭಾರತವು ಗ್ರಾಮೀಣ ಭಾರತದಲ್ಲಿ ಆಧುನಿಕ ಜೀವನೋಪಾಯಕ್ಕೆ ಬೇಕಾದ ಆಧುನಿಕವೆನ್ನಬಹುದಾದ ಪರಿಹಾರ ಉಪಾಯಗಳನ್ನು ಅಭಿವೃದ್ಧಿಗೊಳಿಸಲೇಬೇಕು.

### ಜೆ.ಇ.ಟಿ.ಎಸ್. (ಉದ್ಯೋಗ, ಉದ್ಯಮ, ತಂತ್ರಜ್ಞಾನ, ಕೌಶಲ್ಯ) ಪರಿಸರ ವ್ಯವಸ್ಥೆಯ ಒಂದು ಹೊಸ ನಾವೀನ್ಯತೆ

ಮೇಲಿನಿಂದ ಬಲವಾದ ನಿಯಂತ್ರಣ ಇರುವುದರ ಜೊತೆಗೆ ಬೃಹತ್ತಾದ ಪ್ರಮಾಣದಲ್ಲಿ ಭಾರೀ ಸಂಯೋಜಿತ ವ್ಯವಸ್ಥೆಯೊಂದನ್ನು ರೂಪಿಸುವುದು, ಇಂದು ವಿಸ್ತಾರವಾಗಿ ಜಾರಿಯಲ್ಲಿದ್ದು, ಬಳಕೆಯಾಗುತ್ತಿರುವ ಒಂದು ತತ್ವವಾಗಿದೆ. ಇದು ಸಂಯೋಜನೆಗೊಳಿಸುವ ಶ್ರೇಣಿಯೊಂದಕ್ಕೆ ಇರುವ ಮಾದರಿಯಾಗಿದೆ. ಈ ರೀತಿಯ ವಿಧಾನವು, ಸಂಯೋಜನಾ ಶ್ರೇಣಿ ಪೂರ್ವ ನಿರ್ಧಾರಿತವಾಗಿದ್ದು, ಕೊನೆಯ ಹಂತದಲ್ಲಿ ಉತ್ಪಾದನೆಯ ಅಗತ್ಯವಿದ್ದಾಗ ಕೆಲಸಮಾಡುತ್ತದೆ. ಎಲ್ಲಿಯವರೆಗೆ ಕಪ್ಪುಬಣ್ಣ ಇರುತ್ತದೋ ಅಲ್ಲಿಯವರೆಗೆ ನೀವು ಯಾವ ಬಣ್ಣದ ಕಾರನ್ನು ಬೇಕಿದ್ದರೂ ಹೊಂದಬಹುದು ಎಂಬುದು ಫೋರ್ಡ್ ಹೇಳಿದ ಮಾತೆಂದು ವರದಿಯಾಗಿದೆ. ಫೋರ್ಡ್ ದಿನಗಳ ನಂತರದಲ್ಲಿ ಕಾರ್ಖಾನೆಗಳು ಹೆಚ್ಚೆಚ್ಚು ಸಂದರ್ಭಕ್ಕೆ ಹೊಂದಿಕೊಳ್ಳುವ ಹಾಗಾಗಿವೆ. ಇಷ್ಟೆಲ್ಲಾ ಆಗಿಯೂ ಕೂಡ, ಮೊಬೈಲ್ ಫೋನ್‌ಗಳನ್ನು ಉತ್ಪಾದನೆ ಮಾಡುವ ಕಾರ್ಖಾನೆಯೊಂದು ವಿಭಿನ್ನ ರೀತಿಯ ಮೊಬೈಲ್‌ಗಳನ್ನು ಉತ್ಪಾದಿಸಬಹುದೇ ಹೊರತು, ಬಟ್ಟೆಗಳನ್ನಾಗಲೀ ಕಾರ್‌ಗಳನ್ನಾಗಲೀ ಅಲ್ಲ. 21ನೇ ಶತಮಾನದಲ್ಲಿ ಕೌಶಲ್ಯಾಭಿವೃದ್ಧಿ ಮಾಡಬಯಸಿ ಸಂಸ್ಥೆ ಕಟ್ಟುವವರಿಗೆ ಮತ್ತು ಕಾಯಿದೆ ರೂಪಿಸುವವರಿಗೆ ಇರುವ




ಸವಾಲೆಂದರೆ, ಈ ಮೊದಲೇ ಹೇಳಿದಂತೆ ಯಾವ ಕೆಲಸ ಮಾಡುವ ಅಗತ್ಯವಿದೆ ಹಾಗೂ ಯಾವ ರೀತಿಯ ಕೌಶಲ್ಯದ ಅವಶ್ಯಕತೆಯಿದೆ ಎನ್ನುವುದನ್ನು ಸಾಕಷ್ಟು ಖಚಿತತೆಯಿಂದ ಹೇಳಲಾಗುವುದಿಲ್ಲ. ಕೌಶಲ್ಯಾಭಿವೃದ್ಧಿಗೆಂದೇ ಇರುವ ಸಂಯೋಜನೆಯ ಶ್ರೇಣಿ ಅಥವಾ ಒಂದು ಸಿದ್ಧಜಾಡನ್ನುಳ್ಳ ಪೂರೈಕೆ ಸರಪಳಿ ಮಾದರಿ ಇನ್ನು ದೀರ್ಘಕಾಲ ಕೆಲಸ ಮಾಡಲಾರದು.

ಭವಿಷ್ಯದ ಹಲವಾರು ವರ್ಷಗಳ ಆರ್ಥಿಕತೆಗೆ ಅಗತ್ಯವಿರುವಂಥ ವಿಭಿನ್ನ ಉದ್ಯೋಗಕ್ಕೆ ಸಂಬಂಧಿಸಿದಂತೆ ಜನರ ಸಂಖ್ಯೆಯನ್ನು ಅಂದಾಜು ಮಾಡುವುದರಿಂದಲೇ ಬೃಹತ್ ಪ್ರಮಾಣದ ಕೌಶಲ್ಯಾಭಿವೃದ್ಧಿಗೆ ಸಂಬಂಧಿಸಿದ ಪ್ರಸ್ತಾಪ ಆರಂಭವಾಗುತ್ತದೆ. ಇದು ವಾಸ್ತವದಲ್ಲಿ ಉದ್ಭವಗೊಳ್ಳುವ ಉದ್ಯೋಗ ಹಾಗೂ ಉದ್ದಿಮೆಗಳಲ್ಲಿ ಅಗತ್ಯವಿರುವ ಕೌಶಲ್ಯವುಳ್ಳ ಜನರನ್ನು ಅಂದಾಜು ಮಾಡುತ್ತದೆ. ಸಿದ್ಧಜಾಡುಳ್ಳ ಕೌಶಲ್ಯಾಭಿವೃದ್ಧಿ ಪೂರೈಕೆ ಸರಪಳಿ ಉದ್ದವೂ ದೀರ್ಘಕಾಲದ್ದೂ ಹಲವಾರು ವರ್ಷ ವಿಸ್ತಾರಗೊಳ್ಳುವಂಥದ್ದೂ ಆಗಿರುತ್ತದೆ. ಕೌಶಲ್ಯಕ್ಕೆ ಸಂಬಂಧಿಸಿದ ವಿಶಿಷ್ಟತೆ ಮತ್ತು ಸಂಖ್ಯೆಗೆ ಸಂಬಂಧಿಸಿದಂತೆ ಕೆಲಸ ಮಾಡುತ್ತಿರುವ ಕಾರ್ಖಾನೆಯವರೇ ವಿಶಿಷ್ಟ ಕೌಶಲ್ಯದೊಂದಿಗೆ ತಾಂತ್ರಿಕ ತರಬೇತಿ ಸಂಸ್ಥೆಗಳ ಮೂಲಕ ತಮಗೆ ಬೇಕಾದ ಅಗತ್ಯ ಸಂಖ್ಯೆಯ ಜನರನ್ನು ಹುಟ್ಟುಹಾಕಬೇಕು. ಆ ತಾಂತ್ರಿಕ ಸಂಸ್ಥೆಗಳಿಗೆ ಬೇಕಾದ ಒಳಹರಿವನ್ನು ಪೂರೈಸುವುದಕ್ಕೆ ನಮ್ಮ ಶಾಲೆ ಕಾಲೇಜುಗಳು ಪೂರ್ವಭಾವಿ ವೃತ್ತಿಪರ ಕೌಶಲ್ಯವುಳ್ಳ ವಿದ್ಯಾರ್ಥಿಗಳನ್ನು ಒದಗಿಸಬೇಕಾಗಿದೆ. ಈ ರೀತಿಯಲ್ಲಿ ಯುವಕರ ವೈಯಕ್ತಿಕ ಬದುಕಿನಲ್ಲಿ ಹಲವಾರು ವರ್ಷಗಳ ಕಾಲ ವಿಸ್ತೃತಗೊಳ್ಳುವ

ಪೂರೈಕೆ ಕೊಂಡಿಯನ್ನು ನಾವು ವ್ಯಾಖ್ಯಾನಿಸಬಹುದಾಗಿದೆ. ಅವನು ಅಥವಾ ಅವಳನ್ನು ಪರಿಣತಿಗೆ ಕೊಂಡೊಯ್ಯುವ, ಸರಪಳಿಯ ಕೊನೆಯಲ್ಲಿ ಮಹತ್ವಾಕಾಂಕ್ಷೆಯ ಉದ್ಯೋಗದ ಮಾರ್ಗದೆಡೆಗೆ ಕೊಂಡೊಯ್ಯುವುದಕ್ಕೆ ಬದುಕಿನ ಪ್ರಾರಂಭದಲ್ಲೇ ಅವರು ಸಿದ್ಧರಾಗಬಹುದು. ಎಷ್ಟೋ ವರ್ಷಗಳ ನಂತರ, ತಾನು ಪಡೆದಿದ್ದ ಅರ್ಹತೆಗೆ ತಕ್ಕಂತಹ ಉದ್ಯೋಗವು ದೊರೆಯಲಿಲ್ಲವೆಂದು ಕಂಡುಕೊಂಡಲ್ಲಿ ಆತ ಭ್ರಮನಿರಸನಗೊಂಡು, ವಿದ್ಯೆಯುಳ್ಳ ಆದರೆ ನಿರುದ್ಯೋಗಿ ಯುವಕನಾಗಿ ಸಾಮಾಜಿಕ ಅವಿಶ್ರಾಂತತೆಗೆ ಇಂಧನವಾಗುವಂಥವರನ್ನು ಸೇರಬಹುದಾಗಿದೆ.



ವಿಭಿನ್ನ, ನವೀನ ವಿನ್ಯಾಸವುಳ್ಳ ಪರಿಸರ ವ್ಯವಸ್ಥೆ ನಮಗೆ ಬೇಕಿರುವುದು ಸುಸ್ಪಷ್ಟ. ಈ ವ್ಯವಸ್ಥೆಯನ್ನು ಕೆಲವು ಮೂಲಭೂತ ತತ್ವಗಳಿಗೆ ಬದ್ಧರಾಗಿ ಕಂಡುಕೊಳ್ಳಬಹುದಾಗಿದೆ.

1) ಈಗ ತಿಳಿಸಿರುವ ಕಾರಣಗಳಿಂದಾಗಿ ಪೂರೈಕೆ ಸರಪಳಿ ಅಥವಾ ಸಂಯೋಜಿಸುವ ತಂಡ ಈಗಿರುವ ನಮೂನೆಯನ್ನು ವಿನ್ಯಾಸಗೊಳಿಸಲಾಗದು. ಹಿಂದುಳಿದ ರೀತಿಯಲ್ಲೇ ಕೆಲಸ ನಿರ್ವಹಣೆ ಮಾಡುತ್ತಿದ್ದು ಅಗತ್ಯಕ್ಕೆ ತಕ್ಕಂತೆ ಕೊನೆಮುಟ್ಟುವ ರೀತಿಯಲ್ಲಿ ವಿನ್ಯಾಸಗೊಂಡ ವ್ಯವಸ್ಥೆ ಯಾಗಬಾರದು. ಅದಕ್ಕೆ ಬದಲಾಗಿ ವಸ್ತುಸ್ಥಿತಿಗೆ ತಕ್ಕಂತೆ ಕಾಣಿಸಿಕೊಳ್ಳುವ ಉದ್ಯೋಗ ಹಾಗೂ ಅವಕಾಶಗಳನ್ನು ಯುವ ಜನಾಂಗ ಕಂಡುಕೊಳ್ಳಲು ಸಮರ್ಥರಾಗುವಂತೆ ವಿನ್ಯಾಸಗೊಂಡಿರಬೇಕು. ಅಗತ್ಯವಿರುವ ಕೌಶಲ್ಯವನ್ನು ಬಹುಬೇಗನೆ ಕಲಿಯುವಂತಿರಬೇಕು.

2) ವಿದ್ಯಾರ್ಥಿಗಳು ಉತ್ತಮ ರೀತಿಯಲ್ಲಿ ಕಲಿಯುವುದರ ಕಡೆಗೆ ಪ್ರಾಧಾನ್ಯತೆ ಇರಬೇಕು. ವಿಶ್ವವಿದ್ಯಾಲಯಗಳಲ್ಲಿ, ತಾಂತ್ರಿಕ ಸಂಸ್ಥೆಗಳಲ್ಲಿ ಹಾಗೂ ಶಾಲೆಗಳಲ್ಲಿ ಕಲಿಸುವುದರ ಒತ್ತು ಕೇವಲ ಉತ್ತಮ ಕೆಲಸಗಾರರನ್ನಾಗಿ ಮಾಡಿದರೆ ಸಾಲದು, ಉತ್ತಮ ಕಲಿಕೆಯವರನ್ನಾಗಿ ಮಾಡಬೇಕು (ನಿಜಕ್ಕೂ ಜೀವನೋಪಾಯಕ್ಕೆ ಕಾರಣವಾಗುವ ಉದ್ದಿಮೆಯವರೂ ಸಹ, ನಮ್ಮ ಉದಾಹರಣೆಗಳಲ್ಲಿ ಮುಂದೆ ನಾವು ನೋಡುವಂತೆ ಉದ್ದಿಮೆಗಳನ್ನು ಹುಟ್ಟು ಹಾಕುವವರಿಗೆ ಹಾಗೂ ಉದ್ಯೋಗ ನಿರೀಕ್ಷೆ ಮಾಡುವವರಿಗೆ ಪ್ರಾಥಮಿಕವಾಗಿ ಕಲಿಯುವ ಸಾಮರ್ಥ್ಯವನ್ನು ಪೋಷಿಸಬೇಕು.

3) ಉದ್ಯೋಗದಾತರು ಕೇವಲ ಅದರ ಗ್ರಾಹಕರು ಮಾತ್ರವಲ್ಲ, ಕೌಶಲ್ಯ ಅಭಿವೃದ್ಧಿ ಪ್ರಕ್ರಿಯೆಯ ಅಂತರ್ಗತ ಅಂಶವಾಗಬೇಕು. ಸಕ್ರಿಯಾತ್ಮಕ ಸ್ಪರ್ಧೆಯಲ್ಲಿ ಉಳಿಯುವ ಸಲುವಾಗಿ, ಉದ್ಯೋಗದಾತರು ತಮ್ಮ ಕೈಗಾರಿಕೆಗಳ ಭೂ ಪ್ರದೇಶವನ್ನು ಬದಲಾಯಿಸುವುದರ ಜೊತೆಗೆ ತಮ್ಮ ಉದ್ದಿಮೆಗಳಿಗೆ ಹೊಸ ರೂಪವನ್ನು ನೀಡಬೇಕು. ಇದು ಆಗಲೇ ವಿವರಿಸಿರುವಂತೆ, ಈಗಾಗಲೇ ಇರುವುದಕ್ಕಿಂತ ತ್ವರಿತವಾಗಿ ಘಟಿಸಬಲ್ಲದು. ಆದ್ದರಿಂದಲೇ ಉದ್ದಿಮೆಗಳವರು ನಿರಂತರವಾಗಿ ತಮ್ಮ ಪ್ರಕ್ರಿಯೆಗಳನ್ನು ಬದಲಾಯಿಸಬೇಕು ಹಾಗೂ ಅವರು ಉದ್ಯೋಗಿಗಳಿಂದ ನಿರೀಕ್ಷಿಸುವ ಕೌಶಲ್ಯಗಳನ್ನು ಬದಲಾಯಿಸುತ್ತಲೇ ಇರಬೇಕು. ಇಂಥ ಬದಲಾವಣೆಗಳು ತ್ವರಿತವಾಗಿ ನಡೆಯುವುದರಿಂದ, ಯಾವ ಸ್ಥಳದಲ್ಲಿ ಹೊಸ ಪ್ರಕ್ರಿಯೆಗಳು ಹಾಗೂ ತಂತ್ರಜ್ಞಾನಗಳು ಪರಿಚಯಿಸಲ್ಪಡುತ್ತವೋ ಆ ಕೆಲಸ ನಡೆಯುವ ಸ್ಥಳದಲ್ಲೇ ಉದ್ಯೋಗಿಗಳು ತಮ್ಮ ನವೀನ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳಬಹುದಾಗಿದೆ.

4) ಸ್ಪರ್ಧೆಯು ಜಾಗತಿಕವಾಗಿ ಹೆಚ್ಚುತ್ತಾ ಹೋಗುವುದು. ಅಂದರೆ ಇದು ಕೇವಲ ಇತರೆ ದೇಶಗಳಿಂದಷ್ಟೇ ಬರುವಂಥದ್ದಲ್ಲ, ಪ್ರಸ್ತುತದಲ್ಲಿರುವ ಕೈಗಾರಿಕೆಗಳ ಗಡಿಯಿಂದಾಚೆ ಇರುವ ಉದ್ದಿಮೆಗಳಿಂದಲೂ ಬರುವಂಥದ್ದು. ಆ ಉದ್ಯಮದವರು (ಉದ್ಯೋಗದಾತರು) ಮಾತ್ರ ಅದನ್ನು ಕಲಿಯುವಲ್ಲಿ ಮತ್ತು ಇತರ ಉದ್ಯಮದವರಿಗಿಂತ ತ್ವರಿತವಾಗಿ ಕಲಿತು ತಮ್ಮನ್ನು ಪರಿವರ್ತಿಸಿಕೊಳ್ಳುವಲ್ಲಿ ಸಫಲರಾಗುತ್ತಾರೆ. ಆದ್ದರಿಂದ ಉದ್ಯಮದವರು ತ್ವರಿತಗತಿಯವರೂ ಉತ್ತಮ ಕಲಿಯುವಿಕೆಯವರೂ ಆಗಬೇಕು.



5) ಯಾವುದೇ ಉದ್ಯಮದವರು ಕಲಿಯುವ ಸಾಮರ್ಥ್ಯ ಹೊಂದುವುದು, ತಮ್ಮ ಸಾಮರ್ಥ್ಯವನ್ನು ಸುಧಾರಿಸಿಕೊಳ್ಳುವ ಏಕೈಕ ಸಂಪನ್ಮೂಲವೆಂದರೆ ಮಾನವ ಜೀವಿಗಳೇ. ಕಾಲಕಾಲಕ್ಕೆ ಕಲಿಯುತ್ತಾ ಹೋಗುವುದರಿಂದ ಮೌಲ್ಯವರ್ಧನೆಯಾಗಿ ಯಾವ ಉದ್ಯಮದವರಿಗೆ ಮೆಚ್ಚುಗೆಯ ಆಸ್ತಿಯಾಗಬಲ್ಲವರು ಮಾನವ ಜೀವಿಗಳು ಮಾತ್ರ. ಉದ್ಯಮಗಳ ಇತರೆ ಎಲ್ಲ ಸಂಪನ್ಮೂಲಗಳ ಮೌಲ್ಯವು ಅದು ಯಂತ್ರೋಪಕರಣಗಳಿರಲಿ, ಮೂಲೋಪಕರಣಗಳು, ಕಟ್ಟಡಗಳು ಕಾಲಕಾಲಕ್ಕೆಬೆಲೆಗಳಲ್ಲಿ ಇಳಿಕೆಯಾಗುತ್ತಿರುತ್ತವೆ. ಆದ್ದರಿಂದ ತ್ವರಿತವಾಗಿ ಬದಲಾಗುತ್ತಿರುವ ಪ್ರಪಂಚದಲ್ಲಿ, ಉದ್ಯೋಗದಾತರು ತಮ್ಮ ಉದ್ಯಮಗಳನ್ನು ಕೇವಲ ತಂತ್ರಜ್ಞಾನದ ಅಂಕೀಕರಣ ಮಾಡುವುದು ಮಾತ್ರವಲ್ಲ ಮಾನವೀಕರಣಗೊಳಿಸಬೇಕು.

6) ಜೆ.ಇ.ಟಿ.ಎಸ್. ಪರಿಸರ ವ್ಯವಸ್ಥೆಯ ವಿನ್ಯಾಸವು ಒಂದು ಚೇತೋಹಾರಿ ಜಾಲಬಂಧವೇ ಹೊರತು ಒಂದು ಬಿಗಿಯಾದ ಪೂರೈಕೆಯ ಕೊಂಡಿಯಲ್ಲ. ಉದ್ಯೋಗ ಹಾಗೂ ಉದ್ಯಮಗಳು ಹೊಸದಾಗಿ ಪಡೆದುಕೊಳ್ಳುವ ಸ್ವರೂಪಗಳನ್ನು ಕಲಿಯುತ್ತಾ ಇರಲು ಹಾಗೂ ಜನರು ಕಲಿಯುವಂತೆ ಸಹಕರಿಸಿ ವಿವಿಧ ವಿಭಿನ್ನ ಚಟುವಟಿಕೆಗಳಲ್ಲಿ ಪರಿಣತಿಯನ್ನು ಪಡೆದುಕೊಳ್ಳುವ ಹಾಗೆ ಉದ್ಯಮಗಳು ಜಾಲಬಂಧವನ್ನು ರೂಪಿಸುತ್ತವೆ. ವಿಷಯಾಭಿವೃದ್ಧಿ, ತರಬೇತಿ ಪೂರಕ, ಶಿಕ್ಷಣಾಭಿವೃದ್ಧಿ ಉದ್ಯಮಿಗಾರರಿಗೆ ಆಪ್ತ ಸಲಹೆಯಂಥ ವಿಷಯತಜ್ಞರು ಇರುತ್ತಾರೆ ಅವರು ಅದೇ ಸೇವೆಯನ್ನು ಒದಗಿಸುತ್ತಲೇ ಬೇರೆಯವರೊಂದಿಗೆ ಸ್ಪರ್ಧಿಸುತ್ತಾರೆ, ಅವರಲ್ಲಿ ಯಾರು ಉತ್ತಮ ಮೌಲ್ಯ ನೀಡುತ್ತಾರೋ ಅವರು ಬೆಳೆಯುತ್ತಾರೆ. ನಾವೀನ್ಯತೆ ಎನ್ನುವುದು ಜೆ.ಇ.ಟಿ.ಎಸ್. ಪರಿಸರ ವ್ಯವಸ್ಥೆಯಲ್ಲಿ ಅಭ್ಯುದಯವನ್ನು ಪಡೆದುಕೊಳ್ಳಬೇಕು.

7) ಉದ್ಯಮದವರು ಅನುಸರಿಸುವ ಮಾನದಂಡಗಳನ್ನು ಗಮನಿಸುತ್ತಲೇ ಗ್ರಾಹಕರ ಆಸಕ್ತಿಗಳನ್ನು ರಕ್ಷಿಸುವ ಪ್ರಧಾನ ಪಾತ್ರ ಸರ್ಕಾರದ್ದು. ಅದು ಸ್ಪರ್ಧೆಯನ್ನು ನಿಯಂತ್ರಿಸಬೇಕು ಹಾಗೂ ಹೊಸದಾಗಿ ಪ್ರವೇಶಿಸುವವರು ಈಗಾಗಲೇ ನೆಲೆಯೂರಿರುವವರನ್ನು ತಳ್ಳದಂತೆ ತಡೆಗಟ್ಟಬೇಕು. ಸಣ್ಣ ಉದ್ದಿಮೆಗಳವರು ತಮಗೆ ತಾವೇ ಪಡೆದುಕೊಳ್ಳಲಾಗದ ಕೌಶಲ್ಯಾಭಿವೃದ್ಧಿ ಪ್ರಕ್ರಿಯೆಗೆ ಸಂಬಂಧಿಸಿದ ಕ್ರಮವನ್ನು ಸರ್ಕಾರವು ಸಾಮಾನ್ಯ ಸೌಲಭ್ಯಗಳ ಮೂಲಕ ನೀಡಬಹುದಾಗಿದೆ. ಇಲ್ಲಿಯೂ ಕೂಡ, ಕೌಶಲ್ಯಾಭಿವೃದ್ಧಿಗೆ ಸಂಬಂಧಿಸಿದ ಗುಣಮಟ್ಟದ ಜವಾಬ್ದಾರಿಯನ್ನು ಉದ್ಯೋಗದಾತರೇ ತೆಗೆದುಕೊಳ್ಳಬೇಕೆಂಬುದು ಮುಖ್ಯತತ್ವವಾಗಬೇಕು. ಆದ್ದರಿಂದ ಈ ರೀತಿಯ ಸಾಮಾನ್ಯ ಸೌಲಭ್ಯಗಳು ಸರ್ಕಾರದಿಂದ ಬೆಂಬಲವಿದ್ದಾಗ್ಯೂ ಸಾಧ್ಯವಿರುವಷ್ಟು ಮಟ್ಟಿಗೆ ಉದ್ಯೋಗದಾತರಿಂದ ಸಹಕಾರೀ ಪ್ರಯತ್ನವೆಂಬಂತೆ ನಡೆಯಬೇಕು.

**ಜೆ.ಇ.ಟಿ.ಎಸ್. ನಲ್ಲಿ ನಾವಿನ್ಯತೆ**

ಇಲ್ಲಿಯವರೆಗೆ ನಾವು, ಉದ್ಯೋಗಗಳು, ಉದ್ಯಮಗಳು,



ತಂತ್ರಜ್ಞಾನ, ಕೌಶಲ್ಯ ಪರಿಸರ ವ್ಯವಸ್ಥೆಗೆ ಸಂಬಂಧಿಸಿದ ಪರಿವರ್ತನೆಗೊಳಪಡುವ ಮಾದರಿಯನ್ನು ಕುರಿತ ಉನ್ನತಮಟ್ಟದ ಅವಲೋಕನವನ್ನು, ಭೂಮಿಯ ಮೇಲೆ ಸುಳಿದಾಡುವ ಹವಾಮಾನ ಸಂದರ್ಭವನ್ನು ಚಂದ್ರನ ಮೇಲಿಂದ ಅವಲೋಕಿಸುವಂತೆ ಗಮನಿಸಿದೆವು. ಈ ವಿನ್ಯಾಸದ ತತ್ವಗಳು ಹೇಗೆ ನಾವೀನ್ಯತೆಗೆ ರೂಪು ನೀಡುತ್ತವೆ ಹಾಗೇ ಅದರ ವಿನ್ಯಾಸದ ಒಟ್ಟೊಟ್ಟಿಗೆ ಯುವಕರು ಹೊಸ ಕೌಶಲ್ಯಗಳನ್ನು ಕಲಿಯಲು ಸಮರ್ಥರಾಗಿ, ಹೊಸ ಉದ್ಯಮಗಳನ್ನು ಸೃಷ್ಟಿಸುವುದಕ್ಕೆ ಸಾಧ್ಯವಾಗುತ್ತದೆಂಬುದನ್ನು ಭೂಮಿಗೆ ಇಳಿದು ಬಂದು ನೋಡೋಣ.

ವಿಷಯದ ಪ್ರಾರಂಭದಲ್ಲೇ ಒಂದು ಅಂಶ ತಿಳಿಸಬೇಕು. ಅದು ತುಂಬಾ ಉತ್ತಮವಾದದ್ದೇ ಆಗಿದ್ದಾಗ್ಯೂ ಒಂದೇ ಒಂದು ಉದಾಹರಣೆ ಮೂಲಕ ಈ ವಿಷಯವನ್ನು ಮಂಡಿಸುತ್ತೇವೆ. ಬೇರ್‌ಫೂಟ್ ಅಕಾಡೆಮಿ ಎಲ್ಲರಿಗೂ ತಿಳಿಸಿರುವಂಥದ್ದು ಮಾತ್ರವಲ್ಲ, ಇನ್ನು ಅನೇಕ ಉದಾಹರಣೆಗಳು ಇವೆ. ಹಳೆಯ ಉದಾಹರಣೆಗಳಲ್ಲಿ ಹಲವು ತಂತ್ರಜ್ಞಾನವನ್ನು ಪ್ರಧಾನ ಚಾಲನಾಶಕ್ತಿಯಾಗಿ ಬಳಸಿಕೊಳ್ಳಲಿಲ್ಲ. ಅದೇ ಸಂದರ್ಭದಲ್ಲಿ ತೀರಾ ಇತ್ತೀಚೆಗೆ ರೂಪಗೊಂಡವು, ಇಲ್ಲಿ ನಾವು ವಿವರಿಸುತ್ತಿರುವಂಥ ಅಂಥದ್ದೊಂದು ತೀರಾ ವಿಸ್ತೃತವಾಗಿ ತಂತ್ರಜ್ಞಾನವನ್ನು ಬಳಕೆ ಮಾಡಿಕೊಂಡಿವೆ.

**ಹೊಸತನ, ತಂತ್ರಜ್ಞಾನ ಬಳಕೆ**

ಇಂದು, ನಮ್ಮ ಯುವಪೀಳಿಗೆಯ ಹೆಬ್ಬಯಕೆಯು ಕೇವಲ ಜೀವನೋಪಾಯ ವಷ್ಟೇ ಅಲ್ಲ, ವರಮಾನ ಹೆಚ್ಚಿಸಿಕೊಳ್ಳುತ್ತಾ ಹೋಗುವುದರ ಜೊತೆಗೆ ಸಮಾಜದಿಂದ ಒಂದು ಗೌರವಪಡೆಯಲು ಕಾರಣವಾಗುವ ವೃತ್ತಿಯನ್ನು ಕಟ್ಟಿಕೊಳ್ಳುವುದು. ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಾಗಿ ಸಾಂಪ್ರದಾಯಿಕ ಜೀವನೋಪಾಯಗಳೇ ಇದ್ದು ವೃತ್ತಿ ಅಥವಾ ಆಧುನಿಕ ಉದ್ಯೋಗಗಳು ಇಲ್ಲವೇ ಇಲ್ಲ ಎನ್ನುವ ಮಟ್ಟಿಗಿನ ಸಂದರ್ಭವಿರುವುದರಿಂದ, ಗ್ರಾಮೀಣ ಯುವಕರು ನಗರದ ಕೊಳೆಗೇರಿಗಳಿಗೆ ವಲಸೆಹೋಗಿ, ಬೃಹತ್ ನಗರವು ತಮಗೆ ಒದಗಿಸುವ ವೃತ್ತಿ ಹಾಗೂ ಉದ್ಯೋಗವು ಯಾವುದೇ ಆಗಿರಲಿ ಅದರಲ್ಲಿ ತಮ್ಮ ಕೊರತೆ ನೀಗಿಸಿಕೊಂಡು ಬದುಕನ್ನು ತಳ್ಳುವ ಒತ್ತಡದಲ್ಲಿರುತ್ತಾರೆ. ಮೆಕೆನ್ಸಿಯವರ ಇತ್ತೀಚಿನ ವರದಿಯ ಪ್ರಕಾರ ಮುಂದಣ ಹತ್ತು ವರ್ಷಗಳಲ್ಲಿ 115 ಮಿಲಿಯನ್ ಯುವಪೀಳಿಗೆಯನ್ನು ಕಾರ್ಯಪಡೆಗೆ ಸೇರಿಸಿಕೊಳ್ಳಬೇಕಾಗಿದೆ. ಬೃಹತ್ತಾದ, ಔಪಚಾರಿಕ ಸಂಘಟನೆಗಳು ಅವರಿಗೆ ವೃತ್ತಿಯನ್ನೊದಗಿಸಬಲ್ಲವಾದರೂ ಆ ಎಲ್ಲರನ್ನು ಒಳಗೊಳ್ಳುವುದು ಸಾಧ್ಯವೇ ಇಲ್ಲ.

'ವೃತ್ತಿ'ಗಳ ನಿರೀಕ್ಷೆಗಳಿಗೆ ತಕ್ಕಂತೆ ನಾವು ಕಾರ್ಯಪಡೆಯನ್ನು ಹೇಗೆ ಒದಗಿಸಬಹುದು? ಇದಕ್ಕೆ ಉತ್ತರವೆಂದರೆ, ವೃತ್ತಿ ಆಯ್ಕೆ ಸಾಧ್ಯತೆಯುಳ್ಳ ವಾಣಿಜ್ಯ ಉದ್ದಿಮೆಯನ್ನು ಹುಟ್ಟು ಹಾಕುವುದು. ಈ ಮಾದರಿಗೆ ಹೆಡ್ ಹೆಲ್ಡ್ ಹೈ ಒಂದು ಸಾಫಲ್ಯವುಳ್ಳ



ನಿದರ್ಶನವಾಗಿದೆ. ಅದರಲ್ಲೂ ಗ್ರಾಮೀಣ ಭಾರತದಲ್ಲಿ ಆಧುನಿಕ ಜೀವನೋಪಾಯದ ಹೆಚ್ಚೆಚ್ಚು ಅವಕಾಶಗಳನ್ನು ತ್ವರಿತವಾಗಿ ಹುಟ್ಟು ಹಾಕುವ ಮೂಲಕ ಇದನ್ನು ಮಾಡಬೇಕಾಗಿದೆ. ಹೆಡ್ ಹೆಲ್ಡ್‌ಹೈ ಸಂಸ್ಥೆಯ ಸಮೀಕ್ಷೆಯ ಪ್ರಕಾರ, ಲಾಭದಾಯಕವಾಗಿ ತೊಡಗಿಸಿದಲ್ಲಿ ಗಣನೀಯ ಪ್ರಮಾಣದ ಯುವಕರು, ತಮ್ಮ ತಮ್ಮ ಜಿಲ್ಲೆಗಳ ಸುತ್ತ ಮುತ್ತ ಇರುವುದಕ್ಕೆ ಆದ್ಯತೆ ನೀಡುತ್ತಾರೆ ಎಂಬ ವಿಷಯ. ಭಾರತಕ್ಕಿರುವ ಉದ್ಯೋಗದ ಸವಾಲಿನ ಪರಿಹಾರವೆಂದರೆ, ಹೆಚ್ಚೆಚ್ಚು ಯುವಕರು ಉದ್ದಿಮೆದಾರಾಗುವಂತೆ ಪ್ರೇರೇಪಿಸುವುದು. ಅವರು ವ್ಯಕ್ತಿಗತವಾಗಿ ಉದ್ಯೋಗ ಅರಸುವುದಕ್ಕೆ ಬದಲಾಗಿ, ಅವರ ಜಿಲ್ಲೆಗಳಲ್ಲಿರುವ ಹೆಚ್ಚಿನ ಯುವಕರಿಗೆ ವೃತ್ತಿಯ ಅವಕಾಶಗಳನ್ನು ಸೃಷ್ಟಿಸುತ್ತಾರೆ.

ಗ್ರಾಮೀಣ ಭಾರತದ ಬಗ್ಗೆ ಸಾಮಾನ್ಯವಾಗಿ ಒಂದು ತಪ್ಪು ಕಲ್ಪನೆಯಿದೆ. ಹಲವರ ನಂಬಿಕೆಯೆಂದರೆ ಗ್ರಾಮೀಣ ಭಾರತದಲ್ಲಿ ಆಧುನಿಕ ಉದ್ಯೋಗ/ ವೃತ್ತಿಜೀವನಕ್ಕೆ ಬೇಕಾದ ಸಾಮರ್ಥ್ಯಗಳೇ ಮಿತಿಗೊಳಪಟ್ಟಿವೆ; ಅಪ್ರಕಟಿತ ಊಹೆಯೆಂದರೆ ಗಣಕಜ್ಞಾನ, ಸಂಪರ್ಕ ಕೌಶಲ್ಯಗಳು, ತಾರ್ಕಿಕ ವಿಚಾರ ಸರಣಿ, ತೀರ್ಮಾನ ಸಾಮರ್ಥ್ಯ ಮುಂತಾದ ವಿಷಯಗಳಲ್ಲಿ ಕೊರತೆಯಿರುವುದೇ ಕಾರಣವೆಂಬುದಾಗಿದೆ.

ಆದರೆ, ಹತ್ತಿರದಿಂದ ನೋಡಿದರೆ ಗ್ರಾಮೀಣ ಭಾರತದ ಡಿಎನ್ಎ ಬದಲಾಗುತ್ತಿದೆಯೆಂಬುದು ತಿಳಿಯುತ್ತದೆ. ಈಗ ಕಂಡುಬರುತ್ತಿರುವ ಗ್ರಾಮೀಣ ಭಾರತದ ತಲೆಮಾರು ಮಾಹಿತಿ ಪ್ರವೇಶಕ್ಕೆ ಸಂಬಂಧಪಟ್ಟಂತೆ ಪಟ್ಟಣಿಗರಿಗೆ ಸರಿಸಮಾನರಾಗಿಯೋ ಇಲ್ಲವೇ ಅವರಿಗಿಂತ ಹೆಚ್ಚಿನ ಕಲಿಯುವ ಹಸಿವು ಇದ್ದು, ಉದ್ದಿಮೆದಾರರಿಗೆ ಅವಶ್ಯವಿರುವ ಅಂತಃ

ಸತ್ವವನ್ನು, ಜಾಗತಿಕವೆನ್ನುವ ಹಂಬಲವನ್ನೂ ಹೊಂದಿದವರಾಗಿದ್ದಾರೆ.

ಗ್ರಾಮೀಣ ಭಾರತವು ತಂತ್ರಜ್ಞಾನದಲ್ಲಿ ಕೊರತೆಯುಳ್ಳದ್ದಾಗಿದೆ ಎಂಬುದೊಂದು ಸಾಮಾನ್ಯ ಗ್ರಹಿಕೆಯಾಗಿದೆ, ಆದರೆ ಹೆಡ್ ಹೆಲ್ಡ್ ಹೈ ನವರು ಉತ್ತರ ಕರ್ನಾಟಕದ ನಾಲ್ಕು ಜಿಲ್ಲೆಗಳಲ್ಲಿ 1000 ಜನರನ್ನು ಕುರಿತು ನಡೆಸಿದ ಸಮೀಕ್ಷೆಯ ಪ್ರಕಾರ, ಶೇಕಡ 53 ರಷ್ಟು ಜನರು ಸ್ಮಾರ್ಟ್‌ಫೋನ್ ಹೊಂದಿದ್ದಾರೆ, ಶೇಕಡ 73 ರಷ್ಟು ಜನರು ಮೊಬೈಲ್‌ನಲ್ಲಿ ಅಂತರ್ಜಾಲದ ಸೌಲಭ್ಯ ಪಡೆದುಕೊಂಡಿದ್ದಾರೆ. ಮತ್ತೊಂದು ಇ – ಕಾಮರ್ಸ್ ಸಮೀಕ್ಷೆಯನ್ನು ನಾವು 100 ಜನರಲ್ಲಿ ಮಾಡಿದಾಗ ಅದರಲ್ಲಿ ಶೇಕಡ 90 ರಷ್ಟು ಜನರು ಆನ್‌ಲೈನ್ ಶಾಪಿಂಗ್ ಬಗ್ಗೆ ಕೇಳಿ ತಿಳಿದಿದ್ದಾರೆ, ಅವರಲ್ಲಿ ಶೇಕಡ 47 ರಷ್ಟು ಜನರು ಆನ್‌ಲೈನ್ ಮೂಲಕ ಆದೇಶ ನೀಡಲು ನಿಜಕ್ಕೂ ಪ್ರಯತ್ನಿಸಿದ್ದಾರೆ. ಈ ನಿದರ್ಶನಗಳು ಗ್ರಾಮೀಣ ಯುವ ಜನರು ತಂತ್ರಜ್ಞಾನದ ಒಳಹೊಕ್ಕಿರುವುದನ್ನೂ, ಅದನ್ನು ಬಳಕೆ




ಮಾಡುವಲ್ಲಿ ತೀರಾ ಒಳನಾಡಿನಲ್ಲೂ ಕೂಡ ಹಿತಪಡೆಯುವವರಾಗಿದ್ದಾರೆ ಎಂಬುದನ್ನು ತಿಳಿಸುತ್ತದೆ.

ತಂತ್ರಜ್ಞಾನವನ್ನು ಬಳಕೆ ಮಾಡಿಕೊಂಡು ಗ್ರಾಮೀಣ ಹಾಗೂ ಜಿಲ್ಲಾ ಮಟ್ಟದಲ್ಲಿ ಉದ್ಯೋಗ/ ವೃತ್ತಿ ಅವಕಾಶಗಳು, ಕೌಶಲ್ಯ ಸಾಧಿಸಿರುವಮಟ್ಟ, ವಾಣಿಜ್ಯ ಉದ್ಯಮದ ವೃತ್ತಿಗಳನ್ನು ಕಂಡುಕೊಳ್ಳುವ ಏರ್ಪಾಡು ಮಾಡಲಾಗಿದೆ. ಗ್ರಾಮೀಣ ಯುವಕರು ತಮ್ಮ ಆಯ್ಕೆಗಳನ್ನು ಬುದ್ಧಿವಂತಿಕೆಯಿಂದ ಮಾಡಿಕೊಳ್ಳಲು ಅನುಕೂಲವಾಗುವಂತೆ ತಂತ್ರಜ್ಞಾನ ಬಳಸಿ ಅವರಿಗೆ ವೃತ್ತಿ ಮಾರ್ಗದರ್ಶನ ನೀಡಲಾಗುತ್ತದೆ ಹಾಗೂ ಸ್ಥಳೀಯ ವಿದ್ಯಾವಂತ ಯುವಕರು ವೃತ್ತಿ ತರಬೇತಿದಾರರಾಗಲು ಅವಕಾಶಮಾಡಿಕೊಡುವ ಮೂಲಕ, ಸ್ಥಳೀಯ ಸಹಾಯ ಯಾವಾಗಲೂ ದೊರಕುವ ಹಾಗೆ ಅವಕಾಶ ಕಲ್ಪಿಸಿದೆ. ಆಕಾಂಕ್ಷೆಯುಳ್ಳವರು ಕೇವಲ ಉದ್ಯೋಗ ಮಾಡುವುದಕ್ಕೆ ಬದಲಾಗಿ, ದೀರ್ಘಾವಧಿಯ ವೃತ್ತಿಗಳನ್ನು ಕಟ್ಟಿಕೊಳ್ಳಲು ಸಹಾಯ ಮಾಡುವುದಕ್ಕೆಂದು ಮತ್ತು ಯೋಗ್ಯ ರೀತಿಯ ಹಂಬಲ– ಕೌಶಲ್ಯ – ಹೊಂದಿಕೆಯಾಗುವ ಕೆಲಸ ಮಾಡುವುದಕ್ಕೆ ಸಹಕರಿಸಲು ತಂತ್ರಜ್ಞಾನವು ವೇದಿಕೆಯನ್ನು ಒದಗಿಸುತ್ತದೆ.

ಹೆಡ್–ಹೆಲ್ಡ್–ಹೈ ಸಂಸ್ಥೆಯು ಕಡಿಮೆ ಅಕ್ಷರಸ್ಥ ಮಟ್ಟದಲ್ಲಿರುವ ಯುವಪೀಳಿಗೆಗೆ ಇಂಗ್ಲೀಷ್ ಮಾತನಾಡಲು, ಗಣಕಯಂತ್ರ ಬಳಕೆ ಮಾಡುವಂತಾಗಲು, ವೃತ್ತಿಪರ ಕೆಲಸಗಾರರಾಗಲು ಕೇವಲ ನಾಲ್ಕೇ ತಿಂಗಳಲ್ಲಿ ಪರಿವರ್ತಿತರಾಗುವಂತೆ, ತಾಂತ್ರಿಕ ಸಹಕಾರಿ ಕಲಿಯುವಿಕೆಯನ್ನು ಕೂಡ ಸಿದ್ಧಪಡಿಸಿದೆ.

### ಆದಾಯ ತಂದುಕೊಡುವ ಕೌಶಲ್ಯ ಬಳಕೆ

ವೃತ್ತಿ ಮತ್ತು ಉದ್ಯಮಗಳು ಏಳಿಗೆ ಹೊಂದಬೇಕೆಂದಲ್ಲಿ, ನಾವು ಹೊಸ ಮಾರುಕಟ್ಟೆ ಸ್ಥಳಗಳನ್ನು ಕಟ್ಟುವ ಅಗತ್ಯವಿದೆ. ಗ್ರಾಮೀಣ ಭಾರತದಲ್ಲಿ ತಾಂತ್ರಿಕತೆಯ ಆಧಾರವುಳ್ಳ ಪ್ರವೇಶ ದ್ವಾರಗಳನ್ನು ಹಾಗೂ ವೇದಿಕೆಗಳನ್ನು ಕಟ್ಟಲು ಅವಕಾಶವಿದ್ದು, ಅವುಗಳು ಗ್ರಾಮೀಣ ಯುವಕರನ್ನು, ಮಾರುಕಟ್ಟೆ ಪ್ರವೇಶಕ್ಕೆ ಹಾಗೂ ವಾಣಿಜ್ಯ ಪೂರಕ ಸೇವೆಗಳನ್ನೊದಗಿಸುವ ಕಾರ್ಪೊರೇಟ್‌ಗಳಿಗೆ ಸಹಕರಿಸಲು ಸಮರ್ಥರನ್ನಾಗಿಸುತ್ತದೆ. ಆಗ ಕಾರ್ಪೊರೇಟ್‌ಗಳು ವಿವಿಧ ಘಟಕಗಳಾದ ಕೃಷಿ, ಆರೋಗ್ಯ, ಶಿಕ್ಷಣ, ಆರ್ಥಿಕ ಸೇವೆಗಳು, ಚಿಲ್ಲರೆ ವ್ಯಾಪಾರ ಮತ್ತು ಬಹುಪಯೋಗಿ (ನೀರು, ಇಂಧನ, ಸಂಪರ್ಕ) ಕ್ಷೇತ್ರದತ್ತ ಗಮನಹರಿಸಬಹುದಾಗಿದೆ. ಹೆಡ್–ಹೆಲ್ಡ್–ಹೈ ಸಂಸ್ಥೆಯು ರೂಬನ್ ಬ್ರಿಡ್ಜ್ ಎಂದು ಕರೆಯಲ್ಪಡುವ ವೇದಿಕೆಯೊಂದನ್ನು ಹುಟ್ಟುಹಾಕಿದೆ. ಇದು ಗ್ರಾಮೀಣ ಗ್ರಾಹಕರ ಮನೆ ಬಾಗಿಲಿಗೇ ಮಹತ್ವಾಕಾಂಕ್ಷೆಯ ಮನೋರಂಜನೆ ಹಾಗೂ ಈ ಕಾಮರ್ಸ್ ಉತ್ಪಾದನೆ ಹಾಗೂ ಸೇವೆಗಳನ್ನು ಹಾಗೆಯೇ ಅತ್ಯವಶ್ಯಕ ಸೇವೆಗಳಾದ ಆರೋಗ್ಯ ಹಾಗೂ ಶಿಕ್ಷಣಗಳನ್ನು ಗ್ರಾಮೀಣ ಭಾರತದ ಕಟ್ಟಕಡೆಯ ಮೈಲಿಯ ಪ್ರದೇಶಕ್ಕೆ ಸಂಪರ್ಕ ಕಲ್ಪಿಸುವ ರೀತಿಯಲ್ಲಿ ಒದಗಿಸುತ್ತದೆ. ಕೇವಲ ಕೆಲವೇ ತಿಂಗಳಲ್ಲಿ, ಹೆಡ್–ಹೆಲ್ಡ್–ಹೈ ಸಂಸ್ಥೆಯು ಹೊಸದಾಗಿ



ರೂಪಿತಗೊಂಡ ಮಾರುಕಟ್ಟೆಗಳಿಗೆ ಪೂರೈಕೆ ನೀಡುವ ಹೊಸ ಉದ್ಯೋಗಗಳು ಹಾಗೂ ಉದ್ಯಮಕ್ಕೆ ಸಂಬಂಧಿಸಿದ ಅವಕಾಶಗಳನ್ನು ಕಾಣಲು ಪ್ರಾರಂಭಿಸಿತು. ಜೊತೆಗೆ ಹಿಂದೆ ನಿರುದ್ಯೋಗಿಗಳಾಗಿದ್ದು, ನೂರು ಗ್ರಾಮೀಣ ಯುವಕರನ್ನು ಕೆಲಸದಲ್ಲಿ ತೊಡಗಿಕೊಳ್ಳುವಂತೆ ಮಾಡಿತು.

ಹೆಡ್–ಹೆಲ್ಡ್–ಹೈನ ಮತ್ತೊಂದು ಸಾಧನೆಗಳಲ್ಲೊಂದು ಸರ್ಕಾರದ ಕಲ್ಪನೆಯಾದ ಡಿಜಿಟಲ್ ಇಂಡಿಯಾಕ್ಕೆ ಅನುಕೂಲ ಕಲ್ಪಿಸುವ ಮಾರುಕಟ್ಟೆಯನ್ನು ಸೃಷ್ಟಿ ಮಾಡಿರುವುದು. ಇಂಟರ್‌ನೆಟ್ ಸಂತೆಯೆನ್ನುವುದು ತಾಲ್ಲೂಕುಗಳಲ್ಲಿನ, ವಿಶಿಷ್ಟರಾದ ಗ್ರಾಮೀಣ ಬಳಕೆ ಗುಂಪಿಗೆ ತಂತ್ರಜ್ಞಾನವನ್ನು ಉಪಯೋಗಿಸುವ ಮೂಲಕ ಒದಗುವ ಶಿಕ್ಷಣ ಹಾಗೂ ಉತ್ತೇಜನ ನೀಡುವ ಪ್ರಾಥಮಿಕ ಹಂತವಾಗಿರುತ್ತದೆ. ಕರ್ನಾಟಕದಲ್ಲಿ ಸಿರಾ, ನರಗುಂದ ಸೇರಿದಂತೆ ಆರು ಜಿಲ್ಲೆಗಳುದ್ದಕ್ಕೂ ಹತ್ತು ತಾಲ್ಲೂಕುಗಳಲ್ಲಿ ಇಂಟರ್‌ನೆಟ್ ಸಂತೆಗಳನ್ನು ಸಂಘಟಿಸಲಾಗಿದೆ. 8000 ಕ್ಕಿಂತ ಹೆಚ್ಚು ಜನರು ಇಂಟರ್‌ನೆಟ್ ಸಂತೆಗಳ ಮೂಲಕ ತೊಡಗಿಸಿಕೊಂಡಿದ್ದರು, ಕೆಲವರು ಇಂಟರ್‌ನೆಟ್ ಒದಗಿಸುವ ಅತ್ಯಂತ ಸಮರ್ಥ ಅಪ್ಲಿಕೇಷನ್‌ಗಳನ್ನು ಬಳಕೆ ಮಾಡಿದರು ಹಾಗೆಯೇ ಜ್ಞಾನವನ್ನು ಪಡೆದುಕೊಳ್ಳುವ ಹೊಸ ಹಾದಿಗೆ ಸಂಬಂಧಿಸಿದ ಉಪಕರಣಗಳನ್ನು ಹಾಗೂ ಆದಾಯ ಗಿಟ್ಟಿಸಿಕೊಳ್ಳುವುದಕ್ಕೆ ಬೇಕಾಗುವುದನ್ನು ಹುಡುಕಿಕೊಂಡರು.

ಜಾಗತಿಕವೆನ್ನಬಹುದಾದ ಉದ್ಯೋಗ ಉದ್ಯಮಗಳು ತಂತ್ರಜ್ಞಾನ – ಕೌಶಲ್ಯ (ಜೆಇಟಿಎಸ್) ಪರಿಸರ ವ್ಯವಸ್ಥೆಯು ಬಹಳ ಚೇತೋಹಾರಿಯಾಗಿದೆ. ಕನಿಷ್ಠ ಈ ಕ್ಷಣದಲ್ಲಂತೂ, ಕೈಗಾರಿಕೆಗಳು, ಕಾರ್ಖಾನೆಗಳು, ಉತ್ಪಾದನೆ ಪ್ರಕ್ರಿಯೆಗಳು

ಹಾಗೂ ಉದ್ಯಮಗಳು ಯಾವ ಸ್ವರೂಪ ಪಡೆದುಕೊಳ್ಳುತ್ತವೆ ಎಂಬುದನ್ನು ಯಾವುದೇ ನಿಶ್ಚಿತತೆ ಊಹೆ ಮಾಡುವುದೇ ಸಾಧ್ಯವೇ ಇಲ್ಲ.

ಒಂದು ರಾಷ್ಟ್ರದಲ್ಲಿ ಕೌಶಲ್ಯವುಳ್ಳ ಜನರಿದ್ದು, ಅವರು ಕೌಶಲ್ಯವನ್ನು ಗಳಿಸಲು ತಮ್ಮ ಬದುಕಿನ ಬಹಳಷ್ಟು ಅವಧಿ ಕಳೆದಿದ್ದು, ಕೊನೆಯಲ್ಲಿ ಉದ್ಯೋಗವಿಲ್ಲದೆ ಇದ್ದಾರೆ ಎನ್ನುವುದು ಕೌಶಲ್ಯವೇ ಇಲ್ಲದ ಜನರು ಉದ್ಯೋಗವಿಲ್ಲದೇ ಇರುವ ರಾಷ್ಟ್ರಕ್ಕಿಂತ ಬಹುಶಃ ಕಳಪೆಯಾದುದು.

ಆದ್ದರಿಂದಲೇ ಜೆ.ಇ.ಟಿ.ಎಸ್. ಪ್ರವಾಹವು ಮುಖ್ಯವಾದದ್ದರ ಕಡೆಗೆ ತಿರುಗಬೇಕು. ರಾಷ್ಟ್ರೀಯ ಉದ್ಯಮದ ಮುಖ್ಯಗುರಿ ಎಂಬ ಉದ್ದೇಶದಲ್ಲಿ ಕೌಶಲ್ಯಕ್ಕೇ ಹೆಚ್ಚಿನ ಮಹತ್ವ ನೀಡುವುದಕ್ಕೆ ಬದಲಾಗಿ, ಉದ್ಯೋಗವನ್ನುಳ್ಳ ನಾನಾ ರೀತಿಯ ಉದ್ಯಮಗಳನ್ನು ರೂಪಿಸುವ ಗುರಿಯನ್ನು ಹೊಂದಬೇಕು. ಉದ್ಯಮಗಳ ಅಭಿವೃದ್ಧಿಯ ಜೊತೆ ಜೊತೆಯಲ್ಲೇ ಅಗತ್ಯವಿರುವ ಕೌಶಲ್ಯಭಿವೃದ್ಧಿಯ ನಿರ್ಣಾಯಕ ಅಂಶಗಳು ಉದ್ಯಮಗಳೊಳಗೆ ಸೇರಿರಬೇಕು.

ತಂತ್ರಜ್ಞಾನ ಮಾತ್ರವೇ ಸಾಕಷ್ಟು ಒಳ್ಳೆಯ ಪರಿಹಾರವಾಗಲಾರದು. ಜೆ.ಇ.ಟಿ.ಎಸ್. ಪರಿಸರ ವ್ಯವಸ್ಥೆಯಲ್ಲಿ ತಂತ್ರಜ್ಞಾನವು ಉದ್ಯಮಗಳು ಹಾಗೂ ಉದ್ಯೋಗಗಳನ್ನು ಕೊನೆಗೊಳಿಸುವಂಥದ್ದೂ ಆಗಬಲ್ಲದು ಹಾಗೇ ಉದ್ಯಮಗಳು ಮತ್ತು ಕೌಶಲ್ಯಗಳನ್ನು ಒದಗಿಸುವಂಥದ್ದೂ ಆಗಬಲ್ಲದು.

ಜೆ.ಇ.ಟಿ.ಎಸ್. ಪರಿಸರ ವ್ಯವಸ್ಥೆಯ ವಿನ್ಯಾಸವು ಸಿದ್ಧಜಾಡನ್ನುಳ್ಳ ಪೂರೈಕೆ ಸರಪಳಿ ಮಾದರಿಯಿಂದ ಜಾಲಬಂಧವುಳ್ಳ ಉದ್ಯಮಗಳ ಮಾದರಿಗೆ ಬದಲಾಗಬೇಕು. ಆಮೇಲೆ ಅದಕ್ಕೆ ತಂತ್ರಜ್ಞಾನವನ್ನು ಅಳವಡಿಸಬೇಕು.

ಈ ರೀತಿ ಭಾರತದಲ್ಲಿ ಯುವಕರಿಗೆ ಗೌರವಾನ್ವಿತ ಉದ್ಯೋಗ ನೀಡುವ ಹೆಚ್ಚು ಉದ್ಯಮಗಳನ್ನು ಸೃಷ್ಟಿಸಿ, ಕನಸನ್ನು ನನಸಾಗಿಸಿಕೊಂಡು, ರಾಜಕೀಯವಾಗಿ ಸುಸ್ಥಿರವೆನ್ನುವ ಅಭಿವೃದ್ಧಿಯನ್ನು ಹೊಂದಬಹುದಾಗಿದೆ.

ಹೊಸ ಮಾದರಿಗಳ ಪ್ರವರ್ತಕರಾದ ಹೆಡ್.ಹೆಲ್ಡ್.ಹೈ.ನಂತಹ ಸಂಸ್ಥೆ ತಂತ್ರಜ್ಞಾನ ಒಂದು ಸಮರ್ಥನೀಯ ಬೆಂಬಲ ನೀಡಬಲ್ಲದೆಂಬುದನ್ನು ಹಾಗೂ ಅದಕ್ಕೊಪ್ಪುವ ಹೊಸ ಮಾರ್ಗಗಳು ಇವೆ ಎಂಬುದನ್ನು ತೋರಿಸುತ್ತಿವೆ. ❑

ಅಭಿವೃದ್ಧಿ ಪಥ

## ಶೈಕ್ಷಣಿಕ ಸಾಲಕ್ಕಾಗಿ ಏಕಗವಾಕ್ಷ

ಶೈಕ್ಷಣಿಕ ಸಾಲ ಪಡೆಯಲಿಚ್ಛಿಸುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವೆಬ್ ಆಧರಿತ ವಿದ್ಯಾಲಕ್ಷ್ಮಿ (www. vidyalakshmi.co.in) ಪೋರ್ಟಲನ್ನು ಸ್ವಾತಂತ್ರ್ಯ ದಿನದ (15 ಆಗಸ್ಟ್ 2015) ಸಂದರ್ಭದಲ್ಲಿ ಆರಂಭಿಸಲಾಗಿದೆ.

ಹಣಕಾಸು ನಿಧಿಯ ಕೊರತೆಯ ಕಾರಣಕ್ಕಾಗಿ ಯಾವುದೇ ವಿದ್ಯಾರ್ಥಿ, ಉನ್ನತ ವಿದ್ಯಾಭ್ಯಾಸದಿಂದ ವಂಚಿತವಾಗದಿರುವಂತೆ, ಶಿಕ್ಷಣಕ್ಕಾಗಿ ಹಣ ಖಾತರಿಪಡಿಸುವ ದೃಷ್ಟಿಯಿಂದ 2105–16ರ ಬಜೆಟ್‌ನಲ್ಲಿ ವಿದ್ಯಾಲಕ್ಷ್ಮಿ ಕಾರ್ಯಕ್ರಮ ಮೂಲಕ ಐಟಿ ಆಧರಿತ ಶಿಕ್ಷಣ ನೀಡಿಕೆ, ನಿರ್ವಹಣಾ ವಿದ್ಯಾರ್ಥಿ ವೇತನ ಹಾಗೂ ಶೈಕ್ಷಣಿಕ ಸಾಲ ಯೋಜನೆಗಳಿಗಾಗಿ ಸಂಪೂರ್ಣ ಐಟಿ ಆಧರಿತ ವಿದ್ಯಾರ್ಥಿ ಹಣಕಾಸು ನೆರವು ಪ್ರಾಧಿಕಾರ ರಚನೆ ಬಗ್ಗೆ ಪ್ರಸ್ತಾಪಿಸಲಾಗಿತ್ತು.

ಈ ಗುರಿ ಸಾಧಿಸುವ ನಿಟ್ಟಿನಲ್ಲಿ ಕೈಗೊಳ್ಳಲಾದ ಮೊದಲ ಕ್ರಮವಾಗಿ ಪೋರ್ಟಲ್ ಆರಂಭವಾಗಿದೆ. ವಿದ್ಯಾರ್ಥಿಗಳಿಗೆ ಬ್ಯಾಂಕ್‌ನಿಂದ ಶೈಕ್ಷಣಿಕ ಸಾಲ ಪಡೆಯಲು ಅರ್ಜಿ ಮತ್ತು ಸರ್ಕಾರಿ ವಿದ್ಯಾರ್ಥಿ ವೇತನ ಪಡೆಯಲು ಅಗತ್ಯವಾಗಿರುವ ಅರ್ಜಿ ಹಾಗೂ ಸಂಬಂಧಪಟ್ಟ ಮಾಹಿತಿಗಳನ್ನು ಒದಗಿಸುವ ಏಕಗವಾಕ್ಷದ ಪೋರ್ಟಲ್ ಇದಾಗಿದೆ. ಪೋರ್ಟಲ್ ಮುಂದಿನ ಗುಣ ಲಕ್ಷಣಗಳನ್ನು ಹೊಂದಿದೆ.

* ಬ್ಯಾಂಕ್‌ಗಳ ಶೈಕ್ಷಣಿಕ ಸಾಲ ಯೋಜನೆಗಳ ಬಗ್ಗೆ ಮಾಹಿತಿ
* ವಿದ್ಯಾರ್ಥಿಗಳಿಗಾಗಿ ಸಾಮಾನ್ಯ ಶೈಕ್ಷಣಿಕ ಸಾಲ ಅರ್ಜಿ
* ಶೈಕ್ಷಣಿಕ ಸಾಲಕ್ಕಾಗಿ ವಿವಿಧ ಬ್ಯಾಂಕುಗಳಿಗೆ ಅರ್ಜಿಹಾಕುವ ಸೌಲಭ್ಯ
* ವಿದ್ಯಾರ್ಥಿಗಳು ಹಾಕಿದ ಅರ್ಜಿಗಳನ್ನು ಡೌನ್ ಲೋಡ್ ಮಾಡಿಕೊಳ್ಳಲು ಬ್ಯಾಂಕ್‌ಗಳಿಗೆ ಸೌಲಭ್ಯ
* ಬ್ಯಾಂಕ್ ಸಾಲ ನೀಡಿಕೆ ಅರ್ಜಿ ಪ್ರಕ್ರಿಯೆ/ ಸ್ಥಿತಿಗತಿ ಬಗ್ಗೆ ಮಾಹಿತಿ
* ತಮ್ಮ ಸಾಲ ಅರ್ಜಿಗಳನ್ನು ಸ್ಥಿತಿಗತಿಗಳನ್ನು ನೋಡಿ ತಿಳಿದುಕೊಳ್ಳಲು ವಿದ್ಯಾರ್ಥಿಗಳಿಗಾಗಿ ಡ್ಯಾಷ್ ಬೋರ್ಡ್ ಸೌಲಭ್ಯ.
* ಬ್ಯಾಂಕುಗಳಿಗೆ ಸಾಲ ಅವಕಾಶ
* ಶೈಕ್ಷಣಿಕ ಸಾಲ ಕುರಿತ ಇ–ಮೇಲ್ ಕುಂದುಕೊರತೆ ಮತ್ತು ವಿಚಾರಣಾ ಸೌಲಭ್ಯ.
* ರಾಷ್ಟ್ರೀಯ ಶಿಷ್ಯವೇತನ ಪೋರ್ಟಲ್‌ಗೆ ಲಿಂಕೇಜ್

### ಸರ್ಕಾರಿ ಶಿಷ್ಯ ವೇತನಗಳು

ಇದುವರೆಗೆ 13 ಬ್ಯಾಂಕುಗಳು, ವಿದ್ಯಾಲಕ್ಷ್ಮಿ ಪೋರ್ಟಲ್ ಮೇಲೆ 22 ಶೈಕ್ಷಣಿಕ ಸಾಲ ಯೋಜನೆಗಳನ್ನು ದಾಖಲಿಸಿವೆ. ಎಸ್‌ಬಿಐ, ಐಡಿಬಿಐ, ಬ್ಯಾಂಕ್ ಆಫ್ ಇಂಡಿಯಾ, ಕೆನರಾ ಬ್ಯಾಂಕ್ ಮತ್ತು ಬ್ಯಾಂಕ್ ಆಫ್ ಇಂಡಿಯಾ ನಂತಹ ಹಣಕಾಸು ಸಂಸ್ಥೆಗಳು ತಮ್ಮ ವ್ಯವಸ್ಥೆಗಳನ್ನು ಪೋರ್ಟಲ್ ಜತೆ ಹಂಚಿಕೊಂಡಿವೆ.

ಇದರಿಂದ, ವಿದ್ಯಾರ್ಥಿಗಳಿಗೆ ತಮ್ಮ ಸಾಲ ಮಂಜೂರಾತಿ ಪ್ರಕ್ರಿಯೆ ಸ್ಥಿತಿಗತಿ ತಿಳಿಯಲು ಅನುಕೂಲವಾಗುತ್ತಿದೆ. ಶೈಕ್ಷಣಿಕ ಸಾಲ ನೀಡುವ ಎಲ್ಲ ಬ್ಯಾಂಕುಗಳನ್ನು ಒಂದೆಡೆ ತರುವುದು ಇದರ ಉದ್ದೇಶ. ಇದರಿಂದ ಎಲ್ಲ ಬ್ಯಾಂಕುಗಳ ವಿವಿಧ ಶೈಕ್ಷಣಿಕ ಸಾಲ ಯೋಜನೆಗಳು ಒಂದೆಡೆ ಏಕಗವಾಕ್ಷದಲ್ಲಿ ದೊರಕುವಂತಾಗುತ್ತದೆ. ❑

# ಉದ್ಯೋಗಾರ್ಹತೆ ಹೆಚ್ಚಿಸಲು ತರಬೇತಿ

* ಸುನೀತಾ ಸಂಘಿ



ಪ್ರತಿಕೂಲ ಪರಿಸ್ಥಿತಿಯಲ್ಲಿರುವವರಿಗೆ ದುಡಿಯಲು ಮತ್ತು ಸ್ವಾವಲಂಬಿಗಳಾಗಲು ಬೇಕಾದ ಕುಶಲ ತರಬೇತಿ ನೀಡಿ ಅವರು ಕಾರ್ಮಿಕ ಮಾರುಕಟ್ಟೆಯಲ್ಲಿ ಪ್ರವೇಶಿಸುವುದರ ಮೂಲಕ ಸಮಾಜದ ಮುಖ್ಯವಾಹಿನಿಯನ್ನು ಸೇರಿಕೊಳ್ಳುವಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿ ಸರ್ಕಾರ ಮತ್ತು ಖಾಸಗಿ ಕ್ಷೇತ್ರಗಳನ್ನೊಳಗೊಂಡಂತೆ ಇಡೀ ಸಮಾಜದ ಮೇಲಿದೆ.

ಒಟ್ಟು ಜನಸಂಖ್ಯೆಯಲ್ಲಿ ದುಡಿಮೆ ಮಾಡುವ ವಯೋಮಾನದ ಶೇಕಡಾ 65 ಜನರನ್ನು ಹೊಂದಿ ಅದರ ಲಾಭವನ್ನು ಪಡೆದುಕೊಳ್ಳುವ ಸ್ಥಿತಿ ಭಾರತಕ್ಕೆ ದೊರೆತಿರುವುದು ಒಂದು ಉತ್ತಮ ಅವಕಾಶವೆಂದು ಹೇಳಬಹುದು. ವಿಶ್ವಸಂಸ್ಥೆಯ 2015 ರ ಜನಸಂಖ್ಯಾ ವರದಿಯ ಪ್ರಕಾದ 2020 ರ ವೇಳೆಗೆ ಭಾರತದ ಜನಸಂಖ್ಯೆಯ ಸರಾಸರಿ ವಯೋಮಾನ 29 ವರ್ಷಗಳಾಗಿದ್ದು, ಚೀನಾ ಮತ್ತು ಅಮೆರಿಕಾಗಳ ವಯೋಮಾನ 37 ವರ್ಷಗಳು ಮತ್ತು ಯುರೋಪಿನ ವಯೋಮಾನ 45 ವರ್ಷಗಳಾಗಿರುತ್ತದೆ. ಈ ಯುವ ವಯಸ್ಸಿನ ಜನಸಂಖ್ಯೆಯ ಉತ್ತಮ ಅವಕಾಶವನ್ನು ಸದುಪಯೋಗಪಡಿಸಿಕೊಂಡು ವಿಶ್ವಕ್ಕೆ ಅಗತ್ಯವಾಗಿ ಬೇಕಾಗಿರುವ ದುಡಿಯುವ ಮಾನವ ಸಂಪನ್ಮೂಲವನ್ನು ಭಾರತ ಪೂರೈಸಬಹುದಾಗಿದೆ. ಈ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಬೇಕಾದರೆ, ಅರ್ಹ ಯುವ ಜನರಿಗೆ ಅಗತ್ಯವಾದ ಕುಶಲತೆ, ಈಗಿರುವ ಕುಶಲತೆಯ ಬದಲಿಗೆ ಬೇರೆ ಕುಶಲತೆ ಮತ್ತು ಈಗಿರುವ ಕುಶಲತೆಯನ್ನು ಉನ್ನತೀಕರಿಸುವ ಮೂಲಕ ವಿಶ್ವದ ಅಗತ್ಯವನ್ನು ಜರೂರಾಗಿ ಪೂರೈಕೆ ಮಾಡಬೇಕಾಗಿದೆ. ಈ ಕೆಲಸ ಅಷ್ಟೊಂದು ಸುಲಭವಾದುದಲ್ಲ. ಕಾರಣ ನಾವು ನೀಡುತ್ತಿರುವ ಶಿಕ್ಷಣ ವಿಶ್ವಕ್ಕೆ ಬೇಕಾಗಿರುವ ಕುಶಲತೆಯನ್ನು ಕೊಡುತ್ತಿಲ್ಲ. ನಮ್ಮ ಶಿಕ್ಷಣಕ್ಕೂ ಕಾರ್ಮಿಕ ಮಾರುಕಟ್ಟೆಗೂ ಯಾವುದೇ ರೀತಿಯ ಹೊಂದಾಣಿಕೆ ಆಗುತ್ತಿಲ್ಲ. ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಯುವ ಉದ್ಯೋಗ ನೆಟ್‌ವರ್ಕ್‌ನ 2012 ನೇ ಸಾಲಿನ ವರದಿ ಯುವಜನತೆಗೆ ಉದ್ಯೋಗ ಒದಗಿಸುವುದು ಆದ್ಯತೆಯಾಗಬೇಕಾದರೆ ಉದ್ಯೋಗಾರ್ಹತೆ, ಎಲ್ಲರಿಗೂ ಸಮಾನ ಅವಕಾಶ, ಉದ್ಯಮಶೀಲತ್ವ ಮತ್ತು ಉದ್ಯೋಗ ಸೃಷ್ಟಿಯ ಮೊದಲು ಆಗಬೇಕೆಂಬುದನ್ನು ಗುರುತಿಸಿದೆ. 2000 ರಲ್ಲಿ ಅಂತಾರಾಷ್ಟ್ರೀಯ ಕಾರ್ಮಿಕ ಸಮ್ಮೇಳನ ತನ್ನ ನಿರ್ಣಯದಲ್ಲಿ, ವಿಶಾಲವಾದ ತಳಹದಿಯ ಮೇಲೆ ಪಡೆದ ಶಿಕ್ಷಣ ಮತ್ತು ತರಬೇತಿ, ಟೀಂ ವರ್ಕ್ ಸೇರಿದಂತೆ ಮೂಲ ಕೆಲಸ ಮುಂದುವರಿಸಿಕೊಂಡು ಹೋಗಬಹುದಾದ ಕುಶಲತೆ, ಸಮಸ್ಯೆಯನ್ನು ಬಗೆಹರಿಸುವುದು, ಐಸಿಟಿ, ಅಕ್ಷರಜ್ಞಾನ ಮತ್ತು ಗಣಿತದಜ್ಞಾನಗಳು ವ್ಯಕ್ತಿಗಳಿಗೆ ಉದ್ಯೋಗಾವಕಾಶವನ್ನು ಕಲ್ಪಿಸುತ್ತವೆ ಎಂದು ತಿಳಿಸಿದೆ. ಈ ಕುಶಲತೆಗಳು ಉದ್ಯೋಗಾವಕಾಶಗಳನ್ನು ಹೆಚ್ಚಿಸುತ್ತವೆ. ಸಮಾಜದ ಎಲ್ಲ ಸ್ತರಗಳು ಮತ್ತು ಪ್ರತಿಕೂಲ ಪರಿಸ್ಥಿತಿಯಲ್ಲಿರುವ ಗುಂಪುಗಳಿಗೆ ಮತ್ತು ವಾಣಿಜ್ಯೋದ್ಯಮಿಗಳಿಗೆ ಕುಶಲತೆಯನ್ನು ಪಡೆದಿರುವ ಮಾನವ ಸಂಪನ್ಮೂಲವು ದೊರೆಯುವಂತೆ ಮಾಡಲು, ಕಳೆದ ಏಳು ವರ್ಷಗಳಿಂದ ದೊಡ್ಡ ಪ್ರಮಾಣದಲ್ಲಿ ವ್ಯವಸ್ಥಿತವಾದ ಮತ್ತು ಕ್ರಮಬದ್ಧವಾದ ನೀತಿ ನಿರೂಪಣೆಗಳನ್ನು ರೂಪಿಸಿ ಜಾರಿಗೆ ತರಲಾಗುತ್ತಿದೆ. ಈ ಲೇಖನವು ಪ್ರತಿಕೂಲ ಪರಿಸ್ಥಿತಿಯಲ್ಲಿರುವ ಗುಂಪುಗಳ ಕೌಶಲ ಅಭಿವೃದ್ಧಿ ಗಮದಲ್ಲಿಟ್ಟುಕೊಂಡು ಕಾರ್ಮಿಕ ಮಾರುಕಟ್ಟೆಯ ಗುಣಲಕ್ಷಣಗಳು, ಪ್ರಮುಖವಾದ ನೀತಿ ನಿಯಮಗಳ ಸವಾಲುಗಳು ಮತ್ತು ನೀತಿಯ ಅಗತ್ಯಗಳ ಬಗ್ಗೆ ಗಮನ ಹರಿಸಿದೆ.

* ಸಲಹಾಕಾರರು (ಪಿ.ಸಿ.), ನೀತಿ ಆಯೋಗ, ನವದೆಹಲಿ. Email : sunitasanghi1960@gmail.com

### ಪ್ರತಿಕೂಲ ಪರಿಸ್ಥಿತಿಯ ಗುಂಪುಗಳು, ಕಾರ್ಮಿಕ ಮಾರುಕಟ್ಟೆ ಮತ್ತು ಕೌಶಲ ಅಭಿವೃದ್ಧಿ

ಪ್ರತಿಕೂಲ ಪರಿಸ್ಥಿತಿಯಲ್ಲಿರುವವರು ಯಾರು ಎಂಬುದು ಪ್ರಮುಖವಾದ ಪ್ರಶ್ನೆ? ಆರ್ಥಿಕ ಕಾರಣಗಳು ಅಂದರೆ ಬಡತನ ಮತ್ತು ಸಾಮಾಜಿಕ ಕಾರಣಗಳು ಅಂದರೆ ಲಿಂಗ, ಜನಾಂಗ, ಗುಣಮಟ್ಟದ ಶಿಕ್ಷಣ/ಉದ್ಯೋಗದ ಅವಕಾಶವಿಲ್ಲದೆ ಭೌಗೋಳಿಕವಾಗಿ ಮೂಲೆಗುಂಪಾಗಿರುವುದು, ಶಾಲೆಯಿಂದ ಹೊರಬಿದ್ದಿರುವುದು ಮತ್ತು ಉದ್ಯೋಗ ಹೊಂದುವ ಕುಶಲತೆ ಪಡೆಯದಿರುವುದು. ಆದ್ದರಿಂದ ಪ್ರತಿಕೂಲ ಪರಿಸ್ಥಿತಿ ಹಲವಾರು ಕಾರಣಗಳಿಂದ ಬರುತ್ತದೆ ಎಂದಾಯಿತು. ಉತ್ತಮ ಶಿಕ್ಷಣ ಮತ್ತು ತರಬೇತಿ ಯುವಕರಿಗೆ ಉತ್ತಮವಾದ ಉದ್ಯೋಗವನ್ನು ದೊರಕಿಸಿಕೊಡುತ್ತವೆ. ತರಬೇತಿ ಹೊಂದಿರದ ಅನಕ್ಷರಸ್ಥ, ಶಾಲೆಯಿಂದ ಹೊರಬಿದ್ದವನು, ಅತ್ಯಂತ ಕಡಿಮೆ ಶಿಕ್ಷಣ ಪಡೆದವನು ತೀರಾ ಪ್ರತಿಕೂಲ ಪರಿಸ್ಥಿತಿಯಲ್ಲಿರುವವನು ಯಾವುದೇ ವಯೋಮಾನದಲ್ಲೂ ಕಾರ್ಮಿಕ ಮಾರುಕಟ್ಟೆಯನ್ನು ಪ್ರವೇಶಿಸಬಹುದು. ಕಡಿಮೆ ವೇತನ, ಕೀಳುಮಟ್ಟದ ಕೆಲಸಗಳು ವಂಶಪಾರಂಪರಿಕವಾಗಿ ಬಡತನ ಮತ್ತು ಸಮಾಜದ ನಿಕೃಷ್ಟತೆಯ ವಿಷ ವರ್ತುಲದಲ್ಲಿ ಸಿಕ್ಕಿ ಹಾಕಿಕೊಳ್ಳುತ್ತಾನೆ. ಈ ಹಿನ್ನೆಲೆಯಲ್ಲಿ ಕೌಶಲ್ಯದ ಅಭಿವೃದ್ಧಿಯ ಪರಿಣಾಮವನ್ನು ಕಾರ್ಮಿಕ ಮಾರುಕಟ್ಟೆಯ ಆಯಾಮದಲ್ಲಿ ನೋಡಬೇಕಾಗುತ್ತದೆ.

ಭಾರತದ ಕಾರ್ಮಿಕ ಮಾರುಕಟ್ಟೆಯಲ್ಲಿ ಸಂಘಟಿತ ಮತ್ತು ಅಸಂಘಟಿತ ಎಂಬ ಎರಡು ವಿಭಾಗಗಳಿದ್ದು, ಅಸಂಘಟಿತ ಮಾರುಕಟ್ಟೆ ಶೇಕಡಾ 92.9(435.66 ದಶಲಕ್ಷ) ರಷ್ಟು ಕಾರ್ಮಿಕ ಪಡೆಯನ್ನು ಹೊಂದಿದ್ದರೆ, ಸಂಘಟಿತ ಕಾರ್ಮಿಕ ಮಾರುಕಟ್ಟೆ ಶೇಕಡಾ 8.1 (38.56 ದಶಲಕ್ಷ). ಅಸಂಘಟಿತ ಕಾರ್ಮಿಕ ಪಡೆಯಲ್ಲಿ ಬಹುತೇಕರು ಇರುವುದು ಒಟ್ಟು ಜನಸಂಖ್ಯೆಯ ಶೇಕಡಾ 68 ರಷ್ಟು ವಾಸಿಸುವ ಗ್ರಾಮಾಂತರ ಪ್ರದೇಶದಲ್ಲಿ. ಗ್ರಾಮಾಂತರ ಪ್ರದೇಶದ ಅಸಂಘಟಿತ ಕಾರ್ಮಿಕ ಮಾರುಕಟ್ಟೆಯಲ್ಲಿ ಮಹಿಳೆಯರ ಸಂಖ್ಯೆ ಕಡಿಮೆ ಅಂದರೆ ಶೇಕಡಾ 22.5 ರಷ್ಟಿದೆ. ಕಾರ್ಮಿಕರ ವಿದ್ಯಾರ್ಹತೆಯನ್ನು ಗಮನಿಸಿದರೆ, ಶೇಕಡಾ 30 ರಷ್ಟು ಅನಕ್ಷರಸ್ಥರಿದ್ದು ಶೇಕಡಾ 24 ರಷ್ಟು ಕೇವಲ ಪ್ರಾಥಮಿಕ ಶಾಲೆಯ ಮೆಟ್ಟಿಲು ಹತ್ತಿದವರು. ಕೇವಲ 30 ರಷ್ಟು ಕಾರ್ಮಿಕರು ಪ್ರೌಢ ಶಿಕ್ಷಣ ಮತ್ತು ಅದಕ್ಕಿಂತ ಮೇಲಿರುವವರು. ಪ್ರೌಢ ಶಿಕ್ಷಣವನ್ನು ಪೂರ್ಣಗೊಳಿಸದೆ ಅರ್ಧಕ್ಕೇ ಶಾಲೆ ಬಿಡುವ ಬಾಲಕ ಮತ್ತು ಬಾಲಕಿಯರಿಂದ ಸಮಸ್ಯೆ ಇನ್ನಷ್ಟು ಗೊಂದಲಮಯವಾಗಿದೆ. 2013–14 ರ ಯುಡಿಐಎಸ್ಇ ಅಂಕಿ ಅಂಶಗಳ ಪ್ರಕಾರ 5 ನೇ ತರಗತಿಗಿಂತ ಮುಂಚೆಯೇ ಶೇಕಡಾ 20 ರಷ್ಟು ಮಕ್ಕಳು ಶಾಲೆಯಿಂದ ಹೊರ ಬೀಳುತ್ತಾರೆ. ಶೇಕಡಾ 47.4 ರಷ್ಟು ಮಕ್ಕಳು ಪ್ರೌಢ ಶಿಕ್ಷಣ ಮುಗಿಯುವುದಕ್ಕೆ ಮುಂಚೆಯೇ ಶಾಲೆಯನ್ನು ಬಿಟ್ಟಿರುತ್ತಾರೆ. ಈ ಕೆಳ ಮಟ್ಟದ ಶಿಕ್ಷಣ ಕೆಳ ಮಟ್ಟದ ಕುಶಲತೆಗೆ ದಾರಿ ಮಾಡಿಕೊಡುತ್ತದೆ. ಕಾರ್ಮಿಕ ಮಾರುಕಟ್ಟೆಗೆ ಪ್ರವೇಶಿಸುವವರಲ್ಲಿ ಶೇಕಡಾ 3 ರಷ್ಟು ಮಂದಿ ಮಾತ್ರ ಉತ್ತಮ ಶಿಕ್ಷಣದಿಂದ ಕುಶಲತೆಯನ್ನು ಗಳಿಸಿಕೊಂಡಿದ್ದರೆ, ಶೇಕಡಾ 7 ರಷ್ಟು ಕೆಲಸಗಾರರು ಕೆಲಸಕ್ಕೆ ಸೇರಿದ ಮೇಲೆ ಕುಶಲತೆಯನ್ನು ಕಲಿತುಕೊಳ್ಳುತ್ತಾರೆ. ಒಟ್ಟಾರೆ ಶೇಕಡಾ 90 ರಷ್ಟು ಕೆಲಸಗಾರರು ನಿರ್ದಿಷ್ಟವಾದ ಕುಶಲತೆಯನ್ನು ಅಪೇಕ್ಷಿಸುವ ಕೆಲಸಗಳಿಗೆ ಸೇರಿಕೊಳ್ಳುತ್ತಾರೆ. ಒಟ್ಟಾರೆ ಜನಸಂಖ್ಯೆಯಲ್ಲಿ 2.79 ದಶಲಕ್ಷ ಜನ ಮಹಿಳೆಯರು ಮಾತ್ರ ಸಾಂಪ್ರದಾಯಕ ಶಿಕ್ಷಣದ ಮೂಲಕ ಕುಶಲತೆಯನ್ನು ಗಳಿಸಿಕೊಂಡಿದ್ದರೆ, 8.63 ದಶಲಕ್ಷ ಜನ ಪುರುಷರು ಸಾಂಪ್ರದಾಯಕ ಶಿಕ್ಷಣ ಮೂಲಕ ಕುಶಲತೆಯನ್ನು ಗಳಿಸಿಕೊಂಡಿದ್ದಾರೆ.

ಕಾರ್ಮಿಕರನ್ನು ಕ್ಷೇತ್ರವಾರು ವಿಂಗಡಿಸಬಹುದಾದರೆ, ಜಿಡಿಪಿಗೆ ಕೇವಲ ಶೇಕಡಾ 16 ರಷ್ಟು ಕಾಣಿಕೆ ನೀಡುವ ಕೃಷಿ ಕೇತ್ರದಲ್ಲಿ ಒಟ್ಟು ಜನಸಂಖ್ಯೆಯ ಶೇಕಡಾ 48 ರಷ್ಟು ಜನ ಕೆಲಸ ಮಾಡುತ್ತಿದ್ದಾರೆ. ಕಡಿಮೆ ಜಿಡಿಪಿ ಕೊಡುಗೆಯಿಂದ ಅದರಲ್ಲಿ ಕೆಲಸ ಮಾಡುವವರು ತೀರಾ ಕಡಿಮೆ ಉತ್ಪಾದಕತೆ ಹೊಂದಿ ಪೂರ್ಣ ಪ್ರಮಾಣದಲ್ಲಿ ಉದ್ಯೋಗ ಮಾಡುತ್ತಿಲ್ಲ ಅಥವಾ ನಿರುದ್ಯೋಗಿಗಳಾಗಿದ್ದಾರೆ ಎಂಬುದನ್ನು ತೋರಿಸುತ್ತದೆ. ಈ ಕ್ಷೇತ್ರದಲ್ಲಿ ದುಡಿಯುವವರಲ್ಲಿ ಬಹುತೇಕ ಜನ ಸ್ವ ಉದ್ಯೋಗಿಗಳು. ಇದರ ಜೊತೆಗೆ ಬಹುತೇಕ ಜನರಿಗೆ ತೀರಾ ಕಡಿಮೆ ಕೂಲಿ ಸಿಗುತ್ತದೆ ಮತ್ತು ಅವರು ಉತ್ಪಾದನೇತರ ಅಂದರೆ ನಿರ್ಮಾಣ (ಕನ್‌ಸ್ಟ್ರಕ್ಷನ್) ಕ್ಷೇತ್ರದಲ್ಲಿ ಕೆಲಸ ಮಾಡುತ್ತಾರೆ. 2011 ರ ಜನಗಣತಿ ಪ್ರಕಾರ ದೇಶದಲ್ಲಿ 2.68 ಕೋಟಿ ಜನ(ವಿಕಲಚೇತನ)



ದೈಹಿಕವಾಗಿ ಮತ್ತು ಮಾನಸಿಕವಾಗಿ ದುಡಿಯುವ ಸಾಮರ್ಥ್ಯವನ್ನು ಹೊಂದಿಲ್ಲ. ಇವರಲ್ಲಿ 1.57 ಕೋಟಿ ದುಡಿಯುವ ವಯೋಮಾನದಲ್ಲಿದ್ದಾರೆ. 1995 ರ ಡಿಸೇಬಲ್ಡ್ (ಅಸಾಮರ್ಥ್ಯ)ದವರ ನೆರವಿನ ಕಾನೂನು ಇದ್ದರೂ, ಇವರು ಹೇಳಿಕೊಳ್ಳುವಂತಹ ಯಾವುದೇ ಕೆಲಸದಲ್ಲಿ ನಿರತರಾಗದೆ ನಿರುದ್ಯೋಗಿಗಳಾಗಿದ್ದಾರೆ. ಉತ್ತಮವಾದ ಆರೋಗ್ಯ ಸೇವೆಗಳು ದೊರೆಯದೆ ಇರುವುದು ಮತ್ತು ಬಡತನದಿಂದ ಗ್ರಾಮೀಣ ಪ್ರದೇಶಗಳಲ್ಲಿ ಅಸಾಮರ್ಥ್ಯರ ಸಂಖ್ಯೆ ಹೆಚ್ಚಾಗಿದೆ. ಇವರು ಕುಶಲತೆಯನ್ನು ಪಡೆಯುವಲ್ಲಿ ಸಂಪೂರ್ಣ ವಿಫಲವಾಗಿದ್ದು ಕಾರ್ಮಿಕ ಮಾರುಕಟ್ಟೆಯಿಂದ ದೂರವೇ ಉಳಿದಿದ್ದಾರೆ.

ನಿರುದ್ಯೋಗಕ್ಕೆ ಯುವ ಜನಾಂಗವೇ ಹೆಚ್ಚು ತುತ್ತಾಗುತ್ತಿದ್ದು, ಶೇಕಡಾ 2.4 ರಷ್ಟು ಯುವಕರು ಮತ್ತು ಶೇಕಡಾ 3.7 ರಷ್ಟು ಯುವತಿಯರು ನಿರುದ್ಯೋಗಿಗಳಾಗಿದ್ದಾರೆ. ಇವರಲ್ಲಿ 15 ರಿಂದ 29 ವರ್ಷ ವಯಸ್ಸಿನವರಲ್ಲಿ ಶೇಕಡಾ 6.1 ರಿಂದ 15.6 ರಷ್ಟು ವಿವಿಧ ವರ್ಗದಲ್ಲಿ ನಿರುದ್ಯೋಗಿಗಳಾಗಿದ್ದು, ನಗರ ಪ್ರದೇಶದಲ್ಲಿ ಯುವತಿಯರು ಶೇಕಡಾ 15.6 ರಷ್ಟು ನಿರುದ್ಯೋಗಿಗಳಾಗಿದ್ದಾರೆ. ಇದಕ್ಕೆ ಕುಟುಂಬದ ನಿರುದ್ಯೋಗ ಅಥವಾ ಸರಿಯಾದ ಅವಕಾಶವಿಲ್ಲದಿರುವುದು ಮತ್ತು ಸಾಮಾಜಿಕ ನಿಯಂತ್ರಣಗಳು ಕಾರಣವಾಗಿವೆ. 15 ರಿಂದ 19 ರ ವಯೋಮಾನದವರಲ್ಲಿ ನಿರೀಕ್ಷೆಯಂತೆ ಉದ್ಯೋಗ ದೊರೆಯದಿರುವುದು ಮತ್ತು ದೊರೆತರೂ ಒಂದಕ್ಕೊಂದು ತಾಳಮೇಳವಿಲ್ಲದಿರುವುದು ಕಂಡು ಬರುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಕೃಷಿಯಲ್ಲಿ ತೊಡಗಿಕೊಂಡಿರುವ ಯುವಕರು ಶಿಕ್ಷಣ ಪಡೆದಿದ್ದರೂ ತಮಗೆ ಸರಿಹೊಂದುವಂತಹ ಉದ್ಯೋಗ ದೊರೆಯದಿರುವುದರಿಂದ ನಿರುದ್ಯೋಗ ಹೆಚ್ಚಾಗಿದೆ. ಒಟ್ಟಾರೆ ಪ್ರತಿಕೂಲ ಪರಿಸ್ಥಿತಿಯಲ್ಲಿರುವ ಯುವಕರು ಸಮಾಜದಲ್ಲಿ ಬೆರೆತು ಒಂದಾಗುವ

ಪ್ರಕ್ರಿಯೆಯಲ್ಲಿ ಒಳಗಾಗುತ್ತಿಲ್ಲ. 15–24 ವರ್ಷ ವಯಸ್ಸಿನ ಯುವಕರು ಅತ್ಯಂತ ಕಡಿಮೆ ಕೂಲಿಗಾಗಿ ದುಡಿಯುತ್ತಾ ಬಡವರಾಗಿಯೇ ಉಳಿಯುತ್ತಿದ್ದು, ಅವರಿಗೆ ಸೂಕ್ತವಾದ ಕೆಲಸ ದೊರೆಯದೆ ಕಾರ್ಮಿಕ ಮಾರುಕಟ್ಟೆಯಿಂದಲೇ ದೂರವಾಗುತ್ತಾರೆ. ಈ ರೀತಿ ನಿರುದ್ಯೋಗ ಹೆಚ್ಚಾಗಲು ಉದ್ಯೋಗ ದೊರೆಯದಿರುವುದು ಅಥವಾ ಸೂಕ್ತವಾದ ಉದ್ಯೋಗಕ್ಕೆ ಅರ್ಹತೆ ಇಲ್ಲದಿರುವುದು ಅಥವಾ ತರಬೇತಿಗೆ ಅವಕಾಶವಿಲ್ಲದಿರುವುದು ಅಥವಾ ಕುಶಲತೆ ಇರುವವರಿಗೆ ಬೇಡಿಕೆ ಇಲ್ಲದಿರುವುದು ನಿರುದ್ಯೋಗ ಹೆಚ್ಚಾಗಲು ಕಾರಣವಾಗಿದೆ ಎಂದು ಹೇಳಬಹುದು. ಈ ಎಲ್ಲ ಕಾರಣಗಳಿಂದ ದೇಶದ ಉತ್ಪಾದನೆಯಲ್ಲಿ ನಷ್ಟ, ಕುಶಲತೆಯು ನಿಧಾನವಾಗಿ ಕಡಿಮೆಯಾಗಿ ಸಮಾಜದಲ್ಲಿ ಅಸಮಾನತೆ ಹೆಚ್ಚಾಗುತ್ತಾ ಹೋಗುತ್ತದೆ. ಆದ್ದರಿಂದ ಕುಶಲತೆಯನ್ನು ಹೆಚ್ಚಿಸುವುದರಿಂದಲೇ ನಿರುದ್ಯೋಗ ಕಡಿಮೆಯಾಗುತ್ತದೆ ಎಂಬುದನ್ನು ಹೇಳಲಾಗುವುದಿಲ್ಲ, ಜೊತೆಗೆ ಉದ್ಯೋಗಗಳ ಸೃಷ್ಟಿಯೂ ಆಗಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಕುಶಲತೆಯನ್ನು ಹೆಚ್ಚಿಸಿ ನಿರುದ್ಯೋಗವನ್ನು ಹೋಗಲಾಡಿಸುವುದು ಒಂದು ಸವಾಲಾಗಿ ಪರಿಣಮಿಸುತ್ತದೆ.

### ಪ್ರತಿಕೂಲ ಗುಂಪಿನ ಸಮಸ್ಯೆಗಳು ಮತ್ತು ಸವಾಲುಗಳು

ಬದಲಾಗುತ್ತಿರುವ ಸಮಾಜದಲ್ಲಿ ಒಳ್ಳೆಯ ಉದ್ಯೋಗ ದೊರೆಯಬೇಕಾದರೆ, ಸಮಾಜ ಬದಲಾಗುತ್ತಿರುವ ಪ್ರಾರಂಭಿಕ ವರ್ಷಗಳಲ್ಲೇ ಇದಕ್ಕೆ ಪರಿಹಾರಗಳನ್ನು ಕಂಡುಕೊಳ್ಳಬೇಕಾಗುತ್ತದೆ ಎಂಬುದು ವಿಶ್ವ ಕಾರ್ಮಿಕ ಸಂಸ್ಥೆಯ ಅಧ್ಯಯನದಿಂದ ತಿಳಿದು ಬಂದಿದೆ. ಭಾರತದಲ್ಲಿ ಶೇಕಡಾ 70 ರಷ್ಟು ಜನಸಂಖ್ಯೆ ಇನ್ನೂ ಗ್ರಾಮಾಂತರ ಪ್ರದೇಶದಲ್ಲಿ ವಾಸಿಸುತ್ತಾ ಕುಟುಂಬಕ್ಕೆ ನೆರವಾಗುತ್ತಿರುವುದರಿಂದ ಅವರಿಗೆ ಕೃಷಿಗೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ತರಬೇತಿ ನೀಡಿ, ಉತ್ಪಾದನೆಗೆ, ಹಣಕಾಸಿಗೆ ಮತ್ತು ಕಾರ್ಮಿಕ ಮಾರುಕಟ್ಟೆಗೆ ಸಂಪರ್ಕಗಳನ್ನು ಕಲ್ಪಿಸಬೇಕಾಗುತ್ತದೆ. ಇದರಿಂದ ಈ ಪ್ರಕ್ರಿಯೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಹಿಳೆಯರು ಭಾಗವಹಿಸಲು ಸಹಾಯಕವಾಗಿ ಕಡಿಮೆ ಕೂಲಿಗೆ ನಗರ ಪ್ರದೇಶಗಳಿಗೆ ವಲಸೆ ಹೋಗುವುದು ತಪ್ಪುತ್ತದೆ. ಗುಣಮಟ್ಟದಲ್ಲಿ ತೀರಾ ಕೆಳಮಟ್ಟದ ಶಿಕ್ಷಣ ಮತ್ತು ಕೆಳಮಟ್ಟದ ಕುಶಲತೆಗಳು ಮಕ್ಕಳನ್ನು ಶಾಲೆಯಿಂದ ಹೊರಹೋಗುವಂತೆ ಒತ್ತಡ ತಂದು ಅಸಂಘಟಿತ ಕ್ಷೇತ್ರದಲ್ಲಿ ಕಡಿಮೆ ಕೂಲಿಗೆ ಮಕ್ಕಳು ಕಾರ್ಮಿಕರಾಗಿ ದುಡಿಯುವಂತಾಗುತ್ತದೆ. ಆದ್ದರಿಂದ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವುದು ಒಂದು ಸವಾಲಾಗುತ್ತದೆ ಮತ್ತು ಒಳ್ಳೆಯ ಉದ್ಯೋಗಕ್ಕೆ ಶಿಕ್ಷಣ ಮತ್ತು ಕುಶಲತೆಯ ತರಬೇತಿ ಎಷ್ಟು ಮುಖ್ಯವಾಗುತ್ತದೆ ಎಂಬುದರ ಬಗ್ಗೆ ಮಕ್ಕಳಿಗೆ ಮತ್ತು ಅವರ ಪೋಷಕರಿಗೆ ತಿಳಿವಳಿಕೆ ನೀಡುವುದು ಬಹಳ ಮುಖ್ಯವಾಗುತ್ತದೆ.

ಭೌಗೋಳಿಕವಾಗಿ ವಿಶಾಲವಾಗಿ ಹರಡಿರುವ ಅಸಂಘಟಿತ ಕಾರ್ಮಿಕ ಕ್ಷೇತ್ರದ ಕುಶಲತೆಯ ಅಗತ್ಯವನ್ನು ಪೂರೈಸಲು ಕೆಲವೇ ಕಾರ್ಯಕ್ರಮಗಳಿವೆ. ಕಡಿಮೆ ಕೂಲಿ ಕೊಡುವ ಉದ್ಯೋಗಕ್ಕೆ ಕೆಲಸಗಾರರು ಸೇರಿಕೊಂಡು ಅಲ್ಲೇ ಕೆಲಸ ಕಲಿಯುತ್ತಾರೆ. ಅಪ್ರೆಂಟಿಸ್ ತರಬೇತಿಯನ್ನು ಶಾಲಾ ಪಠ್ಯಕ್ರಮಕ್ಕೆ ಸಂಪರ್ಕಿಸಿದರೆ, ಮಕ್ಕಳು ತಮಗೆ ಬೇಕಾದ ಕುಶಲತೆಯನ್ನು ಕಲಿಯಲು ಶಾಲೆಗಳಲ್ಲಿ ತಮ್ಮ ವ್ಯಾಸಂಗವನ್ನು ಮುಂದುವರೆಸಲು ಸಹಾಯವಾಗುತ್ತದೆ. ಆದರೆ ಈ ಸಂಪರ್ಕ ಕಲ್ಪಿಸುವುದು ಬಹಳ ದೊಡ್ಡ ಸವಾಲಾಗಿದೆ.

ಮಹಿಳಾ ಶಿಕ್ಷಕರ ಕೊರತೆ, ಹಾಸ್ಟೆಲ್ ಮತ್ತು ಸಾರಿಗೆ ವ್ಯವಸ್ಥೆ ಸರಿಯಾಗಿ ಇಲ್ಲದಿರುವುದು ಶಾಲಾ ಮಟ್ಟದಲ್ಲಿ ಬಾಲಕರಿಗಿಂತ ಬಾಲಕಿಯರು ಹೆಚ್ಚಿನ ಮಟ್ಟದಲ್ಲಿ ಶಾಲೆಯಿಂದ ಹೊರಬೀಳಲು ಮುಖ್ಯ ಕಾರಣವಾಗಿದೆ. ಕುಶಲತೆಯನ್ನು ಕಲಿಸುವುದು ಸಾಮಾನ್ಯವಾಗಿ ಪುರುಷ ಪಕ್ಷಪಾತಿ ಆಗಿರುವುದರಿಂದ, ಬಾಲಕಿಯರನ್ನು ದೂರವಿಡುವಂತಾಗಿದೆ.

ಈ ನಿಟ್ಟಿನಲ್ಲಿ ಬಾಲಕಿಯರಿಗೆ ಸರಿ ಹೊಂದುವಂತಹ ಕುಶಲತೆಗಳನ್ನು ಕಲಿಸಲು ಬೇಕಾದ ಸೌಲಭ್ಯಗಳನ್ನು ಒದಗಿಸುವುದೂ ಒಂದು ಸವಾಲಾಗಿ ಪರಣಮಿಸಿದೆ. ಜ್ಞಾನದೊಂದಿಗೆ ಉದ್ಯೋಗವನ್ನು ದೊರಕಿಸಿಕೊಡುವ ಶಿಕ್ಷಣವನ್ನು 15 ರಿಂದ 25 ವರ್ಷ ವಯಸ್ಸಿನ ಯುವಕರಿಗೆ ಸತತವಾಗಿ ದೊರೆಯುವಂತೆ ಮಾಡುವುದು ಈಗಿನ ಅಗತ್ಯವಾಗಿದೆ. ಈ ರೀತಿಯ ಶಿಕ್ಷಣವನ್ನು ನಿರ್ಲಕ್ಷ್ಯಕ್ಕೊಳಗಾಗಿರುವ ಮಕ್ಕಳಿಗೆ ಕೊಡುವುದಾದರೆ ಅವರು ಶಾಲೆಯಿಂದ ಹೊರಹೋಗದಂತೆ ತಡೆಯಬಹುದು. ಇದಕ್ಕಾಗಿ ಸಬ್ಸಿಡಿಗಳು, ವಿಶೇಷ ಶಾಲಾ ಕಾರ್ಯಕ್ರಮಗಳು ಮತ್ತು ಗುಣಮಟ್ಟದ ಶಿಕ್ಷಣವನ್ನು ನೀಡುವುದು ಮೊದಲಾಗಬೇಕಾಗಿದೆ.



ಮಾನಸಿಕ ಮತ್ತು ದೈಹಿಕವಾಗಿ ವಿಕಲಾಂಗರಾಗಿರುವವರಿಗೆ ಕಾರ್ಮಿಕರ ಮಾರುಕಟ್ಟೆಯನ್ನು ಪ್ರವೇಶಿಸಲು ಅನೇಕ ಅಡ್ಡಿ ಅತಂಕಗಳು ಎದುರಾಗುತ್ತವೆ. ಆ ಅಡ್ಡಿ ಆತಂಕಗಳು ನಿವಾರಣೆಯಾಗಬೇಕಾದರೆ, ಅವರಿಗೆ ಸೂಕ್ತವಾದ ಉದ್ಯೋಗ ಕುಶಲತೆಯನ್ನು ಕಲಿಸಿಕೊಡಬೇಕು. ಅವರು ಮಾಡಬಹುದಾದ ಕೆಲಸಗಳನ್ನು ಗುರುತಿಸಿ ಅವರಿಗೇ ಮೀಸಲಿಡಬೇಕು. ಇದಕ್ಕೆ ಸರ್ಕಾರ, ಸರ್ಕಾರೇತರ ಸಂಘ ಸಂಸ್ಥೆಗಳು ಒಟ್ಟಿಗೆ ಸೇರಿ ಶ್ರಮಿಸಬೇಕು. ಈ ಪ್ರಯತ್ನಕ್ಕೆ ಉದ್ಯೋಗಾಂಕ್ಷಿಂಗಳೂ ಸಹಕರಿಸಬೇಕಾಗುತ್ತದೆ. ಇದರ ಜೊತೆಗೆ ಅವರಿಗೆ ಸ್ವ ಉದ್ಯೋಗ ಮಾಡುವ ಕುಶಲತೆ ಮತ್ತು ತರಬೇತಿಯನ್ನು ಕೊಡುವುದರ ಜೊತೆಗೆ ಹಣಕಾಸಿನ ನೆರವು, ಮಾರುಕಟ್ಟೆಯ ನೆರವು ಸುಲಭವಾಗಿ ದೊರೆಯುವಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿ ಸರ್ಕಾರದ ಮೇಲಿದೆ.

ಕುಶಲತೆಯನ್ನು ಕಲಿಸುವ ಸವಾಲು ಸಂಕೀರ್ಣವಾಗಿದ್ದು, ಇದನ್ನು ನಿಗದಿತ ಗುಂಪಿಗೆ ತಲುಪಿಸುವುದು, ಭೌಗೋಳಿಕವಾಗಿ, ಸಾಮಾಜಿಕ, ಆರ್ಥಿಕ, ಧಾರ್ಮಿಕವಾಗಿ ವಿಭಿನ್ನವಾಗಿರುವ, ಕಡಿಮೆ ಶಿಕ್ಷಣ ಮತ್ತು ಕುಶಲತೆಯನ್ನು ಹೊಂದಿರುವವರಿಗೆ ತಲುಪಿಸುವುದು ಕಷ್ಟದ ಕೆಲಸವಾಗಿದೆ. ಉತ್ತಮವಾದ ಉದ್ಯೋಗವನ್ನು ಪಡೆದುಕೊಳ್ಳಲು ಅದಕ್ಕೆ ಬೇಕಾದ ಕುಶಲತೆಯನ್ನು ವೇಗವಾಗಿ ಬೆಳೆಯುತ್ತಿರುವ ಆರ್ಥಿಕಾಭಿವೃದ್ಧಿ ಮತ್ತು ಶೀಘ್ರವಾಗಿ ಬದಲಾಗುತ್ತಿರುವ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದು ಯುವಕರಿಗೆ ಸವಾಲಾಗಿದೆ. ಉತ್ತಮ ಶಿಕ್ಷಣ, ತರಬೇತಿ ಮತ್ತು ಉದ್ಯೋಗವಕಾಶಗಳು ಸಾಮಾಜಿಕ, ಆರ್ಥಿಕ, ಲಿಂಗ, ಭೌಗೋಳಿಕ

ಸ್ಥಳ ಮತ್ತು ಮೂಲಸೌಲಭ್ಯಗಳ ಲಭ್ಯತೆಗಳು ಪ್ರಮುಖವಾದ ಪಾತ್ರ ವಹಿಸುತ್ತವೆ.

**ಶಿಕ್ಷಣ ಮತ್ತು ಕುಶಲತೆಯನ್ನು ಉತ್ತಮಪಡಿಸಿಕೊಳ್ಳುವ ಅವಕಾಶಗಳು**

ಕಾರ್ಮಿಕ ಮಾರುಕಟ್ಟೆಯನ್ನು ಪ್ರವೇಶಿಸುವ ಅಗಾಧ ಪ್ರಮಾಣದ ಜನರಿಗೆ ಅಗತ್ಯವಾಗಿ ಇರಬೇಕಾದ ಶಿಕ್ಷಣ ಮತ್ತು ಉದ್ಯೋಗ ಕುಶಲತೆ ಇರುವುದಿಲ್ಲ, ಆದ್ದರಿಂದ ಅಗತ್ಯವಾದ ಶಿಕ್ಷಣ ಮತ್ತು ಕುಶಲತೆಯನ್ನು ಕಲಿಸಿಕೊಡುವ ಪ್ರಯತ್ನ ಆಗಬೇಕಾಗಿದೆ. ಈ ನಿಟ್ಟಿನಲ್ಲಿ 2009 ರ ಶಿಕ್ಷಣ ಹಕ್ಕು ಕಾನೂನು ಮತ್ತು ರಾಷ್ಟ್ರೀಯ ಶಿಕ್ಷಣ ಅಭಿಯಾನಗಳನ್ನು ಜಾರಿಗೊಳಿಸಿ, ಮಕ್ಕಳು ಶಾಲೆ ಬಿಡುವುದನ್ನು ತಪ್ಪಿಸಿ ಪ್ರೌಢ ಶಿಕ್ಷಣವನ್ನಾದರೂ ಪೂರೈಸುವಂತೆ ಕ್ರಮ ತೆಗೆದುಕೊಳ್ಳಲಾಗಿದೆ. ಬಾಲಕಿಯರು ಶಾಲೆಯಲ್ಲಿ ಉಳಿಯುವಂತೆ ಮಾಡಲು ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಆರ್ಥಿಕವಾಗಿ, ಸಾಮಾಜಿಕವಾಗಿ ನಿರ್ಲಕ್ಷ್ಯಕೊಳಗಾದವರು, ಅಲ್ಪಸಂಖ್ಯಾತರು, ವಿಕಲಚೇತನರು ಶಾಲೆಗಳನ್ನು ಅರ್ಧಕ್ಕೆ ಬಿಟ್ಟು



ಹೋಗದೆ ಶಿಕ್ಷಣವನ್ನು ಮುಂದುವರೆಸಿ ಪೂರ್ಣಗೊಳಿಸುವ ಉದ್ದೇಶದಿಂದ ಶಿಷ್ಯವೇತನವನ್ನು ಜಾರಿಗೊಳಿಸಲಾಗಿದೆ.

ಇದರ ಜೊತೆಗೆ ಈ ವರ್ಗಗಳವರು ಉನ್ನತ ಶಿಕ್ಷಣವನ್ನು ಮುಂದುವರೆಸಲು ಶಿಷ್ಯವೇತನ / ಫೆಲೋಶಿಪ್‌ಗಳನ್ನು ಒದಗಿಸಲಾಗುತ್ತಿದೆ. ಶಿಕ್ಷಣ ಮತ್ತು ತರಬೇತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹೆಣ್ಣುಮಕ್ಕಳು ಭಾಗವಹಿಸುವಂತಾಗಲು ಈ ಕಾರ್ಯಕ್ರಮದಲ್ಲಿ ಸಮುದಾಯವನ್ನು ಸೇರಿಸಿಕೊಂಡು ಭಾರತ್ ಸ್ವಚ್ಛ ಅಭಿಯಾನದಡಿಯಲ್ಲಿ ಶೌಚಾಲಯಗಳ ನಿರ್ಮಾಣ ಮತ್ತು ಮಹಿಳಾ ಶಿಕ್ಷಕಿಯರ ಸಂಖ್ಯೆಯನ್ನು ಹೆಚ್ಚಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಲಿಂಗಾಧಾರದ ಮೇಲೆ ಉದ್ಯೋಗವನ್ನು ಬೇರ್ಪಡಿಸುವುದನ್ನು ತಪ್ಪಿಸುವ ದಿಕ್ಕಿನಲ್ಲಿ ಸಮಾಜವನ್ನು ಸೂಕ್ಷ್ಮಗೊಳಿಸಲು ಇನ್ನೂ ಅನೇಕ ಕ್ರಮಗಳನ್ನು ತೆಗೆದುಕೊಳ್ಳುವುದು ಆಗಬೇಕಾಗಿದೆ. ರಾಷ್ಟ್ರೀಯ ಸಾಕ್ಷರತಾ ಮಿಷನ್ ಅಡಿಯಲ್ಲಿ 15 ರಿಂದ 35 ವರ್ಷದವರಿಗೆ ವ್ಯಾವಹಾರಿಕ ಶಿಕ್ಷಣವನ್ನು ಕಾಲಮಿತಿಯಲ್ಲಿ ನೀಡಲು ಕ್ರಮ ತೆಗೆದುಕೊಳ್ಳಲಾಗಿದೆ.

ಕುಶಲತೆಯನ್ನು ಹೆಚ್ಚಿಸುವ ಕಾರ್ಯಕ್ರಮದಲ್ಲಿ ಸರ್ಕಾರ ಮಾತ್ರ ಭಾಗವಹಿಸುತ್ತಿದ್ದು, ಕೆಲವು ಪ್ರಕರಣಗಳಲ್ಲಿ ಕೆಲಸಗಾರ ಇನ್ನಷ್ಟು ದಕ್ಷತೆಯಿಂದ ಕೆಲಸ ಮಾಡಲು ಕೆಲವು ಕೈಗಾರಿಕೆಗಳು ಕೆಲವು ಕೆಲಸಗಾರರನ್ನು ತಮ್ಮಲ್ಲಿಯೇ ಮುಂದುವರೆಯುವಂತೆ ನೋಡಿಕೊಳ್ಳಲಾಗುತ್ತಿದೆ. ಕೈಗಾರಿಕೆಯ ಬೇಡಿಕೆಗೆ ತಕ್ಕಂತೆ ಕುಶಲತೆಯ ಅಭಿವೃದ್ಧಿಯಾಗುವ ಅಗತ್ಯವಿದೆ. 2015 ರ ಕುಶಲತೆಯ ಅಭಿವೃದ್ಧಿ ಮತ್ತು ಉದ್ಯಮಶೀಲತ್ವದ ರಾಷ್ಟ್ರೀಯ ನೀತಿಯ ಪ್ರಕಾರ, ಕುಶಲತೆಯ ಅಭಿವೃದ್ಧಿಯಲ್ಲಿ ನಿರ್ಲಕ್ಷ್ಯಕ್ಕೊಗಾಗಿರುವ ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು, ಮಹಿಳೆಯರು, ಶಾಲೆಯಿಂದ ಹೊರಬಿದ್ದವರು, ವಿಕಲಚೇತನರು ಮತ್ತು ಭೌಗೋಳಿಕವಾಗಿ ಮೂಲೆಗುಂಪಾದವರಿಗೆ ಉದ್ಯೋಗಾವಕಾಶ, ಉದ್ಯಮಶೀಲತ್ವ ಮತ್ತು ಉತ್ತಮವಾದ ಉದ್ಯೋಗಾವಕಾಶಗಳಿಗೆ ಅವಕಾಶವಿರಬೇಕು..

ಈ ನೀತಿಯನ್ನು ಜಾರಿಗೊಳಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮುಂದಾಗಿದ್ದು, ಹಾಗೆ ಮಾಡುವಾಗ ಎದುರಾಗುವ ಸವಾಲುಗಳನ್ನು ಎದುರಿಸಲು ಕ್ರಮ ತೆಗೆದುಕೊಂಡಿವೆ. ಈ ಗುರಿ ಸಾಧನೆಗಾಗಿ ಖಾಸಗಿ ಕ್ಷೇತ್ರದಲ್ಲಿ ಭಾಗಿಯಾಗುವಂತೆ ಕ್ರಮ ತೆಗೆದುಕೊಳ್ಳಲಾಗಿದೆ. ಈ ನೀತಿಯನ್ನು ಕಾರ್ಯರೂಪಕ್ಕೆ ತರುವಾಗ ಕೇವಲ ಎಷ್ಟು ಜನರಿಗೆ ಕುಶಲತೆಯ ತರಬೇತಿ ಮತ್ತು ಉದ್ಯಮಶೀಲತ್ವದ ತರಬೇತಿ ನೀಡಲಾಗಿದೆ ಎಂಬುದರ ಬಗ್ಗೆ ಹೆಚ್ಚು ಗಮನಕೊಡದೆ, ಅಂತಿಮ ಫಲಿತಾಂಶದ ಬಗ್ಗೆ ಹೆಚ್ಚಿನ ಗಮನ ಕೊಡುವಂತೆ ನೋಡಕೊಳ್ಳಬೇಕು ಎಂದು ಸೂಚಿಸಲಾಗಿದೆ. ಶಿಕ್ಷಣ ಮತ್ತು ಕುಶಲತೆಯ ತರಬೇತಿಗೆ ಖರ್ಚು ಮಾಡುವ ಬಂಡವಾಳ



ಕೆಲಸಗಾರರ ಉದ್ಯೋಗಾವಕಾಶ, ಉತ್ಪಾದಕತೆಯ ಬೆಳವಣಿಗೆಯೊಂದಿಗೆ ಆಗುವ ಆರ್ಥಿಕ ಬೆಳವಣಿಗೆಯಲ್ಲಿ ಸಮಾಜದ ಎಲ್ಲ ವರ್ಗಗಳಿಗೂ ಪಾಲು ದೊರೆಯುವಂತೆ ನೋಡಿಕೊಳ್ಳಬೇಕಾಗಿದೆ.

**ಮುಂದೇನು?**

**ಶಾಲೆಯಲ್ಲಿ ಮಕ್ಕಳನ್ನು ಉಳಿಸಿಕೊಳ್ಳುವುದು :** ಪ್ರೌಢಶಾಲೆಯವರೆಗೆ ಮಕ್ಕಳು ಶಾಲೆಗೆ ಬಂದು ತಮ್ಮ ಶಿಕ್ಷಣವನ್ನು ಪೂರ್ಣಗೊಳಿಸುವ ಅಗತ್ಯವಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಶಿಷ್ಯವೇತನ, ವಿದ್ಯಾರ್ಥಿನಿಲಯದ ಸೌಲಭ್ಯ, ಮಧ್ಯಾಹ್ನದ ಊಟ ಮತ್ತಿತರ ಸೌಲಭ್ಯಗಳನ್ನು ಒದಗಿಸುತ್ತಿವೆ. ಇದರಿಂದ ಶಾಲೆಗಳಲ್ಲಿ ಮಕ್ಕಳ ಹಾಜರಾತಿಯಲ್ಲಿ ಸುಧಾರಣೆ ಕಂಡು ಬಂದಿದೆ. ಪೋಷಕರಿಗೆ ಸಾಮಾಜಿಕ ಭದ್ರತೆಗಳ ರೂಪದಲ್ಲಿ ಆದಾಯ ಖಾತ್ರಿಯ ನರೇಗಾ ಯೋಜನೆಯಲ್ಲಿ ಉದ್ಯೋಗ, ಆಹಾರ ಭದ್ರತೆ, ಅಟಲ್ ಪಿಂಚಣಿ ಯೋಜನೆ, ಪ್ರಧಾನ ಮಂತ್ರಿಗಳ ಸುರಕ್ಷಾ ವಿಮಾ ಯೋಜನೆಗಳನ್ನು ಜಾರಿಗೆ ತರಲಾಗಿದೆ. ಈ ಕ್ರಮಗಳು ತಮ್ಮ ಮಕ್ಕಳನ್ನು ಶಾಲೆ ಬಿಡಿಸಿ ದುಡಿಯಲು ಹಚ್ಚದಿರುವುದಕ್ಕೆ ಪೋಷಕರಿಗೆ ಪ್ರೋತ್ಸಾಹದಾಯಕವಾಗಿವೆ. ಆದಾಗ್ಯೂ ಈ ಕಾರ್ಯಕ್ರಮಗಳು ಸರಿಯಾಗಿ ಕಾರ್ಯರೂಪಕ್ಕೆ ಬರುವುದರ ಬಗ್ಗೆ ನಿಗಾವಹಿಸಿ ಮಕ್ಕಳು ಶಾಲೆಗೆ ಹಾಜರಾಗುವಂತೆ ನೋಡಿಕೊಳ್ಳಬೇಕಾಗಿದೆ.

ಈ ಎಲ್ಲ ಕಾರ್ಯಕ್ರಮಗಳ ಅನುಷ್ಠಾನದ ನಡುವೆಯೂ ಶಾಲೆಗೆ ಬಾರದೆ ಇರುವ ಮಕ್ಕಳಿಗೆ ಮತ್ತು ಪೋಷಕರಿಗೆ ತಿಳಿವಳಿಕೆ ನೀಡಬೇಕಾಗುತ್ತದೆ. ಭೌಗೋಳಿಕವಾಗಿ ಕೊಂಪೆಯಲ್ಲಿರುವವರು ತಮ್ಮ ಶಿಕ್ಷಣವನ್ನು ದೂರ ಶಿಕ್ಷಣ ವ್ಯವಸ್ಥೆಯಲ್ಲಿ ಮುಂದುವರೆಸುವಷ್ಟಾದರೂ ಮಕ್ಕಳಿಗೆ ಮೂಲ ಶಿಕ್ಷಣವನ್ನು ನೀಡಬೇಕಾಗುತ್ತದೆ. ಇದಕ್ಕಾಗಿ ಮಕ್ಕಳಿಗೆ

ಶಾಲೆಗೆ ಬರಲು ಎರಡನೇ ಅವಕಾಶ ಕಲ್ಪಿಸಿಕೊಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ಹೆಣ್ಣುಮಕ್ಕಳು ದೂರ ಸಂಪರ್ಕದಿಂದ ಶಿಕ್ಷಣ ಮುಂದುರೆಸಲು 'ಪ್ರಥಮ್' ತೆರೆದ ಶಾಲಾ ಶಿಕ್ಷಣ ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ. ಇದರಡಿಯಲ್ಲಿ ಬಾಲಕಿಯರು ಮತ್ತು ಯುವತಿಯರು ಶಿಕ್ಷಣವನ್ನು ಮುಂದುವರೆಸುವುದರ ಜೊತೆಗೆ ಉದ್ಯೋಗಾವಕಾಶದ ಕುಶಲತೆಯನ್ನು ಕಲಿಯಬಹುದಾಗಿದೆ.

**ಶಾಲೆಯ ಮೂಲಸೌಕರ್ಯದ ಸುಧಾರಣೆ :** ಮಕ್ಕಳನ್ನು ಶಾಲೆಯಲ್ಲಿ ಹಿಡಿದಿಟ್ಟುಕೊಳ್ಳಬೇಕಾದರೆ, ಶಾಲಾ ಕಟ್ಟಡಗಳ ನಿರ್ಮಾಣ, ಶಾಲೆಗಳಲ್ಲಿ ಶೈಕ್ಷಣಿಕ ವಾತಾವರಣ ರೂಪಿಸುವುದು ಮತ್ತು ಸಾಕಷ್ಟು ಪ್ರಮಾಣದಲ್ಲಿ ಮಹಿಳಾ ಶಿಕ್ಷಕಿಯರನ್ನು ನೇಮಿಸಿಕೊಳ್ಳುವುದು ನಡೆಯಬೇಕಾಗುತ್ತದೆ. ಶಾಲೆಯಲ್ಲಿ ಮಹಿಳಾ ಶಿಕ್ಷಕಿಯರಿಲ್ಲದಿದ್ದರೆ



ಅನೇಕ ಸಾಮಾಜಿಕ ಗುಂಪುಗಳು ಮತ್ತು ಜನಾಂಗಗಳು ತಮ್ಮ ಹೆಣ್ಣುಮಕ್ಕಳನ್ನು ಶಾಲೆಗೆ ಕಳಿಸುವುದಿಲ್ಲ. ಶಾಲೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಮಹಿಳಾ ಶಿಕ್ಷಕಿಯರ ಕೊರತೆ ಇದೆ. ಶಾಲೆಗಳಲ್ಲಿ ಉತ್ತಮವಾದ ಕಲಿಕೆಯ ವಾತಾವರಣವನ್ನು ರೂಪಿಸಬೇಕಾದರೆ ಉತ್ತಮ ಮಟ್ಟದ ಶಿಕ್ಷಕರ ನೇಮಕಾತಿ ನಡೆಯಬೇಕು. ದೇಶದಲ್ಲಿ ಶೇಕಡಾ 11 ರಷ್ಟು ಶಾಲೆಗಳು ಏಕೋಪಾಧ್ಯಾಯರ ಶಾಲೆಗಳಾಗಿದ್ದು, ಒಟ್ಟಾರೆ ಶಾಲೆಗಳಲ್ಲಿ ಶೇಕಡಾ 40 ಶಿಕ್ಷಕರ ಕೊರತೆ ಇದೆ.

**ಕೆಲಸದ ಜೊತೆ ಶಿಕ್ಷಣದ ಸಂಪರ್ಕ:** ಶಿಕ್ಷಣ, ಕುಶಲತೆಯ ತರಬೇತಿ ವ್ಯವಸ್ಥೆ ಮತ್ತು ಉದ್ಯೋಗದ ನಡುವೆ ಉತ್ತಮವಾದ ಸಂಪರ್ಕವಿರುವುದು ಅತಿ ಮುಖ್ಯ. 9 ನೇ ತರಗತಿಯಿಂದ ವೃತ್ತಿಪರ ಶಿಕ್ಷಣ ವ್ಯವಸ್ಥೆಯನ್ನು ಅಳವಡಿಸುವುದರಿಂದ ಮಕ್ಕಳು ಶಾಲೆಯಲ್ಲೇ ಇದ್ದು ದುಡಿಮೆಗೆ ಬೇಕಾದ ಕುಶಲತೆಯನ್ನು ಕಲಿಯಲು ಸಹಾಯಕವಾಗುತ್ತದೆ. ಇದು ಅಪ್ರೆಂಟಿಸ್ ತರಬೇತಿ ಸೌಲಭ್ಯವನ್ನು ಕಲ್ಪಿಸಲು ಸಹಾಯಕವಾಗುತ್ತದೆ. ಸಣ್ಣ ಉದ್ಯಮಗಳಿಗೆ ಪ್ರಾಮುಖ್ಯತೆ ಕೊಟ್ಟು ಇತ್ತೀಚೆಗೆ ಜಾರಿಗೆ ತಂದಿರುವ ಅಪ್ರೆಂಟಿಶಿಪ್ ಪ್ರಸ್ಥಾನ ಯೋಜನೆಯಿಂದ ಜನಸಂಖ್ಯೆಯ ಅನುಕೂಲ ಹೆಚ್ಚಾಗಿರುವ ಗ್ರಾಮಾಂತರ ಪ್ರದೇಶಗಳಿಗೆ ಅನುಕೂಲವಾಗುತ್ತದೆ. ವಿದ್ಯಾರ್ಥಿಗಳಿಗೆ ಸ್ಟೈಫಂಡ್ ನೀಡುವುದರಿಂದ ಉತ್ತೇಜನ ದೊರೆತಂತಾಗುತ್ತದೆ. ವಿವಿಧ ಪ್ರದೇಶಗಳಿಗೆ ಹೊಂದಿಕೊಳ್ಳದ ವೃತ್ತಿ ಶಿಕ್ಷಣದ ಕೋರ್ಸ್‌ಗಳನ್ನು ನಿಯಂತ್ರಿಸುವ ಅಗತ್ಯವಿದ್ದು, ಸ್ಥಳೀಯ ಕೈಗಾರಿಕೆಗಳು ತರಬೇತಿ ನೀಡುವಲ್ಲಿ ಪ್ರಮುಖವಾದ ಪಾತ್ರ ವಹಿಸಬೇಕಾಗುತ್ತದೆ. 2013 ರಲ್ಲಿ ಜಾರಿಗೆ ಬಂದಿರುವ ರಾಷ್ಟ್ರೀಯ ಕುಶಲತೆ ಅರ್ಹತಾ ಫ್ರೇಂವರ್ಕ್ ಪ್ರಕಾರ ಸಾಮಾನ್ಯ ಶಿಕ್ಷಣ, ವೃತ್ತಿ ಶಿಕ್ಷಣ, ವೃತ್ತಿ ಶಿಕ್ಷಣ ಮತ್ತು ಉನ್ನತ ಶಿಕ್ಷಣಗಳನ್ನು ಒಟ್ಟಿಗೆ ಸೇರಿಸಿ ಸಮಗ್ರವಾದ ವ್ಯವಸ್ಥೆಯನ್ನು ಜಾರಿಗೆ ತರಬೇಕು.

**ಪೂರ್ವಭಾವಿ ಕಲಿಕೆಯ ಗುರುತಿಸುವಿಕೆ :** ಅಸಂಘಟಿತ ಕ್ಷೇತ್ರದಲ್ಲಿರುವ ತರಬೇತಿ ವ್ಯವಸ್ಥೆಯನ್ನು ಪುನರ್‌ರೂಪಿಸಿ, ಕೆಲಸಗಾರನು ಹೊಂದಿರುವ ಕುಶಲತೆಯ ಮಟ್ಟದ ಬಗ್ಗೆ ಪ್ರಮಾಣಪತ್ರ ನೀಡುವ ಅಗತ್ಯವಿದೆ. ಈ ಕೆಲಸಗಾರರು ಅಗತ್ಯವಾದ ಕುಶಲತೆಯನ್ನು ಹೊಂದಿದ್ದರೂ, ಅವರ ಕುಶಲತೆಯ ಬಗ್ಗೆ ಪ್ರಮಾಣಪತ್ರ ಇಲ್ಲದೆ ಇರುವುದರಿಂದ ಉತ್ತಮವಾದ ಉದ್ಯೋಗವನ್ನು ಪಡೆಯಲು ಅಥವಾ ಸ್ವಂತ ಉದ್ದಿಮೆ ಪ್ರಾರಂಭಿಸಲು ಸಾಧ್ಯವಾಗುವುದಿಲ್ಲ. ಬನಾರಸ್‌ನ ಕುಶಲಕರ್ಮಿಗಳು ಮತ್ತು ದಸ್ತಕಾರರು, ಚಿಕನ್‌ಕಾರಿ – ಛತ್ತೀಸ್‌ಗಡದ ಲೋಹದ ಕೆಲಸಗಾರರು ಮತ್ತು ಈಶಾನ್ಯ ರಾಜ್ಯಗಳ ಕುಶಲಕರ್ಮಿಗಳು ಕುಶಲತೆಯನ್ನು ಹೊಂದಿದ್ದರೂ, ಆ ಕುಶಲತೆಗೆ ಪ್ರಮಾಣಪತ್ರ ಅವರಲ್ಲಿ ಇಲ್ಲದಿರುವುದರಿಂದ ಅವರನ್ನು ಕುಶಲತೆ ಇಲ್ಲದವರೆಂದು ತೀರ್ಮಾನಿಸಲಾಗುತ್ತದೆ.

**ಭೌಗೋಳಿಕವಾಗಿ ಕೊಂಪೆಗಳಲ್ಲಿ ಅಗತ್ಯವಿರುವವರಿಗೆ ಅಗತ್ಯಗಳ ಪೂರೈಕೆ:** ಎಲ್‌ಡಬ್ಲ್ಯುಇ ಪ್ರದೇಶ, ಗುಡ್ಡಗಾಡು ಮತ್ತು ಭಯೋತ್ಪಾದನೆ ಪೀಡಿತ ಪ್ರದೇಶಗಳಲ್ಲಿ ನೆರವಿನ ಅಗತ್ಯವಿರುವವರಿಗೆ ಎಲ್ಲ ರೀತಿಯ ತರಬೇತಿಯ ಅವಕಾಶಗಳು ಮತ್ತು ಸಾರ್ವಜನಿಕರ ಮಾಲಿಕತ್ವದಲ್ಲಿರುವ ತರಬೇತಿ ಸಂಸ್ಥೆಗಳು, ಖಾಸಗಿ, ಸರ್ಕಾರೇತರ ಸ್ವಯಂ



ಸೇವಾ ಸಂಸ್ಥೆಗಳು, ನಾಗರಿಕ ಸಂಸ್ಥೆಗಳು ಮತ್ತಿತರ ಸೇವಾ ಸಂಸ್ಥೆಗಳನ್ನೊಳಗೊಂಡ ಮೂಲ ಸೌಲಭ್ಯಗಳು ದೊರೆಯುವಂತೆ ನೋಡಿಕೊಳ್ಳಬೇಕಾಗುತ್ತದೆ. ಈ ನಿಟ್ಟಿನಲ್ಲಿ ಉಡಾನ್, ಹಿಮಾಯತ್, ಪರ್ವಸ್, ನಯೀ ರೋಶನಿ, ಸ್ಟೆಪ್ ಅಪ್ ಮತ್ತಿತರ ಸಂಸ್ಥೆಗಳು ಯುವ ಜನರಲ್ಲಿ ಉದ್ಯೋಗಾವಕಾಶಗಳ ಬಗ್ಗೆ ಜಾಗೃತಿ ಮೂಡಿಸಿವೆ.

**ಸಂಬಂಧಪಟ್ಟವರ ಸಕ್ರಿಯ ಭಾಗಿತ್ವ :** ಇದರಲ್ಲಿ ಪ್ರಮುಖವಾಗಿ ಉದ್ಯೋಗಾರ್ಹತೆಯ ಸಮಸ್ಯೆ ಬಗ್ಗೆ ಗಮನಹರಿಸಬೇಕಾದ ಉದ್ಯೋಗದಾತರು ಹೆಚ್ಚು ಸಕ್ರಿಯವಾಗಿ ಭಾಗವಹಿಸಬೇಕು. ಕಾರ್ಮಿಕ ಸಂಘಗಳು ಉದ್ಯೋಗದಾತರ ಸಂಸ್ಥೆಗಳು ಕುಶಲತೆಯ ತರಬೇತಿಯ ಪಠ್ಯಕ್ರಮವನ್ನು ಸಿದ್ಧಪಡಿಸುವಲ್ಲಿ ಮತ್ತು ತರಬೇತಿ ಕಾರ್ಯಕ್ರಮ ಸರಿಯಾಗಿ ಕಾರ್ಯರೂಪಕ್ಕೆ ಬರುವಲ್ಲಿ, ಪ್ರಾಯೋಜಕತ್ವದಲ್ಲಿ ಮತ್ತು ಉದ್ಯೋಗ ನೀಡುವಲ್ಲಿ ಪ್ರಮುಖವಾದ ಪಾತ್ರ ವಹಿಸಬೇಕು. ನಿರ್ದಿಷ್ಟ ಗುಂಪಿಗೆ ನಿರ್ದಿಷ್ಟವಾದ ಕುಶಲತೆಯ ತರಬೇತಿ ನೀಡುವಲ್ಲಿ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆ ತರುವಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಖಾಸಗಿ ಕ್ಷೇತ್ರದ ಜೊತೆ ಕೈ ಜೋಡಿಸಿ ಯೋಜನೆಯ ಯಶಸ್ವಿಗೆ ಶ್ರಮಿಸಬೇಕು.

ಒಟ್ಟಾರೆ ಪ್ರತಿಕೂಲ ಪರಿಸ್ಥಿತಿಯಲ್ಲಿರುವವರಿಗೆ ದುಡಿಯಲು ಮತ್ತು ಸ್ವಾವಲಂಬಿಗಳಾಗಲು ಬೇಕಾದ ಕುಶಲತೆಯ ತರಬೇತಿ ನೀಡಿ ಅವರು ಕಾರ್ಮಿಕ ಮಾರುಕಟ್ಟೆಯಲ್ಲಿ ಪ್ರವೇಶಿಸುವುದರ ಮೂಲಕ ಸಮಾಜದ ಮುಖ್ಯವಾಹಿನಿಯಲ್ಲಿ ಸೇರಿಕೊಳ್ಳುವಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿ ಸರ್ಕಾರ ಮತ್ತು ಖಾಸಗಿ ಕ್ಷೇತ್ರಗಳನ್ನೊಗೊಂಡಂತೆ ಇಡೀ ಸಮಾಜದ ಮೇಲಿದೆ. ❑

# ಕೌಶಲದ ಅಭಿವೃದ್ಧಿಯ ಅನಿವಾರ್ಯತೆ

* ಎಸ್.ಎಸ್. ಮಂಥ



ಕೇವಲ
ಜನಸಂಖ್ಯೆಯ ಆಧಿಕ್ಯವೇ
ನಮಗೆ ಭಾಗ್ಯದ ಬಾಗಿಲನ್ನು
ತೆರೆಯುತ್ತದೆ
ಎಂದು ಎಣಿಸುತ್ತಾ
ಕೂರುವುದು ಬೇಡ.
ಅದರ ಬದಲಿಗೆ
ಈ ಗುರಿಯತ್ತ
ಕೊಂಡೊಯ್ಯುವ ಮಾರ್ಗಗಳನ್ನು,
ಅದರತ್ತ ವೇಗವಾಗಿ
ಹಾಗೂ ಸುರಕ್ಷಿತವಾಗಿ
ಚಲಿಸುವ ಸಾಧನಗಳನ್ನು
ಕಂಡುಹಿಡಿಯೋಣ.
ಮತ್ತು ಉಪಾಯಕೌಶಲವುಳ್ಳ
ಆವಿಷ್ಕಾರಗಳತ್ತ ಗಮನವನ್ನು
ಹರಿಸಿ ಹೊಸದರತ್ತ
ಹೆಜ್ಜೆಯನ್ನು ಹಾಕೋಣ.

ಭಾರತದ ಅಸಂಘಟಿತ ವಲಯವು ದೇಶದ ಉದ್ಯಮದ ಶೇ 90 ಭಾಗದಷ್ಟಿದೆ. ಕೆಲವು ತಜ್ಞರು ಇದರ ವಿಸ್ತಾರವನ್ನು ಇದಕ್ಕಿಂತಲೂ ಹೆಚ್ಚು ಎನ್ನುತ್ತಾರೆ. ಈ ವಲಯವು ದೇಶದ ಆರ್ಥಿಕತೆಗೆ ವರವೂ ಹೌದು, ಶಾಪವೂ ಹೌದು. ವರವೇಕೆಂದರೆ, ಇರುವವರ ಮತ್ತು ಇಲ್ಲದವರ ನಡುವಿನ ಕಂದಕವು ಅಗಾಧವಾಗಿರುವ ನಮ್ಮ ದೇಶದಲ್ಲಿನ ಜನತೆಯ ಆಶೋತ್ತರಗಳ ಸಾಧನೆಗೆ ಇದು ಆಧಾರವಾಗಿದೆ, ಹಾಗಾಗಿ, ತನ್ನ ಆಶ್ರಿತರ ಬಯಕೆಗಳನ್ನು ನೆರವೇರಿಸಲು ಸದಾ ಹೊಸ ಮಾರ್ಗಗಳನ್ನು ಹುಡುಕುವುದರಲ್ಲಿ ಮಗ್ನವಾಗಿರುತ್ತದೆ. ಹಾಗೆಯೇ, ಶಾಪವೇಕೆಂದರೆ, ಇದು ಆರ್ಥಿಕತೆಯ ಮರ್ಮಸ್ಥಾನಕ್ಕೆ ಆಘಾತವನ್ನು ನೀಡುತ್ತದೆ.

ಆದರೆ, ಜನತೆಯು ಬಯಸುವ ಉದ್ಯೋಗಾವಕಾಶಗಳಲ್ಲಿ ಅರ್ಧದಷ್ಟನ್ನಾದರೂ ಪೂರೈಸಬಲ್ಲ ಸಾಮರ್ಥ್ಯ ಅಲ್ಲಿನ ವಿವಿಧ ಹಂತಗಳಲ್ಲಿದೆಯೇ ಎಂಬುದೇ ದೊಡ್ಡ ಪ್ರಶ್ನೆ. ತಜ್ಞರ ವಿವಿಧ ವರದಿಗಳನ್ನು ಹಿಡಿದುಕೊಂಡು ಶೇ 80ಕ್ಕೂ ಹೆಚ್ಚಿನ ಹುಟ್ಟುವಳಿಯು ಉದ್ಯೋಗಾವಕಾಶವನ್ನು ಸೃಷ್ಟಿಸುವುದಿಲ್ಲ ಎಂದು ಹವಾನಿಯಂತ್ರಿತ ಕೋಣೆಯಲ್ಲಿ ಕುಳಿತು ವರದಿ ಮಾಡುವಂತಹ ನಮ್ಮ ಪ್ರವೃತ್ತಿ ನಾವು ಸಮಸ್ಯೆಗಳನ್ನು ಬಿಚ್ಚಿ ಹರಡಿ ಅಲ್ಲಿಂದ ಕಾಲುಕೀಳುವ ಕಸುಬಿನವರು ಎಂಬುದನ್ನಷ್ಟೆ ತೋರಿಸುತ್ತದೆ. ಈ ಪ್ರವೃತ್ತಿ ನಮ್ಮ ಮುಂಚೂಣಿ ವಿಶ್ಲೇಷಕರ ನೆಚ್ಚಿನ ಮನರಂಜನೆಯ ವಿಧಾನವೂ ಆಗಿದೆ.

ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ನುಸುಳಿರುವ ಹಲವು ಅಸಾಂಗತ್ಯಗಳತ್ತ ಗಮನಹರಿಸಲು ಶಿಕ್ಷಣ ತಜ್ಞರ ಹಾಗೂ ಶಿಕ್ಷಣ ಕ್ಷೇತ್ರದಲ್ಲಿನ ಆಡಳಿತಗಾರರ ಸಹಾಯವು ಈ ಪರಿಸ್ಥಿತಿಯಲ್ಲಿ ಅಗತ್ಯವಾಗಿದೆ. ಇಲ್ಲಿಯವರೆಗೂ ನಡೆದು ಬಂದಿರುವ ಹಾದಿಯಲ್ಲಿಯೇ ನಮ್ಮ ಶಾಲೆಗಳು ಮತ್ತು ಉನ್ನತ ವಿದ್ಯಾಭ್ಯಾಸದ ಕಾಲೇಜುಗಳು ಮುಂದುವರಿಯಬೇಕೇ ಅಥವಾ, ಅದು ಈ ಮಹಾನ್ ಪ್ರಜಾಪ್ರಭುತ್ವದ ಅಡಿಯಲ್ಲಿ ವಾಸಿಸುತ್ತಿರುವವರಿಗೆ ಹೊಸ ಆಕಾಂಕ್ಷೆಗಳನ್ನು ಪೂರೈಸುವ ಅವಕಾಶಗಳನ್ನು ಹೇರಳವಾಗಿ ನೀಡುವ ಕನ್ನೆನೆಲದತ್ತ ಹೋಗುವ ದಾರಿಯನ್ನು ತೋರಬೇಕೇ?


ಶಾಬ್ದಿಕ ಅರ್ಥಗಳ ಬಗೆಗೆ ಚರ್ಚೆಯನ್ನು ಬಿಟ್ಟು, ಶಿಕ್ಷಣದ ಸಿದ್ಧ ಮಾದರಿಗಳತ್ತ ಹಾಗೂ ಉದ್ಯೋಗಾವಕಾಶ ಮತ್ತು ಉದ್ಯೋಗಾರ್ಹತೆಗಳೊಡನೆ ಶಿಕ್ಷಣವು ಹೊಂದಿರುವ ಸಂಬಂಧದತ್ತ ನಾವು ಒಂದು ಮರುನೋಟವನ್ನು ಹರಿಸಬೇಕಾಗಿದೆ. ಮುಂದಿನ ಹತ್ತು ವರ್ಷಗಳಲ್ಲಿ, ಹೆಬ್ಬಯಕೆಗಳನ್ನು ಸಾಕಾರಗೊಳಿಸಿಕೊಳ್ಳಲು ಬಯಸುವ ಯುವ ಜನತೆಯ ಸಂಖ್ಯೆ ದೇಶದ ಜನಸಂಖ್ಯೆಯ ಅರ್ಧಕ್ಕೂ ಹೆಚ್ಚಾಗುವುದರಿಂದ, ಈ ಯುವಜನತೆಯ ಅಂತರಾಳದಲ್ಲಿ ಸಾಧಿಸುವ ಕೆಚ್ಚನ್ನು ತುಂಬಲು ನಾವು ಸಾವಧಾನದಿಂದ ಸಮದರ್ಶಿತ್ವದಿಂದ ಈ ಸಂದರ್ಭವನ್ನು – ಅದನ್ನು ಶಾಪವೆನ್ನಿ, ಅಥವಾ ವರವೆನ್ನಿ, ಅದನ್ನು – ನಿಭಾಯಿಸಬೇಕು.

ಶಿಕ್ಷಣವು ದೊರಕದಿರುವುದು ಮತ್ತು ಕೌಶಲದ ಕೊರತೆ – ಇವೆರಡು ನಮ್ಮ ಸಮಾಜಕ್ಕಿರುವ ಎರಡು ಬೇನೆಗಳು ಮತ್ತು ಇವುಗಳನ್ನು ಎಷ್ಟು ಬೇಗ ನಿವಾರಿಸಿಕೊಳ್ಳುತ್ತೇವೆಯೋ,

* ಮಾಜಿ ಅಧ್ಯಕ್ಷರು, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ. Email : ssmantha@vjti.org.in

ಸಂಬಂಧಪಟ್ಟವರಿಗೆ ಅಷ್ಟೂ ಒಳ್ಳೆಯದು. ಸ್ವತಂತ್ರವಾದ ಜೀವನವನ್ನು ನಡೆಸುವುದಕ್ಕೆ ಶಿಕ್ಷಣವು ಖಂಡಿತವಾಗಿಯೂ ಬಾಗಿಲನ್ನು ತೆರೆಯುತ್ತದೆ, ಆದರೆ, ಕುಟುಂಬ ನಿರ್ವಹಣೆಗೆ ಅಗತ್ಯವಾದ ಕಸುವನ್ನು ತುಂಬಿ, ಶಿಕ್ಷಣವು ನೀಡಿದ ಸ್ವಾತಂತ್ರ್ಯವನ್ನು ಅರ್ಥಪೂರ್ಣವಾಗಿಸುವುದು ವೃತ್ತಿಕೌಶಲ.

ವಿವಿಧ ಹಂತಗಳಲ್ಲಿರುವ ಉದ್ಯೋಗಾವಕಾಶಗಳನ್ನು ನಾವು ಗುರುತಿಸಬೇಕಾಗಿದೆ ಮತ್ತು ಉದ್ಯೋಗದ ಎಲ್ಲಾ ಮೂರು ಮಾರುಕಟ್ಟೆಗಳನ್ನೂ



ಅಭಿವೃದ್ಧಿಗೊಳಿಸುವನಿಟ್ಟಿನಲ್ಲಿ ಪ್ರಜ್ಞಾಪೂರ್ವಕ ಹೆಜ್ಜೆಯನ್ನು ಹಾಕಬೇಕಾಗಿದೆ. ಇದು ಆರ್ಥಿಕತೆಯನ್ನು ಮತ್ತು ಒಟ್ಟು ಆಂತರಿಕ ಉತ್ಪಾದನೆಯನ್ನು (ಜಿ.ಡಿ.ಪಿಯನ್ನು) ಅಭಿವೃದ್ಧಿಗೊಳಿಸುತ್ತದೆ. ಅಷ್ಟೇ ಅಲ್ಲದೆ, ಇದರಿಂದ ಉದ್ಯೋಗಾವಕಾಶಗಳ ಮೇಲೆ ಹಲವು ಹಂತಗಳಲ್ಲಿ ತನ್ನ ಪ್ರಭಾವವನ್ನು ಬೀಳುತ್ತದೆ.

ಶಿಕ್ಷಣದೊಂದಿಗೆ ವೃತ್ತಿಕೌಶಲ ಹಾಗೂ ತರಬೇತಿ ಕಾರ್ಯಕ್ರಮಗಳ ಹೊಂದಾಣಿಕೆಯನ್ನು ಸಾಧಿಸುವ ಮೂಲಕ ಅಂತಾರಾಷ್ಟ್ರೀಯ ಗುಣಮಟ್ಟದ ಕುಶಲತೆ ಹಾಗೂ ದುಡಿಮೆಯ ಸಾಮರ್ಥ್ಯವುಳ್ಳ ಕಾರ್ಮಿಕ ಬಲವನ್ನು ಸೃಷ್ಟಿಸಿ, ಭಾರತವು ವಿಶ್ವದ ಕೌಶಲದ ರಾಜಧಾನಿಯಾಗಬೇಕೆಂಬುದು ನನ್ನ ಆಸೆ.

ಉದ್ಯಮಶೀಲತೆಗೆ ಉತ್ತೇಜನವನ್ನು ನೀಡುವ ಮತ್ತು ಶೈಶವಾವಸ್ಥೆಯಲ್ಲಿರುವಂತಹ ಉದ್ದಿಮೆಗಳಿಗೆ ಹಾಗೂ ಉದ್ಯೋಗಗಳ ಮಾರುಕಟ್ಟೆಗೆ ಬೆಳೆಯಲು ನೆರವಾಗುವ 'ಭಾರತದಲ್ಲಿಯೇ ಉತ್ಪಾದಿಸಿ' ಯೋಜನೆಯನ್ನು ಮುನ್ನಡೆಸಲು ಇದು ಶಕ್ತವಾಗುತ್ತದೆ. ಅಂತರ್ಜಾಲವನ್ನು ಕೇಂದ್ರವಾಗಿರಿಸಿಕೊಂಡಿರುವ ನವೀನ ತಂತ್ರಜ್ಞಾನದ ಸಹಾಯದಿಂದ ಡಿಜಿಟಲ್ ಆಗಿ ಪರಿವರ್ತಿತವಾಗುವ ಭಾರತವು ಸಮೃದ್ಧ ಬೆಳವಣಿಗೆಗೆ ಅಗತ್ಯವಾದ ಪರಿಸರವನ್ನು ನಿರ್ಮಿಸುತ್ತದೆ.

ರಾಷ್ಟ್ರದ ಶಿಕ್ಷಣವನ್ನು ಮುನ್ನಡೆಸುವಲ್ಲಿ ವೃತ್ತಿಪರ ಶಿಕ್ಷಣ ಮತ್ತು ತರಬೇತಿಯು ಒಂದು ಮುಖ್ಯವಾದ ಘಟಕವಾಗಿದೆ. ಇದರಲ್ಲಿನ ನಿರ್ಣಾಯಕ ಅಂಶಗಳನ್ನು ಪುನರ್ವಿಮರ್ಶಿಸುವ ತುರ್ತು ಅಗತ್ಯವಿದೆ, ಏಕೆಂದರೆ, ಇದರಿಂದ ತರಬೇತಿಯನ್ನು ಅಗತ್ಯಗಳಿಗೆ ತಕ್ಕಂತೆ ನಮ್ಯವನ್ನಾಗಿಸಬಹುದು, ಸಮಕಾಲೀನವನ್ನಾಗಿಸಬಹುದು ಮತ್ತು ಸೃಜನಶೀಲವನ್ನಾಗಿಸಬಹುದು.

ರಾಷ್ಟ್ರೀಯ ಮಾದರಿ ಸಮೀಕ್ಷೆ ಸಂಸ್ಥೆ 2011–12ರಲ್ಲಿ ನಡೆಸಿದ ಸಮೀಕ್ಷೆಯ ಪ್ರಕಾರ, ಭಾರತವು 1.267 ಬಿಲಿಯನ್ ಜನಸಂಖ್ಯೆಯನ್ನು ಹೊಂದಿದ್ದು, ಅದರಲ್ಲಿ 474.1 ದಶಲಕ್ಷ ಉದ್ಯೋಗಶೀಲ ವ್ಯಕ್ತಿಗಳು ಇದ್ದಾರೆ. ಈ ಉದ್ಯೋಗಶೀಲವ್ಯಕ್ತಿಗಳಲ್ಲಿ 336.9 ದಶಲಕ್ಷ ಜನರು ಗ್ರಾಮಾಂತರದಲ್ಲಿಯೂ, 137.2 ದಶಲಕ್ಷ ಜನರು ನಗರಪ್ರದೇಶದಲ್ಲಿಯೂ ಇದ್ದಾರೆ. ನೊಂದಣಿಮಾಡಿಸಿದ ನಿರುದ್ಯೋಗಿಗಳ ಸಂಖ್ಯೆ 2010ರಲ್ಲಿ 40.17 ದಶಲಕ್ಷದಷ್ಟು ಇದ್ದಿತು.

ನಿರುದ್ಯೋಗಿಗಳ ಪ್ರಮಾಣವು ಶೇ. 8.8ರಷ್ಟು ಇರುವಾಗ ಹಾಗೂ ಜನಸಂಖ್ಯೆಯು ಪ್ರತಿವರ್ಷ ಶೇ. 1.5ರ ದರದಲ್ಲಿ ಹೆಚ್ಚಾಗುತ್ತಿರುವಾಗ ಎಲ್ಲರಿಗೂ ಅರ್ಹ ಉದ್ಯೋಗವನ್ನು ಒದಗಿಸಿಕೊಡುವುದು ನಿಜಕ್ಕೂ ಒಂದು ದಿಗಿಲುಗೊಳಿಸುವ ಕೆಲಸವಾಗಿರುತ್ತದೆ. ಜನಸಂಖ್ಯೆಯನ್ನು ವಿಶ್ಲೇಷಣಾರ್ಥವಾಗಿ ನೋಡಿದಾಗ ಶೇ 35ರಷ್ಟು ಭಾರತೀಯರು 15 ವರ್ಷಗಳಿಗಿಂತಲೂ ಕಡಿಮೆ ವಯಸ್ಸಿನವರಾಗಿದ್ದಾರೆ ಮತ್ತು ಸುಮಾರು ಶೇ. 50ರಷ್ಟು ಜನರು 25ವರ್ಷಗಳಿಗಿಂತಲೂ ಕಡಿಮೆ ವಯಸ್ಸಿನವರಾಗಿದ್ದಾರೆ. ಇದು





ಜಗತ್ತಿನಲ್ಲಿಯೇ ದೊಡ್ಡ ತರುಣ ಜನಾಂಗದ ಸಮುದಾಯವಾಗಿದೆ.

ನಿರುದ್ಯೋಗದ ಸಮಸ್ಯೆಯೊಂದಿಗೇ, ಶಿಕ್ಷಣವನ್ನು ಅರ್ಧದಲ್ಲಿಯೇ ಕೈಬಿಡುವವರ ಸಂಖ್ಯೆಯೂ, ಈಗಾಗಲೇ ಒತ್ತಡದಲ್ಲಿ ನಲುಗುತ್ತಿರುವ ಪರಿಸ್ಥಿತಿಯ ಮೇಲೆ ಇನ್ನೂ ಹೆಚ್ಚಿನ ಒತ್ತಡವನ್ನು ಹೇರುತ್ತದೆ. 2013ರ ವಾರ್ಷಿಕ ಶೈಕ್ಷಣಿಕ ವರದಿಯ ಪ್ರಕಾರ, ಗ್ರಾಮಾಂತರ ಹಾಗೂ ನಗರ ಪ್ರದೇಶಗಳಲ್ಲಿ ಒಂದನೆಯ ತರಗತಿಯಿಂದ ಹನ್ನೆರಡನೆಯ ತರಗತಿಯ ವರೆಗೆ ಒಟ್ಟು 229 ದಶಲಕ್ಷ ವಿದ್ಯಾರ್ಥಿಗಳು ಸೇರಿದ್ದಾರೆ.

ಹದಿನೆಂಟು ವರ್ಷ ವಯಸ್ಸಿನೊಳಗಿರುವವರ ಒಟ್ಟು ಸಂಖ್ಯೆಯನ್ನು 430 ದಶಲಕ್ಷ ಎಂದು ಅಂದಾಜುಮಾಡಲಾಗಿದೆ. ಶಿಕ್ಷಣವನ್ನು ಅರ್ಧದಲ್ಲಿಯೇ ಕೈಬಿಡುವುದಕ್ಕಿರುವ ಮುಖ್ಯ ಕಾರಣಗಳೆಂದರೆ ಶಿಕ್ಷಣದ ವೆಚ್ಚವನ್ನು ಭರಿಸಲಾಗದೆ ಇರುವುದು ಮತ್ತು ಶಿಕ್ಷಣದಲ್ಲಿ ವಿದ್ಯಾರ್ಥಿಗಳಲ್ಲಿ ಮೂಡುವ ನಿರಾಸಕ್ತಿ. ಈ ಮಕ್ಕಳು ಕೆಲಸ ಮಾಡುವ ಮೂಲಕ ಹಾಗೂ ತಮ್ಮ ತಂದೆತಾಯಿಗಳಿಗೆ ಅವರ ವೃತ್ತಿಯಲ್ಲಿ ಸಹಾಯಮಾಡುವ ಮೂಲಕ ಅವರಿಗೆ ನೆರವಾಗುತ್ತಾರೆ.

2010ರಲ್ಲಿ ಮಾಧ್ಯಮಿಕ ಹಂತದಲ್ಲಿ ವಿದ್ಯಾಭ್ಯಾಸಕ್ಕಾಗಿ ಶಾಲೆಗಳನ್ನು ಸೇರುವವರ ಪ್ರಮಾಣವು ಶೇ. 63.21ರಷ್ಟು ಇದ್ದಿತು ಮತ್ತು 2014ರಲ್ಲಿ ಅದಕ್ಕಿಂತಲೂ ಮೇಲಿನ ಹಂತದಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸಿದ್ದ ವಿದ್ಯಾರ್ಥಿಗಳ ಸಂಖ್ಯೆ ಶೇ. 20ರಷ್ಟು ಇದ್ದು, 2013–14ನೆಯ ಸಾಲಿನಲ್ಲಿ ಹತ್ತನೆಯ ತರಗತಿಯ ಪರೀಕ್ಷೆಯನ್ನು ತೆಗೆದುಕೊಂಡವರ ಸಂಖ್ಯೆ 164.75 ಲಕ್ಷ. ಇವರಲ್ಲಿ 128.33 ಲಕ್ಷ ಮಂದಿ ತೇರ್ಗಡೆಯಾದರೆ, ಅನುತ್ತೀರ್ಣರಾಗಿ, ಬಹುಶಃ ಶಿಕ್ಷಣವನ್ನು

ಮುಂದುವರಿಸದವರ ಸಂಖ್ಯೆ 36.42 ಲಕ್ಷ (ಅಂದರೆ ಶೇ 34). ಅದೇ ವರ್ಷ, ಒಟ್ಟು 119.234 ಲಕ್ಷ ವಿದ್ಯಾರ್ಥಿಗಳು ಹನ್ನೆರಡನೆಯ ತರಗತಿಯ ಪರೀಕ್ಷೆಯನ್ನು ತೆಗೆದುಕೊಂಡರು. ಅವರಲ್ಲಿ 95 ಲಕ್ಷ ಮಂದಿ ಉತ್ತೀರ್ಣರಾದರೆ, ತೇರ್ಗಡೆಯಾಗದೆ, ಬಹುಶಃ ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿಕೊಂಡವರ ಸಂಖ್ಯೆ 24.23 ಲಕ್ಷ. ಪ್ರತಿವರ್ಷದ ಸಂಖ್ಯೆಗಳೂ ಹೆಚ್ಚುಕಡಿಮೆ ಇದರ ಆಸುಪಾಸಿನಲ್ಲಿಯೇ ಇರುತ್ತವೆ.

ಒಟ್ಟಾರೆಯಾಗಿ ನೋಡಿದಾಗ, ದೇಶದ ಒಟ್ಟು ಉದ್ಯೋಗಾಕಾಂಕ್ಷಿಗಳಲ್ಲಿ ಶೇ 60ರಷ್ಟು ಜನರು ಸ್ವಂತ ಉದ್ಯೋಗದಲ್ಲಿ ನಿರತರಾಗಿದ್ದು, ಬಡತನದ ಕಪಿಮುಷ್ಟಿಯಲ್ಲಿಯೇ ಸಿಕ್ಕಿಕೊಂಡಿರುವುದು, ಶೇ 30ರಷ್ಟು ಮಂದಿ ಖಾಯಂ ಅಲ್ಲದ ಕೆಲಸದಲ್ಲಿ ಇರುವುದು ಕಂಡುಬರುತ್ತದೆ.



ಉಳಿದ ಶೇ. 10ರಷ್ಟು ಮಂದಿಗೆ ಖಾಯಂ ಉದ್ಯೋಗವಿದ್ದು, ಇವರಲ್ಲಿ ಐದನೆಯ ಎರಡು ಭಾಗದಷ್ಟು ಜನರು ಸಾರ್ವಜನಿಕ ವಲಯದಲ್ಲಿ ನೇಮಕಗೊಳ್ಳಲ್ಪಟ್ಟಿರುತ್ತಾರೆ. ಶೇ 90ಕ್ಕೂ ಹೆಚ್ಚಿನ ಕಾರ್ಮಿಕರು ಅಸಂಘಟಿತ ವಲಯಕ್ಕೆ ಸೇರಿದ್ದು ಸಂಘಟಿತ ವಲಯದ ಕಾರ್ಮಿಕರಿಗೆ ದೊರಕುವ ಸಾಮಾಜಿಕ ಭದ್ರತೆಯಿಂದ ಅಥವಾ ಇತರ ಸೌಲಭ್ಯಗಳಿಂದ ಅವರು ವಂಚಿತರಾಗಿದ್ದಾರೆ.

ಅತಿ ಕಡಿಮೆ ತಲಾ ವರಮಾನ ಹಾಗೂ ಅತಿ ಕಡಿಮೆ ತಲಾ ಉತ್ಪಾದನೆಯನ್ನುಳ್ಳ ದೇಶಗಳಲ್ಲಿ ಭಾರತವೂ ಒಂದು. ಜಪಾನಿನಲ್ಲಿ ತಲಾ ವರಮಾನವು 30,000 ಡಾಲರಗಳೂ, ಶ್ರೀ ಲಂಕಾದಲ್ಲಿ 879 ಡಾಲರ್‌ಗಳೂ ಇದ್ದರೆ ಭಾರತದಲ್ಲಿನ ತಲಾ ವರಮಾನವು 433 ಡಾಲರ್ ಇದೆ. ಭಾರತದಲ್ಲಿನ ಪ್ರಸಕ್ತ ತಲಾ ವರಮಾನವು ಅಭಿವೃದ್ಧಿಯನ್ನು ಹೊಂದಿದ ದೇಶಗಳಲ್ಲಿನ ತಲಾ ವರಮಾನದ ಶೇ 7.5ರಷ್ಟು ಇದೆ. ಮುಂದಿನ ಐವತ್ತು ವರ್ಷಗಳಲ್ಲಿ ಇದನ್ನು ಕನಿಷ್ಠ ಶೇ 80ರಷ್ಟಕ್ಕಾದರೂ ಹೆಚ್ಚಿಸಬೇಕು ಎಂದು ತಜ್ಞರು ಅಭಿಪ್ರಾಯವನ್ನು ಪಡುತ್ತಾರೆ.

**ಕೌಶಲದ ಕೊರತೆ ಹಾಗೂ ಅದರ ಪರಿಣಾಮಗಳು**

ಆಸ್ಪೈರಿಂಗ್ ಮೈಂಡ್ಸ್ ಎಂಬ ಸಂಸ್ಥೆಯು ದೇಶಾದ್ಯಂತ ನಡೆಸಿದ ಸಮೀಕ್ಷೆಯು ದೇಶದಲ್ಲಿ ಪ್ರತಿವರ್ಷವೂ 50 ಲಕ್ಷ ಪದವೀಧರರು ಕಾಲೇಜುಗಳಿಂದ ಹೊರಬರುತ್ತಾರೆ ಎಂದು ತಿಳಿಸುತ್ತದೆ. ಇಷ್ಟಾದರೂ ಮಾರುಕಟ್ಟೆಗೆ ಅಗತ್ಯವಿರುವ ಕೌಶಲವನ್ನು ಒದಗಿಸಲು ನಮಗೆ ಸಾಧ್ಯವಾಗಿಲ್ಲ. ಇದರ ಪರಿಣಾಮವೆಂದರೆ ನಾವು ಪೂರೈಸಬಹುದಾದುದಕ್ಕಿಂತ ಹೆಚ್ಚಿನ ಪ್ರಮಾಣದ ಶ್ರಮರಹಿತವಾದ ಉದ್ಯೋಗಗಳಿಗೆ ಬೇಡಿಕೆ ಇದೆ.

ಬೇಡಿಕೆ ಮತ್ತು ಒದಗಣೆಯ ನಡುವಿನ ಅಸಾಂಗತ್ಯದಿಂದಾಗಿ ಸಂಪೂರ್ಣಕಾಲದ ಉದ್ಯೋಗಗಳು ದೊರಕುತ್ತಿಲ್ಲ. ಉದ್ಯೋಗಾಕಾಂಕ್ಷಿಗಳ ಸಂಖ್ಯೆಯಲ್ಲಿ ಆಗುತ್ತಿರುವ ಏರಿಕೆಯ ದರದಲ್ಲಿಯೇ ಉದ್ಯೋಗಾವಕಾಶಗಳೂ ಬೆಳೆಯದಿರುವುದರಿಂದ ನಿರುದ್ಯೋಗದ ಸೃಷ್ಟಿಯಾಗುತ್ತಿದೆ. ಅದರ ಪರಿಣಾಮವೆಂದರೆ ಜನತೆಯಲ್ಲಿನ ಅತೃಪ್ತಿ. ಈ ಅತೃಪ್ತಿಯ ಬೃಹದಾಕಾರವನ್ನು ತಾಳುವುದಕ್ಕೆ ಮೊದಲೇ ಅದನ್ನು ಶೀಘ್ರವಾಗಿ ಹಾಗೂ ಪರಿಣಾಮಕಾರಿಯಾಗಿ ಎದುರಿಸಬೇಕಾಗಿದೆ.

**ಹಾದಿಯಲ್ಲಿರುವ ಅಡಚಣೆಗಳು**

ಈ ಹಾದಿಯಲ್ಲಿನ ಗಂಭೀರವಾದ ಅಡಚಣೆಗಳು ಎಂದರೆ – ಉತ್ಪಾದಕತೆಗೆ ನೆರವಾಗುವಂತಹ ವೃತ್ತಿಕೌಶಲದ ಅಭಾವ, ಕಾರ್ಯಕ್ಷೇತ್ರವು ಬಯಸುವ ವೃತ್ತಿ ಕೌಶಲವನ್ನು ಹೊರತುಪಡಿಸಿದ ಪದವಿಯನ್ನು ಗಳಿಸುವಲ್ಲಿ ಭಾರತೀಯ ವಿದ್ಯಾರ್ಥಿಗಳು ಹಾಗೂ ಅವರ ಪೋಷಕರಲ್ಲಿ ವ್ಯಾಪಕವಾಗಿ ಇರುವ ಆಸಕ್ತ ಮನೋಭಾವ.

ಸೇವಾವಲಯದ ಮೇಲೆ ಇಟ್ಟಿರುವ ಅತಿಯಾದ ನೆಚ್ಚು ಮತ್ತು ಪ್ರಾಥಮಿಕ ಹಾಗೂ ಅದರ ಮುಂದಿನ ಹಂತದ ವಲಯಗಳಲ್ಲಿನ ಬೆಳವಣಿಗೆಯನ್ನು ಮುಂದುವರಿಸಿಕೊಂಡು ಹೋಗುವಲ್ಲಿನ ಅಸಾಮರ್ಥ್ಯ – ಇವು ಕೂಡ ನಮ್ಮ ಸಮಸ್ಯೆಗಳನ್ನು ಅಧಿಕಗೊಳ್ಳುವಂತೆ ಮಾಡಿವೆ.




**ಅವಕಾಶ**

ಉತ್ತಮ ಉದ್ಯೋಗಾವಕಾಶಗಳನ್ನು ಪಡೆದುಕೊಳ್ಳಲು, ಪ್ರಸಕ್ತ ಇರುವ ಕಾಲೇಜು ವಿದ್ಯಾರ್ಥಿಗಳಿಗೆ ಕುಶಲತೆಯ ಆವಶ್ಯಕತೆ ಇದೆ. ಇಂತಹ ವಿದ್ಯಾರ್ಥಿಗಳ ಸಂಖ್ಯೆ ಕಾಲೇಜು ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿ ಹೊರನಡೆಯುವವರಿಗೆ ಹೋಲಿಸಿದರೆ ಬಹಳ ಕಡಿಮೆಯೇ. ಅದು ಈಗ ಶೇ. 20ರಷ್ಟು ಇದೆ. ಹಾಗೆ ಕಾಲೇಜು ವಿದ್ಯಾಭ್ಯಾಸವನ್ನುಅರ್ಧದಲ್ಲಿ ನಿಲ್ಲಿಸಿದವರಿಗೂ ಕುಶಲತೆಯ ತರಬೇತಿಯ ಅಗತ್ಯವಿದೆ. ಉದ್ಯೋಗದ ಕ್ಷೇತ್ರಗಳಿಗೆ ಅಗತ್ಯವಾದ ಕೌಶಲವನ್ನು ಪಡೆಯುವುದರಿಂದ ಅವಕಾಶಗಳು ಹೆಚ್ಚಾಗುತ್ತವೆ. ಆರ್ಥಿಕವಾಗಿ ಅಭಿವೃದ್ಧಿಶೀಲತೆಯತ್ತ ಹೆಜ್ಜೆಹಾಕುತ್ತಿರುವ ಹೆಚ್ಚಿನ ದೇಶಗಳಲ್ಲಿರುವ ವಯಸ್ಸಾದವರ ಸಂಖ್ಯೆಗೆ ಹೋಲಿಸಿದರೆ ನಮಗೆ ಅಗಾಧವಾದ ಅವಕಾಶಗಳ ಬಾಗಿಲುಗಳು ತೆರೆದಿವೆ. ಇತ್ತೀಚಿನ ಪತ್ರಿಕಾ ವರದಿಯೊಂದರಪ್ರಕಾರ, ಮುಂಬರುವ ವರ್ಷಗಳಲ್ಲಿ ಈ ಸಂಖ್ಯೆಯು ಜಪಾನಿನಲ್ಲಿ 8 ದಶಲಕ್ಷವೂ, ಅಮೆರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ 17 ದಶಲಕ್ಷವು ಇರುತ್ತದೆ. ಅಂದರೆ ಇದರ ಒಟ್ಟು ಸಂಖ್ಯೆ ಯೂರೋಪಿನ ಒಟ್ಟು ಜನಸಂಖ್ಯೆಯ ಶೇ. 4 ರಷ್ಟು. ನಾವು ಈ ಅವಕಾಶಗಳ ಸದುಪಯೋಗವನ್ನು ಪಡೆದುಕೊಳ್ಳದಿದ್ದರೆ, ಅವು ಚೀನಾ, ಶ್ರೀಲಂಕಾ ಮೊದಲಾದ ದೇಶಗಳ ಪಾಲಾಗುತ್ತದೆ.


**ಮಾಡಬೇಕಾಗಿರುವುದು**

ಒಂದು ಮಾರ್ಗವೆಂದರೆ ಶಾಲೆ ಮತ್ತು ಕಾಲೇಜುಗಳ ಮುಖ್ಯ



ಶಿಕ್ಷಣದಲ್ಲಿ ವಿದ್ಯಾರ್ಥಿಗಳಲ್ಲಿ ಕೌಶಲವನ್ನು ಬೆಳೆಸುವುದರತ್ತ ಗಮನ ಹರಿಸುವುದು. ನಮ್ಮ ಸಾಂಪ್ರದಾಯಿಕ ಶಿಕ್ಷಣದಿಂದ ವೃತ್ತಿಪರ ಶಿಕ್ಷಣಕ್ಕೆ ಹಾಗೂ ಉದ್ಯೋಗದ ಮಾರುಕಟ್ಟೆಗೆವಿವಿಧ ಹಂತಗಳಲ್ಲಿ ಪ್ರವೇಶವನ್ನು ಕಲ್ಪಿಸುವುದು ಮತ್ತು ಅಲ್ಲಿ ವಿವಿಧ ರೀತಿಯ, ಮಾನ್ಯತೆಯನ್ನು ಪಡೆದ ವೃತ್ತಿಪರ ಶಿಕ್ಷಣದ ಸರ್ಟಿಫಿಕೇಟುಗಳನ್ನು ಪಡೆಯುವಂತೆ ಮಾಡುವುದರ ಮೂಲಕ ಇಂತಹ ಅವಕಾಶಗಳನ್ನು ನಮ್ಮದನ್ನಾಗಿಸಿಕೊಳ್ಳಬಹುದು.

'ಭಾರತದಲ್ಲಿಯೇ ಉತ್ಪಾದಿಸಿ' ಎಂಬ ಆದರ್ಶವನ್ನುಸಾಕಾರಗೊಳಿಸಿಕೊಳ್ಳಲು ಮತ್ತು ನಿರುದ್ಯೋಗದ ಭೂತವನ್ನು ಮಟ್ಟಹಾಕಲು ಹೊಸ ಉದ್ಯೋಗಾವಕಾಶಗಳನ್ನು, ಉದ್ಯೋಗದ ಮಾರುಕಟ್ಟೆಗಳನ್ನು ಸೃಷ್ಟಿಸುವುದು ನಮ್ಮ ಮುಂದಿರುವ ಬೃಹತ್ ಗುರಿಯಾಗಬೇಕು.



**ಮುಂದಿನ ಹಾದಿ**

ಕೇಂದ್ರ ಸರ್ಕಾರವು ಉದ್ದೇಶಿಸಿರುವ ಎಲ್ಲಾ ಪ್ರಗತಿಪರ ಕಾರ್ಯಕ್ರಮಗಳಿಗೂ ಒತ್ತುಕೊಡುವ ಉದ್ದೇಶದಿಂದ, ಎಲ್ಲಾ ಕುಶಲತೆಗಳನ್ನೂ ಕಲಿಸುವಂತಹ ರಾಷ್ಟ್ರೀಯ ಕೌಶಲ ವಿಶ್ವವಿದ್ಯಾನಿಲಯವೊಂದನ್ನು ಸ್ಥಾಪಿಸುವುದು ಅಗತ್ಯವಾಗಿದೆ. ಹೂಡಿದ ಬಂಡವಾಳಕ್ಕೆ ಉತ್ತಮ ಫಲವನ್ನು ನೀಡುವಂತಹ ಸಾಮಾನ್ಯ ಗುಣಮಟ್ಟಗಳ ಆಧಾರದ ಮೇಲೆ ಕಾರ್ಯವನ್ನು ನಿರ್ವಹಿಸಬೇಕು.

ರಕ್ಷಣಾವಲಯ, ರೈಲ್ವೆ, ಮೂಲಭೂತ ಸೌಕರ್ಯಗಳು ಹಾಗೂ ಕೃಷಿ ಕ್ಷೇತ್ರಗಳ ಅಗಾಧವಾದ ಬೇಡಿಕೆಗಳನ್ನು ಪೂರೈಸುವ ವಿವಿಧ ವಸ್ತುಗಳನ್ನು ಉತ್ಪಾದಿಸುವ, 'ಭಾರತದಲ್ಲಿಯೇ ಉತ್ಪಾದಿಸಿ' ಆದರ್ಶಕ್ಕೆ ಅನುಗುಣವಾಗಿ ಒಂದು ಉತ್ಪಾದನಾ ಕೇಂದ್ರವನ್ನು ಪ್ರಾರಂಭಿಸುವುದು ಮತ್ತೊಂದು ಮಾರ್ಗ. ಇದು ದೇಶದಲ್ಲಿ ಅಗಾಧವಾದ ಉದ್ಯೋಗಾವಕಾಶಗಳಿಗೆ ಮತ್ತು ನವೀನ ಕೌಶಲದ ತರಬೇತಿಗೆ ಹೊಸ ಹಾದಿಯನ್ನು ಹಾಕಿಕೊಡುತ್ತದೆ.

**ಕೌಶಲದ ಗುಣಮಟ್ಟ ಹಾಗೂ ನೀತಿಗಳು**


ಆರ್ಥಿಕತೆಯ ಸರಾಸರಿ ಅಭಿವೃದ್ಧಿ, ವಿದೇಶೀ ಬಂಡವಾಳದ ಪ್ರಮಾಣ, ಹೆಚ್ಚಿನ ಮೌಲ್ಯವರ್ಧಿತ ವಸ್ತುಗಳ ರಫ್ತಿನ ಪ್ರಮಾಣ, ಕುಶಲತೆಯ ಬೇಡಿಕೆ ಮತ್ತು ಸರಬರಾಜಿನಲ್ಲಿರುವ ಅಸಮತೆ ಹಾಗೂ ಉತ್ಪಾದಕತೆಯ ದರದಲ್ಲಿನ ವೃದ್ಧಿ – ಇವುಗಳ ಮೇಲೆ ಕೌಶಲದ ಯಶಸ್ಸು ನಿಂತಿರುತ್ತದೆ. ಕುಶಲತೆಯ ಬೇಡಿಕೆ ಮತ್ತು ಸರಬರಾಜಿನಲ್ಲಿರುವ ಅಸಮತೆಯನ್ನು ಕರಾರುವಾಕ್ಕಾಗಿ ಗುರುತಿಸುವುದು ಅತ್ಯಗತ್ಯ. ಇದಕ್ಕಾಗಿ ಗುಣಮಟ್ಟವನ್ನು ನಿರ್ದಿಷ್ಟಗೊಳಿಸುವುದು ಅತ್ಯಾವಶ್ಯಕ.

ರಾಷ್ಟ್ರೀಯ ಕೌಶಲ ವಿಶ್ವವಿದ್ಯಾನಿಲಯವು ವಿಶ್ವಾಸಾರ್ಹವಾದ ಒಂದು ವ್ಯವಸ್ಥೆಯನ್ನು ಸೃಜಿಸಬೇಕಾದರೆ, ಕೈಗೊಳ್ಳಬೇಕಾದ ಕ್ರಮಗಳೆಂದರೆ – ರಾಷ್ಟ್ರೀಯ ಕೌಶಲ ಶಿಕ್ಷಣ ಹಂದರದ ಪ್ರಕಾರ ಕೌಶಲದ ತರಬೇತಿಯನ್ನು ನೀಡಲು ನೀತಿನಿಯಮಾವಳಿಗಳನ್ನು, ಗುಣಮಟ್ಟವನ್ನು ರೂಪಿಸುವುದು, ದೇಶದಾದ್ಯಂತ ವಿದ್ಯಾರ್ಥಿಗಳನ್ನು ನೊಂದಾಯಿಸಿಕೊಳ್ಳುವುದು, ಕೌಶಲದ ತರಬೇತಿಯನ್ನು ನೀಡುವುದು, ವಿವಿಧ ಮಟ್ಟಗಳಲ್ಲಿ ಡಿಪ್ಲೊಮಾ ಹಾಗೂ ಪದವಿ ಸರ್ಟಿಫಿಕೇಟುಗಳನ್ನು ಪ್ರದಾನಮಾಡುವುದು, ಉಪಕೇಂದ್ರಗಳನ್ನು ಹುಟ್ಟುಹಾಕುವುದು, ಅಸ್ತಿತ್ವದಲ್ಲಿರುವ ಕಾಲೇಜು/ಐಟಿಐ/ಪಾಲಿಟೆಕ್ನಿಕ್‌ಗಳಿಗೆ ಕುಶಲತೆಯ ಅಭಿವೃದ್ಧಿಯ ತರಗತಿಗಳನ್ನು ನಡೆಸಲು ಅನುಮತಿಯನ್ನು ನೀಡುವುದು, ಎಲ್ಲಾ ಭಾಷೆಗಳಲ್ಲಿಯೂ ಕೌಶಲವನ್ನು ಕುರಿತಾದ ಪಠ್ಯಕ್ರಮವನ್ನು ಅಳವಡಿಸಿ ಶಿಕ್ಷಣವನ್ನು ನೀಡುವ ಅವಕಾಶಗಳನ್ನು ಕಲ್ಪಿಸುವುದು, ಉದ್ಯೋಗಶೀಲತೆಯ ಕೇಂದ್ರಗಳನ್ನು ಸ್ಥಾಪಿಸುವುದು, ಕಂಪನಿಗಳ ಸಾಮಾಜಿಕ ಜವಾಬ್ದಾರಿಯ ಉಪಕ್ರಮ ಸಾಮರ್ಥ್ಯಗಳಿಗೆ ಅವಕಾಶಗಳನ್ನು ಒದಗಿಸುವುದು, ಕುಶಲತೆಗಾಗಿ ಇರುವ ಬೇಡಿಕೆ ಮತ್ತು ಅದರ ಸರಬರಾಜಿನ ನಡುವೆ ಇರುವ ಅಂತರವನ್ನು ಅಂದಾಜಿಸುವುದು, ಕೌಶಲವನ್ನು ಕುರಿತಾದ ಸಂಶೋಧನೆಗಳನ್ನು ನಡೆಸುವುದು, ಸ್ಥಳೀಯ



ಹಾಗೂ ಅಂತಾರಾಷ್ಟ್ರೀಯ ಸಹಭಾಗಿತ್ವಕ್ಕೆ ಅನುವು ಮಾಡಿಕೊಡುವುದು, ಸಶಕ್ತವಾದ ಕಾರ್ಮಿಕ ಮಾರುಕಟ್ಟೆ ಮಾಹಿತಿ ವ್ಯವಸ್ಥೆಯನ್ನು ಸೃಷ್ಟಿಸುವುದು, ಕೌಶಲದ ತರಬೇತಿದಾರರನ್ನು ತಯಾರುಮಾಡುವುದು ಹಾಗೂ ತರಬೇತಿಯ ಗುಣಮಟ್ಟವನ್ನು ನಿರ್ಧರಿಸುವ ವಿಧಾನವನ್ನು ಕಂಡುಹಿಡಿಯುವುದು, ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಅತಿ ಸಣ್ಣ–ಸಣ್ಣ ಮತ್ತು ಮಧ್ಯಮ ಉದ್ಯಮ ವಲಯದ ಜೊತೆ ಸಂಬಂಧವನ್ನು ಇಟ್ಟುಕೊಳ್ಳುವುದು, 'ಭಾರತದಲ್ಲಿಯೇ ತಯಾರಿಸಿ' ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುವುದು, ಕೌಶಲವನ್ನು ಅಭಿವೃದ್ಧಿಪಡಿಸಲು ಮುಂದಿನ ಹತ್ತುವರ್ಷಗಳಲ್ಲಿ ಅನುಸರಿಸಬೇಕಾದ ಕ್ರಮಗಳಿಗೆ ಮಾರ್ಗಸೂಚಿಯನ್ನು ಸಿದ್ಧಪಡಿಸುವುದು, ಸಮುದಾಯ ಕಾಲೇಜು ಜಾಲವನ್ನು ಸ್ಥಾಪಿಸುವುದು, ವಿವಿಧ ಉದ್ಯೋಗಗಳಿಗೆ ವಿಶಿಷ್ಟವಾದ ತರಬೇತಿಯನ್ನು ನೀಡಲು ಮಾರ್ಗದರ್ಶಿ ಸೂತ್ರಗಳನ್ನು ರಚಿಸುವುದು, ಕುಶಲತೆಗಾಗಿ ವಿದ್ಯಾರ್ಥಿವೇತನವನ್ನು ನೀಡುವುದು, ಹಾಗೂ ಈ ಎಲ್ಲಾ ಕಾರ್ಯಕ್ರಮಗಳನ್ನು ಇ–ಆಡಳಿತದ ಅಡಿಯಲ್ಲಿ ಅಳವಡಿಸಿ ಅದರ ಮೂಲಕ ಇವುಗಳಿಗೆ ನೀಡಬೇಕಾದ ಹಣವನ್ನು ವಿತರಿಸುವುದು.

ಇವುಗಳ ಜೊತೆಯಲ್ಲಿಯೇ, ಅದಕ್ಕೆ ಪೂರಕವಾಗಿ ಆಟೊಮೊಬೈಲ್ಸ್, ಮಾಹಿತಿ ತಂತ್ರಜ್ಞಾನ, ಸಂಪರ್ಕ, ಪೂರಕ ವೈದ್ಯಕೀಯ,



ಉತ್ಪಾದನೆ, ನಿರ್ಮಾಣ, ಚಿಲ್ಲರೆ ವ್ಯಾಪಾರ, ವೈದ್ಯಕೀಯ ಸೌಲಭ್ಯ, ಪ್ರವಾಸೋದ್ಯಮ ಮುಂತಾದವುಗಳ ಬೆಳವಣಿಗೆಗೂ ಕ್ರಮವನ್ನು ತೆಗೆದುಕೊಳ್ಳುವುದು ಅತ್ಯಂತ ಅಗತ್ಯ. ಈ ಕಾರ್ಯಕ್ರಮಗಳು ಅಲ್ಪ ಕಾಲದ ಕಾರ್ಯಕ್ರಮಗಳಾಗಿರಬೇಕು, ಹೆಚ್ಚಿನ ಗಮನವನ್ನು ಅವುಗಳ ಮೇಲೆ ಕೇಂದ್ರೀಕರಿಸಬೇಕು, ಹಾಗೂ ವಿವಿಧ ಭಾಷೆಗಳಲ್ಲಿದ್ದು, ಒಟ್ಟಾರೆಯಾಗಿ ಪರಿವರ್ತನಶೀಲವಾಗಿರಬೇಕು.

### 'ಭಾರತದಲ್ಲಿಯೇ ತಯಾರಿಸಿ' ಮತ್ತು ಕೌಶಲ

ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ನಮ್ಮಲ್ಲಿರುವ ಪ್ರಮುಖ ಸಂಸ್ಥೆಗಳಿಗೆ ಹಣದ ಹೊಳೆಯೇ ಹರಿಯುತ್ತಿದೆ. ಈ ಸಂಸ್ಥೆಗಳು ಜ್ಞಾನಕ್ಷೇತ್ರಕ್ಕೆ ಅಲ್ಪಸ್ವಲ್ಪ



ಕೊಡುಗೆಯನ್ನು ನೀಡುತ್ತಿರುವುವಾದರೂ, ಅವುಗಳು ಉದ್ಯೋಗಾವಕಾಶಗಳನ್ನು ಸೃಷ್ಟಿಸುವಲ್ಲಿ ಸಹಾಯವನ್ನು ಮಾಡುತ್ತಿವೆಯೇ ಮತ್ತು ಆ ಸಂಸ್ಥೆಗಳ ಪೂರ್ವನಿರ್ಧಾರಿತ ಮನೋಭಾವವನ್ನು ಪುನರ್ವಿಮರ್ಶಿಸಬೇಕಾದ ಅಗತ್ಯವಿದೆಯೇ?

ಪ್ರತಿವರ್ಷವೂ ಸಾವಿರಾರು ಡಾಕ್ಟರೇಟ್‌ಗಳನ್ನು ಪಡೆಯುವವರ ಆವಶ್ಯಕತೆಯಿದೆ, ಆದರೆ ಅಷ್ಟರಿಂದಲೇ ಉದ್ದಿಮೆಗಳ ಅಗತ್ಯವು ಪೂರೈಸುತ್ತಿಲ್ಲ. ಕೌನ್ಸಿಲ್ ಆಫ್ ಸೈಂಟಿಫಿಕ್ ಮತ್ತು ಇಂಡಸ್ಟ್ರಿಯಲ್ ರಿಸರ್ಚ್, ಡಿಫೆನ್ಸ್ ಅಂಡ್ ಡೆವೆಲಪ್‌ಮೆಂಟ್ ಸಂಸ್ಥೆಗಳ ಪ್ರಯೋಗಾಲಯಗಳು, ಐಐಟಿಗಳು ಉದ್ಯೋಗನಿರ್ಮಿತಿಗೆ ನೆರವನ್ನು ನೀಡುವಂತಹ ಸಂಶೋಧನೆಗಳನ್ನು ಕೈಗೆತ್ತಿಕೊಳ್ಳಬೇಕೆಂಬ ಸ್ಪಷ್ಟ ನಿರ್ದೇಶನಗಳನ್ನು ನೀಡಬೇಕು. ಹಲವಾರು ಬೌದ್ಧಿಕ ಆಸ್ತಿಯ ಹಕ್ಕು – (ಏಕಸ್ವಾಮ್ಯ) – ಉದ್ಯಮಶೀಲರ ಕೇಂದ್ರಗಳನ್ನು ಈ ಮೇಲಿನ ಪ್ರತಿಯೊಂದು ಸಂಸ್ಥೆಯಲ್ಲಿಯೂ ತೆರೆದು ಅವುಗಳನ್ನು ಅಭಿವೃದ್ಧಿಪಡಿಸಬೇಕು. ಹೀಗೆ ಮಾಡುವುದು ಸಂಶೋಧನೆಯ ಶಕ್ತಿಗೆ ಪೂರಕವಾಗುತ್ತದೆ ಮತ್ತು ಉದ್ದೇಶಿತ ರಾಷ್ಟ್ರೀಯ ಕಾರ್ಯಕ್ರಮಕ್ಕೂ ನೆರವಾಗುತ್ತದೆ. ತೈಲಾನ್ವೇಷಣೆ, ಗಣಿಗಾರಿಕೆ, ಕೃಷಿ, ವಿದ್ಯುತ್, ಜಲಸಂಪನ್ಮೂಲಗಳು, ಮೂಲಭೂತ ಸೌಕರ್ಯಗಳು ಇಂತಹ ಕ್ಷೇತ್ರಗಳ ಅಭಿವೃದ್ಧಿಯು ಆದ್ಯತೆಯನ್ನು ಪಡೆಯಬೇಕು ಮತ್ತು ಇವುಗಳಿಗೆ ಅಗತ್ಯವಾದ ಧನಸಹಾಯವು ಹರಿದುಬರಬೇಕು.

ನಂತರದ ಆದ್ಯತೆಯು ಪರಿಸರ, ಹವಾಮಾನದ ಬದಲಾವಣೆ, ಶಕ್ತಿಯ ಮೂಲ, ಜೀವವಿಜ್ಞಾನ, ಬಯೋಇಂಜಿನಿಯರಿಂಗ್, ವಂಶವಾಹಿಕ್ಷೇತ್ರ ಮೊದಲಾದ ಕ್ಷೇತ್ರಗಳಲ್ಲಿ ಹೊಸ ಆವಿಷ್ಕಾರಗಳ ಮೂಲಕ ನಿರಂತರವಾದ ಅಭಿವೃದ್ಧಿಯನ್ನು ಸಾಧಿಸುವುದಾಗಿರಬೇಕು.

ಈ ಹೊಸ ಆವಿಷ್ಕಾರಗಳು ಈ ಹಿಂದೆ ಹೇಳಿದ ವಿವಿಧ ಕ್ಷೇತ್ರಗಳ ಅಡಿಯಲ್ಲಿ ಅಗತ್ಯವಾದ ಇತರ ಚಟುವಟಿಕೆಗಳನ್ನು ಮುನ್ನಡೆಸಬೇಕು. ಸರ್ಕಾರವು ಕೈಗೆತ್ತಿಕೊಂಡಿರುವ ಒಂದು ನೂರು ಮಾದರಿ ನಗರಗಳ ಯೋಜನೆಯು ಈ ದಿಕ್ಕಿನಲ್ಲಿ ಇಟ್ಟಿರುವ ಅತ್ಯಂತ ಪ್ರಮುಖವಾದ ಹೆಜ್ಜೆಯಾಗಿದೆ. ಇದರಿಂದ ಮೂಲಭೂತ ಆವಶ್ಯಕತೆಗಳ ವಲಯವನ್ನು ಪುನಶ್ಚೇತನಗೊಳಿಸುವುದು ಮತ್ತು ತನ್ಮೂಲಕ ಉದ್ಯೋಗದ ಮಾರುಕಟ್ಟೆಯನ್ನು ಅಭಿವೃದ್ಧಿಗೊಳಿಸುವುದು ಸಾಧ್ಯವಾಗುತ್ತದೆ. ಇದು ಕೌಶಲದ ಬೇಡಿಕೆಯಿರುವ ಮಾರುಕಟ್ಟೆಗೆ ಪುನಶ್ಚೇತನವನ್ನು ನೀಡುತ್ತದೆ.

ರಕ್ಷಣಾವಲಯಕ್ಕೆ ಸಂಬಂಧಿಸಿದ ಕಾಂಬ್ಯಾಟ್ ರೆಕವರಿ ವೆಹಿಕಲ್, ಚಾಲಕರಹಿತ ವಿಮಾನಗಳು, ಸ್ನೋ ಮೊಬೈಲ್‌ಗಳು, ಬುಲೆಟ್ ಪ್ರೂಫ್ ಅಂಗಿಗಳು, ಸ್ವಯಂಚಾಲಿತ ಆಯುಧಗಳ ವ್ಯವಸ್ಥೆ ಮೊದಲಾದ ಯಂತ್ರಸಾಮಗ್ರಿಗಳನ್ನು ಅಂತರ್ದೇಶೀಯವಾಗಿ ಉತ್ಪಾದಿಸುವ ಹಾಗೂ ಆಮದು ವಸ್ತುಗಳನ್ನು ಸ್ಥಳೀಯವಾಗಿಯೇ ಉತ್ಪಾದಿಸುವ



ಸಲುವಾಗಿ ಇಎಂಇ ಶಾಲೆಗಳು, ಡಿಫೆನ್ಸ್ ಅಂಡ್ ಡೆವೆಲಪ್‌ಮೆಂಟ್ ಸಂಸ್ಥೆಯ ಪ್ರಯೋಗಾಲಯಗಳು, ಪ್ರಮುಖ ಸಂಸ್ಥೆಗಳು ಹಾಗೂ ಆಯ್ದ ಕೈಗಾರಿಕೆಗಳೊಡನೆ ಸೂಕ್ತವಾದ ಸಹಯೋಗವನ್ನು ಮಾಡಿಕೊಳ್ಳುವುದು ಮುಂದಿನ ಹೆಜ್ಜೆಯಾಗುತ್ತದೆ.

ಕಾಂಬ್ಯಾಟ್ ರೆಕವರಿ ವೆಹಿಕಲ್ ವ್ಯವಸ್ಥೆಯನ್ನು ಯಾಂತ್ರಿಕ, ವಿದ್ಯುತ್, ನಿಯಂತ್ರಣ ಎಂದು ನಿರ್ದಿಷ್ಟ ಉಪವಿಭಾಗಳನ್ನಾಗಿಸಬಹುದು. ನಮಗೆ ಅಗತ್ಯವಾದ ಉಪವ್ಯವಸ್ಥೆಗಳನ್ನು ರಾಷ್ಟ್ರೀಯ ಕೌಶಲ ವಿಶ್ವವಿದ್ಯಾನಿಲಯದ ಉಪ ಕೇಂದ್ರಗಳು ಹಾಗೂ ಆಯ್ದ ಕೈಗಾರಿಕೆಗಳು ಪುನರ್ನಿರ್ಮಿಸಬಹುದು.

ಈ ವಿಶ್ವವಿದ್ಯಾನಿಲಯವು ಎಲ್ಲಾ ಉಪಕೇಂದ್ರಗಳ ಉತ್ಪನ್ನವನ್ನು ಒಂದುಗೂಡಿಸಿ ನಮಗೆ ಅಗತ್ಯವಿರುವ ಆಮದಿನ ಬದಲಿಯನ್ನು ನಿರ್ಮಿಸಬಹುದು / ಸ್ಥಳೀಯವಾಗಿ ಉತ್ಪಾದನೆಯನ್ನು ಕೈಗೆತ್ತಿಕೊಳ್ಳುವಂತೆ ಮಾಡಬಹುದು. ಈ ವಿಶ್ವವಿದ್ಯಾನಿಲಯವು ಭವಿಷ್ಯದ ತಂತ್ರಜ್ಞಾನ, ಶೀಘ್ರವಾದ ಆವಿಷ್ಕಾರಗಳು, ಸ್ಥಳೀಯವಾಗಿ ಉತ್ಪಾದಿಸುವ ಸಾಧ್ಯತೆಗಳು ಮೊದಲಾದ ಕ್ಷೇತ್ರಗಳಲ್ಲಿ ಆಗಬಹುದಾದ ಮುಂದಿನ ಬೆಳವಣಿಗೆಯನ್ನು ಅಂದಾಜಿಸಬಹುದು, ಹಾಗೂ ಈ ಉದ್ದೇಶಕ್ಕಾಗಿ ಕ್ಯಾಲಿಫೋರ್ನಿಯಾ ಸ್ಟೇಟ್ ವಿಶ್ವವಿದ್ಯಾನಿಲಯ, ಮ್ಯಾಸಾಚ್ಯುಸೆಟ್ಸ್



ತಾಂತ್ರಿಕ ಶಿಕ್ಷಣ ಸಂಸ್ಥೆ, ಸ್ಟಾನ್‌ಫೋರ್ಡ್, ಇಂಪೀರಿಯಲ್ ಕಾಲೇಜು, ಹಮ್‌ಬೋಲ್ಟ್ ವಿಶ್ವವಿದ್ಯಾನಿಲಯ, ಹೆಲ್ಮ್‌ಹೋಲ್ಟ್ಸ್ ಮೊದಲಾದ ವಿಶ್ವದ ಪ್ರತಿಷ್ಠಿತ ಸಂಸ್ಥೆಗಳೊಡನೆ ಸಹಯೋಗವನ್ನು ಹೊಂದಬಹುದು.

ಈ ವ್ಯವಸ್ಥೆಯಿಂದಾಗುವ ಪ್ರಯೋಜನಗಳೆಂದರೆ – ಹೊಸ ಉದ್ಯೋಗಾವಕಾಶಗಳನ್ನು ಮತ್ತು ಹೊಸ ಕೌಶಲದ ಕ್ಷೇತ್ರದಲ್ಲಿ ಪ್ರವರ್ತನೆಯನ್ನು ಅಪಾರ ಪ್ರಮಾಣದಲ್ಲಿ ಸೃಜಿಸುವ ಚೈತನ್ಯವನ್ನು ಹೊಂದುವುದು, ವಿದೇಶಿ ವಿನಿಮಯದಲ್ಲಿ ಹೇರಳವಾದ ಉಳಿತಾಯ, ಸ್ಥಳೀಯರಲ್ಲಿ ಅವರ ಸಾಮರ್ಥ್ಯದ ಬಗೆಗೆ ವಿಶ್ವಾಸವನ್ನು ಪುನರುಜ್ಜೀವನಗೊಳಿಸುವುದು, ಸ್ವಾವಲಂಬನೆಯನ್ನು ಸಾಧಿಸುವುದು, ಅಲ್ಲದೆ



ವಿಶ್ವದಲ್ಲಿನ ಇತರ ದೇಶಗಳ ಎದುರಿನಲ್ಲಿ ಆತ್ಮವಿಶ್ವಾಸವನ್ನು ತುಂಬಿಕೊಂಡು ತಲೆಎತ್ತಿನಿಲ್ಲಬಲ್ಲಂತಹ ಮಹಾನ್ ದೇಶವಾಗಿ ನಿಲ್ಲುವುದು.

ಸಮಾಜ ಸುಧಾರಣೆ, ಈ ಹಿಂದೆ ತುಳಿಯಲ್ಪಟ್ಟವರ ಆರ್ಥಿಕ ಪ್ರಗತಿ, ಮತ್ತು ಸ್ಥಳೀಯರ ಸಾಂಸ್ಕೃತಿಕ ವೈವಿಧ್ಯಗಳ ರಕ್ಷಣೆಗೆ ಗಮನವನ್ನು ನೀಡಬೇಕಾಗಿರುವ ಸಮಾನತಾವಾದಿ ಸಮಾಜದಲ್ಲಿ ಎಲ್ಲರ ಉದ್ಧಾರವನ್ನೂ ದೃಷ್ಟಿಯಲ್ಲಿಟ್ಟುಕೊಂಡಿರಬೇಕಾಗುತ್ತದೆ. ಇದು ವಾಸ್ತವವಾಗಿ ಸಂಭವಿಸಬೇಕಾದರೆ, ದೇಶದ ಪ್ರತಿಯೊಂದು ಮಗುವೂ ಶಿಕ್ಷಣವನ್ನು ಪಡೆಯಬೇಕು ಮತ್ತು ತನ್ನ ಯೋಗ್ಯತೆಗೆ ತಕ್ಕಂತಹ ಉದ್ಯೋಗವನ್ನು ಗಳಿಸಿಕೊಳ್ಳಬೇಕು. ರಾಷ್ಟ್ರೀಯ ಕೌಶಲ ಆಯೋಗವು ಇದನ್ನು ಖಂಡಿತವಾಗಿಯೂ ಸಾಕಾರಗೊಳಿಸುತ್ತದೆ. ನಮ್ಮ ತರುಣರು ಯಾವ ಆರ್ಥಿಕ ಹಿನ್ನೆಲೆಯಿಂದ ಬರುತ್ತಾರೆಂಬುದನ್ನು ಕುರಿತು ನಾವು ಆಲೋಚಿಸಬೇಕು. ಪ್ರವರ್ಧಮಾನಕ್ಕೆ ಬರಲು ಹವಣಿಸುತ್ತಿರುವ ಅವರಿಗೆ ಉದ್ಯೋಗವನ್ನು ಪಡೆಯಲು ಅಗತ್ಯವಾದ ಕೌಶಲವನ್ನು ಗಳಿಸಿಕೊಳ್ಳುವ ಸಾಮರ್ಥ್ಯವನ್ನು ತುಂಬಲು ಸ್ವಲ್ಪಮಟ್ಟಿನ ಆರ್ಥಿಕ ನೆರವನ್ನು ನಾವು ನೀಡಬೇಕು. ಇಲ್ಲಿ ನಾನು ನಮ್ಮ ಯೋಜಕರಿಗೆ ಒಂದು ಮಾದರಿಯನ್ನು ಸೂಚಿಸಬಯಸುತ್ತೇನೆ. ತಾಂತ್ರಿಕ ಶಿಕ್ಷಣ ವಲಯದಲ್ಲಿ ಇರುವ 11,500 ಕ್ಕೂ ಹೆಚ್ಚು ಸಂಸ್ಥೆಗಳ ಪೈಕಿ ನಾವು ರಾಷ್ಟ್ರೀಯ ಕೌಶಲ ಶಿಕ್ಷಣದ ಹಂದರದ ಉಪಾಂಗವಾಗಿ ಸಮುದಾಯ ಕಾಲೇಜ್ ಜಾಲದ ಅಡಿಯಲ್ಲಿ 5,000 ಸಂಸ್ಥೆಗಳನ್ನು ವೃತ್ತಿಪರ ಶಿಕ್ಷಣ ಮತ್ತು ತರಬೇತಿಯ ಕಾರ್ಯಕ್ರಮಗಳನ್ನು ಅಳವಡಿಸಲು ಆಯ್ದುಕೊಂಡರೆ ಅದೇ ಅಪಾರವಾದ ಅವಕಾಶಗಳಿಗೆ ಬಾಗಿಲನ್ನು ತೆರೆಯುತ್ತದೆ. ಶಾಲೆಗಳಲ್ಲಿ ಸೇರಿಸಲ್ಪಟ್ಟ ವೃತ್ತಿಪರ ಶಿಕ್ಷಣವನ್ನು ಪ್ರತಿಪಾದಿಸುವ ಹೊಸ ವಿಭಾಗವು ಸಾಮಾನ್ಯ ಶಿಕ್ಷಣಾವಶ್ಯಕತೆಗೆ (ಜನರಲ್ ಎಜುಕೇಷನ್ ರಿಕ್ವೈರ್‌ಮೆಂಟ್) ಅದ್ಭುತವಾದ ಕಾಣಿಕೆಯನ್ನು ನೀಡಬಲ್ಲುದು ಮತ್ತು ಕುಶಲತೆಯನ್ನು ಹೊಂದಿದ ತರುಣರನ್ನು ಈ ಶಾಲಾ ಕಾಲೇಜುಗಳು ಒದಗಿಸಬಲ್ಲುವು.

ಇದೇ ಮಾದರಿಯನ್ನು ಇನ್ನೂ ವಿಸ್ತೃತಗೊಳಿಸಿ, ಸಾಮರ್ಥ್ಯದ ಆಧಾರದ ಮೇಲೆ ಕನಿಷ್ಠ 100 ವಿದ್ಯಾರ್ಥಿಗಳಿಗೆ, ಒಂದು ತಂಡದಲ್ಲಿ 50 ಜನರಿರುವಂತೆ, ದಿನಕ್ಕೆ ಮೂರುಗಂಟೆ, ವಾರದಲ್ಲಿ ಮೂರು ದಿನ ವರ್ಷದಲ್ಲಿ 48 ವಾರಗಳ ತರಬೇತಿಯನ್ನು ನೀಡಿದರೆ ಪ್ರತಿ ವರ್ಷವೂ ಸುಮಾರು 50,000 ವಿದ್ಯಾರ್ಥಿಗಳನ್ನು ತಯಾರುಮಾಡಬಹುದು.

ಇದು ಜಿಇಆರ್‌ನಲ್ಲಿ 5 ಪಾಯಿಂಟ್‌ಗಳ ವೃದ್ಧಿಯನ್ನು ಉಂಟುಮಾಡುತ್ತದೆ. ಈ ವಿದ್ಯಾರ್ಥಿಗಳಲ್ಲಿ ಬಡವರು ಎಂದು ಪರಿಗಣಿಸಲ್ಪಟ್ಟವರಿಗೆ ದಿನಕ್ಕೆ 50 ರೂಗಳಂತೆ ಅವರ ಓಡಾಟ,





ಆಹಾರ ಮೊದಲಾದವುಗಳಿಗೆಂದು ನೀಡಿದರೆ, ನೀಡಬಹುದಾದ ಒಟ್ಟು ಮೊತ್ತ ವಾರ್ಷಿಕವಾಗಿ 720 ಕೋಟಿಯಾಗುತ್ತದೆ. ಈ ಶಿಕ್ಷಣಕ್ಕಾಗಿ ನೀಡುವ ವಾರ್ಷಿಕ 150 ಕೋಟಿ ಧನಸಹಾಯವನ್ನೂ ಪರಿಗಣಿಸಿದರೆ ಶಿಕ್ಷಣ ಒಟ್ಟು ವಾರ್ಷಿಕ ವೆಚ್ಚ 870 ಕೋಟಿಯಾಗುತ್ತದೆ.

ಈ ಶಿಕ್ಷಣವು ತಂದುಕೊಡಬಹುದಾದ ರಾಜಕೀಯ ಲಾಭಗಳನ್ನು ಪರಿಗಣಿಸದೆ ಕೇವಲ ಉದ್ಯೋಗಾವಕಾಶಗಳನ್ನು ಗಮನದಲ್ಲಿರಿಕೊಂಡರೂ ಈ ಅಂದಾಜು ಮೊತ್ತವು ಖಂಡಿತವಾಗಿಯೂ ಅತ್ಯಲ್ಪವೆಂದು ಹೇಳಬಹುದು. ನಮ್ಮ ಯುವ ಜನಾಂಗದಲ್ಲಿ ಉತ್ಸಾಹವನ್ನು ತುಂಬಿ, ಅವರು ತಮ್ಮ ಆದರ್ಶಗಳನ್ನು ಸಾಧಿಸುವಂತಹ ಛಲವನ್ನು ಸಾಧಿಸಲು ನೆರವಾದರೆ, ಅವರನ್ನು ವಿಚ್ಛಿದ್ರಕಾರಿ ಶಕ್ತಿಗಳ ಹಿಡಿತದಿಂದ ತಪ್ಪಿಸಿ, ದೇಶದ ಆರ್ಥಿಕತೆಯನ್ನು ಕಟ್ಟುವಲ್ಲಿ ಅವರನ್ನು ಒಳಕೊಳ್ಳುವಂತೆ ಮಾಡಿದರೆ ಇದರಿಂದ ಅವರ ಭವಿಷ್ಯ, ದೇಶದ ಆರ್ಥಿಕ ಭವಿಷ್ಯ ಎರಡೂ ಉತ್ತಮಗೊಳ್ಳುತ್ತವೆ. ಈ ಸಲಹೆಯ ಹಿಂದೆ ಯಾವ ರಹಸ್ಯ ಉದ್ದೇಶಗಳೂ ಇಲ್ಲ.

ಕೇವಲ ಜನಸಂಖ್ಯೆಯ ಆಧಿಕ್ಯವೇ ನಮಗೆ ಭಾಗ್ಯದ ಬಾಗಿಲನ್ನು ತೆರೆಯುತ್ತದೆ ಎಂದು ಎಣಿಸುತ್ತಾ ಕೂರುವುದು ಬೇಡ. ಅದರ ಬದಲಿಗೆ ಈ ಗುರಿಯತ್ತ ಕೊಂಡೊಯ್ಯುವ ಮಾರ್ಗಗಳನ್ನು, ಅದರತ್ತ ವೇಗವಾಗಿ ಹಾಗೂ ಸುರಕ್ಷಿತವಾಗಿ ಚಲಿಸುವ ವಾಹನಗಳನ್ನು ಕಂಡುಹಿಡಿಯೋಣ. ಎಲ್ಲದಕ್ಕೂ ಮುಖ್ಯವಾಗಿ ಪ್ರಸಕ್ತ ಇರುವ ವ್ಯವಸ್ಥೆಗಳನ್ನು ಭದ್ರಪಡಿಸುವತ್ತ, ಮತ್ತು ಉಪಾಯಕೌಶಲವುಳ್ಳ ಆವಿಷ್ಕಾರಗಳತ್ತ ಗಮನವನ್ನು ಹರಿಸಿ ಹೊಸದರತ್ತ ಹೆಜ್ಜೆಯನ್ನು ಹಾಕೋಣ. ಭವ್ಯ ರಾಷ್ಟ್ರವನ್ನು ಮುನ್ನಡೆಸುವುದರಲ್ಲಿ ಕೌಶಲ ಹಾಗೂ ಕುಶಲತೆಯನ್ನು ಕಲಿಸುವುದ ಇದು ಒಂದು ಮಹಾನ್ ಪ್ರಯತ್ನವಾಗುತ್ತದೆ. ❑

# ಸಂಪನ್ಮೂಲ ಮತ್ತು ಸಾಮರ್ಥ್ಯ

* ಪ್ರೊ. ಮನೋಜ್ ಜೋಷಿ
** ಡಾ. ಅರುಣ್ ಬಹದ್ದೂರಿಯ
*** ಡಾ. ಶೈಲಜ ದೀಕ್ಷಿತ್




> ಜಾಗತಿಕ ಮಟ್ಟದಲ್ಲಿ ಜನಸಂಖ್ಯೆ ಶೀಘ್ರಗತಿಯಲ್ಲಿ ವೃದ್ಧಾಪ್ಯದ ಕಡೆಗೆ ನಡೆಯುತ್ತಿದೆ. ಆದರೆ ಭಾರತ ದೇಶದ ಜನಸಂಖ್ಯೆ ವಿಶ್ವದ ಹೆಚ್ಚು ಕಿರಿಯರನ್ನು ಹೊಂದಿರುವುದರಿಂದ ಬಹಳ ಅನುಕೂಲವಿದೆ. ಆದರೆ ಶೇಕಡಾ 75 ರಷ್ಟು ಭಾರತದ ಜನಸಂಖ್ಯೆ ಕೌಶಲ್ಯರಹಿತವಾಗಿದೆ ಎಂಬುದು ವಿಷಾದನೀಯ.

ಆರ್ಥಿಕ ಬೆಳವಣಿಗೆಯ ಸಂದರ್ಭದಲ್ಲಿ, ಆರ್ಥಿಕ ಪ್ರಗತಿಯ ಬೆಂಬಲದೊಂದಿಗೆ ಹೇರಳವಾದ ಯುವಶಕ್ತಿ ಹೊಂದಿರುವ ಭಾರತದಂತಹ ದೇಶದಲ್ಲಿ ಕೌಶಲ್ಯ ಅಭಿವೃದ್ಧಿಗೆ ಅಗ್ರ ಆದ್ಯತೆ ನೀಡುವುದು ಕಡ್ಡಾಯವಾಗಿದೆ. ಆರ್ಥಿಕ ಅಭಿವೃದ್ಧಿಯನ್ನು ಎರಡು ವಿಧಾನಗಳಿಂದ ಸಾಧಿಸಬಹುದು – ಇರುವ ವ್ಯವಸ್ಥೆಯ ನೈಪುಣ್ಯತೆ ಮತ್ತು ಕಾರ್ಯಕ್ಷಮತೆಯನ್ನು ಹೆಚ್ಚಿಸುವುದು ; ಮತ್ತೊಂದು ಯುವಶಕ್ತಿಗೆ ಒಂದು ಹೊಸ ವಾತಾವರಣವನ್ನು ಹುಟ್ಟುಹಾಕಿ, ತಮ್ಮ ಸ್ವಯಂ ಉದ್ಯೋಗ ಮತ್ತು ವಾಣಿಜ್ಯೋದ್ಯಮಕ್ಕೆ ಬೇಕಾದ ಚೌಕಟ್ಟನ್ನು ಸೃಷ್ಟಿಸುವುದು. ಇದರಿಂದ ದೇಶದ ಆರ್ಥಿಕತೆಯು ಬೆಳೆಯಲು ಸೂಕ್ತ ವಾತಾವರಣ ಉಂಟಾಗುತ್ತದೆ. ಎರಡರಲ್ಲಿಯೂ ತಮ್ಮದೇ ಆದ ಧನಾತ್ಮಕ ಮತ್ತು ಋಣಾತ್ಮಕ ಅಂಶಗಳಿವೆ. ಲೇಖನದಲ್ಲಿ ಕೌಶಲ್ಯ ಅಭಿವೃದ್ಧಿಯ ಕುರಿತು ಚರ್ಚಿಸೋಣ. ಆದಾಗ್ಯೂ ಆರ್ಥಿಕ ಅಭಿವೃದ್ಧಿಯ ಕಲ್ಪನೆಯಡಿಯಲ್ಲಿ ಇರುವ ಸಂಪನ್ಮೂಲಗಳನ್ನು ಗರಿಷ್ಠ ಮಟ್ಟದಲ್ಲಿ ಉಪಯೋಗಿಸಿಕೊಂಡು ಕೌಶಲ್ಯಾಭಿವೃದ್ಧಿಗೆ ಒತ್ತು ನೀಡಬೇಕಾಗಿದೆ.

### ಸಾಂಸ್ಥಿಕ ಪ್ರಯತ್ನಗಳು ಮತ್ತು ಕಲಿತ ಪಾಠಗಳು

ಇತ್ತೀಚಿನ ವರ್ಷಗಳಲ್ಲಿ ಭಾರತ ಸರ್ಕಾರ, ಬೃಹತ್ ಬಂಡವಾಳ ಹೂಡಿಕೆ ಮಾಡಲು ಉತ್ಸುಕವಾಗಿದೆ. ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ ಮತ್ತು ರಾಷ್ಟ್ರೀಯ ನೈಪುಣ್ಯ ಅಭಿವೃದ್ಧಿ ನಿಗಮಗಳ ಮೂಲಕ ಬೃಹತ್ ಬಡತನ ನಿರ್ಮೂಲನಾ ಕಾರ್ಯಕ್ರಮಗಳನ್ನು ತೀವ್ರಗೊಳಿಸಿದೆ. ಮೇಕ್ ಇನ್ ಇಂಡಿಯಾ ಯೋಜನೆಯ ಒಟ್ಟಾರೆ ಗುರಿ ಸಮೃದ್ಧಿ ಮತ್ತು ಪ್ರಗತಿಯನ್ನು ಸಾಧಿಸುವುದಾಗಿದೆ. ವಾಸ್ತವವಾಗಿ ಇಂತಹ ಕಾರ್ಯಕ್ರಮಗಳು ಸಂಪನ್ಮೂಲಗಳನ್ನು ಗರಿಷ್ಠ ರೀತಿಯಲ್ಲಿ ಬಳಸಿಕೊಳ್ಳುವುದೇ ಅಲ್ಲದೆ ಅಗತ್ಯಗಳಿಗೆ ತಕ್ಕಂತೆ ಸಂಶೋಧಿಸಿ ಬದಲಾವಣೆಗಳನ್ನು ತರಲು ಇಂಬು ನೀಡುತ್ತವೆ. ಸ್ಕಿಲ್–ಇಂಡಿಯಾ ಪ್ರಯತ್ನ ಈ ದಿಕ್ಕಿನಲ್ಲಿ ಒಂದು ಸ್ಥಿರವಾದ ಪ್ರಯತ್ನ. ಜನಸಾಮಾನ್ಯರ ಜೀವನ ಮತ್ತು ಸಂರಕ್ಷಣೆಯ ವಿಷಯಕ್ಕೆ ಬಂದಾಗ ಕೌಶಲ್ಯ–ಆಧಾರಿತ ಕಲಿಕೆಯೇ ಮುಖ್ಯವಾಗುತ್ತದೆ. ಜೀವನಾಧಾರಿತ ಸೂಚ್ಯಂಕ, ಅಂದರೆ ಕೌಶಲ್ಯ, ಅವಕಾಶ ಮತ್ತು ಲಭ್ಯತೆಯನ್ನು ಒಳಗೊಂಡು ಯಶಸ್ವಿಯಾದ ಹೊಸ ಮಾರ್ಗಗಳನ್ನು ಕಂಡುಕೊಂಡು ಬೆಳೆಯುವುದು. ಕೌಶಲ್ಯ ಎಂದೂ ಅದರ ಪಾಡಿಗೆ ಬರುವುದಿಲ್ಲ. ಬದಲಾಗಿ ಅವಿಶ್ರಾಂತ ಶ್ರಮ ಮತ್ತು ಅವಕಾಶಗಳನ್ನು ಸೂಕ್ತವಾಗಿ ಬಳಸಿಕೊಂಡು ಬೆಳೆಯುವುದರಿಂದ ಬರುತ್ತದೆ. ಮುಂದುವರೆಯುವ ಕೌಶಲ್ಯಾಭಿವೃದ್ಧಿಯ ಈ ಚರ್ಚೆಯಲ್ಲಿ, ಉದ್ಯಮಶೀಲತೆಗೆ ಸಂಬಂಧಿಸಿದ ಕೌಶಲ್ಯಾಭಿವೃದ್ಧಿಯ ಮೇಲೆ ಹೆಚ್ಚಿನ ಒತ್ತು ನೀಡಲಾಗಿದೆ. ಸಾಹಸೋದ್ಯಮಿ ಬಂಡವಾಳದಾರರು ಮತ್ತು ಇತರೆ ಹೂಡಿಕೆದಾರರು ನವೀನತಮ ಅವಕಾಶಗಳತ್ತ ಮುಖಮಾಡಿ, ಅಲ್ಲಿನ ವ್ಯಾಪಾರ–ಉದ್ಯಮಗಳನ್ನು ಯಶಸ್ವಿಯಾಗಿ ನಿಭಾಯಿಸಲು ಸಜ್ಜಾಗಿ

ಪ್ರಾಧ್ಯಾಪಕರು, ಅಮಿಟಿ ವಿಶ್ವವಿದ್ಯಾಲಯ, ಲಕ್ನೊ, Email : * manoj.m.joshi@gmail.com ** drarunbhadauria@gmial.com *** shailjadixit1@gmail.com

ಕಾಯುತ್ತಿದ್ದಾರೆ. ಆದರೂ ದುಡಿಸಿಕೊಳ್ಳಬಲ್ಲ ಸಂಪನ್ಮೂಲಗಳನ್ನು ಗುರುತಿಸಲಾಗುತ್ತಿಲ್ಲ. ಆರ್ಥಿಕ ಪ್ರಗತಿ, ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಸಾಕ್ಷಾತ್ಕಾರಗೊಳಿಸಲು ಸಾಮಾಜಿಕ ನಿರ್ಗತಿಕತೆ ಮತ್ತು ಇತರೆ ಸಾಮಾಜಿಕ ಅಂಶಗಳೇ ಅಡ್ಡಿಯಾಗಿವೆ.

### ಆರ್ಥಿಕ ಅಭಿವೃದ್ಧಿಯೆಡೆಗೆ ಕೌಶಲ್ಯ ಅಭಿವೃದ್ಧಿಯ ಪಾತ್ರ

ನೈಪುಣ್ಯ ಅಭಿವೃದ್ಧಿಯನ್ನು ತರಬೇತಿ ಅಥವಾ ಅನುಭವದ ಮೂಲಕ ಸ್ವಾಧೀನಪಡಿಸಿಕೊಂಡ ಕುಶಲತೆ ಎನ್ನಬಹುದು. ಜಾಗತಿಕ ನಾಯಕರು ಸಹಾ ಅವರವರ ರಾಷ್ಟ್ರೀಯ ನೀತಿಗಳ ಮೂಲಕ ಕೌಶಲ್ಯ ಅಭಿವೃದ್ಧಿಯ ಪಾತ್ರ ಮತ್ತು ಪರಿಣಾಮಗಳನ್ನು ಒಪ್ಪಿಕೊಂಡಿದ್ದಾರೆ. ಇದರಿಂದ ವ್ಯಕ್ತಿಗಳ ವೈಯಕ್ತಿಕ ಸಾಮರ್ಥ್ಯ ಶಕ್ತಿಯುತವಾಗುತ್ತದೆ ಮತ್ತು ಮಾರುಕಟ್ಟೆಯ ನಿರೀಕ್ಷೆಗಳಿಗೆ ಅಥವಾ ಬೇಡಿಕೆಗಳಿಗೆ ತಕ್ಕಂತೆ ಉದ್ಯಮಶೀಲತೆಯನ್ನು ಅಳವಡಿಸಿಕೊಂಡು ಬೆಳೆಯಲು ಸಾಮರ್ಥ್ಯ ಹೆಚ್ಚುತ್ತದೆ. ಕೌಶಲ್ಯಾಭಿವೃದ್ಧಿಯ ಪ್ರಾಥಮಿಕ ನಿರ್ಣಾಯಕ ಅಂಶಗಳಲ್ಲದೆ, ಸ್ಪರ್ಧಾತ್ಮಕ ಮಾರುಕಟ್ಟೆಯಲ್ಲಿ ಅವಕಾಶಗಳನ್ನು ಎಷ್ಟು ಸಮರ್ಥವಾಗಿ ಬಳಸಿಕೊಂಡು ಬೆಳೆಯುತ್ತೇವೆ ಎಂಬುದನ್ನು ಸಹ ಗಣನೆಗೆ ತೆಗೆದುಕೊಂಡು ಸವಾಲನ್ನು ಸ್ವೀಕರಿಸಬೇಕಾದ್ದು ಅತ್ಯಗತ್ಯ.

ಅಂತಿಮವಾಗಿ, ದೇಶಗಳ ಭವಿಷ್ಯದ ಸಮೃದ್ಧಿ, ಕಾರ್ಮಿಕರ ಸಂಖ್ಯೆ ಮತ್ತು ಅವರೆಷ್ಟು ಉತ್ಪಾದನಾಶೀಲರಾಗಿದ್ದಾರೆಂಬ ಅಂಶದ ಮೇಲೆ ಅವಲಂಬಿತವಾಗಿದೆ. ಇದು ಅತ್ಯಂತ ಯಶಸ್ವಿ ಅಥವಾ ಪ್ರಗತಿಶೀಲ ರಾಷ್ಟ್ರಗಳ (ಚಂಚಲತೆ, ಅನಿಶ್ಚಿತತೆ, ಸಂಕೀರ್ಣತೆ, ದ್ವಂದ್ವಾರ್ಥತೆ) ಯನ್ನು ಸಮರ್ಥವಾಗಿ ಎದುರಿಸಬಹುದು. ಆದ್ದರಿಂದ ಕೌಶಲ್ಯ ಅಭಿವೃದ್ಧಿಯನ್ನು, ವಿಶಾಲ ಬೆಳವಣಿಗೆ, ಉದ್ಯೋಗ ಮತ್ತು ಅಭಿವೃದ್ಧಿಗೆ ಕೊಂಡಿಯನ್ನು ಕಲ್ಪಿಸಬಹುದು – ಅದೂ ಸರ್ಕಾರದ ಹಸ್ತಕ್ಷೇಪದಿಂದ.

### ಭಾರತಕ್ಕಿರುವ ಸ್ಪರ್ಧಾತ್ಮಕ ಮೊನೆ

2020 ರ ವೇಳೆಗೆ ಪ್ರಪಂಚದಾದ್ಯಂತ ಸುಮಾರು 47 ಮಿಲಿಯನ್ (4.7 ಕೋಟಿ) ಕಾರ್ಮಿಕವರ್ಗದ ಕೊರತೆಯನ್ನು ಎದುರಿಸುತ್ತೇವೆ ಎಂದು ಬೋಸ್ಟನ್ ಕನ್ಸಲ್ಟಿಂಗ್ ಗ್ರೂಪ್‌ನ ಅಧ್ಯಯನ ಒಂದು ತಿಳಿಸುತ್ತದೆ. ಇದರ ಜೊತೆಗೆ ಭಾರತ ಅಭಿವೃದ್ಧಿಯ ಪಥ ವಿಶ್ಲೇಷಿಸುತ್ತಾ ಅದರ ಸಂಭಾವ್ಯ ಅಂಕಿ–ಅಂಶಗಳನ್ನು ಎಲ್ಲ ಕಡೆ ಮುಖ್ಯವಾಗಿ ಬಿಂಬಿಸಲಾಗುತ್ತಿದೆ. ಭಾರತದ ಶೇಕಡಾ 62 ರಷ್ಟು ಜನಸಂಖ್ಯೆ ಕೆಲಸ ಮಾಡುವ **15–59** ವರ್ಷದ ವಯಸ್ಸಿನೊಳಗಿದೆ ಮತ್ತು ಇಂತಹ ಕಾರ್ಮಿಕ ಶಕ್ತಿ ಇರುವ ಅತ್ಯಂತ ಕಿರಿಯ ರಾಷ್ಟ್ರವೂ ಇದಾಗಿದೆ. ಭಾರತದ ಶೇಕಡಾ 54 ರಷ್ಟು ಜನಸಂಖ್ಯೆ 25 ವರ್ಷದ ಕೆಳಗಿದ್ದಾರೆ. 2022ರ ವೇಳೆಗೆ 56 ಮಿಲಿಯನ್ (5.6 ಕೋಟಿ) ಭಾರತೀಯ ಕಾರ್ಮಿಕ ವರ್ಗ ಹೆಚ್ಚುವರಿಯಾಗುತ್ತದೆ. ಇಂದಿನ ಲೆಕ್ಕಾಚಾರದಲ್ಲಿ ನೋಡಿದರೂ ಪ್ರತಿವರ್ಷ ಭಾರತದಲ್ಲಿ 12 ಮಿಲಿಯನ್ ಅಂದರೆ 1.2 ಕೋಟಿ ಯುವ ಜನಾಂಗ ಕಾರ್ಮಿಕ ವರ್ಗವನ್ನು ಸೇರುತ್ತಿದೆ. ಈ ಕಾರ್ಮಿಕ ವರ್ಗಕ್ಕೆ ಸರಿಯಾದ ಕೌಶಲ್ಯಾಭಿವೃದ್ಧಿಯನ್ನು ಮಾಡಿ ಸೂಕ್ತ ರೀತಿಯಲ್ಲಿ ಶಿಕ್ಷಿತರನ್ನಾಗಿ ಪರಿವರ್ತಿಸಿದರೆ ಭಾರತದ್ದೇ ಏಕೆ, ಇಡೀ ಜಾಗತಿಕ ಮಟ್ಟದ ಕಾರ್ಮಿಕ ವರ್ಗದ ಕೊರತೆಯನ್ನು ನೀಗಿಸಬಹುದು.

### ನೀತಿ ಆಯೋಗ / ಯೋಜನಾ ಆಯೋಗದ ನೀತಿ ದಾಖಲೆ 12ನೇ ಪಂಚವಾರ್ಷಿಕ ಯೋಜನೆ

ಇತರ ಏಷ್ಯಾ ದೇಶಗಳಂತೆ, ಭಾರತವೂ ಕಾರ್ಮಿಕ ಮಾರುಕಟ್ಟೆ ಪರಿವರ್ತನೆ ಹಂತಗಳನ್ನು ಹಾದುಹೋಗುತ್ತಿದೆ – ಕೃಷಿಯಿಂದ ಭೂ–ರಹಿತ ಕೃಷಿ, ಗ್ರಾಮೀಣ ಪ್ರದೇಶಗಳಿಂದ ನಗರ ಪ್ರದೇಶಗಳೆಡೆಗೆ, ಅಸಂಘಟಿತತೆಯಿಂದ ಸಂಘಟನೆಯೆಡೆಗೆ, ಸ್ವಯಂ ಉದ್ಯೋಗದಿಂದ ತೃಪ್ತಿದಾಯಕ ಉದ್ಯೋಗದೆಡೆಗೆ ಮತ್ತು ಶಾಲೆಯಿಂದ ಕೆಲಸಕ್ಕೆ. ಭಾರತದ ಜನಸಂಖ್ಯೆಯನ್ನು ಬಹಳ ವರ್ಷಗಳಿಂದ ಒಂದು ಪೀಡೆ ಎಂದು ಪರಿಗಣಿಸಲಾಗಿತ್ತು. ಈಗ ಅದೇ ಜನಸಂಖ್ಯೆ ಒಂದು ಅಪೇಕ್ಷಿತ ಸಂಪತ್ತಾಗಿ ಮಾರ್ಪಡುತ್ತಿದೆ. ಆದರೆ ಅಪೇಕ್ಷಿತ ಸಂಪತ್ತು ಎಂದರೆ ಕೇವಲ ಸಂಖ್ಯೆಯಲ್ಲ; ವಿದ್ಯಾವಂತ, ಕೌಶಲ್ಯಯುತ ಅಥವಾ ಉದ್ಯೋಗಸ್ಥ ಜನಸಂಖ್ಯೆ. ಕಡಿಮೆ ಕಾರ್ಮಿಕ ವೆಚ್ಚ ಮತ್ತು ಅಪಾರವಾದ ಕೌಶಲ್ಯಯುತ ಜನಶಕ್ತಿಗಳೆರಡೂ ಭಾರತದ ವಿಶಿಷ್ಟ ಅನುಕೂಲಗಳು. ಜಾಗತಿಕ ಮಟ್ಟದಲ್ಲಿ ಸ್ಪರ್ಧಾತ್ಮಕವಾಗಿ ಮತ್ತು ಜ್ಞಾನಾಧಾರಿತ ಸಮಾಜವಾಗಿ ರೂಪುಗೊಳ್ಳಲು ಇವೆರಡೂ ನಮಗೆ ಸಹಕಾರಿಯಾಗಿವೆ (ಸಬರ್‌ವಾಲ್–2013).




### ಕೌಶಲ್ಯ ಅಂತರವನ್ನು ತಗ್ಗಿಸುವುದು : ಭಾರತದಲ್ಲಿ ಕೌಶಲ್ಯ ತರಬೇತಿಗಳಿಗಿರುವ ಅವಕಾಶಗಳು

ಜಾಗತಿಕ ಮಟ್ಟದಲ್ಲಿ ಜನಸಂಖ್ಯೆ ಶೀಘ್ರಗತಿಯಲ್ಲಿ ವೃದ್ಧಾಪ್ಯದ ಕಡೆಗೆ ನಡೆಯುತ್ತಿದೆ. ಆದರೆ ಭಾರತ ದೇಶದ ಜನಸಂಖ್ಯೆ ವಿಶ್ವದ ಹೆಚ್ಚು ಕಿರಿಯರನ್ನು ಹೊಂದಿರುವುದರಿಂದ ಬಹಳ ಅನುಕೂಲವಿದೆ. ಶೇಕಡಾ 75 ರಷ್ಟು ಭಾರತದ ಜನಸಂಖ್ಯೆ ಕೌಶಲ್ಯ–ರಹಿತವಾಗಿದೆ ಎಂಬುದು ಗಮನಾರ್ಹ. ವಿಶ್ವ ಆರ್ಥಿಕ ಪ್ರತಿಭಾಶಕ್ತಿಯ ಅಪಾಯ ವರದಿ (ವೆಫ್–2011) ಅಭಿವೃದ್ಧಿಗೊಳ್ಳುತ್ತಿರುವ ಭಾರತ ಮತ್ತು ಬ್ರೆಜಿಲ್‌ನಂತಹ ದೇಶಗಳಿಗೆ ಒಂದು ಎಚ್ಚರಿಕೆಯನ್ನು ಕೊಡುತ್ತದೆ. ಕಡಿಮೆ ಉದ್ಯೋಗಾರ್ಹತೆಯಿಂದ ಅತಿ ದೊಡ್ಡ ಕೌಶಲ್ಯ ಅಂತರವನ್ನು ಎದುರಿಸಬೇಕಾಗುತ್ತದೆ ಎಂಬುದು. ಉದ್ಯಮಗಳಲ್ಲಿ ಅಗತ್ಯವಿರುವ ಕೌಶಲ್ಯಗಳಿಗೂ, ಇಲ್ಲಿನ ಶಿಕ್ಷಣ ವ್ಯವಸ್ಥೆ ನೀಡುವ ಕೌಶಲ್ಯಗಳಿಗೂ ಅಪಾರ ಅಂತರವಿದೆ. ರಾಷ್ಟ್ರೀಯ ಕೌಶಲ್ಯಾಭಿವೃದ್ಧಿ ಮಿಷನ್‌ನ ನಿರಂತರ ಪ್ರಯತ್ನಗಳ ಹೊರತಾಗಿಯೂ 2022 ರ ವೇಳೆಗೆ 500 ಮಿಲಿಯನ್ ಅಂದರೆ 5 ಕೋಟಿ ನುರಿತ ನೌಕರವರ್ಗವನ್ನು ಸಾಧಿಸುವುದು ಒಂದು ಅಗಾಧ ಕೆಲಸವೇ ಸರಿ !!

### ಅವಕಾಶಗಳ ಸದ್ಬಳಕೆ ಮತ್ತು ಆರ್ಥಿಕ ಬೆಳವಣಿಗೆಯಲ್ಲಿ ಅಂತರಗಳು

**1. ಕಡಿಮೆ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ (ಎಲ್.ಡಿ.ಸಿ) ಬದುಕಿನ ವ್ಯವಸ್ಥೆಯಲ್ಲಿರುವ ಕೆಲವು ರಾಚನಿಕ ದುರ್ಬಲತೆಗಳಾದ :** ತಿರುಚಲ್ಪಟ್ಟ ಸಂಪನ್ಮೂಲಗಳ ವಿತರಣೆ, ಭೂಮಿಯ ವಿಘಟನೆ, ಕಳಪೆ ಸಂಪರ್ಕ ವ್ಯವಸ್ಥೆ ಮತ್ತು ಶಿಕ್ಷಣದ ಬಗ್ಗೆ ಅತಿಕಡಿಮೆ ಜಾಗೃತಿ, ಹಿಂದುಳಿತ ಮತ್ತು ಪ್ರತಿಬಂಧಕ ವಿಧಾನಗಳು. ಇವೆಲ್ಲವೂ ಸೇರಿ ಬದುಕಲಾಗದ, ಆರ್ಥಿಕವಾಗಿ ಹಿಂದುಳಿದ

ಮತ್ತು ದುರ್ಬಲ ಬದುಕಿನೆಡೆಗೆ ದಾರಿ ಮಾಡಿ ಕೊಡುತ್ತವೆ.

2. ನೈಸರ್ಗಿಕ ಸಂಪನ್ಮೂಲ ನಿರ್ವಹಣೆ, ಸುಧಾರಿತ ತಂತ್ರಜ್ಞಾನದ ಮೂಲಕ ಸೂಕ್ತ ಬೆಳೆಗಳನ್ನು ಅಳವಡಿಸಿಕೊಳ್ಳುವುದು, ಆರ್ಥಿಕ ಮತ್ತು ರಾಜಕೀಯ ವಿತರಣಾ ವ್ಯವಸ್ಥೆಗಳ ಮಧ್ಯೆ ಇರುವ ಅಂತರವನ್ನು ಮುಚ್ಚುವುದು, ವ್ಯಾಪಾರೋದ್ಯಮಗಳಲ್ಲಿ ಪರಿಣಾಮಕಾರಿಯಾಗಿ ವೆಚ್ಚವನ್ನು ಕಡಿತಗೊಳಿಸುವುದು, ಕೆಲವು ಅತ್ಯಗತ್ಯವಾದ ಕ್ರಮಗಳು.

3. ಪರ್ಯಾಯ ಆದಾಯ–ಗಳಿಕೆ ಚಟುವಟಿಕೆಗಳನ್ನು ಅಭಿವೃದ್ಧಿಗೊಳಿಸಲು ವಿಶೇಷ ಕಾರ್ಯತಂತ್ರಗಳನ್ನು ಹೆಣೆಯುವುದು (ಉದಾ : ಸಣ್ಣ ಉದ್ಯಮಗಳನ್ನು ಸ್ಥಾಪಿಸಲು ಬೇಕಾದ ಚಟುವಟಿಕೆ).

4. ಸುಸ್ಥಿರ, ಪರಿಸರ–ಸಂಬಂಧಿ, ಆರ್ಥಿಕ, ಜಾಗತಿಕ ಮತ್ತು ಸ್ಥಳೀಯವಾಗಿ ಕಾಲಕ್ಕನುಗುಣವಾಗಿ ನಿಭಾಯಿಸಲು ಬೇಕಾದ ಕಾರ್ಯತಂತ್ರಗಳು

5. ದಾಸ್ತಾನು ನಿರ್ವಹಣೆಯನ್ನು ಸುಧಾರಿಸುವುದು, ವಿಕೋಪಗಳುಂಟಾದಾಗ ಆಘಾತಕ್ಕೊಳಗಾಗದೆ ನಿರ್ವಹಿಸಲು ಬಫರ್–ದಾಸ್ತಾನುಗಳನ್ನು ಶೇಖರಿಸುವ ಕ್ರಮಗಳ ಬಗ್ಗೆ ಸುಧಾರಣೆಗಳ ಅಗತ್ಯವಿದೆ.

6. ಸರಕು ಸರಂಜಾಮುಗಳ ನಿರ್ವಹಣಾ ವ್ಯವಸ್ಥೆಯನ್ನು ಸಮುದಾಯ ಭಾಗವಹಿಸುವಿಕೆಯ ಮೂಲಕ ಸುಧಾರಿಸುವುದು.

**ಬೇಡಿಕೆಗೆ ಪೂರೈಕೆಯನ್ನು ಹೊಂದಿಸಿ ಸಂಪರ್ಕ ಸಾಧಿಸುವಲ್ಲಿರುವ ಸಮಸ್ಯೆಗಳು**

ನಿರುದ್ಯೋಗ ಪೂರ್ಣವಾಗಿ ಕಾರ್ಮಿಕರ ಲಭ್ಯತೆಯನ್ನು ಬಿಂಬಿಸುವುದಿಲ್ಲ. ಹಾಗೆಯೆ, ಖಾಲಿ ಇರುವ ಹುದ್ದೆಗಳ ಸಂಖ್ಯೆ ಪೂರ್ಣವಾಗಿ ಉದ್ಯೋಗ ಲಭ್ಯತೆಯನ್ನು ಬಿಂಬಿಸುವುದಿಲ್ಲ. ಉದ್ಯೋಗ ಮತ್ತು ಉತ್ಪಾದನಾ ಮಾದರಿಗಳು ತಪ್ಪು ಹೊಂದಾಣಿಕೆಗಳನ್ನು ಬಹಿರಂಗಗೊಳಿಸುತ್ತವೆ. ದೇಶದ ಶೇಕಡ 93 ರಷ್ಟು ದುಡಿಮೆದಾರರು ಅನೌಪಚಾರಿಕ ಉದ್ಯೋಗಗಳಲ್ಲಿದ್ದಾರೆ. ಈ ಉದ್ಯೋಗಗಳು ಅತಿ ಕಡಿಮೆ ಉತ್ಪಾದಕತೆ ಮತ್ತು ಕಳಪೆಮಟ್ಟದ ತಯಾರಿಕೆಗಳಲ್ಲಿ ತೊಡಗಿರುತ್ತವೆ. ಶೇಕಡ 58 ರಷ್ಟು ಜನ ಕೃಷಿ ಸಂಬಂಧಿತ ಉದ್ಯೋಗಗಳಲ್ಲಿ ತೊಡಗಿದ್ದರೂ ಇವರ ಕೊಡುಗೆ ಕೇವಲ ನಮ್ಮ ಒಟ್ಟು ದೇಶೀಯ ಉತ್ಪನ್ನ (ಜಿ.ಡಿ.ಪಿ) ದ ಶೇಕಡ 15 ರಷ್ಟಿದೆ. ಕೇವಲ ಶೇಕಡ 12ರಷ್ಟು ನೌಕರರು ಉತ್ಪದನಾ ಕ್ಷೇತ್ರದಲ್ಲಿ ಕಾರ್ಯನಿರತರಾಗಿದ್ದಾರೆ. ಚೀನಾ ದೇಶದಲ್ಲಿ ಇದು ಶೇಕಡ 50 ರಷ್ಟಿದೆ. ಕಡಿಮೆ–ನುರಿತ ಕಾರ್ಮಿಕ ವರ್ಗದಿಂದ ಮಧ್ಯಮಾವಧಿ ಪದರ ರಚನೆಯಾಗುವುದಲ್ಲದೆ ಕೃಷಿಯಿಂದ ಉತ್ಪಾದನಾ ಕ್ಷೇತ್ರಕ್ಕೆ ಪರಿವರ್ತಿಸುವುದು ಕಷ್ಟವಾಗುತ್ತದೆ. ಭಾರತದ ಶೇಕಡ 50ರಷ್ಟು ಕಾರ್ಮಿಕವರ್ಗ ಸ್ವಯಂ ಉದ್ಯೋಗಿಗಳೆ ಆದ್ದರಿಂದ ಉದ್ಯಮಶೀಲತಾ ಶಕ್ತಿಯನ್ನು ಬಿಂಬಿಸುವುದಿಲ್ಲ ಏಕೆಂದರೆ ಇವರೆಲ್ಲರೂ ಬಡ ಕಾರ್ಮಿಕರೆ.ಪ್ರತಿ ತಿಂಗಳು ಸುಮಾರು 10 ಲಕ್ಷ ಯುವಕರು ಕಾರ್ಮಿಕ ವರ್ಗವನ್ನು ಸೇರುವ ವಿಷಯವನ್ನು ಹೆಚ್ಚಿನ ಜನ ಹೇಳುತ್ತಾರೆ. ಮುಂದಿನ 20 ವರ್ಷ ಇದೇ ರೀತಿ ಮುಂದುವರಿಯುತ್ತದೆ. ಆದರೆ ಇದಕ್ಕಿಂತ ದೊಡ್ಡ ಸವಾಲೆಂದರೆ ಈಗಾಗಲೇ ಇರುವ 2 ಕೋಟಿ ಕಾರ್ಮಿಕ ವರ್ಗ, ಕೃಷಿ–ಆಧಾರಿತ ಕಡಿಮೆ ಉತ್ಪಾದನಾ ಸಾಮರ್ಥ್ಯವುಳ್ಳ ಉದ್ಯಮಗಳಲ್ಲಿದ್ದಾರೆ. 2011ರಲ್ಲಿ ಭಾರತದ 1200 ಸರ್ಕಾರಿ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೊಂದಾಯಿತರಾದವರ ಸಂಖ್ಯೆ 4 ಕೋಟಿ !!

**ಶಿಕ್ಷಿತ ಮತ್ತು ನುರಿತ ನೌಕರವರ್ಗವನ್ನು ಸೃಷ್ಟಿಸುವಲ್ಲಿನ ಸಮಸ್ಯೆಗಳು**

ಭವಿಷ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಉತ್ತಮ ಗುಣಮಟ್ಟದ ಶಿಕ್ಷಣ, ನೌಕರವರ್ಗಕ್ಕೆ ಮಾಡುವ ಕೆಲಸಕ್ಕೆ ತಕ್ಕ ಉತ್ತಮ ಪ್ರೋತ್ಸಾಹಧನ ಕೊಟ್ಟು ಗುಣಮಟ್ಟವನ್ನು ಹೆಚ್ಚಿಸಬೇಕು. ನಮ್ಮ ಶಿಕ್ಷಣ ವ್ಯವಸ್ಥೆಯ ಅತಿ ದೊಡ್ಡ ಸವಾಲೆಂದರೆ ಬೇರೆ ಬೇರೆ ಹಂತಗಳಲ್ಲಿ ಶಿಕ್ಷಣವನ್ನು ಬಿಟ್ಟು ಹೋಗುವವರನ್ನು ತಡೆಯುವುದು. ಶೇಕಡ 35ರಷ್ಟು ವಿದ್ಯಾರ್ಥಿಗಳು ಬೇರೆ ಬೇರೆ ಕಾರಣಗಳಿಗಾಗಿ ಹತ್ತನೇ ತರಗತಿ ತನಕವೂ ಬರದೇ ಶಾಲೆ ಬಿಡುತ್ತಾರೆ, 2.6 ಕೋಟಿ ವಿದ್ಯಾರ್ಥಿಗಳು 10ನೇ ತರಗತಿ ಪರೀಕ್ಷೆಯ ನಂತರ ಶಾಲಾ–ಕಾಲೇಜು ಬಿಡುತ್ತಾರೆ, ಅದರಲ್ಲಿ 1 ಕೋಟಿ ವಿದ್ಯಾರ್ಥಿಗಳು ಪಾಸಾಗುವುದಿಲ್ಲ. 1.6 ಕೋಟಿ ವಿದ್ಯಾರ್ಥಿಗಳು ಪಿ.ಯು.ಸಿ ಪರೀಕ್ಷೆ ತೆಗೆದುಕೊಳ್ಳುತ್ತಾರೆ. ಅದರಲ್ಲಿ 80 ಲಕ್ಷ ಜನ ಅನುತ್ತೀರ್ಣರಾಗಿ ಅಲ್ಲಿಗೇ ಬಿಡುತ್ತಾರೆ. 80 ಲಕ್ಷದಲ್ಲಿ ಕೇವಲ



50 ಲಕ್ಷ ವಿದ್ಯಾರ್ಥಿಗಳು ಪಿ.ಯು.ಸಿ. ನಂತರ ಓದು ಮುಂದುವರೆಸುತ್ತಾರೆ. ಒಂದು ಶಕ್ತಿಯುತ, ಶಿಕ್ಷಿತ–ನುರಿತ ಕಾರ್ಮಿಕ ವರ್ಗವನ್ನು ಸೃಷ್ಟಿಸಲು ಪ್ರಾಥಮಿಕ ಹಂತಗಳಲ್ಲಿ ಸುಧಾರಣೆಗಳು ಅತ್ಯಗತ್ಯ (ಸಬರ್‌ವಾಲ್–2013).

ಶಾಲೆಯನ್ನು ಕೆಳಹಂತಗಳಲ್ಲೇ ಬಿಡುವವರ ಸಂಖ್ಯೆ ಮತ್ತು ಅನುಪಾತ ಬಡವರ ಮತ್ತು ಪ್ರತಿಕೂಲ ಪರಿಸ್ಥಿತಿಗಳಲ್ಲಿರುವ ಜನರಲ್ಲೇ ಹೆಚ್ಚಾಗಿದೆ. ಇದರಿಂದಾಗಿ ನಂತರದ ಉನ್ನತ ಶಿಕ್ಷಣಕ್ಕೆ ಸೇರುವವರ ಸಂಖ್ಯೆ ಸಹಜವಾಗಿಯೇ ಕಡಿಮೆಯಾಗುತ್ತದೆ. ಮೂಲಭೂತ ಅಗತ್ಯಗಳಾದ ಆರೋಗ್ಯ, ಶಿಕ್ಷಣ ಮತ್ತು ಸಮಾಜದ ಕಡೆಗೆ ಗಮನವಹಿಸಬೇಕಾದ ಅಗತ್ಯ ಕೌಶಲ್ಯಗಳನ್ನು ರೂಢಿಸಿಕೊಳ್ಳುವುದು ಅಗತ್ಯ. ಇದರ ಪರಿಣಾಮವಾಗಿ ಜೀವನಶೈಲಿ ಈ ಕೆಳಗಿನ ಕೆಲವು ಅಂಶಗಳ ಮೇಲೆ ಅವಲಂಬಿತವಾಗಿದೆ.

1. ಉದ್ಯಮ ಅವಕಾಶ ಮತ್ತು ಅಭಿವೃದ್ಧಿಯ ಭದ್ರತೆ
2. ಆರ್ಥಿಕ ಭದ್ರತೆ (ಆದಾಯ, ಕೌಶಲ್ಯ, ಸಮಯ)
3. ಪೌಷ್ಟಿಕಾಂಶಗಳ ಭದ್ರತೆ (ಆಶ್ರಯ, ನೀರು ಮತ್ತು ನೈರ್ಮಲ್ಯ ಸೇರಿದಂತೆ ತಾಯಿ ಮಗುವಿನ ಆರೈಕೆ)
4. ಪರಿಸರ ಜಾಗೃತಿಯ ಭದ್ರತೆ.
5. ಶೈಕ್ಷಣಿಕ ಭಾಗವಹಿಸುವಿಕೆಯ ಭದ್ರತೆ
6. ಸಮುದಾಯ ಭಾಗವಹಿಸುವಿಕೆ (ಲಿಂಗ, ಜನಾಂಗೀಯತೆ ಮತ್ತು ಅವಲಂಬಿತ ಧರ್ಮ)
7. ಆವಾಸಸ್ಥಾನದ ಭದ್ರತೆ.
8. ಆಹಾರ ಭದ್ರತೆ.
9. ಆರೋಗ್ಯ ಭದ್ರತೆ
10. ರಾಜಕೀಯ ಮತ್ತು ಕಾನೂನಿನ ಭದ್ರತೆ.

### ಮಾನವ ಸಂಪನ್ಮೂಲ / ಕೌಶಲ್ಯಾಭಿವೃದ್ಧಿ ಹೇಗೆ ಆರ್ಥಿಕ ಅಭಿವೃದ್ಧಿಗೆ ಕಾರಣವಾಗುತ್ತದೆ?

**ನ್ಯೂನತೆಗಳನ್ನು ತುಂಬಲು ಬೇಕಾದ ಕೌಶಲ್ಯ**

1. ಕೌಶಲ್ಯಾಭಿವೃದ್ಧಿ ತಂತ್ರವೊಂದನ್ನು ಕೆಳಹಂತಗಳಲ್ಲಿ ವಾಸಿಸುವ ಜನರಿಗೆ ಮರುಹೊಂದಿಸುವುದು. ಇಲ್ಲಿಯವರೆಗೂ ಸಾಕಷ್ಟು ಕೌಶಲ್ಯ ಅಭಿವೃದ್ಧಿಯಾಗದ್ದಕ್ಕೆ ಮುಖ್ಯ ಕಾರಣಗಳೆಂದರೆ ಜನರವರೆಗೆ ಇವು ತಲುಪದಿರುವುದು ಮತ್ತು ಹೊಂದಾಣಿಕೆಯ ಕೊರತೆ.

2. ಅವಕಾಶಗಳನ್ನು ಸರಿಯಾಗಿ ಗುರುತಿಸಿ, ಯುವಜನಾಂಗ, ಅವಕಾಶಗಳನ್ನು ಬಾಚಿಕೊಳ್ಳಬೇಕೆಂಬ ಗ್ರಹಿಕೆಯ ಕೊರತೆ.

3. ಯಾವುದೇ ಒಂದು ವ್ಯಾಪಾರೋದ್ಯಮವನ್ನು ನಡೆಸಲು ಯುವ ಜನಾಂಗಕ್ಕೆ ಅತ್ಯಗತ್ಯವಾಗಿ ಬೇಕಾದ ಪ್ರಾಥಮಿಕ ಉದ್ಯಮಶೀಲತಾ ಸಾಮರ್ಥ್ಯ ಮತ್ತು ಕೌಶಲ್ಯ.

ಅಭಿವೃದ್ಧಿಯ ನಿರ್ವಹಣೆ, ಕೌಶಲ್ಯಗಳ ಬಳಕೆ ಮತ್ತು ನಿರ್ವಹಣೆ ಅತ್ಯಗತ್ಯ ಅಂಶಗಳೆಂದು ಪರಿಗಣಿಸಲಾಗಿದೆ.

ದೀರ್ಘಕಾಲಿಕ ಬೆಳವಣಿಗೆ, ಉದ್ಯೋಗ ಸೃಷ್ಟಿ ಮತ್ತು ಆದಾಯ ಮತ್ತು ಅವಕಾಶಗಳ ನ್ಯಾಯಯುತ ವಿತರಣೆ ಬಹು ಮುಖ್ಯ ಅಂಶಗಳು. ಇತ್ತೀಚೆಗೆ ಓ.ಇ.ಸಿ.ಡಿ (2012ಬಿ). ಕೌಶಲ್ಯಾಭಿವೃದ್ಧಿಗೆ ಮೂರು ವಿಧಾನಗಳನ್ನು ಗುರುತಿಸಿ, ಸರ್ಕಾರಗಳು ಈ ಅಂಶಗಳ ಮೇಲೆ ಹೆಚ್ಚಿನ ಒತ್ತು ನೀಡಬೇಕೆಂದು ಶಿಫಾರಸು ಮಾಡಿದೆ.

**ನೈಪುಣ್ಯ ಅಭಿವೃದ್ಧಿಗೆ ಚೌಕಟ್ಟು**

ಪ್ರಾರಂಭದಲ್ಲಿ ತಿಳಿಸಿದ ಹಾಗೆ ಆರ್ಥಿಕ ಪ್ರಗತಿಯನ್ನು ಎರಡು ವಿಧಾನಗಳಿಂದ ಸಾಧಿಸಬಹುದು. ಮೊದಲನೆಯದು ಇರುವ ವ್ಯವಸ್ಥೆಯ ನೈಪುಣ್ಯತೆ ಮತ್ತು ಕಾರ್ಯಕ್ಷಮತೆಯನ್ನು ಹೆಚ್ಚಿಸುವುದು, ಆದರೆ ಇದಕ್ಕೆ ಅಷ್ಟೊಂದು ಅವಕಾಶವಿಲ್ಲ. ಮತ್ತೊಂದು ಯುವಶಕ್ತಿಗೆ ಒಂದು ಹೊಸ ವಾತಾವರಣವನ್ನು ಹುಟ್ಟುಹಾಕಿ ತಮ್ಮ ಸ್ವಯಂ ಉದ್ಯೋಗ ಮತ್ತು ವಾಣಿಜ್ಯೋದ್ಯಮಕ್ಕೆ ಬೇಕಾದ ಚೌಕಟ್ಟನ್ನು ಸೃಷ್ಟಿಸುವುದು. ಇದಕ್ಕೆ ಆರ್ಥಿಕ ಶಕ್ತಿಯನ್ನು ಹೆಚ್ಚಿಸಲು ಅಪಾರ ಅವಕಾಶವಿದೆ.

ಕೌಶಲ್ಯಾಭಿವೃದ್ಧಿಯ ಮೂಲಕ ಅವಕಾಶಗಳನ್ನು ಸದ್ಬಳಕೆ ಮಾಡಿಕೊಳ್ಳಲು ಕೆಲವು ಮಾರ್ಗಗಳನ್ನು ಪ್ರಸ್ತಾಪಿಸಿದ್ದಾರೆ.

ಮಾರ್ಗ : 1 – ಪ್ರಸಕ್ತ ಆರ್ಥಿಕ ವ್ಯವಸ್ಥೆಯಲ್ಲಿ, ಕಾರ್ಮಿಕ ವರ್ಗದ ನೈಪುಣ್ಯತೆ ಮತ್ತು ದಕ್ಷತೆಯನ್ನು ಹೊಸ ಕೌಶಲ್ಯ ತಂತ್ರಗಳನ್ನು ನೀಡುವುದರ ಮೂಲಕ, ಅಭಿವೃದ್ಧಿಗೊಳಿಸುವುದು. ವ್ಯಾಪಾರೋದ್ಯಮಗಳಿಗೆ ಬೇಕಾದ ಕೌಶಲ್ಯ ತಂತ್ರಗಳನ್ನು ಒದಗಿಸುವುದು, ಸೀಮಿತ ವ್ಯಾಪ್ತಿಯುಳ್ಳ ಮತ್ತು ಬಹುಬೇಗ ಕೊನೆಗೊಳ್ಳಬಹುದಾದರೂ ಇವನ್ನು ನೀಡಬಹುದು. ಏಕೆಂದರೆ ಈ ಮಾರ್ಗದಲ್ಲಿ ಅವಕಾಶಗಳನ್ನು ನಾವು ಇನ್ನೂ ಉಪಯೋಗಿಸಿಕೊಂಡಿಲ್ಲ. ಕಾರಣ ಉದ್ಯೋಗಾರ್ಹತೆಯುಳ್ಳ ಅಭ್ಯರ್ಥಿಗಳ ಕೊರತೆಯಿಂದ. ಅಭ್ಯರ್ಥಿಗಳ ಪೂರ್ವಾಪೇಕ್ಷಿತ ಕೌಶಲ್ಯ ಕೊರತೆಯಿಂದ ಈ ಕಂದಕ ಇನ್ನೂ ಹೆಚ್ಚಾಗಿಯೇ ಇರುವುದು ಕಂಡುಬರುತ್ತದೆ. ಸಾಂಪ್ರದಾಯಿಕ ಕೈಗಾರಿಕೆಗಳು ಹಳೆಯ ಆರ್ಥಿಕ ಪರಿಸ್ಥಿತಿ ಮತ್ತು ಹೊಸ ಅರ್ಥಿಕ ಪರಿಸ್ಥಿತಿಗಳಲ್ಲಿರುವ ಅಪಾರ ಕಂದಕಗಳನ್ನು ನೋಡಬಹುದು. ಕೌಶಲ್ಯಾಭಿವೃದ್ಧಿಯ ಮೂಲಕ ಇರುವ ಅವಕಾಶಗಳು ಮತ್ತು ಉದ್ಯೋಗಾರ್ಹತೆಯ ಕಂದಕಗಳು ಮುಖ್ಯವಾಗಿ ಕಾಣುತ್ತವೆ.

ಮಾರ್ಗ : 2 – ಹೊಸ ಆರ್ಥಿಕ ಸನ್ನಿವೇಶಗಳಲ್ಲಿ ಹೊಸ ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು ಪ್ರಸಕ್ತ ಮತ್ತು ಮುಂದಿನ 20 ವರ್ಷಗಳಲ್ಲಿ ಆಗಬೇಕಾದ ಉದ್ಯಮದ ಚೌಕಟ್ಟಿಗೆ ಸೇರಿದ ವಿಷಯ. ಇದೊಂದು ಉದ್ಯಮಶೀಲತೆಯ ಸುಪ್ತ ಅಭಿಲಾಷೆ ಮತ್ತು ಹೇರಳವಾದ ಅವಕಾಶಗಳನ್ನು ಒದಗಿಸುವ ಅಂಶ.

ಮಾರ್ಗ 2 : ಉಪಮಾರ್ಗ– ಎ : ಯುವಜನತೆ ಇರುವ ಉಪಯೋಗಿಸಲ್ಪಡದ ಅವಕಾಶಗಳತ್ತ ಮುಖ ಮಾಡುವಂತೆ ನೋಡಬೇಕು. ಹೊಸ ಹೊಸ ಕೌಶಲ್ಯಗಳನ್ನು ಅಭಿವೃದ್ಧಿಗೊಳಿಸಿ ಯುವಜನತೆ ಅಳವಡಿಸಿಕೊಂಡು ತಮ್ಮ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕು.

ಮಾರ್ಗ 2 : ಉಪಮಾರ್ಗ : ಬಿ : ಈ ಮಾರ್ಗವು ಸಂಪೂರ್ಣವಾಗಿ ಹೊಸ ಅವಕಾಶಗಳನ್ನು ಸೃಷ್ಟಿಸಲು ಮತ್ತು ಅದರಿಂದ ಆರ್ಥಿಕ ಅಭಿವೃದ್ಧಿ ಸಾಧಿಸಲು ಹವಣಿಸುತ್ತದೆ. ಸಂಪನ್ಮೂಲ ಮತ್ತು ಕೌಶಲ್ಯಾಭಿವೃದ್ಧಿಯಿಂದ ಹೊಸ ಹೊಸ ಅವಕಾಶಗಳನ್ನು ಶೋಧಿಸುವುದು ಅತ್ಯಗತ್ಯ. ಹಾಗೆಯೆ ಮುಂಬರುವ ಅನಿರೀಕ್ಷಿತ ಮತ್ತು ಹೊಸ ಸವಾಲುಗಳನ್ನು ಎದುರಿಸುವ ಕಲೆಯನ್ನು ಕರಗತಗೊಳಿಸಿಕೊಳ್ಳಬೇಕು.

ಎರಡೂ ಮಾರ್ಗೋಪಾಯಗಳು ಇರುವ ಅಥವಾ ಹೊಸ ಅವಕಾಶಗಳನ್ನು, ಪ್ರಸಕ್ತ ಸಾಮರ್ಥ್ಯ ಮತ್ತು ಕೌಶಲ್ಯಗಳಿಗೆ ತಕ್ಕಂತೆ ಉದ್ಯೋಗಾವಕಾಶಗಳನ್ನು ಹೊಂದಿಸಬೇಕೆಂದು ತಿಳಿಸುತ್ತದೆ. ಇದರಿಂದಾಗಿ ಉತ್ಪಾದನೆ, ಉದ್ಯೋಗಾವಕಾಶ ಮತ್ತು ಉದ್ಯಮಶೀಲತೆ ಹೆಚ್ಚುತ್ತವೆ. ಪ್ರಮುಖ ಉದ್ಯಮಗಳು ಸಂಪೂರ್ಣವಾಗಿ ಭಾಗವಹಿಸಿದರೆ ಭಾರತ ಅಭಿವೃದ್ಧಿ ಮತ್ತು ಪ್ರಗತಿಯತ್ತ ಸಾಗುತ್ತದೆ. ❑


# ಯೋಜನಾ

## ನವೆಂಬರ್ 2015 ಸಂಚಿಕೆ ವಿಷಯ

# ಸಾರಿಗೆ ವಲಯ

# ವೃತ್ತಿಶಿಕ್ಷಣ: ಸವಾಲು ಹಾಗೂ ಶಿಫಾರಸು

* ಡಾ. ಸ್ವಾತಿ ಮುಜುಂದಾರ್



2022ರ ಸುಮಾರಿಗೆ 15 ಕೋಟಿಗೂ ಹೆಚ್ಚು ಯುವಜನತೆಗೆ ಕುಶಲತೆ ತರಬೇತಿ ನೀಡುವ ಯೋಜನೆಯೊಂದನ್ನು ಸರ್ಕಾರ ಸಿದ್ಧಪಡಿಸಿದೆ. ಅಂದರೆ ವರ್ಷಕ್ಕೆ 45,000 ಯುವಜನರಂತೆ ಮುಂದಿನ 10 ವರ್ಷಗಳ ಕಾಲ ಈ ಬೃಹತ್ ತರಬೇತಿ ಯೋಜನೆ ಜಾರಿಗೊಳ್ಳಲಿದೆ.

ಅಭಿವೃದ್ಧಿಯತ್ತ ಸಾಗುತ್ತಿರುವ ವಿಶ್ವದ ಅತಿದೊಡ್ಡ ದೇಶಗಳಲ್ಲಿ ಇಂದು ಭಾರತವೂ ಒಂದಾಗಿದೆ. ಭಾರತಕ್ಕೆ ಯುವಜನರ ಸಂಖ್ಯೆ ಹೆಚ್ಚಾಗಿರುವಂತಹ ಜನಸಂಖ್ಯಾಲಾಭದ ವರವೂ ಇದೆ. ಭಾರತವು ಒಂದು ಅಭಿವೃದ್ಧಿಹೊಂದಿದ ದೇಶವಾಗಲು ಬೇಕಿರುವುದು ಕುಶಲತೆ ಹೊಂದಿದ ಮಾನವಶಕ್ತಿ ಮತ್ತು ಮುಖ್ಯವಾಗಿ ನಾವು ನಮ್ಮ ಯುವಜನತೆಯನ್ನು ಪರಿಣಿತರನ್ನಾಗಿಸಬೇಕಿರುವುದು.

ಆದರೆ ಇಂದು ಇತರೆ ದೇಶಗಳಿಗೆ ಹೋಲಿಸಿದಲ್ಲಿ ಇಲ್ಲಿ ಕುಶಲತೆ ಮತ್ತು ಔಪಚಾರಿಕವಾಗಿ ತರಬೇತುಪಡಿಸಿದ ಮಾನವಶಕ್ತಿಯ ಕೊರತೆ ತೀವ್ರವಾಗಿರುವುದನ್ನು ನೋಡಬಹುದು. ಒಂದು ಉದಾಹರಣೆ ನೋಡುವುದಾದರೆ ಕೊರಿಯಾದಲ್ಲಿ ಅಲ್ಲಿನ ಒಟ್ಟು ಶ್ರಮಶಕ್ತಿಯ ಶೇಕಡಾ 93ಕ್ಕಿಂತ ಹೆಚ್ಚು ಜನರು ಕುಶಲತೆ ಹೊಂದಿದ ಕೆಲಸಗಾರರಾಗಿದ್ದಾರೆ.

ಆದರೆ ಭಾರತದಲ್ಲಿ ಕೇವಲ ಶೇಕಡಾ 10ರಷ್ಟು ಮಾತ್ರ ಔಪಚಾರಿಕವಾಗಿ ತರಬೇತುಪಡೆದವರಾಗಿದ್ದಾರೆ. ಇದನ್ನು ಅರ್ಥಮಾಡಿಕೊಂಡಿರುವ ಭಾರತ ಸರ್ಕಾರವು ಈ ಉದ್ದೇಶಕ್ಕಾಗಿಯೇ ಪ್ರತ್ಯೇಕ ಸಚಿವಾಲಯ ಹಾಗೂ ರಾಷ್ಟ್ರೀಯ ಕುಶಲತೆ ಅಭಿವೃದ್ಧಿ ಸಂಸ್ಥೆಯನ್ನು ಆರಂಭಿಸುವ ಮೂಲಕ ದೊಡ್ಡ ಮಟ್ಟದ ಕಾರ್ಯಯೋಜನೆಯನ್ನು ಆರಂಭಿಸಿದೆ.

ಗೌರವಾನ್ವಿತ ಪ್ರಧಾನಮಂತ್ರಿಯವರ 'ಮೇಕ್ ಇನ್ ಇಂಡಿಯಾ' ಯೋಜನೆಯು ಕಳೆದ ವರ್ಷ ಕುಶಲತೆ ಅಭಿವೃದ್ಧಿಗೆ ಹೆಚ್ಚಿನ ಇಂಬನ್ನು ನೀಡಿತ್ತು. 2022ರ ಸುಮಾರಿಗೆ 15 ಕೋಟಿಗೂ ಹೆಚ್ಚು ಯುವಜನತೆಗೆ ಕುಶಲತೆ ತರಬೇತಿ ನೀಡುವ ಯೋಜನೆಯೊಂದ್ನು ಸರ್ಕಾರ ಸಿದ್ಧಪಡಿಸಿದೆ. ಅಂದರೆ ವರ್ಷಕ್ಕೆ 45,000 ಯುವಜನರಂತೆ ಮುಂದಿನ 10 ವರ್ಷಗಳ ಕಾಲ ಈ ಬೃಹತ್ ತರಬೇತಿ ಯೋಜನೆ ಜಾರಿಗೊಳ್ಳಲಿದೆ. (ಆಧಾರ: ಎನ್‌ಎಸ್‌ಡಿಸಿ ಜಾಲತಾಣ). ಕೈಗಾರಿಕೆ, ಶೈಕ್ಷಣಿಕ ಸಮುದಾಯ ಮತ್ತು ಸರ್ಕಾರ ಈ ಮೂರೂ ಅಂಗಗಳು ಒಟ್ಟುಗೂಡಿ ಒಂದು ಸುವರ್ಣ ತ್ರಿಕೋನವಾಗಿ ಕೆಲಸ ಮಾಡಿದರೆ ಮಾತ್ರ ಈ ಮಹತ್ವಕಾಂಕ್ಷೆಯ ಗುರಿಯನ್ನು ಈಡೇರಿಸಬಹುದಾಗಿದೆ. ವಿವಿಧ ಕ್ಷೇತ್ರಗಳಲ್ಲಿ ಕುಶಲತೆಗಳಲ್ಲಿನ ಅಂತರಗಳನ್ನು ಮತ್ತು ಕೈಗಾರಿಕೆಯ ಅಗತ್ಯತೆಗಳನ್ನು ಅರಿತುಕೊಳ್ಳಲು ಎನ್‌ಎಸ್‌ಡಿಸಿಯು ಸಕ್ರಿಯ ಪಾತ್ರ ನಿರ್ವಹಿಸುತ್ತಾ ಕೈಗಾರಿಕಾ ಕ್ಷೇತ್ರ ಮತ್ತು ಇತರ ಕುಶಲತೆಗೆ ಸಂಬಂಧಿಸಿದ ಕ್ಷೇತ್ರಗಳಿಂದ ಪರಿಣಿತರನ್ನು ಹೊಂದಿದ ಹಲವು ವಿಭಾಗೀಯ ಕುಶಲತೆ ತರಬೇತಿ ಮಂಡಳಿಗಳನ್ನು ರಚಿಸಿದೆ. ಮಹಾರಾಷ್ಟ್ರ ಸರ್ಕಾರವು ರಾಜ್ಯದಲ್ಲಿ ಕುಶಲತೆ ಅಭಿವೃದ್ಧಿ ಮತ್ತು ವೃತ್ತಿಶಿಕ್ಷಣಕ್ಕೆ ಸಂಬಂಧಿಸಿದ ಹಲವು ಸಮಸ್ಯೆ – ಸವಾಲುಗಳ ಕುರಿತು ಗಮನಹರಿಸಲು ರಚಿಸಿದ ಸಮಿತಿಯಲ್ಲಿ ನಾನೂ ಒಬ್ಬಳಾಗುವ ಸುಸಂದರ್ಭ




* ಪ್ರಧಾನ ನಿರ್ದೇಶಕರು, ಸಿಮ್‌ಬಯೋಸಿಸ್ ಫೌಂಡೇಶನ್. Email : eatodirector@scdl.net



ಒದಗಿತ್ತು. ಈ ಕುರಿತು ನಡೆಸಿದ 4 ವರ್ಷಗಳ ಸಂಶೋಧನೆಯಲ್ಲಿ ನಾವು ಸಾವಿರಾರು ವಿದ್ಯಾರ್ಥಿಗಳನ್ನು ಮತ್ತು ನೂರಕ್ಕೂ ಹೆಚ್ಚು ಈ ವಿಭಾಗದ ತರಬೇತುದಾರರನ್ನು ಭೇಟಿಮಾಡಿ ಸಂದರ್ಶನ ನಡೆಸಿದೆವು. ಆಗ ನಮ್ಮ ಗಮನಕ್ಕೆ ಬಂದಂತಹ ಮತ್ತು ಕುಶಲತೆ ಅಭಿವೃದ್ಧಿಯ ವಿಷಯದಲ್ಲಿ ಗಮನ ನೀಡಬೇಕಾದ ಅಂಶಗಳು ಮುಂದಿನಂತಿವೆ.

1. ವೃತ್ತಿ ಶಿಕ್ಷಣ ಕೋರ್ಸುಗಳು ಸ್ವರೂಪದಲ್ಲಿ ಅವಧಿ ಸೀಮಿತವಾಗಿವೆ – ಸರ್ಟಿಫಿಕೇಟ್‌ನಿಂದ ಡಿಪ್ಲೊಮಾ ಕೋರ್ಸುಗಳಿಗೆ ಅಲ್ಲಿಂದ ಮುಂದಕ್ಕೆ ಪದವಿ ಕೋರ್ಸುಗಳಿಗೆ ನೇರಚಲನೆಯೆಂಬುದು ಇಲ್ಲಿಲ್ಲದಿರುವುದು ಒಂದು ಮುಖ್ಯ ಕೊರತೆಯಾಗಿದೆ. ಇದರಿಂದಾಗಿ ಯಾವುದಾದರೂ ಪೋಷಕರಿಗೆ ತಮ್ಮ ಮಗ/ಮಗಳಿಗೆ ಅಂತರ್ಗತವಾದ ಒಂದು



ಕುಶಲತೆ ಇದೆ ಎಂದು ಭಾವಿಸಿದರೂ ಸಹ ವೃತ್ತಿಶಿಕ್ಷಣಕ್ಕೆ ಸೇರಿಸುವ ಮನಸ್ಸು ಮಾಡಲಾರರು. ಹೀಗಾಗಿ ವೃತ್ತಿ ಶಿಕ್ಷಣ ಎನ್ನುವುದು ಒಂದು 'ಆಯ್ಕೆ'ಯಾಗುವುದು ದುಸ್ತರವಾಗಿದೆ. ಇದರಿಂದ ಕುಶಲಸಹಿತ ಶ್ರಮಶಕ್ತಿಗೆ ಸಾಕಷ್ಟು ಬೇಡಿಕೆ ಇದ್ದಾಗ್ಯೂ ಸಹ ವೃತ್ತಿಶಿಕ್ಷಣಕ್ಕೆ ಕಾಲಿಡುವವರ ಸಂಖ್ಯೆ ಸೀಮಿತವಾಗಿದೆ.

2. ಸಾಮಾಜಿಕ ಸ್ವೀಕಾರಾರ್ಹತೆ – ವೃತ್ತಿಶಿಕ್ಷಣ ಮತ್ತು ಕುಶಲತೆ ಅಭಿವೃದ್ಧಿ ಕೋರ್ಸುಗಳನ್ನು ಇತರ ಕೋರ್ಸುಗಳಿಗಿಂತ ಕೀಳೆಂದು ಪರಿಗಣಿಸಲಾಗುತ್ತಿದೆಯಲ್ಲದೆ ಆ ಕೋರ್ಸುಗಳನ್ನು ಓದಿದ ವಿದ್ಯಾರ್ಥಿಗಳನ್ನು ಇತರ ಕೋರ್ಸುಗಳನ್ನು ಓದಿದ ವಿದ್ಯಾರ್ಥಿಗಳಿಗೆ ಹೋಲಿಸಿ ಕೀಳಾಗಿ ನೋಡಲಾಗುತ್ತಿದೆ. ನಮ್ಮ ಅಧ್ಯಯನದಲ್ಲಿ ತಿಳಿದು ಬಂದ ಮತ್ತೊಂದು ವಿಷಯ ಈ ವಿದ್ಯಾರ್ಥಿಗಳಲ್ಲಿ ಹಲವರು ತಾವು ಪಡೆದುಕೊಂಡ ಕುಶಲತೆಗಳಲ್ಲಿ ಪದವಿಪೂರ್ವ ಶಿಕ್ಷಣ ಪಡೆಯುವ ಆಯ್ಕೆಯನ್ನೂ ಹೊಂದಿರುವುದಿಲ್ಲ. ಇದರಿಂದಾಗಿ ಅವರಿಗೆ ಪದವೀಧರರಾಗುವ ಅವಕಾಶ ತಪ್ಪುವುದರಿಂದ ಈ ಕಾರಣದಿಂದಲೇ ಬಹುತೇಕ ವಿದ್ಯಾರ್ಥಿಗಳು ವೃತ್ತಿಶಿಕ್ಷಣದ ಆಯ್ಕೆಯನ್ನು ಕೈಬಿಡುತ್ತಾರೆ.

3. ಉತ್ತಮ ಮೂಲಸೌಕರ್ಯದ ಕೊರತೆ ಮತ್ತು ಕೋರ್ಸುಗಳ ಕಳಪೆ ಗುಣಮಟ್ಟ – ಬಹುತೇಕ ಕುಶಲತೆ ತರಬೇತಿಯ ಸಂಸ್ಥೆಗಳಲ್ಲಿ ಅಥವಾ ಕೇಂದ್ರಗಳಲ್ಲಿನ ಮೂಲಸೌಕರ್ಯ ಬಹಳ ಕಳಪೆಯಾಗಿದ್ದು ಕೈಗಾರಿಕೆಯ ಅಗತ್ಯಗಳಿಗನುಗುಣವಾಗಿ ಮೇಲ್ದರ್ಜೆಗೇರಿಸಿರುವುದಿಲ್ಲ. ಹೀಗಾಗಿ ಕೈಗಾರಿಕಾ ಕ್ಷೇತ್ರದ ಅಗತ್ಯತೆಗೂ ಈ ತರಬೇತಿಸಂಸ್ಥೆಗಳಲ್ಲಿ ನೀಡುವ ಶಿಕ್ಷಣಕ್ಕೂ ಇರುವ ಅಂತರ ಅಗಾಧವಾಗುತ್ತಾ ಹೋಗುತ್ತಿದೆ.

4. ತರಬೇತುದಾರರ ಕಳಪೆ ಮಟ್ಟ – ಕುಶಲತೆಯ ಶಿಕ್ಷಣವನ್ನು ನೀಡಿ ಅಭ್ಯರ್ಥಿಗಳನ್ನು ತರಬೇತುಗೊಳಿಸುವ ತರಬೇತುದಾರರಿಗೇ ಕೈಗಾರಿಕಾ ಕ್ಷೇತ್ರಕ್ಕೆ ಈ ಹೊತ್ತು ಅಗತ್ಯವಿರುವ ಹೊಸತಾದ ಕುಶಲತೆಗಳ ಅರಿವು ಹೊಂದಿರುವುದಿಲ್ಲವೆಂದ ಮೇಲೆ ಅಲ್ಲಿ ತರಬೇತಿ ಪಡೆದು ಹೊರಬರುವವರ ಪಾಡು ಏನಾಗಿರಬಹುದು ಯೋಚಿಸಿ. ಇಂತಹ ಕೋರ್ಸುಗಳನ್ನು ವಿದ್ಯಾರ್ಥಿಗಳು ಪೂರೈಸಿ ಬಂದರೂ ಸಹ ಅವರಿಗೆ ಸಿದ್ಧ ಉದ್ಯೋಗಗಳು ಲಭ್ಯವಾಗುವುದಿಲ್ಲ.

5. ಕೈಗಾರಿಕಾ ಕ್ಷೇತ್ರದ ಮುಂತೊಡಗುವಿಕೆಯಲ್ಲಿನ ಕೊರತೆ – ಉದ್ಯಮ ಕ್ಷೇತ್ರ ಅದರಲ್ಲೂ ಸಣ್ಣ ಹಾಗೂ ಮಧ್ಯಮ ಕೈಗಾರಿಕಾ ಕ್ಷೇತ್ರವು ವೃತ್ತಿಶಿಕ್ಷಣ ಅಥವಾ ಔಪಚಾರಿಕ ತರಬೇತಿಯತ್ತ ಗಮನ ಹರಿಸುವುದಿಲ್ಲ ಏಕೆಂದರೆ ಅದು ಶ್ರಮಶಕ್ತಿಯ ವೆಚ್ಚವನ್ನು ಹೆಚ್ಚಿಸುತ್ತದೆ ಎಂಬ ಕಾರಣಕ್ಕಾಗಿ. ಸಣ್ಣ ಮತ್ತು ಮಧ್ಯಮ ಮಟ್ಟದ ಉದ್ದಿಮೆಸಂಸ್ಥೆಗಳು ಔಪಚಾರಿಕ ಕುಶಲತೆ ಪಡೆದ ಕೆಲಸಗಾರರಿಗಿಂತ ಹೆಚ್ಚಾಗಿ



ತರಬೇತಿ ರಹಿತ ಅಕುಶಲಿ ಕೆಲಸಗಾರರನ್ನೇ ನೇಮಿಸಿಕೊಳ್ಳುವುದು ಕಂಡುಬರುತ್ತದೆ.

6. ಪ್ರಮಾಣೀಕರಣದ ಕೊರತೆ – ಕುಶಲತೆಯ ಕೋರ್ಸುಗಳನ್ನು ನೀಡುವ ಹಲವಾರು ಸಚಿವಾಲಯಗಳು ವಿದ್ಯಾರ್ಥಿಗಳ ನಡುವೆ ಗೊಂದಲ ಮೂಡಿಸುತ್ತಿರುವುದರಿಂದಲೂ ಪ್ರಮಾಣೀಕರಣಕ್ಕೆ ಪೆಟ್ಟು ಬೀಳುತ್ತಿದೆ. ಕುಶಲತೆ ಅಭಿವೃದ್ಧಿ ಕ್ಷೇತ್ರದ ವಿಸ್ತರಣೆ ಮತ್ತು ಕಾರ್ಯಯೋಜನೆಗಳು ಈ ಎಲ್ಲಾ ಪ್ರಮುಖ ವಿಷಯಗಳನ್ನು ಗಮನಕ್ಕೆ ತೆಗೆದುಕೊಳ್ಳದಂತೆ ನಡೆಯುತ್ತಿರುವುದು ಕಂಡುಬಂದಿದೆ. ಹೆಚ್ಚಾಗಿ ಈ ಕ್ಷೇತ್ರ ಎದುರಿಸುತ್ತಿರುವ ಎಲ್ಲಾ ಸಮಸ್ಯೆ ಸವಾಲುಗಳನ್ನು ಗಮನಲ್ಲಿಟ್ಟುಕೊಂಡು ರೂಪಿಸಲಾದ ಒಂದು ಸಮಗ್ರವಾದ ಅಭಿವೃದ್ಧಿ ಮಾದರಿ ಇಲ್ಲವಾಗಿದೆ.

**ಶಿಫಾರಸುಗಳು**

1. ವೃತ್ತಿಶಿಕ್ಷಣ ಕ್ಷೇತ್ರದಲ್ಲಿ ಸರ್ಟಿಫಿಕೇಟ್ ಕೋರ್ಸುಗಳಿಂದ ಡಿಪ್ಲೋಮಾಕೋರ್ಸುಗಳಿಗೆ ಅಲ್ಲಿಂದ ಮುಂದಕ್ಕೆ ಪದವಿ ಕೋರ್ಸುಗಳಿಗೆ ನೇರಚಲನೆ ಸಾಧ್ಯವಾಗುವಂತೆ ಮಾಡಬೇಕು. ಶಾಲಾಮಟ್ಟದಿಂದ ಸ್ನಾತಕೋತ್ತರ ಮಟ್ಟಕ್ಕೆ ಆಯ್ಕೆಗಳಿರುವಂತೆ ಮಾಡಬೇಕು. ಅತ್ಯಾಧುನಿಕ ಕುಶಲತೆಗಳನ್ನು ನೀಡುವ ನಿಟ್ಟಿನಲ್ಲಿ ಹೊಸ ಕೋರ್ಸುಗಳನ್ನು ಆರಂಭಿಸಲು ಅನುವಾಗುವಂತೆ ಒಂದು ಕುಶಲತೆ ಅಭಿವೃದ್ಧಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಬೇಕು. ಹೆಚ್ಚಿನ ವಿದ್ಯಾರ್ಥಿಗಳು



ಉನ್ನತ ಶಿಕ್ಷಣವನ್ನು ಬಯಸುವುದರಿಂದ ಅಂತಹ ವಿದ್ಯಾರ್ಥಿಗಳು ವೃತ್ತಿಶಿಕ್ಷಣ ಧಾರೆಯನ್ನು ಸೇರಿಕೊಳ್ಳಲು ಇಂತಹ ಒಂದು ವಿಶ್ವವಿದ್ಯಾನಿಲಯ ಖಂಡಿತಾ ಸಹಕಾರಿಯಾಗಲಿದೆ.

2. ವೃತ್ತಿಶಿಕ್ಷಣ ಪಡೆದ ವಿದ್ಯಾರ್ಥಿಗಳಿಗೆ ವಿಶೇಷವಾಗಿ +2 ಹಂತದಲ್ಲಿ ಸಮಾನಾಂತರ ಚಲನೆಗೆ ಅವಕಾಶ ನೀಡಬೇಕು. ಈ ಮೂಲಕ




ಅವರು ಪದವಿಪೂರ್ವ ಶಿಕ್ಷಣವನ್ನು ಪಡೆಯಬಹುದು.

3. ವೃತ್ತಿಶಿಕ್ಷಣದ ಎಲ್ಲಾ ಹಂತದಲ್ಲಿ ಕೈಗಾರಿಕಾ ಉದ್ಯಮಕ್ಷೇತ್ರದ ಪಾತ್ರವನ್ನು ಹೆಚ್ಚಿಸುವುದು– ತರಬೇತಿ, ಆಡಳಿತಗಳ ತರಬೇತಿಗೆ ಇತ್ತೀಚಿನ ಯಂತ್ರೋಪಕರಣಗಳನ್ನು ಒದಗಿಸುವುದು, ಕೈಗಾರಿಕೆಗಳಿಂದ ತರಬೇತುದಾರರನ್ನು ಒದಗಿಸುವುದು ಮತ್ತು ಪ್ರತಿಯೊಂದು ಹಂತದಲ್ಲಿಯೂ ಗುಣಮಟ್ಟ ಖಾತ್ರಿಗೊಳಿಸಲು ಗುಣಮಟ್ಟ ಅಂದಾಜು ನಡೆಸುವುದು.

4. ಕೈಗಾರಿಕೆಯು ನೇಮಕ ಮಾಡಿಕೊಳ್ಳುವಾಗ ಮತ್ತು ವೃತ್ತಿಯ ಉನ್ನತೀಕರಣದ ಸಂದರ್ಭದಲ್ಲಿ ಔಪಚಾರಿಕ ವೃತ್ತಿಶಿಕ್ಷಣ ತರಬೇತಿಗೆ ಹಾಗೂ ಮತ್ತು ತರಬೇತಿ ಪಡೆದುಕೊಂಡವರಿಗೆ ಪ್ರಾಮುಖ್ಯತೆ ನೀಡಬೇಕು.

5. ವೃತ್ತಿಶಿಕ್ಷಣ ನೀಡುವ ಸಂಸ್ಥೆಗಳಿಗೆ ಒಂದು ಪ್ರಮಾಣಬದ್ಧವಾದ ಪಠ್ಯವನ್ನು ರಚಿಸುವುದು ಮತ್ತು ಪ್ರಮಾಣೀಕೃತ ಅಂದಾಜು ಮಾನದಂಡಗಳನ್ನು ನಿಗದಿಪಡಿಸುವುದು.

6. ವೃತ್ತಿಶಿಕ್ಷಣ ತರಬೇತುದಾರರಿಗೆ ಮತ್ತು ಶಿಕ್ಷಕರಿಗೆ ಔಪಚಾರಿಕವಾಗಿ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು.

ಇಲ್ಲಿ ತಿಳಿಸಲಾದ ಶಿಫಾರಸುಗಳು ಜಾರಿಯಾದಲ್ಲಿ ಪೋಷಕರು ತಮ್ಮ ಮಕ್ಕಳನ್ನು ವೃತ್ತಿಶಿಕ್ಷಣ ಧಾರೆಗೆ ಸೇರಿಸಲು ಉತ್ಸಾಹ ತೋರುವ ನಿಟ್ಟಿನಲ್ಲಿ ಪ್ರೇರೇಪಿಸುವುದರಲ್ಲಿ ಸಂಶಯವಿಲ್ಲ. ಅಲ್ಲದೇ ಇದರಿಂದ ಈ ಕ್ಷೇತ್ರಕ್ಕೆ ಧುಮುಕುವ ವಿದ್ಯಾರ್ಥಿಗಳ ಬಗ್ಗೆ ಒಂದು ರೀತಿಯ ಸಾಮಾಜಿಕ ಸ್ವೀಕಾರಾರ್ಹತೆ ಏರ್ಪಡುತ್ತದೆ. ಕೈಗಾರಿಕಾ ಕ್ಷೇತ್ರಕ್ಕೆ ಸಿದ್ಧ ಶ್ರಮಶಕ್ತಿ ರೂಪುಗೊಳ್ಳುತ್ತದೆ ಅಲ್ಲದೆ ಕುಶಲತೆಯ ಗುಣಮಟ್ಟ ಹೆಚ್ಚುತ್ತಾ ಹೋಗುತ್ತದೆ. ಮೇಲ್ಕಾಣಿಸಿದ ದಿಕ್ಕಿನಲ್ಲಿ ಎನ್‌ಎಸ್‌ಡಿಸಿಯು ಹಲವು ಪ್ರಮುಖ ಕ್ರಮಗಳನ್ನು ಈಗಾಗಲೇ ಕೈಗೊಂಡಿದೆಯಲ್ಲದೆ ಹಲವಾರು ಕಾರ್ಯಯೋಜನೆಗಳ ಮೂಲಕ



ಈ ಸವಾಲುಗಳು ಮತ್ತು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಮುನ್ನಡೆದಿದೆ. ಕುಶಲತೆ ಅಭಿವೃದ್ಧಿ ಕುರಿತು ಪ್ರತಿ ರಾಜ್ಯವೂ ಸಹ ಈ ನಿಟ್ಟಿನಲ್ಲಿ ಗಮನಹರಿಸಿ ಸಧ್ಯದ ಪರಿಸ್ಥಿತಿಯನ್ನು ಉತ್ತಮಗೊಳಿಸುವಲ್ಲಿ ಪ್ರಯತ್ನಗಳಾಗುತ್ತಿವೆ. ನನ್ನ ವೈಯಕ್ತಿಕ ಅಭಿಪ್ರಾಯದಲ್ಲಿ ಹೇಳುವುದಾದರೆ ಇಲ್ಲಿ ತಿಳಿಸಲಾದ ಮುಖ್ಯವಾದ ಶಿಫಾರಸುಗಳನ್ನು ಜಾರಿಗೊಳಿಸುವುದಲ್ಲದೇ ಸದ್ಯದ ಶಿಕ್ಷಣ ವ್ಯವಸ್ಥೆಯನ್ನೇ ವೃತ್ತೀಕರಿಸುವ ಅಗತ್ಯವಿದೆ. ಇಂದಿನ ವೃತ್ತಿಪರ ಕಾರ್ಯಕ್ರಮಗಳನ್ನು ಅವುಗಳಲ್ಲಿ ಕೈಗಾರಿಕೆಯ ಅಗತ್ಯಕ್ಕನುಗುಣವಾಗಿ ಪಠ್ಯಗಳನ್ನು ಅಭಿವೃದ್ಧಿಪಡಿಸುವ ಮೂಲಕ ವೃತ್ತೀಕರಿಸಿ ಕುಶಲತೆ ತರಬೇತಿಗೆ ಮೂಲಸೌಕರ್ಯ ಸಿದ್ಧಪಡಿಸಿ, ಪಠ್ಯ ಅಭಿವೃದ್ಧಿ, ತರಬೇತಿ, ವಿದ್ಯಾರ್ಥಿಯ ಅವಗಾಹನೆ ಮತ್ತು ವಿದ್ಯಾರ್ಥಿಗಳು ಪದವಿ ಹಾಗೂ ಕುಶಲತೆ ತರಬೇತಿಯನ್ನು ಒಟ್ಟಿಗೇ ಪಡೆಯಬಹುದಾದ ಒಂದು ಮಾದರಿಯನ್ನು ಸಿದ್ಧಪಡಿಸುವ ನಿಟ್ಟಿನಲ್ಲಿ ಎಲ್ಲಾ ಕಡೆಗಳಲ್ಲಿ ಕೈಗಾರಿಕೆ ಕ್ಷೇತ್ರವನ್ನು ಒಳಗೊಳ್ಳಬೇಕಿದೆ. ❑

ಅಭಿವೃದ್ಧಿ ಪಥ

## ಕೈಮಗ್ಗ ಉತ್ಪನ್ನಗಳಿಗೆ ಇ ಮಾರುಕಟ್ಟೆ

ಗ್ರಾಹಕರನ್ನು ಅದರಲ್ಲಿಯೂ ವಿಶೇಷವಾಗಿ ಯುವಗ್ರಾಹಕರನ್ನು ಗಮನದಲ್ಲಿಟ್ಟುಕೊಂಡು ಕೈಮಗ್ಗ ಉತ್ಪನ್ನಗಳ ಇ ಮಾರುಕಟ್ಟೆ ಕೈಗೊಳ್ಳಲು ನೀತಿ ಚೌಕಟ್ಟನ್ನು ರೂಪಿಸಲಾಗಿದೆ. ಇದರನ್ವಯ ಇ–ಕಾಮರ್ಸ್ ಸಂಸ್ಥೆಗಳು ಕೈಮಗ್ಗ ಉತ್ಪನ್ನಗಳ ವಿದ್ಯುನ್ಮಾನ ಮಾರುಕಟ್ಟೆಗಾಗಿ ಕೈಮಗ್ಗ ಜಿಲ್ಲಾಧಿಕಾರಿ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ.

ಈ ಸಂಸ್ಥೆಗಳ ವಿಶ್ವಾಸಾರ್ಹತೆ ಆಧರಿಸಿ, ಇದಕ್ಕಾಗಿಯೇ ನೇಮಿಸಲಾದ ಸಮಿತಿ, ಉದ್ದೇಶಿತ ನೇಮಕಾತಿಗಾಗಿ ಶಿಫಾರಸುಗಳನ್ನು ಮಾಡುತ್ತದೆ. ಅರ್ಜಿವಿಲೇವಾರಿಗೆ ಸರಾಸರಿ 3 ವಾರ ತೆಗೆದುಕೊಳ್ಳುತ್ತದೆ. ಸೂಕ್ತ ಅನುಮೋದನೆ ನಂತರ ಇ ಕಾಮರ್ಸ್ ಕಂಪನಿಗಳು ಉತ್ಪನ್ನಗಳ ಚಿತ್ರಗಳನ್ನು ತಮ್ಮ ಹೋಂ ಪೇಜ್‌ಗಳಲ್ಲಿ ಪ್ರದರ್ಶಿಸಬಹುದಾಗಿದೆ.

ಕೈ ಮಗ್ಗ ಜಿಲ್ಲಾಧಿಕಾರಿಗಳ ಕಚೇರಿ ಮುಂದಿನ ಕಾರ್ಯಗಳನ್ನು ನಿರ್ವಹಿಸುತ್ತದೆ.

* ಅನುಮೋದಿತ ಇ–ಕಾಮರ್ಸ್ ಸಂಸ್ಥೆಯ ಹೆಸರು ವಿವರಗಳನ್ನು ಕಚೇರಿಯ ವೆಬ್‌ಸೈಟ್‌ಗಳಲ್ಲಿ ಹಾಕಲಾಗುತ್ತದೆ. ನೇಕಾರರ ಸೇವಾ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮೂಲಕವೂ ಜಾಹಿರಾತು ಪಡಿಸಲಾಗುತ್ತದೆ.
* ಕಾಲಕಾಲಕ್ಕೆ ಉತ್ಪನ್ನಗಳ ಬಗ್ಗೆ ಮಾಹಿತಿ ನೀಡಲಾಗುತ್ತದೆ

ಅನುಮೋದಿತ ವಾಣಿಜ್ಯ ಸಂಸ್ಥೆಯ ಕಾರ್ಯ ನಿರ್ವಹಣೆಯನ್ನು ನಿಯಮಿತವಾಗಿ ಜಾರಿಗೊಳಿಸಲಾಗುತ್ತದೆ. ❑

# ಮಹಿಳೆಯರ ಕೌಶಲ್ಯ ಬಳಕೆ; ನಿಜವಾದ ಸವಾಲು

* ದೇವನಾಥನ್



**ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರು ತಮ್ಮ ಮಕ್ಕಳ ಆರೈಕೆ ಮಾಡಲು ಬೇಕಾಗುವಷ್ಟು ಸಂಪಾದನೆ ಮೊದಲು ಸಾಧ್ಯವಾಗುತ್ತಿಲ್ಲ. ಕೆಲವೇ ಕಾರ್ಖಾನೆಗಳು ಮಾತ್ರ ಮಕ್ಕಳ ಆರೈಕೆ ಸೌಲಭ್ಯವನ್ನು ಒದಗಿಸುತ್ತವೆ. ಇದರಿಂದಾಗಿ ಉಡುಪು ಕಾರ್ಖಾನೆಗಳಲ್ಲಿ ಅಥವಾ ಎಲೆಕ್ಟ್ರಾನಿಕ್ ಕಾರ್ಖಾನೆಗಳಲ್ಲಿನ ಕಾರ್ಮಿಕ ಮಹಿಳೆಯರು ಮಕ್ಕಳಾದ ಮೇಲೆ ಕೆಲಸ ಬಿಡುತ್ತಾರೆ.**

ಭಾರತವನ್ನು ಕೌಶಲ್ಯೀಕರಿಸುವ ವಿಷಯವು ಸಮರ್ಥನೀಯ ಆದ್ಯತೆಯನ್ನು ಪಡೆಯುತ್ತಿದೆ. ಆದರೆ ಮಹಿಳೆಯರ ಕೌಶಲ್ಯ ಬೆಳವಣಿಗೆಯ ವಿಷಯವನ್ನು ನಿರ್ವಹಿಸುವುದರಲ್ಲಿ ಮಹಿಳೆಯರ ಕೌಶಲ್ಯ ಬೆಳವಣಿಗೆಗೆ ಪ್ರತಿಬಂಧಕವಾಗಿರುವ ಅಂಶಗಳ ಬಗ್ಗೆ ಗಮನಹರಿಸಬೇಕಾದ ಅಗತ್ಯವಿದೆ. ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ, ಮಹಿಳೆಯ ಕೌಶಲ್ಯ ಬೆಳವಣಿಗೆಯ ಪೂರಕ ಅಂಶಗಳನ್ನು ಉತ್ತೇಜಿಸುವ ಅಗತ್ಯವಿದೆ. ಕೌಶಲ್ಯಗಳಲ್ಲಿ ತರಬೇತಿ ಪಡೆಯುವ ಮಹಿಳೆಯರ ಸಂಖ್ಯೆಯನ್ನು ಹೆಚ್ಚಿಸಿದರೆ ಸಾಕಾಗುವದಿಲ್ಲ. ದೇಶದ ಆರ್ಥಿಕ ಬದುಕಿನಲ್ಲಿ ಕೌಶಲ್ಯ ಹೊಂದಿದ ಮಹಿಳೆಯರ ಸಂಖ್ಯೆಯನ್ನು ಹೆಚ್ಚಿಸಲೋಸುಗವೇ, ಮೊದಲನೆಯದಾಗಿ, ಮಹಿಳೆಯರು ಕೌಶಲ್ಯ ತರಬೇತಿಯನ್ನು ಪಡೆಯಲು ಅವರು ಎದುರಿಸುವ ಪ್ರತಿಬಂಧಕವಾಗಿರುವ ಅಂಶಗಳನ್ನು ಪರಿಹರಿಸುವುದು ಹಾಗೂ ಎರಡನೆಯದಾಗಿ ಕೌಶಲ್ಯ ಹೊಂದಿದ ಮಹಿಳೆಯರ ಉದ್ಯೋಗಕ್ಕೆ ಪ್ರತಿಬಂಧಕಗಳಾಗಿರುವ ಅಂಶಗಳನ್ನು ನಿರ್ವಹಿಸುವುದು ಬಹಳ ಅತ್ಯಗತ್ಯವಾದುದು.

ಹೆಚ್ಚಿನ ಸಂಖ್ಯೆಯಲ್ಲಿ ಹುಡುಗಿಯರು ಅಥವಾ ಯುವತಿಯರು ಐಟಿಐಗಳು ಮತ್ತು ಇತರೆ ಕೌಶಲ್ಯ ತರಬೇತಿ ಸಂಸ್ಥೆಗಳಲ್ಲಿ ತರಬೇತಿ ಪಡೆಯಲು ಏಕೆ ಮುಂಬರುತ್ತಿಲ್ಲ? ಅದೇ ಸಮಯದಲ್ಲಿ ಹೆಚ್ಚು ಯುವತಿಯರು ಕಂಪ್ಯೂಟರ್ ತರಬೇತಿ (ಐಟಿ)ಯಲ್ಲಿರುವುದನ್ನು ನಾವು ಕಾಣುತ್ತೇವೆ. ತರಬೇತಿಗೆ ತಗಲುವ ಖರ್ಚಿನ ಸಮರ್ಥನೆಗೆ, ಕೌಶಲ್ಯವು ಬೇಡದಿರುವ ಉದ್ಯೋಗಕ್ಕಿಂತ, ಹೆಚ್ಚು ಸಂಬಳ ನೀಡುವ ಒಂದು ಉದ್ಯೋಗದ ಅವಕಾಶವನ್ನು ಪಡೆಯುವುದು ಅಗತ್ಯವಾಗಿರುತ್ತದೆ. ಹಾಗೆಯೇ, ಯುವತಿಯರು ಆ ಕೆಲಸ ಮಾಡುವಂತಿರಬೇಕಾಗುತ್ತದೆ ಅಥವಾ ಆ ಉದ್ಯೋಗದಲ್ಲಿ ತಮ್ಮ ವೃತ್ತಿಯನ್ನು ಮುಂದುವರೆಯುವಂತೆ ಇರಬೇಕಾಗುತ್ತದೆ.

ಇಲ್ಲಿ ನಾವು ಕಾರ್ಖಾನೆಗಳು ಮತ್ತು ಐಟಿ (ಸೇವಾ)ವಲಯಗಳಲ್ಲಿ ಕೆಲಸ ಮಾಡುವ ಹೆಂಗಸರ ನಡುವಿನ ವ್ಯತ್ಯಾಸವನ್ನು ಗಮನಿಸಬಹುದು. ಮಕ್ಕಳ ಹೆರುವ ವಯಸ್ಸಿನಲ್ಲಿ ಒಬ್ಬ ಮಹಿಳೆಯು ತನ್ನ ಕೆಲಸವನ್ನು ಮುಂದುವರೆಸಲು ಅವಳಿಗೆ (ಮತ್ತು ಅವಳ ಕುಟುಂಬಕ್ಕೆ) ತನ್ನ ಮಗುವಿನ ಆರೈಕೆಯನ್ನು ಮಾಡುವಂತಾಗಬೇಕು. ಭಾರತದಲ್ಲಿ ಸಾರ್ವಜನಿಕ ಮಕ್ಕಳ ಆರೈಕೆ ವ್ಯವಸ್ಥೆಯಿಲ್ಲ. ಇದರೊಂದಿಗೆ, ಮಕ್ಕಳ ಆರೈಕೆಯು ಮಹಿಳೆಯ ಜವಾಬ್ದಾರಿ ಎಂದು ಪಿತೃಪ್ರಧಾನ ರೂಢಿಗಳು ಹೇರಿವೆ. ಹೀಗಾಗಿ, ಮಕ್ಕಳ ಆರೈಕೆಯ ಇಡಿ ಹೊರೆಯನ್ನು ಮಹಿಳೆಯರಿಗೆ ವಹಿಸಲಾಗುತ್ತದೆ.

ಮಹಿಳೆಯರು ವೃತ್ತಿಪರರಾಗಿ ಕೆಲಸ ಮಾಡುವ ಐಟಿ ವಲಯದಲ್ಲಿ (ಅಥವಾ ಕಾನೂನು ಮತ್ತು ವೈದ್ಯಕೀಯ ವೃತ್ತಿಪರ ಮಹಿಳೆಯರ ಸಂದರ್ಭದಲ್ಲಿ) ಅವರು ವೃತ್ತಿಪರರಾಗಿ ಕೆಲಸಮಾಡುವಾಗ ತಮ್ಮ ಮಗುವಿನ ಆರೈಕೆಯ ಖರ್ಚನ್ನು ಭರಿಸುವಷ್ಟು ಸಂಪಾದನೆ ಮಾಡುತ್ತಾರೆ. ಇದರೊಂದಿಗೆ ಹಲವು ಐಟಿ ಕಂಪನಿಗಳಲ್ಲಿ ತರಬೇತಿ ಹೊಂದಿದ ಮಹಿಳೆಯನ್ನು ಕೆಲಸದಲ್ಲಿ ಉಳಿಸಿಕೊಳ್ಳಲು ಸಡಿಲವಾದ

* ವಿಸಿಟಿಂಗ್ ಪ್ರೊಫೆಸರ್, ಇನ್‌ಸ್ಟಿಟ್ಯೂಟ್ ಆಫ್ ಹ್ಯುಮನ್ ಡೆವೆಲಪ್‌ಮೆಂಟ್, ನವದೆಹಲಿ, ವಿಸಿಟಿಂಗ್ ರೀಸರ್ಚ್ ಫೆಲ್ಲೊ, ಡ್ಯೂಕ್ ವಿಶ್ವವಿದ್ಯಾಲಯ, ಯುಎಸ್ಎ
Email : nathandev@hotmail.com

ಕೆಲಸದ ಸಮಯ ಮತ್ತು ಭಾಗಶಃ ಮನೆಯಲ್ಲಿ ಕೆಲಸ ಮಾಡುವ ಅವಕಾಶವನ್ನು ಒದಗಿಸಲಾಗುತ್ತದೆ. ಇದರಿಂದಾಗಿ, ಇಂತಹ ವೃತ್ತಿಪರ ಮಹಿಳೆಯರಿಗೆ ಮಗುವಿನ ಹುಟ್ಟು ಮತ್ತು ಆರೈಕೆಗಾಗಿ ತಮ್ಮ ವೃತ್ತಿಪರ ಉದ್ಯೋಗವನ್ನು ಬಿಡಬೇಕೆಂದೇನೂ ಇಲ್ಲ.

ಇನ್ನೊಂದೆಡೆ, ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರು ತಮ್ಮ ಮಕ್ಕಳ ಆರೈಕೆ ಮಾಡಲು ಬೇಕಾಗುವಷ್ಟು ಸಂಪಾದನೆಗಿಂತ ಅತ್ಯಂತ ಕಡಿಮೆ ಸಂಪಾದನೆ ಮಾಡುತ್ತಾರೆ. ಇದರೊಂದಿಗೆ, ಕೆಲವೇ ಕಾರ್ಖಾನೆಗಳು ಮಕ್ಕಳ ಆರೈಕೆ ಸೌಲಭ್ಯವನ್ನು ಒದಗಿಸುತ್ತವೆ. ಇದರ ಪರಿಣಾಮವೆಂದರೆ ಉಡುಪು ಕಾರ್ಖಾನೆಗಳಲ್ಲಿ ಕೆಲಸಮಾಡುವ ಮಹಿಳಾ ಟೈಲರುಗಳು ಅಥವಾ ಎಲೆಕ್ಟ್ರಾನಿಕ್ ಕಾರ್ಖಾನೆಗಳಲ್ಲಿ ಬಿಡಿಭಾಗ ಜೋಡಿಸುವ ಕಾರ್ಮಿಕ ಮಹಿಳೆಯರು ಮಕ್ಕಳಾದ ಮೇಲೆ



ಕೆಲಸ ಬಿಡುತ್ತಾರೆ. ಅವರಲ್ಲಿ ಕೆಲವರು, ಅಂದರೆ ಉಡುಪು ಕಾರ್ಖಾನೆಗಳ ಮಹಿಳೆಯರಂತೆ ಅತಿ ಕಡಿಮೆ ಸಂಬಳಕ್ಕಾಗಿ ಮನೆಯಿಂದಲೇ ಅರೆಕಾಲಿಕ ಕೆಲಸವನ್ನು ಕೆಲಸಮಾಡುತ್ತಾರೆ. ಅವರು ಇಂತಹ ಸಡಿಲ ಸಮಯಾವಕಾಶದ ವ್ಯವಸ್ಥೆಯಿಂದಾಗಿ ತಮ್ಮ ಮಕ್ಕಳ ಆರೈಕೆಯ ಜೊತೆಗೆ ಕಡಿಮೆ ಸಂಬಳಕ್ಕೆ ಮನೆಯಲ್ಲಿ ಕೆಲಸಮಾಡುತ್ತಾರೆ. ಏಕೆಂದರೆ ನಿಯತ ಕಾಲದ ಕೆಲಸದ ಅವಧಿಯ ಕಾರ್ಖಾನೆಯಲ್ಲಿ ಇದು ಸಾಧ್ಯವಿಲ್ಲ.

ಸಾರ್ವಜನಿಕ ಅಥವಾ ಕಾರ್ಖಾನೆಯಿಂದ ಒದಗಿಸುವ ಮಕ್ಕಳ ಆರೈಕೆ ಸೌಕರ್ಯ ಅಭಾವದ ಅಂಶವು ಕಾರ್ಖಾನೆಗಳಲ್ಲಿ ಕೌಶಲ್ಯ ಹೊಂದಿದ ಕೆಲಸಗಾರರಾಗಿ ವೃತ್ತಿಯನ್ನು ಅರಸುವುದರಲ್ಲಿ ಮಹಿಳೆಯರನ್ನು (ಉತ್ತಮ ಸಂಪಾದನೆಯ ವೃತ್ತಿಪರ ಮಹಿಳೆಯರಿಗಿಂತ) ಹೆಚ್ಚು ಪ್ರತಿಬಂಧಿಸುತ್ತದೆ. ಮಹಿಳೆಯರ ಭಾಗಿತ್ವ ಕ್ಷೀಣಿಸುತ್ತಿರುವ ಶ್ರಮ ಶಕ್ತಿಯ ಕುರಿತ ಎಲ್ಲಾ ಚರ್ಚೆಗಳಲ್ಲಿ ಮಹಿಳೆಯ ಗೃಹ ಕರ್ತವ್ಯಗಳ ಅಡ್ಡಿಗಳು ವಿಶೇಷವಾಗಿ ಮಕ್ಕಳ ಅರೈಕೆ ಜವಾಬ್ದಾರಿಗಳ ಬಗ್ಗೆ ಬಹಳ ಕಡಿಮೆ ಗಮನ ಹರಿಸಲಾಗಿದೆ. ವಿಶೇಷವಾಗಿ ಮನೆಯಿಂದ ನಿಯತ ಕೆಲಸದಿಂದಾಗಿ ಹೊರಗಿರಬೇಕಾಗಿರುವ ಕಾರ್ಖಾನೆಗಳಲ್ಲಿ, ಮಹಿಳೆಯರು ಶ್ರಮಜೀವಿ ಪಡೆಯಲ್ಲಿ ಸೇರ್ಪಡೆಯಾಗಲು ಪ್ರತಿಬಂಧಕವಾಗಿರುವ ಅಂಶದ ಬಗ್ಗೆ ಹೆಚ್ಚು ಗಮನ ನೀಡಿಲ್ಲ.

ಬೇಡಿಕೆಯ ನಿಟ್ಟಿನಲ್ಲಿ ಪರಿಸ್ಥಿತಿ ಹೇಗಿದೆಯೆಂದು ನೋಡಿದರೆ ಉದ್ಯೋಗಗಳಿದ್ದರೂ ಮಾಲಿಕರು ಕೌಶಲ್ಯ ಹೊಂದಿದ ಮಹಿಳೆಯರಿಗೆ ಕೆಲಸವನ್ನೇಕೆ ನೀಡುತ್ತಿಲ್ಲ ಎಂಬ ಅಂಶ ಕಂಡುಬರುತ್ತದೆ. ಪ್ರಸಕ್ತವಾಗಿ ಹೆರಿಗೆ ಮತ್ತು ಮಕ್ಕಳ ಆರೈಕೆ (ಶಿಶುಪಾಲನಾ ಕೇಂದ್ರ)ಗಳಿಗೆ ಸಂಬಂಧಿಸಿದಂತೆ ಒದಗುವ ಖರ್ಚನ್ನು ಮಹಿಳೆಯರನ್ನು ನೇಮಕಮಾಡುವ ಮಾಲಿಕರೇ ಭರಿಸುತ್ತಾರೆ. ಈ ಖರ್ಚನ್ನು ಗಮನದಲ್ಲಿರಿಸಿ ಮಾಲಿಕರು ಹೆರಿಗೆ ಮತ್ತು ಮಕ್ಕಳ ಆರೈಕೆಗಳ ಪ್ರಯೋಜನಗಳ ಅಗತ್ಯವಿರದ ಗಂಡಸರನ್ನು ನೇಮಕಾತಿಮಾಡಿಕೊಳ್ಳಲು ಇಷ್ಟಪಡುತ್ತಾರೆ.

ಹೆರಿಗೆ ಮತ್ತು ಮಕ್ಕಳ ಆರೈಕೆ ಸೌಲಭ್ಯಗಳು ಅಗತ್ಯವೆಂದು ಪರಿಗಣಿಸಿದರೆ, ಕೌಶಲ್ಯಹೊಂದಿದ ಮಹಿಳೆಯರನ್ನು ಕೆಲಸಕ್ಕೆ ನೇಮಿಸುವುದು ಪ್ರತಿಬಂಧಕ ಅಂಶವಲ್ಲ ಎಂಬುವಂತಾಗುವ ಯಾವುದಾದರೂ ಮಾರ್ಗವಿದೆಯೇ? ಇದನ್ನು ಮಾಡುವ ಒಂದು ವಿಧಾನವೆಂದರೆ, ಮಹಿಳೆಯರನ್ನು ನೇಮಿಸಿಕೊಳ್ಳುವುದರಿಂದಾಗುವ ಹೆಚ್ಚುವರಿ ಖರ್ಚನ್ನು ಮಾಲಿಕ ಅಥವಾ ಕಂಪನಿಯಿಂದ ವರ್ಗಾಯಿಸುವುದು. ಇದಕ್ಕಾಗಿ ಕಾಣುವ ಒಂದು ಸಾಧ್ಯತೆಯೆಂದರೆ ಇದನ್ನು ಸರ್ಕಾರವೇ ಭರಿಸುವುದು . ಅಂದರೆ ತೆರಿಗೆ ಮೂಲಕ ಇದನ್ನು ಭರಿಸಬೇಕಾಗುತ್ತದೆ. ಇಂತಹ ತೆರಿಗೆ ಸಂಬಂಧಿತ ಹೆರಿಗೆ ಮತ್ತು ಮಕ್ಕಳ ಆರೈಕೆ ಖರ್ಚು ಯಾವುದೇ ನಿರ್ದಿಷ್ಟ ಮಾಲಿಕರ ಮೇಲೆ ಬೀಳದೆ ಇಡಿಯಾಗಿ ತೆರಿಗೆದಾರರ ಮೇಲೆ ಬೀಳುತ್ತದೆ.

ಆದರೆ, ಮಹಿಳಾ ಉದ್ಯೋಗಿಗಳನ್ನು ನೇಮಿಸಲು ಮಾಲಿಕರಿಗೆ ರಿಯಾಯಿತಿಯನ್ನು ಒದಗಿಸಲು ಮಧ್ಯಮ ವರ್ಗದವರನ್ನೂ ಸೇರಿದಂತೆ ತೆರಿಗೆದಾರರು ಮತ್ತು ಪರೋಕ್ಷವಾಗಿ (ಸರಕು) ತೆರಿಗೆದಾರರಾಗಿರುವ ಇಡಿ ಜನಸಮುದಾಯವು ಭರಿಸುವುದು ನ್ಯಾಯಸಮ್ಮತವಲ್ಲ. ಇದಕ್ಕಾಗಿ, ಮಾಲಿಕರಿಗೆ ಚಂದಾ ಅಥವಾ ತೆರಿಗೆ ಹಾಕುವ



ವ್ಯವಸ್ಥೆಯು ಉತ್ತಮ. ಮಹಿಳಾ ಕಾರ್ಮಿಕರ ಹೆರಿಗೆ ಮತ್ತು ಮಕ್ಕಳ ಆರೈಕೆ ಸಂಬಂಧಿತ ಪ್ರಯೋಜನಗಳಿಗಾಗಿ ಖರ್ಚನ್ನು ಪಾವತಿಸಲು ಹಣಕಾಸನ್ನು ಕಾರ್ಖಾನೆ ಮಟ್ಟದಲ್ಲಿ ಹೇರುವುದು ಉತ್ತಮ. ಈ ಹೊರೆಯು ತೆರಿಗೆಯ ಮೂಲಕ ಇಡಿಯಾಗಿ ಮಾಲಿಕರ (ಅಥವಾ ಆ ನಿರ್ದಿಷ್ಟ ಕಾರ್ಖಾನೆಗಳ) ಮೇಲೆ ಬೀಳುತ್ತದೆ. ಆದರೆ ಮಹಿಳೆಯರನ್ನು ಉದ್ಯೋಗಕ್ಕೆ ತೆಗೆದುಕೊಳ್ಳುವ ನಿರ್ದಿಷ್ಟ ಮಾಲಿಕರ ಮೇಲೆ ಬೀಳುವುದಿಲ್ಲ. ಈಗ ಕಾನೂನಿನ ಪ್ರಕಾರ ಲಾಭದ ಶೇಕಡಾ ಎರಡರ ಸಿಎಸ್‌ಆರ್ ಖರ್ಚಿನಂತೆ,ಇಂತಹ ತೆರಿಗೆಯನ್ನು ಕಾರ್ಖಾನೆಯ ಲಾಭದ ಮೇಲೆ ಹಾಕಬೇಕಾಗುತ್ತದೆ. ಕೌಶಲ್ಯ ಹೊಂದಿದ ಮಹಿಳೆಯನ್ನು ನೇಮಿಸುವಲ್ಲಿ ಬರುವ ಹೆಚ್ಚುವರಿ ಖರ್ಚನ್ನು ಭರಿಸಲು ತೆರಿಗೆಯನ್ನು ಹಾಕುವುದು ಒಬ್ಬ ನಿರ್ದಿಷ್ಟ ಮಾಲಿಕನ ಪಾಲಿನ ಪ್ರತಿಬಂಧಕ ಅಂಶವನ್ನು ತೆಗೆಯುವುದಾಗಿದೆ.

ಕಾರ್ಖಾನೆಗಳಲ್ಲಿ ಕೌಶಲ್ಯ ಹೊಂದಿದ ಮಹಿಳೆಯರ ನೇಮಿಸಲು ಪ್ರತಿಬಂಧಕವಾಗಿರುವ ಮೂರನೆಯ ಅಂಶವಿದೆ. ಉಪಕರಣಗಳನ್ನು ಪೂರ್ಣಪ್ರಮಾಣ ಸಾಮರ್ಥ್ಯದಲ್ಲಿ ಬಳಸಲು, ಪದಾರ್ಥಗಳಿಗೆ ಸಾಕಷ್ಟು ಬೇಡಿಕೆಯಿದ್ದ ಸಂದರ್ಭದಲ್ಲಿ ಕಾರ್ಖಾನೆಗಳು ರಾತ್ರಿ ಪಾಳಿಯನ್ನೂ ಸೇರಿದಂತೆ ಮೂರು ಪಾಳಿಗಳಲ್ಲಿ ಕೆಲಸಮಾಡಬೇಕಾಗುತ್ತದೆ.



ಆದರೆ, ಪ್ರಸಕ್ತ ಸಂದರ್ಭದಲ್ಲಿ ಮಹಿಳೆಯರಿಗೆ ರಾತ್ರಿ ವೇಳೆಯಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಪ್ರಯಾಣ ಮಾಡುವುದು ಬಹಳ ಕಷ್ಟವೆಂದು ಪುನರಾವರ್ತಿಸಬೇಕಿಲ್ಲ. 2012ರ ಡಿಸೆಂಬರಿನಲ್ಲಿ ದೆಹಲಿಯ ಔಷಧಿವಿಜ್ಞಾನ ತರಬೇತಿ ಯುವತಿಯೊಬ್ಬಳ ಘೋರ ಅತ್ಯಾಚಾರ ಹಾಗೂ ಕೊಲೆಯು ದೇಶದ ರಾಜಧಾನಿಯಲ್ಲೂ ಸಾರ್ವಜನಿಕ ಸ್ಥಳಗಳಲ್ಲಿ ಮಹಿಳೆಯರು ಸುರಕ್ಷಿತರಲ್ಲ ಎನ್ನುವುದಕ್ಕೆ ಸಾಕ್ಷಿ. ಕಾಲ್ ಸೆಂಟರುಗಳು ಮತ್ತು ಐಟಿ ಆಫೀಸುಗಳು ಸುಮಾರಾಗಿ ಕಾರುಗಳನ್ನು ಮತ್ತು ಮಿನಿಬಸ್ಸುಗಳನ್ನು



ತಮ್ಮ ಎಲ್ಲ ಉದ್ಯೋಗಿಗಳಿಗೆ ಒದಗಿಸುವ ಮೂಲಕ ಈ ಸಮಸ್ಯೆಯಿಂದ ಒಂದು ರೀತಿಯಲ್ಲಿ ಹೊರಬಂದಿವೆ. ಆದರೆ ಲಾಭವು ಕಡಿಮೆಯಿರುವ ಕಾರ್ಖಾನೆ ಘಟಕಗಳಲ್ಲಿ ಇಂತಹ ಖರ್ಚನ್ನು ಭರಿಸಲಾಗುವುದಿಲ್ಲ.

ಸಾರಿಗೆ ಸೌಕರ್ಯವನ್ನು ಒದಗಿಸುವ ಕಾಲ್ ಸೆಂಟರುಗಳಲ್ಲೂ ಡಿಸೆಂಬರ್ 2012ರ ಅತ್ಯಾಚಾರ–ಕೊಲೆ ಘಟನೆಯ ನಂತರ ದೆಹಲಿಯ ಸುತ್ತಮುತ್ತಲಿನ ಕಾಲ್ ಸೆಂಟರುಗಳಲ್ಲಿ ಮಹಿಳೆಯರ ಸಂಖ್ಯೆ ಗಮನಾರ್ಹವಾಗಿ ಕಡಿಮೆಯಾಯಿತು ಎಂದು ಅಸೋಚಮ್ ವರದಿಮಾಡಿದೆ. ಹೀಗಾಗಿ, ನಾವು ಸಾರ್ವಜನಿಕ ಸ್ಥಳಗಳಲ್ಲಿ ವಿಶೇಷವಾಗಿ ರಾತ್ರಿ ವೇಳೆಯಲ್ಲಿ ಮಹಿಳೆಯರ ರಕ್ಷಣೆಯ ಅಭಾವವೂ ಕೂಡ ಕೌಶಲ್ಯಹೊಂದಿದ ಕೆಲಸಗಾರರಾಗಿ ಮಹಿಳೆಯರನ್ನು ಕೆಲಸಮಾಡಲು ಪ್ರತಿಬಂಧಿಸುವ ಅಂಶವೆಂದು ಪರಿಗಣಿಸಬೇಕಾಗುತ್ತದೆ.

ವುಮನ್ಸ್ ರೋಲ್ ಇನ್ ಎಕನಾಮಿಕ್ ಡೆವೆಲಪ್‌ಮೆಂಟ್ ಎಂಬ ತಮ್ಮ ಪ್ರಾರಂಭಿಕ ಅಧ್ಯಯನದಲ್ಲಿ ಎಸ್ತರ್ ಬೊಸರಪ್ (1970, ನ್ಯೂ ಯಾರ್ಕ್ ಸೇಂಟ್ ಮಾರ್ಟಿನ್ ಪ್ರೆಸ್) ಒಂದು ಆಸಕ್ತಿದಾಯಕ ಅಂಶವನ್ನು ಹೊರಗೆಡವಿದ್ದಾರೆ. “ಹೆರಿಗೆ ರಜೆ ಮತ್ತು ಶಿಶುಪಾಲನಾ ಕೇಂದ್ರಗಳ ಲಭ್ಯತೆಯ ನಿಯಮಗಳು ಮಹಿಳೆಯರನ್ನು ಕೆಲಸಕ್ಕೆ ನೇಮಿಸಲು ಪ್ರತಿಬಂಧಕ ಅಂಶ ಎಂಬವಾದ ಬಹಳ ಸಮರ್ಥನೀಯವಲ್ಲ. ಏಕೆಂದರೆ, ಮಹಿಳೆಯರಿಗೆ ಮಾಲಿಕರು ಒದಗಿಸುವ ಈ ಪ್ರಯೋಜನಗಳ ಹಣಕಾಸು ಹೊರೆಯನ್ನು ಮಹಿಳೆಯರನ್ನು ನೇಮಕಮಾಡಿಕೊಳ್ಳುತ್ತಾರೋ ಇಲ್ಲವೋ ಎಲ್ಲಾ ಮಾಲಿಕರಿಗೆ ವರ್ಗಾಯಿಸುವುದು ಸುಲಭ.” (1970:113)

“ಇಂತಹ ಹಣಕಾಸು ಸಮೀಕರಣ ಇಲ್ಲದೆಡೆಗಳಲ್ಲಿ, ಮಹಿಳೆಯರ ಕುರಿತು ನಕಾರಾತ್ಮಕ ಉದ್ಯೋಗ ಪರಿಣಾಮಗಳ ದೂರುಗಳಿದ್ದರೂ ಸಹಾ, ಇತರೆ ಮತ್ತು ಬಹಿರಂಗಗೊಳಿಸದ ಕಾರಣಗಳಿಗೆ ಕಾರ್ಖಾನೆಗಳಲ್ಲಿ ಮಹಿಳೆಯರನ್ನು ನೇಮಕಾತಿಯನ್ನು ಹೆಚ್ಚಿಸುವುದು ಅಪೇಕ್ಷಣೀಯವಲ್ಲ ಎಂದು ಭಾವಿಸಲಾಗಿದೆ” ಎಂದು ಆಕೆ ಹೇಳುತ್ತಾರೆ. ದೆಹಲಿಯಲ್ಲಿ



ಡಿಸೆಂಬರ್ 2012ರ ಅತ್ಯಾಚಾರ – ಕೊಲೆ ನಡೆದ ನಂತರ, ಮಹಿಳೆಯರು ರಾತ್ರಿ ವೇಳೆಯಲ್ಲಿ ಸಾರ್ವಜನಿಕ ಸ್ಥಳಗಳಿಗೆ ಹೋಗಬಾರದೆಂದು ಹಲವರು ವಾದಿಸಿದ್ದಾರೆ. ಸಾರ್ವಜನಿಕ ಸ್ಥಳಗಳಲ್ಲಿ ಮಹಿಳೆಯರಿಗೆ ಸುರಕ್ಷೆಯನ್ನು ಒದಗಿಸುವ ಬದಲು ಅವರು ಮಹಿಳೆಯರು ಹೋಗಬಾರದು ಅಥವಾ ಅವರನ್ನು ಹೋಗದಂತೆ ಹಿಡಿದಿಡಬೇಕು ಎಂದು ಹೇಳಿದ್ದಾರೆ. ಇದು ಸಹಜವಾಗಿಯೇ ಕೌಶಲ್ಯದ ಉದ್ಯೋಗ ಮತ್ತು ವೃತ್ತಿಗಳಲ್ಲಿ ಕೆಲಸ ಮಾಡಲು ಮಹಿಳೆಯರು ರಾತ್ರಿ ವೇಳೆ ತಮ್ಮ ಮನೆಗಳಿಂದ ಹೊರಬರುವುದನ್ನು ಪ್ರತಿಬಂಧಿಸುತ್ತದೆ.

ಇಂತಹ ವಾದಗಳ ಪ್ರಕಾರ ಮಹಿಳೆಯರ ಕೌಶಲ್ಯವನ್ನು ಉತ್ತೇಜಿಸಲು ಮೂರು ಅಂಶಗಳು ಪ್ರತಿಬಂಧಕಗಳಾಗಿವೆ. ಅವುಗಳೆಂದರೆ, 1. ಮಕ್ಕಳ ಹೆರುವ ವಯಸ್ಸಿನಲ್ಲಿ ಮಹಿಳೆಯರು ಶ್ರಮಶಕ್ತಿ ಪಡೆಯಲ್ಲಿ ಉಳಿಯಲು ಸಾರ್ವಜನಿಕವಾಗಿ ಒದಗಿಸಲ್ಪಡುವ ಮಕ್ಕಳ ಆರೈಕೆ ಅಭಾವ, 2. ಹೆಂಗಸರನ್ನು ನೇಮಿಸಿಕೊಂಡಾಗ ನಿರ್ದಿಷ್ಟ ಮಾಲಿಕರಿಗೆ ತಗಲುವ ಹೆಚ್ಚುವರಿ ಖರ್ಚು ಮತ್ತು 3.ವಿಶೇಷವಾಗಿ ರಾತ್ರಿ ವೇಳೆಯಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಮಹಿಳೆಯರ ಸುರಕ್ಷತೆಯ ತೀವ್ರ ಅಭಾವ. ❑

## ಯೋಜನಾ ಚಂದಾದಾರರಲ್ಲಿ ಕೋರಿಕೆ

**ಯೋಜನಾ ಪತ್ರಿಕೆಗೆ ಚಂದಾ ಬಯಸುವವರು ಮನಿಆರ್ಡರ್ ಕಳಿಸುವಾಗ ಜಿಲ್ಲೆ ಹಾಗೂ ಅಂಚೆ ಪಿನ್‌ಕೋಡ್ ಸಂಖ್ಯೆ ಸೇರಿದಂತೆ ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಒದಗಿಸಬೇಕು. ಮನಿಆರ್ಡರ್ ಕಳಿಸಿದ ಎಂಟು ದಿನಗಳಲ್ಲಿ ನಮ್ಮ ಕಚೇರಿಯನ್ನು ಸಂಪರ್ಕಿಸಿ ತಮ್ಮ ವಿಳಾಸವನ್ನು ಚಂದಾದಾರರು, ಸರಿ ಇದೆಯೇ ಎಂದು ದೃಢಪಡಿಸಿಕೊಳ್ಳಬೇಕು ಹಾಗೂ ಚಂದಾ ಸಂಖ್ಯೆಯನ್ನು ಪಡೆದುಕೊಳ್ಳಬೇಕು. ಚಂದಾದಾರರು ತಮ್ಮ ಯಾವುದೇ ಅಗತ್ಯಗಳಿಗೆ ಕಚೇರಿ ಸಂಪರ್ಕಿಸಿದಾಗ ತಮ್ಮ ಚಂದಾ ಸಂಖ್ಯೆಯನ್ನು ತಿಳಿಸುವುದು ಅತ್ಯವಶ್ಯಕ. ಯೋಜನಾ ರವಾನೆ ಬಗ್ಗೆ ಯಾವುದೇ ದೂರು ದುಮ್ಮಾನಗಳನ್ನು ಆಯಾ ತಿಂಗಳೇ ಪರಿಹರಿಸಿಕೊಳ್ಳಬೇಕು. ಸಂಪರ್ಕಿಸಬೇಕಾದ ಇ–ಅಂಚೆ : yojanakannada@yahoo.com ದೂರವಾಣಿ ಸಂಖ್ಯೆ : 080 25537244 (ಸೋಮವಾರದಿಂದ – ಶುಕ್ರವಾರ. ವೇಳೆ 2.00 ರಿಂದ 4.00)**

# ಕೌಶಲ್ಯ ಮತ್ತು ಮಾನವ ಸಂಪನ್ಮೂಲ

* ಸಚಿನ್ ಅಧಿಕಾರಿ



**ಕೇಂದ್ರ ಸರ್ಕಾರ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ರಾಷ್ಟ್ರೀಯ ಆದ್ಯತೆಯಾಗಿ ಪರಿಗಣಿಸಿದೆ. ಮೊದಲು ಸಾಂಪ್ರದಾಯಿಕ ಉದ್ಯೋಗಗಳಿಗೆ ಮಾತ್ರ ಒತ್ತು ಸಿಗುತ್ತಿತ್ತು. ಆದರೆ ಇದೀಗ ಸ್ಕಿಲ್ ಇಂಡಿಯಾದಲ್ಲಿ ಎಲ್ಲ ಸ್ವರೂಪದ ಉದ್ಯೋಗಗಳಿಗೂ ಗಮನ ಕೇಂದ್ರೀಕರಿಸಲಾಗಿದೆ.**

ತ್ವರಿತವಾಗಿ ಪ್ರಗತಿ ಕಾಣುತ್ತಿರುವ ರಾಷ್ಟ್ರಗಳ ಸಾಲಿನಲ್ಲಿ ಭಾರತ ಮುಂಚೂಣಿಯಲ್ಲಿದೆ. ಇಲ್ಲಿನ ಶೇ. 64ರಷ್ಟು ಜನಸಂಖ್ಯೆ ದುಡಿಯುವ ವಯೋಮಾನಕ್ಕೆ ಸೇರಿದವರಾಗಿದ್ದಾರೆ. ಅಂದರೆ, ಯುವ ಸಮುದಾಯವೇ ಭಾರತದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದೆ ಎಂಬ ಮಹತ್ವದ ವಿಚಾರ ಅಧ್ಯಯನಗಳಿಂದ ತಿಳಿದುಬಂದಿದೆ. ಪ್ರತಿಭಾವಂತರು ಮತ್ತು ಉದ್ಯೋಗ ಮಾಡಲು ಶಕ್ತವಾಗಿರುವ ನೌಕರ ಪಡೆಯನ್ನು ಅಪಾರ ಪ್ರಮಾಣದಲ್ಲಿ ಹೊಂದಿರುವ ಭಾರತದ ಜನಸಂಖ್ಯೆಯ ಉದ್ಯೋಗಾರ್ಹತೆಯ ಸಂಪೂರ್ಣ ಚಿತ್ರಣ ಊಹಿಸಿದರೆ 2020ರ ವೇಳೆಗೆ ಭಾರತವು 'ನೌಕರ ಪಡೆಯ ಚಿನ್ನದ ಗಣಿ' ಆಗಲಿದೆ.

ಪ್ರಸ್ತುತ, ಭಾರತದಲ್ಲಿರುವ ಅರ್ಥ ವ್ಯವಸ್ಥೆಯ ಉನ್ನತ ಮಟ್ಟದ ಪ್ರಗತಿ ದರ ಮತ್ತು ಕ್ರಿಯಾತ್ಮಕ ಹೂಡಿಕೆಯ ಪರಿಸರವನ್ನು ಪರಿಗಣಿಸಿದರೆ, ಉನ್ನತ ಮಟ್ಟದ ತಾಂತ್ರಿಕ ಮತ್ತು ಮೃದು ಕೌಶಲ್ಯದ ಮಾನವ ಸಂಪನ್ಮೂಲಕ್ಕೆ ಬೇಡಿಕೆ ಹೆಚ್ಚಾಗಲಿದೆ. 2015ರ ವೇಳೆಗೆ, ಭಾರತದ ಐಟಿ ಮತ್ತು ಐಟಿ ಸಂಬಂಧ ಸೇವಾ ವಲಯಕ್ಕೆ 23 ಲಕ್ಷ ಕೌಶಲ್ಯಯುತ ನೌಕರ ಪಡೆಯ ಅಗತ್ಯವಿದೆ. ದುರಾದೃಷ್ಟವಶಾತ್, ಕಳೆದ 15 ವರ್ಷಗಳಲ್ಲಿ ಭಾರತ ಕೇವಲ 16 ಲಕ್ಷ ವೃತ್ತಿಪರರನ್ನು ಸೃಷ್ಟಿಸಿದೆ. ಹಾಗಾಗಿ, ಭಾರತ ಮುಂದಿನ 2 ವರ್ಷಗಳಲ್ಲಿ ಸುಮಾರು 8 ಲಕ್ಷ ಕೌಶಲ್ಯಯುತ ವೃತ್ತಿಪರರನ್ನು ಸೃಷ್ಟಿಸಬೇಕಿದೆ. ವಿಶ್ವ ಆರ್ಥಿಕ ವೇದಿಕೆಯ ವರದಿಯ ಪ್ರಕಾರ, ಭಾರತದ ಒಟ್ಟು ವೃತ್ತಿಪರರ ಪೈಕಿ ಶೇ. 25ರಷ್ಟು ಉದ್ಯೋಗಿಗಳು ಸಂಘಟಿತ ವಲಯದಲ್ಲಿ ಉದ್ಯೋಗಾವಕಾಶಕ್ಕೆ ಪರಿಗಣಿತರಾಗಿದ್ದಾರೆ. ಆದರೆ ಅಸಂಘಟಿತ ವಲದಲ್ಲಿ ಯಾವುದೇ ರಚನಾತ್ಮಕ ಕೌಶಲ್ಯಾಭಿವೃದ್ಧಿ ಮತ್ತು ತರಬೇತಿ ಅಥವಾ ಕೌಶಲ್ಯ ಮೇಲ್ದರ್ಜೆಗೆ ಏರಿಸುವ ಯಾವುದೇ ರೀತಿಯ ಬೆಂಬಲ ಸಿಕ್ಕಿಲ್ಲ .

ಒಂದು ಅಂದಾಜಿನ ಪ್ರಕಾರ, 2015ರಲ್ಲಿ ಭಾರತದಲ್ಲಿ 50 ಲಕ್ಷ ಪದವೀಧರರು ವಿಶ್ವವಿದ್ಯಾಲಯಗಳಿಂದ ಹೊರಬರುತ್ತಿದ್ದಾರೆ. ಅದರಲ್ಲಿ ಶೇ 34ರಷ್ಟು ಮಂದಿ ಉದ್ಯೋಗಕ್ಕೆ ಯೋಗ್ಯರಾದವರಾಗಿದ್ದಾರೆ. ಆದರೆ ಅವರಲ್ಲಿ ಬಹುತೇಕ ಮಂದಿಗೆ ಕೈಗಾರಿಕಾ ಕ್ಷೇತ್ರದಲ್ಲಿ ಕೆಲಸ ಮಾಡಲು ಅಗತ್ಯವಾಗಿ ಬೇಕಾದ ಯಾವುದೇ ಕೌಶಲ್ಯಗಳಿಲ್ಲ. ಆದರೆ, ಉದ್ಯೋಗದಾತರು ನಿರ್ದಿಷ್ಟ ಕ್ಷೇತ್ರದ ಕೌಶಲ್ಯ ಮತ್ತು ಮೃದು ಕೌಶಲ್ಯ ಹೊಂದಿದ ಅಭ್ಯರ್ಥಿಗಳಿಗಾಗಿ ಹುಡುಕುತ್ತಿದ್ದಾರೆ. ಇದರರ್ಥ, ಉದ್ಯೋಗಾರ್ಹತೆಯ ಬಿಕ್ಕಟ್ಟು ಪರಿಹರಿಸಲು ಕೌಶಲ್ಯ ತರಬೇತಿಯೊಂದೇ ಪ್ರಮುಖ ಅಂಶವಾಗಿದೆ. ಯಾವುದೆ ಹೆಸರಾಂತ ಸಂಸ್ಥೆ ಅಥವಾ ಕಂಪನಿಯಲ್ಲಿ ಉದ್ಯೋಗ ಪಡೆಯಬೇಕಾದರೆ ಯಾವುದೇ ವಿಶ್ವವಿದ್ಯಾಲಯದ ಪದವಿಯೊಂದೇ ಖಾತ್ರಿ ನೀಡಲಾರದು.

ಉದ್ಯೋಗಕ್ಕೆ ಅರ್ಜಿ ಸಲ್ಲಿಸಿದಾಗ ಬಹುತೇಕ ಯುವ ಅಭ್ಯರ್ಥಿಗಳು ಪೂರಕವಾದ ಪದವಿ ಮತ್ತು ಕೌಶಲ್ಯ ಹೊಂದಿರುತ್ತಾರೆ. ಆದರೆ ಅವರಲ್ಲಿ ಕೆಲವರಿಗೆ ಮಾತ್ರ ಉದ್ಯೋಗ ಅವಕಾಶಗಳು ಸಿಗುತ್ತವೆ. ತಾಂತ್ರಿಕ ಕೌಶಲ್ಯಗಳನ್ನು ತಿಳಿಯುವುದರಿಂದ ಪರೀಕ್ಷೆ ಮತ್ತು ಸಂದರ್ಶನದಲ್ಲಿ ಉತ್ತಮವಾಗಿ ಮಾಡಲು ನೆರವಾಗುತ್ತದೆ. ಆದರೆ ಉದ್ಯೋಗಾರ್ಹತೆಯ ಕೌಶಲ್ಯಗಳೇ ಅಭ್ಯರ್ಥಿಗೆ ಅಂತಿಮವಾಗಿ ಉದ್ಯೋಗ ಸಿಗಲು ಹಾಗೂ ಉದ್ಯೋಗ

* ಸಂಸ್ಥಾಪಕರು, ಗ್ಲೋಬಲ್ ಸಕ್ಸೆಸ್ ಯೂನಿವರ್ಸಿಟಿ. Emial : mehjabeen.sajid@viztarinternational.com


ರಂಗದಲ್ಲಿ ಉಳಿಯಲು ನೆರವಾಗುತ್ತಿದೆ. ನಾವೆಲ್ಲಾ ಸಮಾಜದಲ್ಲಿ ಬದಲಾವಣೆಗೆ ಒಳಪಟ್ಟಿರುತ್ತೇವೆ. ಇಂತಹ ಸಮಾಜದಲ್ಲಿ ಉಳಿಯಬೇಕಾದರೆ ತಾಂತ್ರಿಕ ಕೌಶಲ್ಯದ ಜತೆಗೆ ಮೃದು ಕೌಶಲ್ಯವನ್ನು ಗಳಿಸಬೇಕು. ನೀವು ಎಷ್ಟು ಪರಿಣಾಮಕಾರಿಯಾಗಿ ಸಂವಹನ ನಡೆಸುತ್ತೀರಿ? ಕಾರ್ಪೊರೇಟ್ ಪರಿಸರದಲ್ಲಿ ತಂಡದ ಸದಸ್ಯನಾಗಿ ನೀವು ಹೇಗೆ ತಮ್ಮ ಪ್ರದರ್ಶನ ತೋರುತ್ತೀರಿ? ನಿಮ್ಮ ಆತ್ಮವಿಶ್ವಾಸ ಎಷ್ಟು? ಈ ರೀತಿಯ ಕೌಶಲ್ಯಗಳನ್ನು ಬೆಳೆಸಿಕೊಳ್ಳುವುದು ತೀರಾ ಅತ್ಯಗತ್ಯ. ಇದಕ್ಕೆ ಪರಿವರ್ತನೆಗೆ ಸಾಕ್ಷಿಯಾಗುವ ತರಬೇತಿ ಪಡೆದರೆ ಮಾತ್ರ ತಾಂತ್ರಿಕ ಜ್ಞಾನ, ಅಂತರ್‌ಸಂವಹನ ಮತ್ತು ನಿರ್ವಹಣಾ ಕೌಶಲ್ಯಗಳನ್ನು ಗಳಿಸಲು ನೆರವಾಗುತ್ತದೆ. ಈ ರೀತಿಯ ತರಬೇತಿಯು ಕಾರ್ಪೊರೇಟ್ ಜಗತ್ತಿನಲ್ಲಿ ಹೆಚ್ಚುತ್ತಿರುವ ಸವಾಲುಗಳಿಗೆ ತಕ್ಕಂತೆ ಅಭ್ಯರ್ಥಿಗಳನ್ನು ಸಜ್ಜುಗೊಳಿಸಲು ನೆರವಾಗುತ್ತದೆ. ಸಾಫ್ಟ್‌ವೇರ್ ಕಂಪನಿಗಳ ರಾಷ್ಟ್ರೀಯ ಸಂಸ್ಥೆ 'ನಾಸ್ಕಾಂ' ಪ್ರಕಾರ, ಭಾರತದಲ್ಲಿ ಪ್ರತಿವರ್ಷ 30 ಲಕ್ಷ ಪದವೀಧರರು ಮತ್ತು ಸ್ನಾತಕ ಪದವೀಧರರು ಉದ್ಯೋಗ ಕ್ಷೇತ್ರಕ್ಕೆ ಸೇರ್ಪಡೆ ಆಗುತ್ತಿದ್ದಾರೆ. ಆದರೆ ಕೈಗಾರಿಕೆಗಳು, ಶೇ 25ರಷ್ಟು ತಾಂತ್ರಿಕ ಪದವೀಧರರು ಮತ್ತು ಶೇ 10ರಿಂದ 15ರಷ್ಟು ಇತರೆ ಪದವೀಧರರನ್ನು ಮಾತ್ರ ಉದ್ಯೋಗಕ್ಕೆ ಪರಿಗಣಿಸುತ್ತಿವೆ.

ಈಗಿರುವ ಶಿಕ್ಷಣ ವ್ಯವಸ್ಥೆಯಲ್ಲಿ ಯುವ ಸಮುದಾಯಕ್ಕೆ ಇಂದಿನ ಉದ್ಯೋಗ ಅವಕಾಶಗಳಿಗೆ ಬೇಕಾದ ಕೌಶಲ್ಯ ತರಬೇತಿ ನೀಡಲು ಗಮನ ಕೇಂದ್ರೀಕರಿಸುತ್ತಿಲ್ಲ. ಜತೆಗೆ, ಭಾರತದ ಹೆಚ್ಚಿನ ಪ್ರಮಾಣದ ಕಾರ್ಮಿಕ ಪಡೆ ತೀರಾ ಹಳೆಯದಾದ ಕೌಶಲ್ಯ ಹೊಂದಿದೆಯೇ ಹೊರತು ಹೊಸ ಕೌಶಲ್ಯ ತರಬೇತಿ ಪಡೆಯುತ್ತಿಲ್ಲ. ಅದು ಹಿಂದೆ ಬಿದ್ದಿದೆ. ದೇಶದ ಅರ್ಥ ವ್ಯವಸ್ಥೆ ತ್ವರಿತವಾಗಿ ಪ್ರಗತಿ ಕಾಣುತ್ತಿರುವ ಸಮಕಾಲೀನ ಸಂದರ್ಭದಲ್ಲಿ ಕೌಶಲ್ಯ ತರಬೇತಿ ನೀಡುವ ಸವಾಲು ಮತ್ತಷ್ಟು ಹೆಚ್ಚಾಗಬೇಕಿದೆ. ಹೊಸದಾಗಿ ಸೃಷ್ಟಿಯಾಗುತ್ತಿರುವ ಶೇ 75ಕ್ಕಿಂತ ಹೆಚ್ಚಿನ ಉದ್ಯೋಗ ಅವಕಾಶಗಳು ಕೌಶಲ್ಯ ಆಧರಿತವಾಗುವ ನಿರೀಕ್ಷೆ ಇರುವುದರಿಂದ ಸರಕಾರ, ಯುವ ಸಮುದಾಯದ ಕೌಶಲ್ಯವನ್ನು ಮೇಲ್ದರ್ಜೆಗೆ ಏರಿಸಲು ಹಾಗೂ ಔದ್ಯಮಿಕ ಶಿಕ್ಷಣ ಮತ್ತು ತರಬೇತಿ ನೀಡಲು ಬಲವಾದ ಒತ್ತು ನೀಡಬೇಕು.

ಮಾನವ ಸಂಪನ್ಮೂಲದ ಅಗತ್ಯವನ್ನು ಪರಿಗಣಿಸಿ, ನೀತಿ ನಿರ್ಧಾರ ಚಟುವಟಿಕೆ ಮತ್ತು ವಿವಿಧ ಮಟ್ಟದ ನಾಯಕತ್ವದಲ್ಲಿ ತೊಡಗಿಸಿಕೊಳ್ಳಬೇಕಿದೆ. ವೃತ್ತಿಪರ ಮತ್ತು ತಾಂತ್ರಿಕ ಕೌಶಲ್ಯದಿಂದಲೇ ಸಾಂಸ್ಥಿಕ ಗುರಿ ಮತ್ತು ಉದ್ದೇಶಗಳನ್ನು ಸಾಸಲು ಸಾಧ್ಯವಿಲ್ಲ ಎಂಬುದನ್ನು ಉದ್ಯೋಗದಾತರು ಅರಿತಿದ್ದಾರೆ. ಉದ್ಯೋಗಿಗಳು ಕೆಲಸ ಮಾಡುವ ಸಂಸ್ಥೆ ಅಥವಾ ಕಂಪನಿಗಳ ಒಳಗೆ ಗ್ರಾಹಕರು ಮತ್ತು ಇತರೆ ಪಾಲುದಾರರ ಜತೆ ಪರಿಣಾಮಕಾರಿಯಾಗಿ ಸಂವಹನ ನಡೆಸುವುದು ಅಗತ್ಯವಿದೆ ಎಂಬುದು ಉದ್ಯೋಗದಾತರ ಬಲವಾದ ನಂಬಿಕೆ. ಆದ್ದರಿಂದ, ಯಾವುದೇ ವ್ಯಕ್ತಿ ಉದ್ಯೋಗಾರ್ಹತೆಯಂತಹ ಕೌಶಲ್ಯಗಳನ್ನು ಮೈಗೂಡಿಸಿಕೊಂಡರೆ ಮಾತ್ರ ನೇಮಕವಾಗುವ ಸಾಧ್ಯತೆಗಳು ಹೆಚ್ಚಿರುತ್ತವೆ.

ಬಾಹ್ಯ ತರಬೇತಿ ಮೂಲಕ ಯಾವುದೇ ವ್ಯಕ್ತಿಗೆ ಉದ್ಯೋಗಾರ್ಹತೆ ಮತ್ತು ಮೃದು ಕೌಶಲ್ಯ ಕಲಿಸುವುದು ಅಥವಾ ರೂಪಿಸುವುದು ಸಾಧ್ಯವೇ ಎಂಬ ಕುರಿತು ಸ್ಥಿರ ಚರ್ಚೆಗಳೇ ನಡೆಯುತ್ತಿವೆ. ಅದರಲ್ಲೂ ವಿಶೇಷವಾಗಿ ಕಲಿಕೆಯ ಮನೋಧರ್ಮ ಅಥವಾ ಸ್ವಭಾವವೇ ಇಲ್ಲದ ವ್ಯಕ್ತಿಯೊಬ್ಬ ಜೀವನಪೂರ್ತಿ ಅದೇ ರೀತಿ ಬದುಕುವಾಗ ಕೌಶಲ್ಯ ತರಬೇತಿ ಪಡೆಯಬಲ್ಲನೇ? ವ್ಯಕ್ತಿಯ ಮೂಲಭೂತ ವ್ಯಕ್ತಿತ್ವದ ಲಕ್ಷಣ ಬದಲಿಸುವುದು ಕಷ್ಟ. ಆದರೆ, ಪರಿಣಾಮಕಾರಿ ತರಬೇತಿ ನೀಡಿಕೆಯಿಂದ ಪ್ರತಿ ವ್ಯಕ್ತಿಯಲ್ಲಿ ಅಡಗಿರುವ ಸುಪ್ತ ಕಲಿಕಾ ಲಕ್ಷಣಗಳನ್ನು ಬಲಪಡಿಸಲು ನೆರವಾಗಲಿದೆ ಎಂಬುದು ಸತ್ಯ.

ವಾಸ್ತವವೆಂದರೆ, ಭಾರತದಂತಹ ರಾಷ್ಟ್ರಗಳಲ್ಲಿ ಮೃದು ಕೌಶಲ್ಯ ಮತ್ತು ಉದ್ಯೋಗಾರ್ಹತೆಯ ಕೌಶಲ್ಯ ತರಬೇತಿ ತೀರಾ ಪ್ರಸ್ತುತ. ಏಕೆಂದರೆ, ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ವ್ಯಕ್ತಿತ್ವ ಬೆಳವಣಿಗೆಗೆ ಪೂರಕವಾದ ಕಲಿಕೆಗೆ ಸಾಕಷ್ಟು ಅವಕಾಶಗಳೇ ಇಲ್ಲ. ಆದರೆ ಕಾರ್ಪೊರೇಟ್ ವಲಯ ಉದ್ಯೋಗಿಗಳಿಂದ ಮುಕ್ತ ಮನಸ್ಥಿತಿಯನ್ನು ಬಯಸುತ್ತಿದೆ. ಅದು ಹೊಸ ಉದ್ಯೋಗಿಗಳಿಂದ ವಿನೂತನ ಪರಿಕಲ್ಪನೆ, ಸಲಹೆ ಸೂಚನೆ ಮತ್ತು ಶಿಫಾರಸುಗಳನ್ನು ನಿರೀಕ್ಷಿಸುತ್ತಿದೆ. ತಂಡದ ಜತೆ ಹೊಸ ಐಡಿಯಾಗಳನ್ನು ಹಂಚಿಕೊಳ್ಳುವುದನ್ನು ಅದು ಬಯಸುತ್ತಿದೆ. ಜತೆಗೆ, ಕಾರ್ಪೊರೇಟ್



ಪರಿಸರದೊಂದಿಗೆ ವಿದ್ಯಾರ್ಥಿಗಳು ಹೊಂದಿಕೊಳ್ಳುವ ಸಾಮರ್ಥ್ಯ, ಕಲಿಕಾ ಪ್ರಕ್ರಿಯೆ, ಜನರ ನಡವಳಿಕೆಯನ್ನು ಅರ್ಥ ಮಾಡಿಕೊಳ್ಳುವ ಜತೆಗೆ ಸದಾ ಸಕಾರಾತ್ಮಕ ಚಿಂತನೆಯ ವ್ಯಕ್ತಿತ್ವ ಇರುವುದನ್ನು ಉದ್ಯಮ ರಂಗ ನಿರೀಕ್ಷಿಸುತ್ತಿದೆ.

ಕಾರ್ಪೊರೇಟ್ ವಲಯ ಸಂಭಾವ್ಯ ಅಭ್ಯರ್ಥಿಗಳಿಂದ ಅಂತರ್‌ಸಂವಹನ, ಸಂವಹನ, ನಡವಳಿಕೆ, ಉತ್ತೇಜನ, ಸಮಯ ನಿರ್ವಹಣೆ, ನಾಯಕತ್ವ ಮತ್ತು ಸಾಮಾಜಿಕ ಜವಾಬ್ದಾರಿ ಮತ್ತು ಪ್ರೇರಣೆಯಂತಹ ಕೌಶಲ್ಯದ ಲಕ್ಷಣಗಳನ್ನು ನೋಡುತ್ತದೆ. ಹಾಗಾಗಿ, ಉದ್ಯೋಗ ಪಡೆಯುವಂತಾಗಬೇಕಾದರೆ, ವಿದ್ಯಾರ್ಥಿಗಳು ಕಡ್ಡಾಯವಾಗಿ ತರಬೇತಿ ಪಡೆಯುವಂತಾಗಬೇಕು. ಇದರಿಂದ ಅನೌಪಚಾರಿಕ ಶಿಕ್ಷಣದ ಜತೆಗೆ ಉದ್ಯೋಗಾರ್ಹತೆಯ ಕೌಶಲ್ಯ ಕಲಿಕೆ ನೆರವಾಗಲಿದೆ. ಎಲ್ಲಕ್ಕಿಂತ ಮುಖ್ಯವಾಗಿ, ವೃತ್ತಿರಂಗದಲ್ಲಿ ತಮ್ಮ ಪಾತ್ರಗಳನ್ನು ಸಮಕಾಲೀನ ಅಗತ್ಯಗಳಿಗೆ ತಕ್ಕಂತೆ ಸಮರ್ಪಕವಾಗಿ ನಿರ್ವಹಿಸಲು ಶಕ್ತವಾಗುತ್ತದೆ.

ಪರಿವರ್ತನೆಗೆ ಕಾರಣವಾಗುವ ಕೌಶಲ್ಯ ತರಬೇತಿಯು ಈ ಎಲ್ಲಾ ಕಂದಕ ಮುಚ್ಚಲು ಮತ್ತು ಕಾರ್ಪೊರೇಟ್ ರಂಗದಲ್ಲಿ ಹೆಚ್ಚುತ್ತಿರುವ ಸವಾಲುಗಳಿಗೆ ಸಿದ್ಧವಾಗಲು ಸಂಸ್ಥೆಗಳನ್ನು ಸಜ್ಜುಗೊಳಿಸುತ್ತದೆ. ಮೃದು ಕೌಶಲ್ಯ ತರಬೇತಿಯ ಅತ್ಯಂತ ಮುಖ್ಯವಾದ ಅಂಶವೆಂದರೆ, ಅದು ಯಾವುದೇ ವ್ಯಕ್ತಿಯನ್ನು ವೃತ್ತಿಪರ ಸಂಪನ್ಮೂಲವಾಗಿ ರೂಪಿಸುತ್ತದೆ. ವ್ಯಕ್ತಿಯ ಔದ್ಯಮಿಕ, ಸಾಮಾಜಿಕ, ವೈಯಕ್ತಿಕ ಬದುಕಿನಲ್ಲಿ ಉತ್ತಮ ವ್ಯಕ್ತಿತ್ವ ರೂಪಿಸಿ, ವೃತ್ತಿಪರ ಬದುಕಿಗೆ ಯಶಸ್ಸು ತಂದುಕೊಡುತ್ತದೆ.

ಔದ್ಯಮಿಕ ತರಬೇತಿ ಅಥವಾ ಕೌಶಲ್ಯ ಉಪಕ್ರಮವು ಅನೌಪಚಾರಿಕ ಶಿಕ್ಷಣದಿಂದ ಪ್ರತ್ಯೇಕವಾಗಿ ಯಶಸ್ಸು ತಂದುಕೊಡಲಾರದು. ನಮ್ಮ ಪ್ರಾಥಮಿಕ ಶಿಕ್ಷಣ ವ್ಯವಸ್ಥೆ ಗ್ರಾಮೀಣ



ಭಾಗಗಳ ಸರಕಾರಿ ಶಾಲೆಗಳಲ್ಲಿ ಹೇಗೆ ಗುಣಮಟ್ಟದ ಶಾಲಾ ಶಿಕ್ಷಣ ಒದಗಿಸುವಲ್ಲಿ ವಿಫಲವಾಗಿದೆ ಎಂಬುದು ಇತ್ತೀಚೆಗೆ ಬಿಡುಗಡೆಯಾದ 'ಎಎಸ್ಇಆರ್' ವರದಿಯಲ್ಲಿ ಸ್ಪಷ್ಟವಾಗಿದೆ. ಇಂತಹ ಶಾಲೆಗಳಲ್ಲಿ ಕಲಿಯುವ ನಮ್ಮ ಗ್ರಾಮೀಣ ಮಕ್ಕಳೇ ಭವಿಷ್ಯದ ನೌಕರ ಪಡೆ ಆಗಲಿದ್ದಾರೆ ಎಂಬುದು ಕಟುಸತ್ಯ. ಶಾಲೆ ಬಿಡುತ್ತಿರುವ ಮಕ್ಕಳ ಸಂಖ್ಯೆ ಬೃಹತ್ ಪ್ರಮಾಣದಲ್ಲಿ ಹೆಚ್ಚುತ್ತಿರುವುದರಿಂದ ಮುಂದಿನ ದಿನಗಳಲ್ಲಿ ಬಿಕ್ಕಟ್ಟು ಕಟ್ಟಿಟ್ಟ ಬುತ್ತಿ. ಆದ್ದರಿಂದ ನಮಗೆ ಕೌಶಲ್ಯ ತರಬೇತಿಗೆ ಒತ್ತು ನೀಡುವ ಶಿಕ್ಷಣ ವ್ಯವಸ್ಥೆ ಅತ್ಯಗತ್ಯ. ಇದರಿಂದ ಉದ್ಯೋಗ ರಂಗಕ್ಕೆ ವಿದ್ಯಾರ್ಥಿ ಸಮುದಾಯವನ್ನು ಸಜ್ಜುಗೊಳಿಸಲು ಸಾಧ್ಯ. ಶಿಕ್ಷಣ ಪೂರ್ಣವಾಗುವ ಹೊತ್ತಿಗೆ ಮಕ್ಕಳಿಗೆ ಕೌಶಲ್ಯ ತರಬೇತಿಯು ಪೂರ್ಣವಾಗುವ ಶಿಕ್ಷಣ ವ್ಯವಸ್ಥೆ ನಮಗೆ ಬೇಕಾಗಿದೆ. ಇದಾಗಬೇಕಾದರೆ ಗುಣಟ್ಟದ ಬೋಧಕ ವರ್ಗ ಅತ್ಯಗತ್ಯ. ವಿದ್ಯಾರ್ಥಿ ಸಮುದಾಯದಲ್ಲಿ ಆಸಕ್ತಿ ಮತ್ತು ಅಭಿರುಚಿ ಮೂಡಿಸುವ ಪ್ರಮಾಣಿಕ ಶಿಕ್ಷಕರು ಇಂದಿನ ಅಗತ್ಯವಾಗಿದೆ.

ಭಾರತದಲ್ಲಿ ಆದ ಜಾಗತೀಕರಣ ಮತ್ತು ವ್ಯಾಪಾರ ಉದಾರೀಕರಣ ನೀತಿಯು ದೇಶದ ಕಾರ್ಮಿಕ ಮಾರುಕಟ್ಟೆಯಲ್ಲಿ ಸರಣಿ ಬದಲಾವಣೆಗೆ ಕಾರಣವಾಗಿದೆ. ಇದರ ನೇರ ಪರಿಣಾಮಗಳೆಂದರೆ, ತಂತ್ರಜ್ಞಾನದ ಒಳಹರಿವು, ಆರ್ಥಿಕ ಸುಧಾರಣೆಗಳಿಂದ ಸಿಕ್ಕ ಉತ್ತೇಜನ ಮತ್ತು ಇದರಿಂದ ಕೌಶಲ್ಯ ಆಧರಿತ ನೌಕರ ಪಡೆಯ ಪ್ರಗತಿ ಮೇಲಾದ ಪರಿಣಾಮಗಳಿಂದಾಗಿ ಉದ್ಯಮ ರಂಗದಲ್ಲಿ ಹೊಸ ಅವಕಾಶಗಳೇ ತೆರೆದುಕೊಂಡವು. ಅನೌಪಚಾರಿಕ ವಲಯದ ಸಣ್ಣ ಉದ್ದಿಮೆಗಳಲ್ಲೂ ವಿಪುಲ ಅವಕಾಶಗಳು ಸೃಷ್ಟಿಯಾದವು. ಮಾನವ ಸಂಪನ್ಮೂಲವನ್ನು ಸುಧಾರಿಸುವ ಕ್ರಮ ಅಥವಾ ವಿಧಾನವೇ ಕೌಶಲ್ಯ. ಇದು ನೌಕರ ಪಡೆಯ ಆದಾಯ ಭದ್ರತೆಯನ್ನು ದೃಢಪಡಿಸುತ್ತದೆ. ಬಡತನದಲ್ಲಿ ಶಿಕ್ಷಣ ಪಡೆದ ಯುವ ಸಮುದಾಯಕ್ಕೆ ಕೌಶಲ್ಯ ಎಂಬುದು ಜೀವನ ಮಟ್ಟ ಮತ್ತು ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಲು ಇರುವ ಬಲಿಷ್ಠ ಸಾಧನ. ಹಾಗಾಗಿ, ಕೌಶಲ್ಯ ಅಭಿವೃದ್ಧಿ ತರಬೇತಿಯು ದೇಶದಲ್ಲಿರುವ ಬೃಹತ್ ಪ್ರಮಾಣದ ಮಾನವ ಸಂಪನ್ಮೂಲಕ್ಕೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಬದುಕು ಕಲ್ಪಿಸುವ ಪ್ರಬಲ ಸಾಧನ ಹಾಗೂ ಕಾರ್ಮಿಕ ಮಾರುಕಟ್ಟೆಯನ್ನು ಬಪಡಿಸುವ ಪ್ರಬಲ ಅಸ್ತ್ರ.

ಕಾರ್ಮಿಕ ಪಡೆ ಮತ್ತು ಆರ್ಥಿಕ ಘಟಕಗಳು ಅಭ್ಯಾಸದಂತೆ ಅಥವಾ ಕಾನೂನಿನ ಅಡಿ ನಡೆಸುವ ಎಲ್ಲ ರೀತಿಯ ಆರ್ಥಿಕ ಚಟುವಟಿಕೆಗಳನ್ನು ಅನೌಪಚಾರಿಕ ಅಥವಾ ಅಸಂಘಟಿತ ಆರ್ಥಿಕತೆ ಎನ್ನಲಾಗುತ್ತದೆ. ಆದರೆ ಈ ಆರ್ಥಿಕ ಚಟುವಟಿಕೆಗಳನ್ನು ಅನೌಪಚಾರಿಕ ವ್ಯವಸ್ಥೆಯಲ್ಲಿ ಸಮರ್ಪಕವಾಗಿ ಸೇರಿಸಿಲ್ಲ. ಅನೌಪಚಾರಿಕ ನೌಕರ ಪಡೆ ಎಂದರೆ ಮೂಲಭೂತವಾಗಿ ಸ್ವಯಂ ಉದ್ಯೋಗ ಮಾಡುವ ಜನರು ಹಾಗೂ ಬೀದಿ ವ್ಯಾಪಾರಿಗಳು ಇರುತ್ತಾರೆ. ಅಂಥವರಿಗೆ ಶಾಶ್ವತ ವ್ಯಾಪಾರ ಸ್ಥಳ ಇರುವುದಿಲ್ಲ. ಬಹುತೇಕ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಅನೌಪಚಾರಿಕ ಆರ್ಥಿಕತೆಯ ಕಾರ್ಮಿಕ ಪಡೆ ನಿರೀಕ್ಷಿತ ಭವಿಷ್ಯಕ್ಕೆ ನಿರ್ಣಾಯಕ ಆರ್ಥಿಕ ಶಕ್ತಿ ಎಂಬುದು ತಜ್ಞರ ಅಭಿಮತ.

ಇಂದಿನ ಯುವ ಪೀಳಿಗೆ ತಂತ್ರಜ್ಞಾನ ಯುಗದಲ್ಲಿ ಜನಿಸಿದೆ. ಕಲಿಕೆಯ ಸಾಧನವಾಗಿ ಅಂತರ್ಜಾಲ ಮತ್ತು ಕಂಪ್ಯೂಟರ್ ಅನ್ನು ಸಾಧನವಾಗಿ ಬಳಸಿದರೆ ಈ ಪೀಳಿಗೆಯು ಅತ್ಯುತ್ತವಾಗಿ ಸ್ಪಂದಿಸುತ್ತದೆ. ಹೊಸ ಅಂತರ್ಜಾಲ ಮತ್ತು ಕಂಪ್ಯೂಟರ್ ತಂತ್ರಜ್ಞಾನವು ತೀರಾ ಹಗುರವಾಗಿ, ಸಣ್ಣ ಗಾತ್ರದಲ್ಲಿ ಮತ್ತು ಕಡಿಮೆ ಬೆಲೆಗೆ ಲಭ್ಯವಾಗುತ್ತಿರುವುದರಿಂದ ಹೆಚ್ಚಿನ ಸಂಖ್ಯೆಯ ಜನರಿಗೆ ಮುಟ್ಟುತ್ತಿದೆ. ಮೊಬೈಲ್ ಫೋನ್‌ಗಳ ಮೂಲಕ ಕಲಿಕೆಗೆ ಅಪ್ಲಿಕೇಷನ್ಸ್ ಅಭಿವೃದ್ಧಿಪಡಿಸುವುದು ಸಾಧ್ಯವಾಗುತ್ತಿರುವುದರಿಂದ, ವಿಶ್ವಾದ್ಯಂತ ಸುಲಭವಾಗಿ ಮತ್ತು ಅಗ್ಗವಾಗಿ ಲಕ್ಷಾಂತರ ಜನರನ್ನು ಶಿಕ್ಷಿತರಾಗಿಸಲು ಸಾಧ್ಯವಾಗುತ್ತಿದೆ.

ಕೇಂದ್ರ ಸರ್ಕಾರದ ಸಲಹಾ ಸಂಸ್ಥೆಯಾಗಿರುವ ಅಸಂಘಟಿತ ವಲಯದ ಉದ್ಯಮಗಳ ರಾಷ್ಟ್ರೀಯ ಆಯೋಗ (ಎನ್‌ಸಿಇಯುಎಸ್)ವನ್ನು 2004ರಲ್ಲಿ ಸ್ಥಾಪಿಸಲಾಗಿದೆ. ಅಸಂಘಟಿತ ವಲಯದಲ್ಲಿ ಬೃಹತ್ ಪ್ರಮಾಣದಲ್ಲಿ ಉದ್ಯೋಗ ಅವಕಾಶಗಳನ್ನು ಸೃಷ್ಟಿಸುವ ಮೂಲಕ ಉತ್ಪಾದಕತೆ ಸುಧಾರಣೆ ತರುವುದು ಈ ಸಂಸ್ಥೆಯ ಜವಾಬ್ದಾರಿ. ವಿಶೇಷವಾಗಿ ಗ್ರಾಮೀಣ ಭಾಗಗಳಲ್ಲಿ ಸುಸ್ಥಿರ ಉದ್ಯೋಗ ಸೃಷ್ಟಿ ಮತ್ತು ಉತ್ಪಾದಕತೆ ಹೆಚ್ಚಳ ಇದರ ಗುರುತರ ಜವಾಬ್ದಾರಿ. ಭಾರತದಲ್ಲಿ ಪ್ರಸ್ತುತ 59 ದಶಲಕ್ಷಉದ್ದಿಮೆಗಳಿದ್ದು, 127 ದಶಲಕ್ಷ ಜನರಿಗೆ ಉದ್ಯೋಗ ನೀಡುತ್ತಿವೆ. 2005ರ ನಂತರ 17 ದಶಲಕ್ಷ ಹೊಸ ಉದ್ದಿಮೆಗಳು ದೇಶದಲ್ಲಿ ಸೇರ್ಪಡೆ ಆಗಿವೆ.

ಅನೌಪಚಾರಿಕ ವಲಯದ ನೌಕರ ಪಡೆಯನ್ನು ಹಲವು ಸಾಮಾನ್ಯ ಗುಣಲಕ್ಷಣಗಳಿಂದ ವ್ಯಾಖ್ಯಾನಿಸಲಾಗುತ್ತದೆ. ಅವೆಂದರೆ, ಸೀಮಿತ ವೃತ್ತಿ ಕೌಶಲ್ಯ, ಅಲ್ಪ ಆದಾಯ, ಕೆಳಮಟ್ಟದ ಉತ್ಪಾದಕತೆ ಮತ್ತು ಕಡಿಮೆ ಬಂಡವಾಳ ಹೂಡಿಕೆ. ಶಿಕ್ಷಣ ಮತ್ತು ತರಬೇತಿ ಮೂಲಕ ಮಾರುಕಟ್ಟೆ ಮಾಡಬಹುದಾದ ಹೊಸ ಉದ್ಯೋಗ ಕೌಶಲ್ಯಗಳ ಅಭಿವೃದ್ಧಿಪಡಿಸಿ, ಉತ್ಪಾದಕತೆ ಮತ್ತು ಉದ್ಯೋಗಾವಕಾಶಗಳ ಹೆಚ್ಚಳ ಮತ್ತು ಔಪಚಾರಿಕ ವಲಯದ ನೌಕರರ ಉದ್ಯೋಗಾರ್ಹತೆ ಹೆಚ್ಚಳಕ್ಕೆ ಈ ವಲಯ ಗಣನೀಯ ಕೊಡುಗೆ ನೀಡುತ್ತದೆ. ಹಾಗಾಗಿ, ಈ ವಲಯದ ನೌಕರ ಪಡೆಗೆ ತರಬೇತಿ ನೀಡುವುದುಅಗತ್ಯ. ಇದರಿಂದ ಉತ್ಪಾದಕತೆ ಹೆಚ್ಚಿಸಿ, ದೇಶ ಕಟ್ಟುವ ಕೆಲಸ ಸಾಧ್ಯವಾಗುತ್ತದೆ.

ಅನೌಪಚಾರಿಕ ವಲಯದ ಆರ್ಥಿಕ ಉತ್ಪಾದಕತೆ ಹೆಚ್ಚಳಕ್ಕೆ ಈ ವಲಯದ ನೌಕರ ಪಡೆಯ ಶಿಕ್ಷಣ ಮತ್ತು ಕೌಶಲ್ಯ ಮಟ್ಟವನ್ನು ಹೆಚ್ಚಿಸಬೇಕಿದೆ. ಆದಾಗ್ಯೂ, ಕೇವಲ ನೌಕರ ಪಡೆಯ ಕಾರ್ಯಕ್ರಮಗಳಿಗೆ ವೆಚ್ಚ ಮಾಡುವುದರಿಂದಲೇ ಹೆಚ್ಚಿನ ಉತ್ಪಾದಕತೆ ಆಗುತ್ತದೆ ಎಂಬುದು ಸುಳ್ಳು ಕಲ್ಪನೆ. ಉದ್ಯೋಗಾರ್ಹತೆಗೆ ಅಗತ್ಯವಾದ ಎಲ್ಲ ರೀತಿಯ ಕೌಶಲ್ಯ ಒದಗಿಸುವುದು ಇಂದಿನ ಅಗತ್ಯ. ಪರಿಣಾಮಕಾರಿ ಸಂವಹನ, ಅಂತರ್‌ಸಂವಹನ, ಅನ್ವೇಷಣಾ ಪ್ರವೃತ್ತಿ ಇತ್ಯಾದಿ ಕೌಶಲ್ಯಗಳ ತರಬೇತಿಗೆ ಒತ್ತು ನೀಡುವುದು ತೀರಾ ಅವಶ್ಯ.

ಉತ್ಪಾದಕತೆಯ ಪ್ರಗತಿಯನ್ನು ಹೇಗೆ ಉದ್ಯೋಗ ಪ್ರಗತಿಗೆ ಪರಿವರ್ತನೆ

**(56ನೇ ಪುಟಕ್ಕೆ)**

# ನಮ್ಮ ಪರಂಪರೆಯ ಕೈಮಗ್ಗದ ರಕ್ಷಣೆ

* ಮೋನಿಕಾ ಎಸ್. ಗಾರ್ಗ್



ಕೈಮಗ್ಗದಲ್ಲಿರುವ ಪ್ರಮುಖ ಸವಾಲೆಂದರೆ ಹೊಸ ತಾಂತ್ರಿಕತೆಯನ್ನು ಅಳವಡಿಸಿಕೊಳ್ಳುವುದು. ಇನ್ನೂ ಹಳೆ ಸಂಪ್ರದಾಯದ ಪರಿಕರಗಳ ಜತೆಗೆ ನೇಕಾರರು ಕೆಲಸ ಮಾಡುತ್ತಿರುವುದರಿಂದ ಹೊಸ ತಾಂತ್ರಿಕತೆಗೆ ಒಗ್ಗಿಕೊಳ್ಳುವುದಕ್ಕೆ ಅವರು ಒಪ್ಪಿಕೊಳ್ಳದೇ ಇರುವುದು ಸೇರಿದೆ. ಹೀಗಾಗಿ ಸರ್ಕಾರ ತನ್ನ ಯೋಜನೆಗಳಲ್ಲಿ ಹೊಸ ತಂತ್ರಗಾರಿಕೆಗಳನ್ನು ಸೇರಿಸುವ ಕೆಲಸ ಮಾಡಬೇಕು.

ಬದಲಾಗುತ್ತಿರುವ ಸಮಯದಲ್ಲಿ ಕೈಮಗ್ಗ ಕ್ಷೇತ್ರವನ್ನು ಅರ್ಥ ಮಾಡಿಕೊಳ್ಳುವುದು ಎಂದರೆ ಕೇವಲ ಶೈಕ್ಷಣಿಕ ಆಸಕ್ತಿಗಾಗಿ ಅಲ್ಲ. ಇದಕ್ಕಿಂತ ಹೆಚ್ಚಾಗಿ ಕೈಮಗ್ಗ ಕ್ಷೇತ್ರವನ್ನು ಉಳಿಸುವ ದಿಕ್ಕಿನಲ್ಲಿ ಇದಕ್ಕೆ ಬೇಕಾದ ನಿಯಮ ರೂಪಿಸುವತ್ತ ಯೋಜನೆಗಳನ್ನು ಹಾಕಿಕೊಳ್ಳುವ ಬಗ್ಗೆ ಚಿಂತನೆ ನಡೆಸಬೇಕು. ನಮ್ಮ ಪುರಾತನ ಕಾಲದ ಸಂಪ್ರದಾಯಬದ್ಧವಾದ ಕೈಮಗ್ಗವನ್ನು ಉಳಿಸುವ ಸಲುವಾಗಿ ಅದಕ್ಕೆ ಪ್ರೋತ್ಸಾಹದಾಯಕವಾದ ದಾರಿಗಳು, ಆದಾಯ ಬರುವ ಮಾರ್ಗಗಳು, ಜನರನ್ನು ಅದರತ್ತ ಸೆಳೆಯುವ, ಇದೇ ಉದ್ಯೋಗವನ್ನು ಆರಿಸಿಕೊಳ್ಳುವ, ಕೈಮಗ್ಗಕ್ಕಿರುವ ಆತಂಕಗಳ ನಿವಾರಿಸುವ, ರಫ್ತು ದಾರಿಗಳನ್ನು ಹೆಚ್ಚಿಸುವ ಯೋಜನೆಗಳನ್ನು ರೂಪಿಸಬೇಕಿದೆ. ಒಮ್ಮೆ ಈ ಎಲ್ಲ ಆತಂಕಗಳು ನಿವಾರಣೆಯಾದ ಬಳಿಕ ಕೈಮಗ್ಗ ಉದ್ಯಮದ ಮುಂದಿರುವ ಗುರಿಯನ್ನು ಸಾಧಿಸಬಹುದಾಗಿದೆ.

### ಸ್ಥಾಪಿತ ಉತ್ಪನ್ನವಾಗಿ ಕೈಮಗ್ಗ ಯೋಜನೆ

ನಮ್ಮ ಪುರಾತನ ಸಂಸ್ಕೃತಿಯಲ್ಲಿ ಕೈಮಗ್ಗಕ್ಕೆ ತನ್ನದೇ ಆದ ಸ್ಥಾನವಿತ್ತು. ಅಂದರೆ ವಧುವಿನ ಝರಿ ಬಟ್ಟೆ ಕೈಮಗ್ಗದ್ದೇ ಆಗಿರುತ್ತಿತ್ತು. ಋಗ್ವೇದ, ಮಹಾಭಾರತ ಮತ್ತು ರಾಮಾಯಣಗಳಲ್ಲೂ ನೇಕಾರಿಕೆ ಕಲೆಯ ಉಲ್ಲೇಖವಿದೆ. ನೇಯ್ದ ಬಟ್ಟೆ, ಮೂಳೆ ಸೂಚಿಗಳು ಮತ್ತು ತಿರುಗಟ್ಟುಗಳು ಮೆಹೆಂಜೋದಾರೊ ಮತ್ತು ಹರಪ್ಪಾ ನಾಗರಿಕತೆಯ ಜಾಗದಲ್ಲೂ ದೊರಕಿವೆ. ಗುಜರಾತ್ ಮೂಲದ ಬಣ್ಣ ಹಾಕಿರುವ ಬಟ್ಟೆಗಳ ಸಂಗ್ರಹವನ್ನು ಈಜಿಪ್ಟಿನ ಗೋರಿಗಳಲ್ಲೂ ಕಾಣಬಹುದಾಗಿತ್ತು. ಈ ಮೂಲಕ ಭಾರತದ ಹತ್ತಿ ಬಟ್ಟೆಗಳಿಗೆ ವಿದೇಶಗಳಲ್ಲೂ ಬೇಡಿಕೆ ಇತ್ತು ಎಂಬುದಕ್ಕೆ ಇದೇ ಉದಾಹರಣೆ.

ಕೈಮಗ್ಗದ ಕಲೆ ಇಂದಿನದ್ದಲ್ಲ, ಅದು ಪುರಾತನ ಕಾಲದಿಂದಲೂ, ಹಲವು ತಲೆಮಾರುಗಳ ಶ್ರೇಷ್ಠ ಕಲೆಗಾರರು ಉಳಿಸಿಕೊಂಡು ಬಂದಿರುವಂತದ್ದು. ಇಂದು ಕೈಮಗ್ಗ ಮತ್ತು ಇದಕ್ಕೆ ಹೊಂದಿಕೊಂಡ ಉದ್ಯಮದಲ್ಲಿ ಸುಮಾರು 40 ಲಕ್ಷ ನೇಕಾರರಿದ್ದಾರೆ. ಇದರಲ್ಲಿ ಬಹಳಷ್ಟು ಮಂದಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಳಿದ ವರ್ಗ ಮತ್ತು ಮಹಿಳೆಯರಿದ್ದಾರೆ. ಕೃಷಿ ಬಿಟ್ಟರೆ ದೇಶದಲ್ಲಿ ನೇಕಾರರ ಪಾಲೇ ಹೆಚ್ಚು. ಇದು ಪರಿಸರ ಸ್ನೇಹಿಯಾಗಿದ್ದು, ವಿಕೇಂದ್ರಿಕೃತ ಮತ್ತು ಗ್ರಾಮೀಣ ಪ್ರದೇಶದ ಮೂಲದ ಹಾಗೂ ಅಭಿವೃದ್ಧಿಶೀಲ ಆರ್ಥಿಕತೆಯಲ್ಲಿ ಪ್ರಮುಖ ಪಾತ್ರವಹಿಸುವಂತದ್ದಾಗಿದೆ.


ಆದರೂ 2010ರ ಕೈಮಗ್ಗ ಗಣತಿಯ ಪ್ರಕಾರ ನೇತ್ಯಾತ್ಮಕ ಪ್ರವೃತ್ತಿ ಇದೆ. ಪ್ರತಿ ವರ್ಷವೂ ಶೇ.7 ರಷ್ಟು ನೇಕಾರರು ಕಡಿಮೆಯಾಗುತ್ತಿದ್ದಾರೆ. ಕೈಮಗ್ಗಗಳ ಸಂಖ್ಯೆ ನಶಿಸುತ್ತಿದೆ. ಹೊಸ ತಲೆಮಾರು ಇದನ್ನು ಸಂಶಯದಿಂದ, ಆಸಕ್ತಿ ಇಲ್ಲದ ರೀತಿಯಲ್ಲಿ ನೋಡುತ್ತಿದೆ. ಇದು ಕೈಮಗ್ಗ ಕ್ಷೇತ್ರ ಇಂದು ಮುಳುಗುತ್ತಿರುವ ಉದ್ಯಮವಾಗುತ್ತಿದೆ ಎಂಬುದನ್ನು ತೋರಿಸುತ್ತಿದೆ.

ಇದು ಹಾಳಾಗಲಿಕ್ಕೆ ಇರುವ ಕಾರಣಗಳು ಭಿನ್ನವಾಗಿವೆ. ಗಣತಿಯ ಪ್ರಕಾರ ನೇಕಾರರು ಪ್ರತಿ ತಿಂಗಳು ಸರಾಸರಿ ತಲಾ 3400 ರೂಪಾಯಿ ಗಳಿಸುತ್ತಿದ್ದಾರೆ. ಅಂದರೆ

* ಹಿರಿಯ ಆಡಳಿತ ಸೇವೆ ಅಧಿಕಾರಿ, ಉತ್ತರ ಪ್ರದೇಶ. Email : monikasgarg@gmail.com

ಬೇರೆ ಯಾವುದೇ ಕಾರ್ಮಿಕನಿಗೆ ಹೋಲಿಕೆ ಮಾಡಿದರೆ ಇದು ಕಡಿಮೆ. ಏಕೆಂದರೆ ಬೇರೆ ಕಾರ್ಮಿಕರು ಮಾಸಿಕವಾಗಿ 4500 ಗಳಿಸುತ್ತಿದ್ದಾರೆ. ಒಂದು ಕಲೆ ನಶಿಸಲಿಕ್ಕೆ ಕಲಾಕಾರ ವಿಫಲವಾಗುವುದೇ ಕಾರಣ. ಯಾವುದೇ ಸಮಾಜದಲ್ಲಿ ನೇಕಾರನನ್ನು ಒಬ್ಬ ಉತ್ತಮ ಚಿತ್ರಕಾರ ಅಥವಾ ಕಲಾವಿದನನ್ನು ಕಂಡ ರೀತಿಯಲ್ಲೇ ಕಾಣಬೇಕು. ಕೈನಲ್ಲಿ ನೇಯ್ಗೆ ಮಾಡಿದ ಬಟ್ಟೆ ಒಂದು ರೀತಿಯಲ್ಲಿ ವಿಶಿಷ್ಟ, ಪ್ರತಿ ದಾರವನ್ನು ಆತ, ಅತ್ಯಂತ ಉತ್ಸಾಹದಿಂದ, ತಾಳ್ಮೆಯಿಂದ, ಸೊಬಗಿನಿಂದ ಮತ್ತು ಕೌಶಲ್ಯದಿಂದ ನೇಯ್ದಿರುತ್ತಾನೆ. ಅವರ ಕಲೆಗೆ ತಕ್ಕ ಸಂಭಾವನೆಯನ್ನೂ ಅವರು ಪಡೆದುಕೊಳ್ಳುವ ಎಲ್ಲ ಅಧಿಕಾರ ಹೊಂದಿರುತ್ತಾರೆ. ಇದನ್ನು ಕೊಟ್ಟರೆ ಈ ವಲಯವನ್ನು ಶಕ್ತಿಶಾಲಿ ಮಾಡಬಹುದಾಗಿದೆ.

ಸಂಪ್ರದಾಯಬದ್ಧವಾದ ಕೈಮಗ್ಗ ಉತ್ಪನ್ನಗಳಿಗೆ ಬಂದರೆ, ಭಾರತ ಜಾಗತಿಕ ಮಟ್ಟದಲ್ಲಿ ತನ್ನದೇ ಆದ ಅತ್ಯುನ್ನತ ಸ್ಥಾನ ಹೊಂದಿದೆ. ಜಗತ್ತಿನಲ್ಲಿ ಉತ್ಪಾದನೆಯಾಗುವ ಶೇ. 85 ರಷ್ಟು ಕೈಮಗ್ಗ




ಉತ್ಪನ್ನಗಳು ಭಾರತದಲ್ಲೇ ಆಗುತ್ತವೆ. ಇದನ್ನು ಬಿಟ್ಟರೆ, ಶ್ರೀಲಂಕಾ, ನೇಪಾಳ, ಬಾಂಗ್ಲಾದೇಶ, ಕಾಂಬೋಡಿಯಾ ಮತ್ತು ಇಂಡೋನೇಶಿಯಾಗಳಲ್ಲಿ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಕೈಮಗ್ಗ ಉತ್ಪನ್ನಗಳು ತಯಾರಾಗುತ್ತವೆ. ಇವೆಲ್ಲವೂ ಪ್ರಮುಖವಾಗಿ ಸ್ಥಳೀಯವಾಗಿ ಉಪಯೋಗಿಸುವಂಥಹವು. ಇದಕ್ಕೆ ತದ್ವಿರುದ್ಧವಾಗಿ ಭಾರತದ ರಫ್ತು 2009–10ರಲ್ಲಿ 260 ಮಿಲಿಯನ್ ಅಮೆರಿಕನ್ ಡಾಲರ್ ಆಗಿತ್ತು. 2013–14ರ ಸುಮಾರಿಗೆ ಇದು 370 ಮಿಲಿಯನ್ ಡಾಲರ್ ಗೆ ಏರಿಕೆಯಾಗಿತ್ತು. ಅಂದರೆ ಶೇ.40ರಷ್ಟು ಪ್ರಗತಿಯಾಗಿತ್ತು.

ಈ ಪ್ರಗತಿ ದರ ಈ ವಲಯದ ದೊಡ್ಡ ಸಾಮರ್ಥ್ಯದ ಮೇಲೆ ಬೆಳಕು ಚೆಲ್ಲಿತ್ತು. ಭಾರತ ತನ್ನ ವೈವಿಧ್ಯಮಯ ಮತ್ತು ಪಾರಂಪರಿಕ ಸಂಸ್ಕೃತಿಯ ಕಾರಣದಿಂದ ಜಗತ್ತಿನ ಬೇಡಿಕೆಗೆ ತಕ್ಕಂತೆ ಕೈಮಗ್ಗ ಉತ್ಪನ್ನಗಳನ್ನು ತಯಾರಿಸಿ ಕೊಡುವ ಸಾಮರ್ಥ್ಯವಿದೆ ಎಂಬುದನ್ನು ತೋರಿಸಿತ್ತು. ಹೊಸ ಯುಗದ ಬೇಡಿಕೆಯಾದ ಬಹುವಿಧಗಳು, ವೇಗವಾಗಿ ಬದಲಾಗುವ ಮತ್ತು ಸಂಕೀರ್ಣತೆಯನ್ನು ಪೂರೈಸುವ ಶಕ್ತಿ ಬೇಕಿದೆ, ಅಲ್ಲದೆ ನೇಕಾರಿಕೆ ಉದ್ಯಮ ನಮ್ಮ ಶ್ರೀಮಂತ ಸಂಸ್ಕೃತಿ ಜತೆಗೆ ಆಧುನಿಕ ಶೈಲಿಯನ್ನು ಅಳವಡಿಸಿಕೊಳ್ಳುವ ಶಕ್ತಿಯೂ ಬೇಕಿದೆ.

ಒಬ್ಬ ಬನಾರಸಿ ಅಥವಾ ಚಾಂದೇರಿ ನೇಕಾರ ಪ್ರಸಕ್ತ ಕಾಲಕ್ಕೆ ತಕ್ಕಂತೆ ಸೀರೆಯನ್ನು ನೇಯ್ದರೆ ಆತ ಹೆಚ್ಚು ಗಳಿಸುತ್ತಾನೆ. ಅಂದರೆ ಆತ ರಫ್ತು ಮಾಡಬಹುದಾದ ಉತ್ಪನ್ನಗಳಾದ ಶಾಲು, ಶೀರೋವಸ್ತ್ರ, ಟೈಗಳು, ಬೆಲ್ಟ್‌ಗಳು, ಬ್ಯಾಗುಗಳು, ಚೀಲಗಳು ಮತ್ತು ಕೈ ಬ್ಯಾಂಡುಗಳು ಅಥವಾ ಗೃಹೋಪಕರಣಗಳಾದ ಕುಶನ್‌ಕವರ್ ಗಳು, ಟೇಬಲ್ ಮೇಲೆ ಹಾಕುವ ವಸ್ತ್ರಗಳು, ಕರ್ಟೈನ್ ಗಳನ್ನು ತಯಾರಿಸಿದರೆ ಹೆಚ್ಚು ಗಳಿಸಲು ಸಾಧ್ಯವಾಗುತ್ತದೆ. ಇಂಥ ವಸ್ತುಗಳ ಅಭಿವೃದ್ಧಿ ಮತ್ತು ಉತ್ಪನ್ನ ವೈವಿಧ್ಯತೆಗೆ ನೇಕಾರರು ಮತ್ತು ವಿನ್ಯಾಸಕಾರರ ಪರಸ್ಪರ ಸಹಕಾರ ಬೇಕಾಗುತ್ತದೆ.

ಈ ನಿಟ್ಟಿನಲ್ಲಿ ರಾಷ್ಟ್ರೀಯ ಫ್ಯಾಶನ್ ಟೆಕ್ನಾಲಜಿ ಸಂಸ್ಥೆ(ಎನ್‌ಐಎಫ್ಟಿ) ಉತ್ತಮ ಆರಂಭವನ್ನೇ ಒದಗಿಸಿತು. ಅಂದರೆ ತನ್ನ ಪಠ್ಯಕ್ರಮದಲ್ಲಿ ಇವುಗಳನ್ನು ಜೋಡಿಸಿತ್ತು. ಒಂದು ಕಡೆ ವಿದ್ಯಾರ್ಥಿಗಳನ್ನು ಕೈಮಗ್ಗ ಕೇಂದ್ರಕ್ಕೆ ಭೇಟಿ ನೀಡುವಂತೆ ಮಾಡಿ, ನಮ್ಮ ಸಂಪ್ರದಾಯಬದ್ಧ, ಬಹುಮೌಲ್ಯಯುತ ವಸ್ತುಗಳ ತಯಾರಿಸುವ ಕ್ರಮಗಳನ್ನು ಪರಿಚಯಿಸುವುದು, ಇನ್ನೊಂದು ಕಡೆ ನೇಕಾರರು ಮತ್ತು ಕಲಾವಿದರನ್ನು ಒಗ್ಗೂಡಿಸಿ ಮೂಲಭೂತ ವಿನ್ಯಾಸ ಬರುವಂತೆ ಮಾಡಿತು.

ಅಂದರೆ ಜಿಬುವಾ ಮಣಿಗಳ ಗೊಂಬೆಗಳನ್ನು ಕಿವಿಗೆ ಹಾಕಿಕೊಳ್ಳುವ ಓಲೆಗಳನ್ನಾಗಿ ಮತ್ತು ಕಾರಿನ ಅಲಂಕಾರಿಕ ವಸ್ತುಗಳನ್ನಾಗಿ ಮಾಡಿ 20 ಪಟ್ಟು ಅಧಿಕಾರ ಗಳಿಸುವಂತೆ ಸಾಧ್ಯ ಮಾಡುವುದು ಮತ್ತು ಕೈಮಗ್ಗ ವಸ್ತುಗಳನ್ನು ಮರದ ತುಂಡುಗಳನ್ನಾಗಿ ಮಾಡಿ ಅಲ್ಲಿ ಕರವಸ್ತ್ರಗಳನ್ನು ನೇತು ಹಾಕುವಂತೆ ಮಾಡುವ ಮೂಲಕ 100 ಪಟ್ಟು ಹೆಚ್ಚು ಗಳಿಸುವಂತೆ



ಮಾಡುವುದು. ಅಂದರೆ ಕಲಾವಿದರು ಮತ್ತು ನೇಕಾರರು ಜತೆಗೂಡಿದರೆ ಇಂಥವುಗಳನ್ನು ಮಾಡುವುದು ಸಾಧ್ಯ. ಇದಕ್ಕಾಗಿ ಪರಿಹಾರಯೋಗ್ಯ ಅಧ್ಯಯನ ಮಾಡಿ, ಅವುಗಳನ್ನು ಗುರುತಿಸಿ ಮತ್ತು ಅಭಿವೃದ್ಧಿಶೀಲ ಮಾರುಕಟ್ಟೆಯ ಸ್ನೇಹಿ ಉತ್ಪನ್ನಗಳನ್ನು ತಯಾರಿಸುವುದು ಆರಂಭ ಘಟ್ಟದ ಸೂಕ್ಷ್ಮ ರೀತಿಯ ಮಾರ್ಗ. ಅಲ್ಲದೆ ಹೆಚ್ಚೆಚ್ಚು ದೀರ್ಘಾವಧಿ ಆಂದೋಲನಗಳನ್ನು ಕೈಗೊಳ್ಳುವ ಮೂಲಕ ಅದರ ಪ್ರಭಾವವನ್ನು ಹೆಚ್ಚಿಸಬೇಕಿದೆ.

### ವೈವಿಧ್ಯಮಯ ಉತ್ಪನ್ನಗಳು

ವಿನ್ಯಾಸಕಾರರು ಉತ್ಪನ್ನಗಳ ಮೌಲ್ಯವನ್ನು ಹೆಚ್ಚಿಸಿದರೆ, ಇನ್ನೊಂದು ಪ್ರಮುಖ ಸಂಗತಿ ಮಾರುಕಟ್ಟೆ. ಇಂದು ಉದ್ಯಮ ಮಾರುಕಟ್ಟೆಗೆ ಬೇಕಾದ ಮಾರ್ಗಗಳನ್ನು ಹುಡುಕಿಕೊಳ್ಳುವಲ್ಲಿ ಸೋತಿದೆ. ಮಾರುಕಟ್ಟೆ ವಿಭಜನೆಯನ್ನು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಳ್ಳುವ, ಮೆಚ್ಚುವಂತೆ ಮಾಡುವ ಮತ್ತು ಬಳಸಿಕೊಳ್ಳುವ ರೀತಿಯಲ್ಲಿ ಯೋಚಿಸಬೇಕಿದೆ. ಪ್ರಮುಖ ಉತ್ಪನ್ನಗಳಾದ ಪತನ್ ಪಟೋಲಾ, ಕಾನಿ, ಬಾಲುಚಾರಿ ಮತ್ತು ಜಾಮ್ದಾನಿ ಉತ್ಪನ್ನಗಳನ್ನು ಸ್ಥಾಪಿತ ಉತ್ಪನ್ನಗಳು ಎಂದು ತೋರಿಸಬೇಕಿದೆ. ಇದರ ಜತೆಗೆ ಇವುಗಳ ಪುರಾಣ ಹಿನ್ನೆಲೆಗಳು, ನಂಬಿಕೆಗಳು ಮತ್ತು ಸಂಕೇತಗಳನ್ನು ಪರಿಚಯಿಸುವ ಜತೆಗೆ ನೇಕಾರರು ಈ ವಿಶಿಷ್ಟ ಬಟ್ಟೆಗಳ ಮೌಲ್ಯವನ್ನು ತಿಳಿಸಬೇಕಿದೆ. ಯಾವುದಕ್ಕೂ ಸಾಟಿ ಇಲ್ಲದ ವಿನ್ಯಾಸಗಳು, ವಿಶಿಷ್ಟ ನೇಯ್ಗೆಯ ತಂತ್ರಗಾರಿಕೆಯನ್ನು ತೋರಿಸುವ ಜತೆಗೆ ಇವು ಹೇಗೆ ಶ್ರೀಮಂತರ ವಸ್ತುಗಳಾಗಿದ್ದವು, ಸಾಮಾನ್ಯನಿಂದ ಹೇಗೆ ಹೊರಗಿದ್ದವು ಎಂಬುದನ್ನು ಹೇಳಬೇಕು. ಹೀಗಾಗಿ ಸ್ಥಾಪಿತ ಮಾರುಕಟ್ಟೆಯನ್ನು ವಿಭಜನೆ ಮಾಡುವುದರಿಂದ ಆ ವಸ್ತುಗಳಿಗೆ ಸಲ್ಲಬೇಕಾದ ಮೌಲ್ಯ ಸಿಕ್ಕಿಯೇ ಸಿಕ್ಕುತ್ತದೆ.

### ಸಂಕೀರ್ಣವಾದ ವಿನ್ಯಾಸ – ಸ್ಥಾಪಿತ ಉತ್ಪನ್ನಗಳು

ಇಂದು ಮಾರುಕಟ್ಟೆಯಲ್ಲಿ ಬಹುದೊಡ್ಡ ಬೆದರಿಕೆ ಇರುವುದು ಪವರ್ ಲೂಮ್ ಉತ್ಪನ್ನಗಳು ಮತ್ತು ಅತ್ಯಂತ ಕಡಿಮೆ ದರದ ಆಮದು. ಯಾಂತ್ರಿಕೃತ ಮಗ್ಗದ ಬಟ್ಟೆಗಳು ಅತ್ಯಂತ ಕಡಿಮೆ ದರದ, ಸರಳವಾದ ಮತ್ತು ಅತ್ಯಂತ ವೇಗವಾಗಿ ಸೃಷ್ಟಿಸುವಂಥವಾಗಿವೆ. ಆದಾಗ್ಯೂ, ಒಬ್ಬ ಸಾಮಾನ್ಯ ಮಾನವ ಯಾಂತ್ರಿಕೃತ ಮಗ್ಗ ಮತ್ತು ಕೈಮಗ್ಗದ ನಡುವಿನ ವ್ಯತ್ಯಾಸ ಅರಿಯಲಾರ. ಇದರ ಜತೆಗೆ, ಕಳಪೆ ಮಟ್ಟದ ಮಾರುಕಟ್ಟೆ ತಂತ್ರಗಳೂ ಕೈಮಗ್ಗ ಕ್ಷೇತ್ರಕ್ಕೆ ಹೊಡೆತ ನೀಡುತ್ತಿವೆ. ಪವರ್ ಲೂಮ್ ಉತ್ಪನ್ನಗಳನ್ನು, ಕೈಮಗ್ಗದ ಹೆಸರು ಹೇಳಿ ಮಾರಾಟ ಮಾಡಲಾಗುತ್ತಿದೆ. ಹೀಗಾಗಿ ಕೈಮಗ್ಗಕ್ಕೆ ಅತಿಮುಖ್ಯವಾಗಿ ಮತ್ತು ತ್ವರಿತವಾಗಿ ಬ್ರಾಂಡ್ ಕೊಡುವ ಕೆಲಸವಾಗಬೇಕಿದೆ. ಇದಕ್ಕಾಗಿ ಕೈಮಗ್ಗಕ್ಕಾಗಿಯೇ ಒಂದು ಚಿಹ್ನೆಯನ್ನು ಮಾಡಿ ಅದರ ನೈಜತೆಯನ್ನು ಹೇಳಬೇಕಿದೆ. ಇದು ಯಾಂತ್ರಿಕೃತ



ಮಗ್ಗದಲ್ಲಿ ನೇಯ್ದ ಬಟ್ಟೆಯಲ್ಲ, ಕೈಮಗ್ಗದ ಬಟ್ಟೆ ಎಂದು ತೋರಿಸಬೇಕಿದೆ. ಅದು ವಸ್ತುವಿನ ನೈಜತೆಯನ್ನು ತೋರಿಸಬೇಕಿದೆ. ಆದರೆ ದುರದೃಷ್ಟವಶಾತ್, ಜನರಿಗೆ ಕೈಮಗ್ಗದ ಚಿಹ್ನೆಯ ಪರಿಚಯವೇ ಇಲ್ಲ. ಹೀಗಾಗಿ ಸಾಮಾನ್ಯ ಜನತೆಯಲ್ಲಿ ಕೈಮಗ್ಗ ಉತ್ಪನ್ನಗಳಿಗಾಗಿಯೇ ಇರುವ ಚಿಹ್ನೆಯನ್ನು ಪರಿಚಯಿಸಬೇಕಿದೆ. ಒಂದು ಸಾಲಿನ ಜಾಹಿರಾತನ್ನು ನೀಡುವ ಮೂಲಕ ಇದನ್ನು ಪರಿಚಯಿಸುವ ಕೆಲಸ ಮಾಡಬಹುದು. ದೇಶ– ವಿದೇಶಗಳಲ್ಲಿ ನಡೆಯುವ ಸರ್ಕಾರದ ಪ್ರಾಯೋಜಿತ ಪ್ರದರ್ಶನಗಳಲ್ಲಿ ಕೈಮಗ್ಗದಿಂದ ಉತ್ಪಾದಿಸಲ್ಪಟ್ಟ ವಸ್ತುಗಳನ್ನು ಪರಿಚಯಿಸಬಹುದಾಗಿದೆ. ಇದರ ಜತೆಗೆ ಅರಿವನ್ನು ಹೆಚ್ಚಿಸುವ ಜತೆಗೆ, ನೈಜ



ಕೈಮಗ್ಗ ನೇಕಾರರಿಗೆ ಉಪಯೋಗವಾಗುವ ಯೋಜನೆಗಳನ್ನು ಮಾಡಬೇಕಾಗಿದೆ.

ಕೈಮಗ್ಗದ ವಸ್ತುಗಳ ಜತೆಗಿನ ಪ್ರೀತಿ, ಅವುಗಳ ಹಿಂದಿನ ಪರಂಪರೆ ಮತ್ತು ಸಾಮಾಜಿಕ ಪರಿಣಾಮಗಳು ಕೈಮಗ್ಗವನ್ನು ಸುಸ್ಥಿತಿಯಲ್ಲಿ ಇಡಬಲ್ಲವು. ಇದರ ಜತೆಗೆ, ಕುಶಲ ನೇಕಾರರ ಜತೆಗೆ, ಉತ್ಕೃಷ್ಟ ವಿನ್ಯಾಸಕಾರರನ್ನು ಹೊಂದಿಸಿ ಅವರಿಂದ ವೈವಿಧ್ಯಮಯ ಉತ್ಪನ್ನಗಳನ್ನು ಪಡೆಯಬೇಕು. ಇದನ್ನು ಉತ್ತಮ ಗ್ರಾಹಕರಿಗೆ ಒದಗಿಸಬೇಕು. ಇದರಿಂದ ಶೇ.20 ರಷ್ಟು ನೇಕಾರರು ಶೇ.80 ರಷ್ಟು ಅತ್ಯುತ್ಕೃಷ್ಟ ವಸ್ತುಗಳನ್ನು ತಯಾರಿಸಬಲ್ಲರು. ಇದು ಅತ್ಯಂತ ಕಡಿಮೆ ವಲಯಕ್ಕೆ ಪೂರೈಕೆ ಮಾಡಿದರು ಸಹ, ಕೈಮಗ್ಗ ವಲಯವನ್ನು ಬದುಕುವಂತೆ ಮಾಡಬಲ್ಲದು. ಉಳಿದ ಶೇ.80ರಷ್ಟು ನೇಕಾರರು ಇದನ್ನೇ ಉದ್ಯಮವನ್ನಾಗಿ ಮಾಡಿಕೊಂಡು ಇನ್ನೊಂದು ರೀತಿಯಲ್ಲಿ ಬದುಕಬಹುದು.

### ಬೃಹತ್ ಉದ್ಯೋಗ ಸೃಷ್ಟಿಸಬಹುದಾದ ಉದ್ಯಮದ ಅಪಾಯಗಳು ಮತ್ತು ತೆಗೆದುಕೊಂಡ ಕ್ರಮಗಳು


ನೇಕಾರಿಕೆ ವಲಯವನ್ನು ನಾವು ಯಾವುದೇ ಕಾರಣಕ್ಕೂ ಹಗುರವಾಗಿ ಪರಿಗಣಿಸುವಂತಿಲ್ಲ. ಏಕೆಂದರೆ ಇದು ದೇಶದ ಸುಮಾರು 43 ಲಕ್ಷ ಮಂದಿಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಉದ್ಯೋಗ ನೀಡುತ್ತಿದೆ. ಅಲ್ಲದೆ ತತ್ ಕ್ಷಣಕ್ಕೆ ಈ ಪ್ರಮಾಣದ ಮಂದಿಗೆ ಅತ್ಯುತ್ತಮವಾದ ತರಬೇತಿ ನೀಡಿ, ಅವರಿಂದ ಉತ್ತಮ ರೀತಿಯ ಸ್ಥಾಪಿತ ಉತ್ಪನ್ನಗಳನ್ನೂ ಪಡೆಯಲೂ ಸಾಧ್ಯವಿಲ್ಲ. ಆದಾಗ್ಯೂ, ಇಂದಿಗೂ ಕೈಮಗ್ಗ ಗ್ರಾಮಾಂತರ ಪ್ರದೇಶದಲ್ಲಿ ಜೀವನಕ್ಕಿರುವ ಏಕೈಕ ಆಸರೆಯಾಗಿದೆ.

ಕೈಮಗ್ಗಕ್ಕಿರುವ ಪ್ರಮುಖ ಬೆದರಿಕೆ ಪವರ್ ಲೂಮ್ ನದ್ದೇ. ಇವರು ಹೆಚ್ಚಾಗಿ ಕೈಮಗ್ಗದ ಉತ್ಪನ್ನಗಳನ್ನೇ ಮರುಸೃಷ್ಟಿ ಮಾಡಿ ಮಾರಾಟ ಮಾಡುತ್ತಾರೆ. ಪವರ್ ಲೂಮ್ ನಲ್ಲಿ ಉತ್ಪನ್ನಗಳ ಉತ್ಪಾದನೆ ಸರಳ ಮತ್ತು ವೇಗ. ಕೆಲ ನೇಕಾರರು ಈಗಾಗಲೇ ಕೈಮಗ್ಗದಿಂದ ಪವರ್ ಲೂಮ್ ಕಡೆಗೆ ಮುಖ ಮಾಡಿ ನಿಂತಿದ್ದಾರೆ. ಅಲ್ಲದೆ ಪವರ್ ಲೂಮ್ ಇವರ ಬಾಳಲ್ಲಿ ಖಂಡಿತವಾಗಿಯೂ ಬೆಳಕನ್ನು ಮೂಡಿಸಿದೆ. ಏಕೆಂದರೆ, ನಿಖರ, ಅತ್ಯುತ್ತಮ ಮತ್ತು ವೇಗದಲ್ಲಿ ಬಟ್ಟೆ ನೇಯಬಹುದಾಗಿದೆ. ಅದೇ ರೀತಿ ಇದು ಕೆಲವರ ಬಾಳಲ್ಲಿ ಕತ್ತಲೆಯನ್ನೂ ಮೂಡಿಸಿದೆ. ಏಕೆಂದರೆ, ಪವರ್ ಲೂಮ್ ಮಾಡಿಕೊಂಡರಷ್ಟೇ ಸಾಕಲ್ಲ, ಇದಕ್ಕೆ ಬೇಕಾದ ವಿದ್ಯುತ್ ಒದಗಿಸುವಲ್ಲಿ ಸರ್ಕಾರಗಳು ವಿಫಲವಾಗಿರುವುದರಿಂದ ಅವರು ಕೈಕಟ್ಟಿ ಕುಳಿತಿದ್ದಾರೆ.

ಇಂಥ ಸಂದರ್ಭದಲ್ಲಿ ಲಕ್ಷಾಂತರ ಮಂದಿ ನೇಕಾರರ ಬದುಕಿಗೆ ಉಪಯೋಗ ಆಗ ಬಹುದಾದಂಥ ಯೋಜನೆಗಳನ್ನು ಜಾರಿ ಮಾಡಬೇಕು. ಅಲ್ಲದೆ ಕೈಮಗ್ಗಕ್ಕಿಂತ, ವಿದ್ಯುತ್ ಮಗ್ಗಗಳೇ ಮೇಲು ಎನ್ನುವವರಿಗೊಂದು ಇಲ್ಲಿ ಸ್ಪಷ್ಟನೆಯನ್ನೂ ನೀಡಬಯಸುತ್ತೇನೆ. ಅದಕ್ಕಿಂತ ಕೈಮಗ್ಗದ ಮಿಲ್ ಗಳು ಅಭಿವೃದ್ಧಿ ಮತ್ತು ಸಮೂಹ ಉತ್ಪಾದನೆಯಲ್ಲಿ ಔಷಧಿಯಾಗಬಲ್ಲವು. ಇಧಷ್ಟೇ ಅಲ್ಲ, ಎರಡೂ ವಲಯಗಳೂ ಅಷ್ಟೇ ಪ್ರಮುಖ ಮತ್ತು ಅಷ್ಟೇ ಸಮಾನವಾಗಿ ಪ್ರಾಮುಖ್ಯತೆ ನೀಡಬಹುದಾದಂತ ಕ್ಷೇತ್ರಗಳು. ಇವು ಬೇರೆ ಬೇರೆಯಾಗಿದ್ದರೂ, ಅಷ್ಟೇ ಪ್ರಮುಖವಾದ ನೀತಿ ರೂಪಿಸುವಂಥಹವು. ಅಲ್ಲದೆ ಈ ಎರಡು ವಲಯಗಳು ಪರಸ್ಪರ ಸ್ಪರ್ಧೆಗೆ ಇಳಿಯಲು ಸಾಧ್ಯವಿಲ್ಲ. ಆದರೆ ವಾಸ್ತವವಾಗಿ ಇವರು ಒಂದಕ್ಕೊಂಡು ಪೂರಕ ಮತ್ತು ಪ್ರತಿಪೂರಕವಾಗಿರುವಂಥವು. ಒಂದು ಜಗತ್ತಿಗೆ ಬಟ್ಟೆ ಕೊಟ್ಟರೆ, ಇನ್ನೊಂದು ಲಕ್ಷಾಂತರ ಮಂದಿಗೆ ಉದ್ಯೋಗ ನೀಡಿದೆ. ನಮ್ಮ ಸರ್ಕಾರ ಎರಡು ವಲಯಗಳ ಅಭಿವೃದ್ಧಿಗೆ ಬೇಕಾದ ನೀತಿ ನಿಯಮ ರೂಪಿಸಬೇಕು ಮತ್ತು ಪ್ರೋತ್ಸಾಹಿಸಬೇಕು. ಆದರೆ ಈ ಲೇಖನ ಕೇವಲ ಕೈಮಗ್ಗ ಕ್ಷೇತ್ರಕ್ಕೆ ಸಂಬಂಧಿಸಿದ್ದು ಮತ್ತು ಅದರ ರಕ್ಷಣೆಗೆ ಕುರಿತಾದದ್ದು. ಪವರ್ ಲೂಮ್ ಗಳು ಮತ್ತು ಮಿಲ್ ವಲಯದಿಂದ ಕೈಮಗ್ಗಗಳ ರಕ್ಷಿಸುವ ಸಲುವಾಗಿ ಕೈಮಗ್ಗ(ರಿಸರ್ವೇಶನ್ ಆಫ್ ಆರ್ಟಿಕಲ್ಸ್ ಫಾರ್ ಪ್ರೊಡಕ್ಷನ್) ಕಾಯ್ದೆಯನ್ನು 1985ರಲ್ಲಿ ತರಲಾಯಿತು. ಈ ಕಾಯ್ದೆಯಂತೆ

11 ಜವಳಿ ಅನುಚ್ಛೇದಗಳು ಕೈಮಗ್ಗದ ಉತ್ಪಾದನೆಗಾಗಿಯೇ ಇರುವಂಥವು(ಜತೆಗೆ ಕೆಲ ತಾಂತ್ರಿಕ ವಿಶೇಷಣಗಳೊಂದಿಗೆ). ಇವು ಪವರ್ ಲೂಮ್ ಅಥವಾ ಮಿಲ್ ಗಳಲ್ಲಿ ಉತ್ಪಾದನೆಗೆ ಅವಕಾಶ ನೀಡುವುದಿಲ್ಲ. ಈ ಮೀಸಲನ್ನು ಉಲ್ಲಂಘಿಸಿದರೆ ದಂಡ ವಿಧಿಸಬಹುದಾಗಿದೆ.

ಸರ್ಕಾರ ಕೂಡ ಕೈಮಗ್ಗಗಳ ನೇಕಾರರಿಗೆ ಸಬ್ಸಿಡಿಯ ಆಧಾರದಲ್ಲಿ ನೂಲನ್ನು ಒದಗಿಸುತ್ತದೆ. ಇದನ್ನು ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ಸಹಕಾರ ಸಂಘದ ಮೂಲಕ ನೀಡಲಾಗುತ್ತದೆ. ಇದರ ಪ್ರಮುಖ ಉದ್ದೇಶವೇ ಕೈಮಗ್ಗ ನೇಕಾರರಿಗೆ ಅತ್ಯಂತ ಕಡಿಮೆ ದರದಲ್ಲಿ ನೂಲು ದೊರೆಯಬೇಕು ಎಂಬುದು. ಇದಕ್ಕಾಗಿ ಅತ್ಯಗತ್ಯ ವಸ್ತುಗಳ ಕಾಯ್ದೆ 1955ರಲ್ಲಿ, ಕಾರ್ಯವಿಧಾನವನ್ನು ಇಡಲಾಗಿದೆ. ಇದಕ್ಕೆ ಹ್ಯಾಂಕ್ ನೂಲಿನ ಆದ್ಯತೆ ಎಂದು ಕರೆಯಲಾಗಿದೆ. ಇದು ಸ್ಪಿನ್ನಿಂಗ್



ಮಿಲ್ ಗಳು ಕೆಲ ನೂಲನ್ನು ಹ್ಯಾಂಕ್ ರೂಪದಲ್ಲಿ ಉತ್ಪಾದಿಸಬೇಕಾಗಿದೆ. ಏಕೆಂದರೆ, ಇದು ಕೈಮಗ್ಗಗಳಿಗೆ ಬೇಕಾದದ್ದಾಗಿದೆ.

ಆದರೆ ಗಿರಣಿ ವಲಯದವರು ಈ ಎರಡು ಅಂಶಗಳಿಗೆ ತೀವ್ರವಾಗಿ ವಿರೋಧಿಸಿದರು. ಆದರೆ ಕೈಮಗ್ಗ ಉಳಿಯುವಿಕೆಗಾಗಿ ಈ ಅಂಶಗಳನ್ನು ಪಾಲಿಸಲೇಬೇಕಾದ ಒತ್ತಡವೂ ಅವರಿಗೆ ಎದುರಾಯಿತು. ನಿಜವಾಗಿ ಹೇಳಬೇಕೆಂದರೆ ಈ ಕ್ಷೇತ್ರವನ್ನು ಪ್ರಬಲಗೊಳಿಸುವ ಮತ್ತು ಯಂತ್ರಗಳ ಅನುಷ್ಠಾನಗೊಳಿಸುವ ಕೆಲಸವೂ ಆಗಬೇಕಿದೆ. ಈ ಕ್ಷೇತ್ರಕ್ಕಿರುವ ಇನ್ನೊಂದು ಬಹುದೊಡ್ಡ ಸಮಸ್ಯೆ ಎಂದರೆ ಸಾಲ ಸೌಲಭ್ಯ. ಮೂರನೇ ಗಣತಿ ಪ್ರಕಾರ, ಶೇ.61 ರಷ್ಟು ಸ್ವತಂತ್ರ ನೇಕಾರರು, ಶೇ.34 ರಷ್ಟು ಮಗ್ಗಗಳ ಮಾಲೀಕರ ಅಥವಾ ಖಾಸಗಿ ಮಾಲೀಕರ ಕೆಳಗೆ ಕೆಲಸ ಮಾಡುತ್ತಿದ್ದಾರೆ. ಕೇವಲ ಶೇ.5 ರಷ್ಟು ನೇಕಾರರು ಮಾತ್ರ ಸಾಂಸ್ಥಿಕ ಸಂಸ್ಥೆಗಳಲ್ಲಿ ಉದ್ಯೋಗ ಮಾಡುತ್ತಿದ್ದಾರೆ. ಇದರ ಜತೆಗೆ ನೇಕಾರರ ವ್ಯಕ್ತಿಗತ ಜೀವನ ನೋಡುವುದಾದರೆ ಅವರು ಶ್ರೀಮಂತರೇನಲ್ಲ. ದಲ್ಲಾಳಿಗಳು, ನೇಕಾರ ಮಾಲೀಕರು, ಮಧ್ಯವರ್ತಿಗಳ ಕಾಟದಿಂದಾಗಿ ಅವರ ಕೆಲಸಕ್ಕೆ ತಕ್ಕಂತ ಹಣ ಸಿಗುತ್ತಿಲ್ಲ. ಕೈಮಗ್ಗ ನೇಕಾರರ ಕೇವಲ ಹಣದ ವಿಚಾರದಲ್ಲಷ್ಟೇ ಬಡವರಲ್ಲ, ವಿದ್ಯಾಭ್ಯಾಸದ ವಿಚಾರದಲ್ಲೂ ಇವರು ತೀರಾ ಹಿಂದುಳಿದಿದ್ದಾರೆ. ಹೀಗಾಗಿಯೇ ಅವರಿಗೆ ಬೇಕಾದ ಸಾಲ ಸೌಲಭ್ಯ ಸಿಗುತ್ತಿಲ್ಲ.

ಇವರ ಈ ನೋವನ್ನು ಅರ್ಥ ಮಾಡಿಕೊಂಡೇ 2011ರಲ್ಲಿ ಸರ್ಕಾರ ಇವರಿಗಾಗಿ ರೂ. 3000 ಕೋಟಿಗಳ ಪ್ಯಾಕೇಜ್ ಅನ್ನು ಘೋಷಣೆ ಮಾಡಿತು. ಇದನ್ನು ಇವರು ವಿವಿಧ ಸಹಕಾರ ಸಂಘಗಳಲ್ಲಿ ಮಾಡಿದ್ದ ಸಾಲವನ್ನು ಮನ್ನಾ ಮಾಡುವ ಸಲುವಾಗಿ ಘೋಷಿಸಲಾಗಿತ್ತು. ಇದರ ಪ್ರಮುಖ ಉದ್ದೇಶ ಇವರ ಹಳೇ ಸಾಲಗಳನ್ನು ತೀರುವಳಿ ಮಾಡಿ ಹೊಸ ಸಾಲಕ್ಕೆ ಲಭ್ಯರನ್ನಾಗಿ ಮಾಡುವುದೇ ಆಗಿತ್ತು. ಆದರೆ ಮಾರ್ಗಸೂಚಿಗಳು ಮತ್ತು ವ್ಯಾಖ್ಯಾನಗಳ ಕಾರಣದಿಂದಾಗಿ ಕೇವಲ ಸಾವಿರ ಕೋಟಿ ಮೌಲ್ಯದ ಸಾಲ ಮಾತ್ರ ಮನ್ನಾ ಆಯಿತು. ಇದರ ಪ್ರಯೋಜನ ಸಿಕ್ಕಿದ್ದು ಕೇವಲ 50 ಸಾವಿರ ಮಂದಿ ನೇಕಾರರಿಗೆ. ಇದರಲ್ಲಿ ಕೈಮಗ್ಗ ನೇಕಾರರಿಗೆ ಸಿಕ್ಕಿದ್ದು ಸ್ವಲ್ಪವೇ ಮಾತ್ರ. ಇದರಿಂದ ಗೊತ್ತಾದ ಒಂದು ವಿಚಾರವೆಂದರೆ, ಕೈಮಗ್ಗ ನೇಕಾರರಿಗೆ ಹಲವಾರು ದಶಕಗಳಿಂದ ಸಾಲವೇ ಸಿಕ್ಕಿಲ್ಲ ಎಂಬುದು. ಇದನ್ನು ಮನಗಂಡ ಸರ್ಕಾರ ತ್ವರಿತಗತಿಯಲ್ಲಿ ನಿರ್ಧಾರ ತೆಗೆದುಕೊಂಡು ನೇಕಾರರಿಗೆ ಶೇ.6ರ ಬಡ್ಡಿದರದಲ್ಲಿ ಸಾಲ ಸಿಗುವಂತೆ ಮಾಡಿತು. ಇದು ಸಬ್ಸಿಡಿ ಸಹಿತ ಸಾಲವಾಗಿದ್ದು ಇದನ್ನು ಬಂಡವಾಳ ಮತ್ತು ಕಾರ್ಯವಾಹಿ ಬಂಡವಾಳವನ್ನಾಗಿ ಮಾಡುವ ಸಲುವಾಗಿ ನೀಡುವ ಗುರಿ ಇಟ್ಟುಕೊಂಡಿತು. ಒಂದು ವೇಳೆ ಈ ಯೋಜನೆ ಸರಿಯಾದ ಸಮಯದಲ್ಲಿ ಜಾರಿಯಾಗಿದ್ದರೆ, ನೇಕಾರರ ಜೀವನವೇ ಬದಲಾಗಬಹುದಿತ್ತು. ಇದು ನೇಕಾರರಿಗೆ ಬೇಕಾದ ಕಾರ್ಯವಾಹಿ ಬಂಡವಾಳ ಒದಗಿಸುತ್ತಿತ್ತು, ಇದರ ಸಹಾಯದಿಂದ ಅವರು ಕೈಮಗ್ಗದ ಬಟ್ಟೆಗಳನ್ನು ಚೆನ್ನಾಗಿಯೇ ಮಾಡಬಹುದಿತ್ತು.

ಇನ್ನು ಶಿಕ್ಷಣದ ವಿಚಾರಕ್ಕೆ ಬಂದರೆ ಅವರು ಪಡೆದದ್ದು ಕಡಿಮೆಯೇ. ಶೇ. 83 ರಷ್ಟು



ನೇಕಾರರು ಕೇವಲ ಹೆಚ್ಎಸ್ಎಲ್ಸಿ ವರೆಗೆ ಓದಿದ್ದಾರೆ. ಇನ್ನು ಶೇ.17 ರಷ್ಟು ಮಂದಿ ಈ ಹಂತಕ್ಕಿಂತ ಕೊಂಚ ಮೇಲಕ್ಕೆ ಹೋಗಿದ್ದಾರೆ. ಈ ಅಂಶ ನಿಜಕ್ಕೂ ಆತಂಕಕಾರಿಯಾದದ್ದು ಎನ್ನಬಹುದು. ಅಲ್ಲದೆ ಈ ಉದ್ಯೋಗ ಕಡಿಮೆ ಓದಿಕೊಂಡವರಿಗೆ ಮಾತ್ರ ಎಂಬ ಗ್ರಹಿಕೆ ಕೂಡ ಬರುವಂತಾಗಿದೆ. ಅಲ್ಲದೆ ಇದು ಈ ಉದ್ಯೋಗದ ಕುರಿತಾದ ಇರುವ ಹೆಮ್ಮೆಯನ್ನೂ ಕಡಿಮೆ ಮಾಡುವಂತಾಗಿದೆ. ಈ ಉದ್ಯೋಗವನ್ನು ನಾವು ಮುಂದಿನ ಪೀಳಿಗೆಗೂ ಕೊಂಡೊಯ್ಯಬೇಕಾದರೆ ಇದೊಂದು ಆಧುನಿಕ ಕೌಶಲ್ಯವರ್ಧಿತ ಉದ್ಯೋಗವೆಂದೇ ಭಾವಿಸಬೇಕು. ಅಂದರೆ ಇದನ್ನು ಲಲಿತಕಲೆ, ಛಾಯಾಗ್ರಹಣ, ಸಂಗೀತದಂತೆಯೇ ಪರಿಗಣಿಸಬೇಕು. ಇದರ ಲೆಕ್ಕಾಚಾರದಲ್ಲಿ ಎನ್ಐಎಫ್ಟಿಯಂಥ ಸಂಸ್ಥೆಗಳು ಕೈಮಗ್ಗಕ್ಕೆ ಸಂಬಂಧಿಸಿತ ವಿಷಯಗಳನ್ನು ಪಠ್ಯದಲ್ಲಿ ಅಳವಡಿಸಿಕೊಂಡಿವೆ. ಅಲ್ಲದೆ ಇಂಥ ಬಹು ಪ್ರತಿಷ್ಠಿತ ಯೋಜನೆ ಇರುವುದು ವೃತ್ತಿಪರರಿಗೆ ಎಂದು ಮಾಡಿ, ಕೈಮಗ್ಗ ನೇಕಾರರಿಗಾಗಿಯೇ ಶಿಕ್ಷಣ ಕಾರ್ಯಕ್ರಮಗಳನ್ನು ರೂಪಿಸುವುದು ಮಾಡಬಹುದಾಗಿದೆ. ಎನ್ಐಎಫ್ಟಿ ಪ್ರಮಾಣ ಪತ್ರವು ಅವರಿಗೆ ಒಂದು ರೀತಿಯ ಹೆಮ್ಮೆ ತಂದುಕೊಡಬಹುದಾಗಿದೆ. ಇದರ



ಜತೆಗೆ ಅವರಿಗೆ ಕೌಶಲ್ಯ ವೃದ್ಧಿಸುವ, ಅಂದರೆ ಸುಧಾರಿಸುವ, ಉದ್ಯೋಗ ಸಿಗುವ ಮತ್ತು ಮಾರುಕಟ್ಟೆ ಒದಗಿಸುವ ಕೆಲಸ

ಮಾಡಬಹುದಾಗಿದೆ. ಈ ಮೂಲಕ ಈ ಉದ್ಯೋಗವನ್ನು ಮುಂದಿನ ಪೀಳಿಗೆಗೂ ಉಳಿಸಬಹುದಾಗಿದೆ.

**ಕೈಮಗ್ಗಗಳ ತಾಂತ್ರಿಕ ಉನ್ನತೀಕರಣದ ಅಗತ್ಯತೆ**

ಕೈಮಗ್ಗ (ಉತ್ಪನ್ನಗಳ ರಕ್ಷಣಾ ಮೀಸಲು) ಕಾಯ್ದೆ, 1985ರ ಸೆಕ್ಷನ್ 2(ಬಿ)ನಂತೆ, ಕೈಮಗ್ಗವೆಂದರೆ, ಪವರ್ ಲೂಮ್ ಹೊರತುಪಡಿಸಿದಂತೆ ಇನ್ನಾವುದೇ ಮಗ್ಗವೆಂದೇ ಹೇಳಲಾಗಿದೆ. ಭಾರತೀಯ ಗುಣಮಟ್ಟ ಸಂಸ್ಥೆಯ ಪ್ರಕಾರ, ಕೈಮಗ್ಗವೆಂದರೆ ಕೈನಿಂದ ಕಾರ್ಯಾಚರಣೆ ಮಾಡುವ ಯಂತ್ರ, ಇದರಲ್ಲಿ ಬಟ್ಟೆಯನ್ನು ನೇಯ್ಗೆ ಮಾಡಲಾಗುತ್ತದೆ. ಕೆಲವೊಂದು ಉದಾಹರಣೆಗಳಲ್ಲಿ ಕಾಲಿನಿಂದಲೂ ಕಾರ್ಯಾಚರಣೆ ಮಾಡಲಾಗುತ್ತದೆ.

ಕೈನಿಂದಲೇ ನೇಕಾರಿಕೆ ಮಾಡುವ ತಾಂತ್ರಿಕ ವಿವರಗಳತ್ತ ಗಮನಹರಿಸೋಣ. ಮೇಲೆ ಹೇಳಿದಂತೆ, ಕೈಮಗ್ಗ ನೇಕಾರಿಕೆಯಲ್ಲಿ ಮೂರು ರೀತಿಯ ಪ್ರಕ್ರಿಯೆಗಳಾಗುತ್ತವೆ – ಶೆಡ್ಡಿಂಗ್, ಪಿಕ್ಕಿಂಗ್ ಮತ್ತು ಬೀಟಿಂಗ್ ರೀತಿಯಲ್ಲಿ ಪ್ರಕ್ರಿಯೆ ಮಾಡಲಾಗುತ್ತದೆ. ಶೆಡ್ಡಿಂಗ್ ಪ್ರಕ್ರಿಯೆಯಲ್ಲಿ ಬಾಗಿರುವಂತ ದಾರಗಳನ್ನು ಬೇರೆ ಬೇರೆಯಾಗಿ ಮಾಡಲಾಗುತ್ತದೆ. ಈ ಪ್ರಕ್ರಿಯೆ ನೇಯ್ಗೆ ಅಳವಡಿಕೆಗೆ ಅನುಕೂಲ ಮಾಡಿಕೊಡುತ್ತದೆ. ಉದ್ದನೆಯ ನೇಯ್ಗೆಗೆ ಒಳತೂರಿಸುವಿಕೆಯೇ ಪಿಕ್ಕಿಂಗ್ ಕಾರ್ಯಾಚರಣೆ. ಇದಾದ ಮೇಲೆ ಬೆತ್ತದಂಥ ವಸ್ತುವಿನಿಂದ ಅಥವಾ ಬೆತ್ತದಿಂದ ಹೊಡೆಯುವ ಮೂಲಕ ನೇಯ್ಗೆ ಮಾಡಿ ಬಟ್ಟೆ ತಯಾರಿಸಲಾಗುತ್ತದೆ. ಈ ಮೂರು ಪ್ರಕ್ರಿಯೆಗಳನ್ನು ನೇಕಾರನೊಬ್ಬ ವಿದ್ಯುತ್ ಇಲ್ಲದೆಯೇ ಮಾಡುತ್ತಾನೆ. ಕರೆಂಟ್ ಉಪಯೋಗಿಸದೆಯೇ ಈ ಪ್ರಕಾರದಲ್ಲಿ ಬಟ್ಟೆ ನೇಯ್ಗೆ ಮಾಡುವಿಕೆಗೆ ಬಹು ಬೇಡಿಕೆ ಇದೆ. ಇದರ ಜತೆಯಲ್ಲಿ ಕೈಮಗ್ಗಕ್ಕೆ ದಾರವನ್ನು ಹಾಕುವ ಮುನ್ನ ತಿರುಚುವಿಕೆ ಮತ್ತು ಗಾತ್ರದ ಬಗ್ಗೆ ನಿರ್ಧಾರ ಮಾಡಲಾಗುತ್ತದೆ. ಕೈಮಗ್ಗದಲ್ಲಿ ನೇಯ್ದು ಬಳಿಕ ಆಗುವ ಕೆಲಸಗಳನ್ನು ಯಾಂತ್ರೀಕರಣ ಮಾಡಬಹುದು. ಇದರಿಂದ ನೇಕಾರರ ಭಾರಿ ಪರಿಶ್ರಮ ತಪ್ಪುತ್ತದೆ. ಈ ಬಗ್ಗೆ ಸಂಶೋಧನೆಯಾಗಬೇಕಿದೆ. ಆದರೆ ಕೈಮಗ್ಗ ಉದ್ಯಮವನ್ನು ನಾಶವಾಗಲಿಕ್ಕೆ ಬಿಡಬಾರದು. ಕೈಮಗ್ಗವನ್ನು ಯಾಂತ್ರೀಕರಣ ಮಾಡುವ ಕುರಿತಂತೆ ದೇಶದಲ್ಲಿ ಬಹುದೊಡ್ಡ ಚರ್ಚೆಯೇ ಆಗುತ್ತಿದೆ. 2013ರಲ್ಲಿ ಯೋಜನಾ



ಆಯೋಗ, ಕೈಮಗ್ಗವನ್ನು ಮರು ವ್ಯಾಖ್ಯಾನ ಮಾಡಿತ್ತು. ಅಂದರೆ ಯಾವುದೇ ಹೈಬ್ರಿಡ್ ಮಗ್ಗದಲ್ಲಿ, ಮಾನವನ ಶಕ್ತಿಯೊಂದಿಗೆ ನೇಕಾರಿಕೆ ಮಾಡುತ್ತಿದ್ದರೆ ಅದನ್ನು ಕೈಮಗ್ಗವೆಂದು ಕರೆಯಬಹುದು ಎಂದಿದೆ. ಅಲ್ಲದೆ ಸಚಿವಾಲಯವು ಹೈಬ್ರಿಡ್ ಮಗ್ಗಗಳ ಜತೆಗೆ, ಕೆಲ ಮಾನವನ ಚಲನೆಗಳನ್ನೂ ಇಟ್ಟುಕೊಳ್ಳಬಹುದು ಎಂದು ಸಲಹೆ ನೀಡಿದೆ. ಆದರೆ ಈ ಸಲಹೆಗೆ ದೇಶದ ನೇಕಾರಿಕೆ ಸಮುದಾಯ ವಿರೋಧ ವ್ಯಕ್ತಪಡಿಸಿದೆ. ಇದರ ಜತೆಗೆ ಪ್ರತಿಭಟನೆಗಳನ್ನೂ ನಡೆಸಿದೆ. ನಾನು ಹೇಳುವ ಪ್ರಕಾರ, ನೇಕಾರರ ಈ ವಿರೋಧ ಸಮರ್ಥನೀಯವಾದದ್ದು. ಏಕೆಂದರೆ, ಬಹುವರ್ಷಗಳಿಂದ ನಡೆಸಿಕೊಂಡು ಬಂದಿರುವ ಕೈಮಗ್ಗಗಳ ಅಸ್ತಿತ್ವಕ್ಕೆ ಧಕ್ಕೆ ಬರುತ್ತದೆ. ಪ್ರಸಕ್ತ ಸ್ಥಿತಿಯಲ್ಲಿ ಪವರ್ ಲೂಮ್ ಉತ್ಪನ್ನಗಳನ್ನೇ ಕೈಮಗ್ಗದ ಉತ್ಪನ್ನಗಳೆಂದು ಹೇಳಿ ಮಾರಾಟ ಮಾಡಲಾಗುತ್ತಿದೆ. ಅದೇ ಹೈಬ್ರಿಡ್ ಲೂಮ್ ಗಳಿಗೆ ಹೊಂದಿಕೊಂಡರೆ, ಪವರ್ ಲೂಮ್ ಉತ್ಪನ್ನಗಳ ಜತೆಗೆ ಸ್ಪರ್ಧೆ ಮಾಡುವುದು ಕಷ್ಟವಾಗುತ್ತದೆ. ಅವರ ಮುಂದೆ ಸೋಲೊಪ್ಪಿಕೊಳ್ಳಬೇಕಾಗುತ್ತದೆ. ಪವರ್ ಲೂಮ್ ಮಾಲೀಕರು ಕೈಮಗ್ಗಗಳ ಹೆಸರೇಳಿ, ಕೈಮಗ್ಗ ನೇಕಾರರ ಅಭಿವೃದ್ಧಿ ಮತ್ತು ರಕ್ಷಣೆಗಾಗಿ ಇರುವ ಸರ್ಕಾರದ ಯೋಜನೆಗಳನ್ನು ಬಳಸಿಕೊಳ್ಳುತ್ತಾರೆ, ಕೈಮಗ್ಗ ನೇಕಾರರನ್ನು ಬದಿಗೆ ತಳ್ಳುತ್ತಾರೆ. ಈ ಮೂಲಕ ಕೈಮಗ್ಗಗಳು ಮುಂದೆಂದೋ ನೇಪಥ್ಯಕ್ಕೆ ಸರಿಯುವ ಬದಲಾಗಿ, ಈ ಕೂಡಲೇ ನೇಪಥ್ಯಕ್ಕೆ ಸರಿದುಬಿಡುತ್ತವೆ. ಆದರೆ 2014ರಲ್ಲಿ ಜವಳಿ ಸಚಿವಾಲಯವು ಕೈಮಗ್ಗಕ್ಕೆ ಈಗಿರುವ ವ್ಯಾಖ್ಯಾನವನ್ನೇ ಮುಂದುವರಿಸಲು ತೀರ್ಮಾನಿಸಿತು. ಅಂದರೆ ಇದು ಪವರ್ ಲೂಮ್ ಗಿಂತ ಹೊರತಾದದ್ದು ಎಂದು ಹೇಳಿತು. ಅದೇ ವೇಳೆಗೆ, ಕಡಿಮೆ ಮಾನವನ ಪರಿಶ್ರಮದ ಜತೆಗೆ, ಹೆಚ್ಚು ಗುಣಮಟ್ಟದ ಉತ್ಪನ್ನಗಳನ್ನು ಉತ್ಪಾದಿಸುವ ಬಗ್ಗೆ ಶಿಫಾರಸು ಮಾಡಿತು. ನಾನು ಇಲ್ಲಿ ವಾದಿಸುವುದೇನೆಂದರೆ, ಮೊದಲ ಮತ್ತು ಎರಡನೆಯ ಮೋಶನ್ ಗಳಲ್ಲಿ ಯಾಂತ್ರೀಕರಣವನ್ನು ಹೊರಗಿಡಬಾರದು. ಯಾಂತ್ರೀಕರಣವೆಂದರೆ ವಿದ್ಯುತ್ ಬಳಕೆ ಮಾಡುವಂಥದ್ದಲ್ಲ. ಕೇವಲ ಯಂತ್ರದ ಸಹಾಯದಿಂದ ಮಾಡುವ ಕೆಲಸವಷ್ಟೇ. ಅಂದರೆ ವಸ್ತುಗಳು, ತಂತ್ರಗಾರಿಕೆಗಳನ್ನು ಬಳಸಿಕೊಂಡು ಮಾನವ ಪರಿಶ್ರಮವನ್ನು ಕಡಿಮೆ ಮಾಡುವುದು, ಉತ್ಪನ್ನವನ್ನು ಹೆಚ್ಚಿಸುವುದಾಗಿದೆ. ಇದಕ್ಕೆ ಸರಳ ಯಂತ್ರಗಳನ್ನು ಬಳಕೆ ಮಾಡಬಹುದಾಗಿದೆ.

ಹೇಳಬೇಕೆಂದರೆ, ಕೈಮಗ್ಗ ಎಂಬುದೇ ಒಂದು ಯಂತ್ರ. ಆದರೆ ಇದನ್ನು ಸಂಪ್ರದಾಯಬದ್ಧವಾಗಿ ನೋಡಲಾಗುತ್ತಿದೆಯೇ ಹೊರತು, ವೈಜ್ಞಾನಿಕವಾಗಿ ಮತ್ತು ವಿಜ್ಞಾನವನ್ನು ಬಳಸಿಕೊಂಡು ಮಾಡಿರುವಂಥದ್ದಲ್ಲ. ಸಂಪ್ರದಾಯ ತಂತ್ರಗಾರಿಕೆಗಳು ಆಯಾಸಕರ ಪ್ರಕ್ರಿಯೆಗಳನ್ನು, ಪೂರ್ಣ ಸಮಯದ ತೊಡಗಿಸುವಂಕೆ, ದೈಹಿಕ ಅಸ್ವಸ್ಥತೆ ಮತ್ತು ಕಡಿಮೆ ಹಣಕಾಸನ್ನು ತಂದುಕೊಡುವಂಥವು. ಸಮೀಕ್ಷೆಯೊಂದರ ಪ್ರಕಾರ, ಇಂಥ



ನೇಕಾರಿಕೆಯ ಪ್ರಕ್ರಿಯೆಗಳಿಂದ ನೇಕಾರನ ದೇಹದಲ್ಲಿ ಹಲವಾರು ತೊಂದರೆಗಳಾಗುತ್ತವೆ. ಅವರ ಅಂಗೈ, ಕೈ ಮತ್ತು ಕಾಲುಗಳಲ್ಲಿ ನೋವು ಕಾಣಿಸಿಕೊಳ್ಳುತ್ತದೆ.

ಕೈಮಗ್ಗ ಕ್ಷೇತ್ರಕ್ಕಿರುವ ಕಡಿಮೆ ಪ್ರಾಮುಖ್ಯತೆ ಮತ್ತು ಸಂಶೋಧನೆಯ ಕಾರಣದಿಂದಾಗಿ ಇಲ್ಲಿ ಹೆಚ್ಚು ತಾಂತ್ರಿಕತೆಯನ್ನು ಸೇರ್ಪಡೆ ಮಾಡಲಾಗಿಲ್ಲ. ಇನ್ನೂ ಸಂಪ್ರದಾಯಬದ್ಧವಾದ ತಂತ್ರಗಾರಿಕೆಯೇ ಹೆಚ್ಚು ಜನಪ್ರಿಯವಾಗಿದೆ. ಇದರ ಫಲಿತಾಂಶವಾಗಿ, ಕೈಮಗ್ಗ ಇನ್ನೂ ಕಾರ್ಮಿಕರು ಬೇಕಿರುವ ಮತ್ತು ಕಡಿಮೆ ಉತ್ಪಾದನೆ ಇರುವ ಕ್ಷೇತ್ರವಾಗಿದೆ. ಬಟ್ಟೆಗಳ ಹೆಚ್ಚು ಉತ್ಪಾದನೆ ಆಗಬೇಕಾದರೆ, ಕೈಮಗ್ಗ ಕ್ಷೇತ್ರದಲ್ಲಿ ನವೀನತೆ ಮತ್ತು ಸುಧಾರಣೆ

ಆಗ ಬೇಕಿರುವುದು ಅತ್ಯಗತ್ಯವಾಗಿದೆ. ಯಾಂತ್ರೀಕರಣವು ನೇಕಾರನ ಪ್ರಯತ್ನವನ್ನು ಇನ್ನಷ್ಟು ಸುಧಾರಿಸುತ್ತದೆ ಮತ್ತು ನೇಯ್ದ ಬಟ್ಟೆಯ ಗುಣಮಟ್ಟ ಕೂಡ ಇನ್ನಷ್ಟು ಹೆಚ್ಚುತ್ತದೆ. ಇದನ್ನು ನೇಕಾರರು ಹೊಂದಿರುವ ಕೌಶಲ್ಯದ ಜತೆಗೆ ಮಾಡಬೇಕಾಗಿದೆ. ನೇಕಾರಿಕೆಯಲ್ಲಿ ಮೊದಲ ಉನ್ನತೀಕರಣವಾದದ್ದು 1773ರಲ್ಲಿ. ಆಗ ಜಾನ್ ಕೇ ಎಂಬುವರು ಫ್ಲೈಯಿಂಗ್ ಶಟಲ್ ಅನ್ನು ಪೇಟೆಂಟ್ ಮಾಡಿಸಿಕೊಂಡರು. ಇದು ನೇಕಾರ ಉದ್ಯಮದಲ್ಲಿ ಗಣನೀಯ ಪಾತ್ರ ವಹಿಸಿತು. ಇದು ಪಿಕ್ಕಿಂಗ್ ಮೋಶನ್ ನಲ್ಲಿ ಮಾನವನ ಶ್ರಮವನ್ನು ಕಡಿಮೆ ಮಾಡಿತು. ಇದಾದ ನಂತರ, ಪ್ರಗತಿಯ ಬೆಳವಣಿಗೆಯಲ್ಲಿ ವಿವಿಧ ತಂತ್ರಗಾರಿಕೆಗಳು ಪರಿಚಯವಾದವು. ಡಾಬ್ಬಿ ಮಾದರಿಯಲ್ಲಿ ನಾನಾ ತಾಂತ್ರಿಕತೆ ಪರಿಚಯವಾದವು. ಇದರ ಜತೆಗೆ ನೇಕಾರಿಕೆಯ ಮಾದರಿಗಳಲ್ಲಿ ಚಿತ್ರನೇಯ್ಗೆಯ ಸಂಕೀರ್ಣತೆಗಳು ಸುಲಭವಾದವು. ಎಸ್ ಪಿ ಎಸ್ ಕರ್ವೋಯಿ ಸ್ಲೇ ಮತ್ತು ಕಾಚ್ ಕಾರ್ಡ್ ವ್ಯವಸ್ಥೆ ಬಂದು, ಇದು ಸಾಲಿಡ್ ಬಾರ್ಡರ್ ನಲ್ಲಿ ನೇಯ್ಗೆಯಲ್ಲಿ ಸುಧಾರಣೆ ತಂದಿತು. ಹಲವಾರು ರೀತಿಯ ಹೆಣಿಗೆಗಳನ್ನು ಒಂದೇ



ಬಾರಿಗೆ ಮಾಡಬಹುದಾದ ವ್ಯವಸ್ಥೆ ಕೂಡ ಬಂದಿತು. ಇವೆಲ್ಲವು ನೇಕಾರನ ಕೆಲಸವನ್ನು ಸುಧಾರಿಸಿದವು. ಮ್ಯಾಟ್ ಗಳು, ಶಿರವಸ್ತ್ರ ನೇಯ್ಗೆಗಾಗಿ ಅವಳಿ ಬಟ್ಟೆ ನೇಯ್ಗೆ ಯಾಂತ್ರೀಕರಣವು ಬಂದಿತು. ಇದರಲ್ಲಿ ಅಗಲ ಕಡಿಮೆ ಇದ್ದು, ವಿವಿಧ ಬಾಕ್ಸ್ ಮೋಶನ್ ಗಳಿರುತ್ತವೆ. ಇದರಲ್ಲಿ ಎರಡು ರೀತಿಯ ನೇಯ್ಗೆ ಬಂದು ನೇಕಾರನ ಆಯಾಸವನ್ನು ಕಡಿಮೆ ಮಾಡಿತು. ಆದರೂ ನಾವು ಚಿಕ್ಕ ಕೈಮಗ್ಗ ಘಟಕಗಳನ್ನು ವಾಣಿಜ್ಯೀಕರಣ ಮಟ್ಟಕ್ಕಾಗಿ ಬಳಸಿಕೊಂಡರೆ, ಕೆಲಸದ ವೇಳೆ ಕೂಡ ಒಂದಷ್ಟು ಹೆಚ್ಚಾಗುತ್ತದೆ. ಮನೆಯ ಉಪಯೋಗಕ್ಕಾಗಿ ಮತ್ತು ವಾಣಿಜ್ಯೀಕರಣ ಉದ್ದೇಶಕ್ಕಾಗಿ ಮಾಡುವ ನೇಕಾರಿಕೆಯು ಬೇರೆ ಬೇರೆಯಾಗಿಯೇ ಇರುತ್ತದೆ. ವಾಣಿಜ್ಯೀಕರಣಕ್ಕಾಗಿ ಅರೆ ಸ್ವ ಯಾಂತ್ರೀಕರಣ ವ್ಯವಸ್ಥೆಯು ಸಾಮಾನ್ಯ ನೇಕಾರರಿಗೆ ಉತ್ತಮ ಆಯ್ಕೆಯಾಗಿದೆ. ಅಂದರೆ ಟೇಕ್ ಅಪ್ ಮತ್ತು ಲೆಟ್ ಆಫ್ ಯಾಂತ್ರೀಕರಣವನ್ನು ಜೋಡಿಸಿ ಬಳಕೆ ಮಾಡಬಹುದಾಗಿದೆ. ಮರದ ಅಥವಾ ಬಂಬೂವಿನ ಟೆಂಪಲ್ ಗಳು ಮತ್ತು ಬಾಗಿದ ಹಾಗೂ ಬಟ್ಟೆಯ ಬೀಮ್ ಗಳ ಜಾಗದಲ್ಲಿ ರೋಲರ್ ಟೆಂಪಲ್ ಗಳನ್ನು ಬಳಸಬಹುದಾಗಿದೆ. ಇದರಿಂದಾಗಿ ನೇಕಾರಿಕೆಯ ಕೆಲಸ ಸುಲಭವಾಗಿರುತ್ತದೆ. ಕೈಮಗ್ಗ ಕುರಿತ ಸಂಶೋಧನೆಗಾಗಿ ಪ್ರೋತ್ಸಾಹ ನೀಡುವ ಅಗತ್ಯವಿದೆ. ತಾಂತ್ರಿಕ ಅನ್ವೇಷಣೆಗಳು ವಿನ್ಯಾಸ ಅಭಿವೃದ್ಧಿ ಮತ್ತು ಉತ್ಪಾದನೆಯ ಪ್ರಕ್ರಿಯೆಯಲ್ಲಿ ಹೊಸ ಸಾಧ್ಯತೆಗಳನ್ನು ಹುಟ್ಟಿ ಹಾಕುತ್ತವೆ. ಉತ್ಪಾದಕ ತಾಂತ್ರಿಕತೆಯ ಜತೆಗೆ ಉಪಕರಣ ಮತ್ತು ಯಾಂತ್ರಿಕತೆಯ ಮೇಲೆ ಚರ್ಚೆ ನಡೆಸಲಾಗಿದೆ. ತಾಂತ್ರಿಕತೆಯ ಬಳಕೆ, ಕಚ್ಚಾ ವಸ್ತುಗಳ ಪ್ರಕ್ರಿಯೆಗಳು, ಸಿದ್ಧವಾದ ವಸ್ತುಗಳ ಪ್ರಕ್ರಿಯೆಗಳು ಉತ್ಪಾದನೆಯಲ್ಲಿ ತಾಂತ್ರಿಕತೆಯ ಉಪಯೋಗದಲ್ಲಿ ಸೇರಿರುತ್ತವೆ. ಇದರ ಜತೆಗೆ ಮಾನವ ಪರಿಶ್ರಮ ಮತ್ತು ಆತನ ಸಮಯ ಉಳಿಸುವ ಕುರಿತಂತೆಯೂ ಅನ್ವೇಷಣೆ ನಡೆಯುವ ಅಗತ್ಯವಿದೆ. ಎರಡನೇ ಹಂತದ ಮೋಶನ್ ಗಳಾದ ಮಗ್ಗದ ಹಿಂದಿನ ಮತ್ತು ಮಗ್ಗದ ನಂತರದ ಮೋಶನ್‌ಗಳನ್ನು ಯಾಂತ್ರೀಕರಣಕ್ಕೆ ಒಳಪಡಿಸಬಹುದಾಗಿದೆ. ವಿಚಾರವೆಂದರೆ, ಇವುಗಳು ನೇಕಾರಿಕೆಯ ವ್ಯಾಪ್ತಿಗೆ ಬರದೇ ಇರುವುದರಿಂದ ಅವುಗಳನ್ನು ಯಾಂತ್ರೀಕತೆಗೆ ಅನ್ವಯ ಮಾಡಬಹುದಾಗಿದೆ.

ಇದರ ಜತೆಗೆ, ಮೂರು ಪ್ರಾಥಮಿಕ ಮೋಶನ್ ಗಳನ್ನು ಸ್ವತಂತ್ರವಾಗಿ ನೋಡಬೇಕು ಮತ್ತು ಕಾರ್ಯಾಚರಣೆಯಲ್ಲಿ ತಾಂತ್ರಿಕ ಬಳಕೆಗಳ ಬಳಕೆ ಬಗ್ಗೆ ಸಂಶೋಧನೆಗಳಾಗಬೇಕು. ಇದರಿಂದ ನೇಕಾರನ ಆಯಾಸದ ಕೆಲಸಗಳು ಸುಧಾರಿಸುತ್ತವೆ. ಇವುಗಳನ್ನ ವಿದ್ಯುತ್ ಇಲ್ಲದೆಯೇ ಯಾಂತ್ರಿಕತೆಯ ಮೂಲಕವೇ




ಮಾಡಬಹುದಾಗಿದೆ. ಕೈಮಗ್ಗದಲ್ಲಿರುವ ಪ್ರಮುಖ ಸವಾಲೆಂದರೆ ಬೆಳೆದಿರುವ ಹೊಸ ತಾಂತ್ರಿಕತೆಯನ್ನು ಅಳವಡಿಸಿಕೊಳ್ಳುವುದು. ಇನ್ನೂ ಹಳೆ ಸಂಪ್ರದಾಯದ ಪರಿಕರಗಳ ಜತೆಗೆ ನೇಕಾರರು ಕೆಲಸ ಮಾಡುತ್ತಿರುವುದರಿಂದ ಹೊಸ ತಾಂತ್ರಿಕತೆಗೆ ಒಗ್ಗಿಕೊಳ್ಳುವುದಕ್ಕೆ ಅವರು ಒಪ್ಪಿಕೊಳ್ಳದೇ ಇರುವುದು ಸೇರಿದೆ. ಹೀಗಾಗಿ ಸರ್ಕಾರ ತನ್ನ ಯೋಜನೆಗಳಲ್ಲಿ ಹೊಸ ತಂತ್ರಗಾರಿಕೆಗಳನ್ನು ಸೇರಿಸುವ ಕೆಲಸ ಮಾಡಬೇಕು. ಬೃಹತ್ ಉದ್ಯೋಗ ಸೃಷ್ಟಿ ಮಾಡುತ್ತಿರುವ ಮತ್ತು ಉತ್ಪಾದನೆ ಮಾಡುತ್ತಿರುವ ಈ ಕ್ಷೇತ್ರದ ಬಗ್ಗೆ ಸಂಶೋಧನೆ ಮತ್ತು ಅಭಿವೃದ್ಧಿ ಜತೆಗೆ ಸೇರಿ ಕೆಲಸ ಮಾಡಬೇಕು. ಕೈಮಗ್ಗದ ಬಟ್ಟೆಗಳನ್ನು ವಾಣಿಜ್ಯ ಉದ್ದೇಶಕ್ಕಾಗಿ ನೇಯ್ಗೆ ಮಾಡಿದರೂ, ಅಲ್ಲಿ ಮಾರುಕಟ್ಟೆಯ ಸಮಸ್ಯೆಗಳು ಕಂಡು ಬರುತ್ತಿವೆ. ಇಲ್ಲೂ ಕೂಡ ಸರ್ಕಾರ ಹೆಜ್ಜೆ ಇಡಬೇಕಾದ ಅನಿವಾರ್ಯತೆ ಇದೆ. ಈ ವಲಯವನ್ನು ಎಂಜಿಎನ್‌ಆರ್ ಇಜಿಎ ಜತೆಗೆ ಸೇರಿಸಬೇಕು ಎಂಬ ಒತ್ತಾಯವೂ ಇದೆ. ಇದು ನಿಜಕ್ಕೂ ಸಮರ್ಥನೀಯ ಬೇಡಿಕೆ. ಇಂದಿಗೂ ರಾಜ್ಯಗಳು, ಶಾಲಾ ಮಕ್ಕಳಿಗೆ ಮತ್ತು ಅಂಗನವಾಡಿ ಕಾರ್ಯಕರ್ತರಿಗೆ ಉಚಿತವಾಗಿ ಸಮವಸ್ತ್ರ ಪೂರೈಕೆ ಮಾಡುತ್ತಿದೆ.

ಈ ನಿಟ್ಟಿನಲ್ಲಿ ಸರ್ಕಾರ ಕೇವಲ ಕೈಮಗ್ಗದ ಬಟ್ಟೆಗಳನ್ನಷ್ಟೇ ಉಪಯೋಗಿಸುವ ಬಗ್ಗೆ ನಿರ್ಧಾರ ತೆಗೆದುಕೊಳ್ಳಬೇಕು. ಕೈಮಗ್ಗ ನೇಕಾರರನ್ನು ನರೇಗಾದ ಯೋಜನೆ ಜತೆಗೆ ಸೇರಿಸಿದರೆ, ಅವರು ಉತ್ಪಾದಿಸಿದ ಬಟ್ಟೆಯಾಧಾರದ ಮೇಲೆ ವೇತನ ನೀಡಬಹುದು. ಆದರೂ ನಮ್ಮ ಸಂಶೋಧಕರು ಮತ್ತು ವಿಜ್ಞಾನಿಗಳ ಮುಂದಿರುವ ಸಮಸ್ಯೆಯೆಂದರೆ ಹೊಸ ತಾಂತ್ರಿಕತೆಯನ್ನು ಪರಿಚಯಿಸುವುದು. ಇದರ ಪರಂಪರೆಗೆ ಧಕ್ಕೆ ತರದೇ ಅವರ ಭಾವನೆಗಳಿಗೆ ಅನುಗುಣವಾಗಿ ಹೊಸ ತಾಂತ್ರಿಕತೆಯನ್ನು ತರಬೇಕಾದ ಅಗತ್ಯವಿದೆ. ❑

ಕೇಂದ್ರ ಪ್ರಶ್ನೆ

# ಕರಕುಶಲ ಕಲೆ ಮತ್ತು ಶಿಕ್ಷಣ



**ಗಾಂಧೀಜಿಯವರು ಫೆಬ್ರವರಿ ೩/4, ೧೯೩೯ರಲ್ಲಿ ಶಿಕ್ಷಕ ಪ್ರಶಿಕ್ಷಾರ್ಥಿಗಳೊಂದಿಗೆ ನಡೆಸಿದ ಚರ್ಚೆಯ ಆಯ್ದಭಾಗ.**

ಪ್ಯಾರೆಲಾಲ್ ಅವರ 'ವಾರ್ಧಾಸ್ಕೀಂ ಅಂಡರ್ ಫೈರ್' ಕೃತಿಯಿಂದ ಈ ಭಾಗವನ್ನು ಆಯ್ದುಕೊಳ್ಳಲಾಗಿದೆ. ದೇಶದ ವಿವಿಧೆಡೆಗಳಿಂದ ಬಂದ ಸುಮಾರು 75 ಪ್ರತಿನಿಧಿಗಳು ವಾರ್ಧಾದ ಟೀಚರ್ ಟ್ರೇನಿಂಗ್ ಸೆಂಟರ್‌ನಲ್ಲಿ ಮೂರು ವಾರಗಳ ಕೋರ್ಸ್‌ನಲ್ಲಿ ಪಾಲ್ಗೊಂಡಿದ್ದರು. ಅವರು ತಮ್ಮ ತಮ್ಮ ಪ್ರದೇಶಗಳಿಗೆ ಮರಳುವ ಮುನ್ನ ಗಾಂಧೀಜಿಯವರನ್ನು ಭೇಟಿ ಮಾಡಿದ್ದರು.

ತಕಲಿಗೆ ಸಂಬಂಧಿಸಿರದ ಶಬ್ದವೊಂದನ್ನೂ ವಿದ್ಯಾರ್ಥಿಗಳೊಂದಿಗೆ ಶಿಕ್ಷಕರು ಮಾತನಾಡಬಾರದೆಂಬುದು ಈ ಯೋಜನೆಯ ಹಿಂದಿರುವ ಕೇಂದ್ರ ಉದ್ದೇಶವಾಗಿದೆಯೇ ಎಂದು ಸ್ನೇಹಿತರೊಬ್ಬರು ಸಭೆಗೆ ತೆರಳುವ ಮುನ್ನ ಕೇಳಿದ್ದರು. ಗಾಂಧೀಜಿಯವರು ಈ ಪ್ರಶ್ನೆಗೆ ಸಭೆಯಲ್ಲಿ ಉತ್ತರ ನೀಡಿದರು.

**ಗಾಂಧೀಜಿ** : ಇದು ನನ್ನ ಮೇಲಿನ ಮಿಥ್ಯಾರೋಪ. ಎಲ್ಲ ಸೂಚನೆಗಳು ಒಂದಿಲ್ಲೊಂದು ಮೂಲಭೂತ ಕರಕುಶಲ ಕಲೆಗೆ ಸಂಬಂಧಿಸಿದ್ದಿರಬೇಕೆಂದು ನಾನು ಹೇಳಿದ್ದೇನೊ ನಿಜ. ನೀವು 7 ಅಥವಾ 10 ವರ್ಷದ ಮಗುವಿಗೆ ಕಲಿಸುತ್ತಿರುವಾಗ ಕರಕುಶಲ ವಿಷಯಕ್ಕೆ ಸಂಬಂಧಿಸಿರದ ವಿಷಯ ಬಿಟ್ಟು, ಸಂಬಂಧಿಸಿದ ವಿಷಯದೊಂದಿಗೆ ಪಾಠ ಆರಂಭಿಸಿ. ನಂತರ ದಿನಕಳೆದಂತೆ, ಬಿಟ್ಟ ವಿಷಯಗಳಿಗೂ ಸಂಬಂಧ ಕಲ್ಪಿಸಿ ಕಲಿಸುವ ಮಾರ್ಗವನ್ನು ನೀವಾಗಿಯೇ ಕಂಡುಕೊಳ್ಳುವಿರಿ. ಸಂಬಂಧವಿರದ ವಿಷಯಗಳನ್ನು ಆರಂಭದಲ್ಲಿ ದೂರವಿರಿಸಿದರೆ, ನೀವು ನಿಮ್ಮ ಹಾಗೂ ವಿದ್ಯಾರ್ಥಿಗಳ ಶಕ್ತಿಯನ್ನು ಉಳಿಸಬಹುದು. ಈ ಬಗ್ಗೆ ತಿಳಿಸಲು ಇಂದು ನಮ್ಮಲ್ಲಿ ಯಾವ ಬಗೆಯ ಪುಸ್ತಕಗಳೂ ಇಲ್ಲ. ಮಾರ್ಗದರ್ಶನಕ್ಕೆ ಹಿಂದಿನ ಅನುಭವಗಳೂ ಇಲ್ಲ. ಆದ್ದರಿಂದ ನಾವು ಸಾವಧಾನದಿಂದ ಮುಂದುವರೆಯಬೇಕು. ಶಿಕ್ಷಕರು ತಮ್ಮ ಕಲಿಕಾ ತಾಜಾತನವನ್ನು ಕಾಪಾಡಿಕೊಂಡು ಬರುವುದು ಇಲ್ಲಿ ಮುಖ್ಯ. ಕರಕುಶಲ ಕಲೆಯೊಂದಿಗೆ ಹೊಂದಿಸಿ ಹೇಳಲಸಾಧ್ಯವಾದರೆ, ಚಿಂತಿಸಬೇಡಿ, ನೊಂದುಕೊಳ್ಳಬೇಡಿ. ಅದನ್ನು ಅಲ್ಲಿಯೆ ಬಿಟ್ಟು ಯಾವುದನ್ನು ಹೊಂದಿಸಿ ಹೇಳಲು ಸಾಧ್ಯವೋ ಅದರೊಂದಿಗೆ ಮುಂದುವರೆಸಿ. ಬಹುಷ್ಯಃ ಬೇರಾವುದೋ ಶಿಕ್ಷಕರು ಹೇಗೆ ಸಂಬಂಧ ಕಲ್ಪಿಸಬಹುದೆಂಬುದನ್ನು ಕಂಡು ಕೊಡುತ್ತಾರೆ. ಹೀಗೆ ನಿಮ್ಮೊಂದಿಗೆ ಅನೇಕರ ಅನುಭವಗಳಿರುತ್ತವೆ. ನಿಮಗೆ ಮಾರ್ಗದರ್ಶನ ನೀಡುವ ಪುಸ್ತಕವೂ ಇರುತ್ತದೆ. ಇದರಿಂದ ನಿಮ್ಮ ಕೆಲಸದ ಅನುಸರಣೆ ಸುಲಭವಾಗುತ್ತದೆ. ನಮ್ಮ ಶಿಕ್ಷಣದಲ್ಲಿ ಕ್ರಾಂತಿಗಳಾಗಬೇಕು. ಮೆದುಳನ್ನು ಕರಗಳ ಮೂಲಕ ಸುಶಿಕ್ಷಿತಗೊಳಿಸಬೇಕು. ನಾನು ಕವಿಯಾಗಿದ್ದರೆ, ಐದು ಬೆರಳುಗಳ ಸಾಧ್ಯಾ ಸಾಧ್ಯ ಕಾರ್ಯಗಳ ಬಗ್ಗೆ ಕವಿತೆಯೊಂದನ್ನೇ ಬರೆಯುತ್ತಿದ್ದೆ. ಮನಸ್ಸೆ ಎಲ್ಲವೂ; ಕೈ ಕಾಲುಗಳೇನೂ ಅಲ್ಲ ಎಂದು ನೀವು ಏಕೆ ಭಾವಿಸುವಿರಿ? ಯಾರು ತಮ್ಮ ಕೈಗಳಿಗೆ ತರಬೇತಿ ನೀಡಿ ಸರಿಪಡಿಸಿಕೊಳ್ಳುವುದಿಲ್ಲವೊ, ಯಾರು ಸಾಮಾನ್ಯ ಜಾಡುಹಿಡಿದ ಶಿಕ್ಷಣಕ್ಕೆ ಮುಂದಾಗುತ್ತಾರೊ ಅವರು ಜೀವನದ ಸಂಗೀತ, ಮಧುರತೆಯಿಂದ ವಂಚಿತರಾಗುತ್ತಾರೆ. ಕೇವಲ ಪುಸ್ತಕದ ಜ್ಞಾನ ಮಗುವಿಗೆ ಆತನ/ಆಕೆಯ ಸಂಪೂರ್ಣ ಲಕ್ಷ್ಯ ಹರಿಸುವಷ್ಟು ಆಸಕ್ತಿದಾಯಕವಾಗಿರುವುದಿಲ್ಲ. ಬರಿ ಶಬ್ದಗಳಿಂದ ಮನಸ್ಸು ವ್ಯಗ್ರವಾಗುತ್ತದೆ; ಹರಿದಾಡಲು ಆರಂಭಿಸುತ್ತದೆ. ಕೈ ಏನು ಮಾಡಬೇಕೊ ಅದನ್ನದು ಮಾಡುವುದಿಲ್ಲ, ಕಣ್ಣು ಏನನ್ನು ನೋಡಬೇಕೊ ಅದನ್ನು ನೋಡುವುದಿಲ್ಲ. ಕೈ ಏನನ್ನು ಮಾಡಬೇಕೊ, ಅವುಗಳನ್ನು ಮಾಡುವುದಿಲ್ಲ. ಒಟ್ಟಾರೆ ಕಣ್ಣು ಕಿವಿ ಯಾವುದೂ ಬೇಕಾಗಿರುವುದನ್ನು ಮಾಡುವುದಿಲ್ಲ. ಅವರಿಗೆ ಸರಿಯಾದ್ದನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವೇ ಇರುವುದಿಲ್ಲ. ಹೀಗಾಗಿ ಅನೇಕ ಬಾರಿ ಅವರಿಗೆ ಶಿಕ್ಷಣ, ಕೇಡೆನಿಸುತ್ತದೆ. ಯಾವ ಶಿಕ್ಷಣ ನಮಗೆ ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು ಎನ್ನುವುದನ್ನು ಗುರುತಿಸಲು ಕಲಿಸುವುದಿಲ್ಲವೊ ಅಂಥದ್ದನ್ನು ಶಿಕ್ಷಣವೆಂದು ಕರೆಯುವುದೇ ಅಪಾರ್ಥ.

**ಪ್ರಶ್ನೆ** : ಕರಗಳ ಮೂಲಕ ಹೇಗೆ ತರಪೇತುಗೊಳಿಸಬಹುದು ಎಂಬ ಬಗ್ಗೆ ವಿವರಿಸಬೇಕೆಂದು ಗಾಂಧೀಜಿಯವರನ್ನು ಶ್ರೀಮತಿ ಆಶಾದೇವಿ ಕೋರಿದರು.

**ಗಾಂಧೀಜಿ :** ಶಾಲೆಗಳಲ್ಲಿ ಶಿಕ್ಷಣದ ಜತೆಗೆ ಕರಕುಶಲ ಕಲೆಯನ್ನು ಪಠ್ಯಕ್ರಮದಲ್ಲಿ ಸೇರಿಸುವುದು ಹಳೆಯ ರೂಢಿಯಾಗಿದೆ. ಅಂದರೆ ಕರಕುಶಲ ಕಲೆಯನ್ನು ಶಾಲೆಯಲ್ಲಿ ಇತರ ವಿಷಯಗಳೊಂದಿಗೆ ಪ್ರತ್ಯೇಕವಾಗಿ ಕಲಿಸಲಾಗುತ್ತಿದೆ. ನನ್ನ ದೃಷ್ಟಿಯಲ್ಲಿ ಅದು ಅಕ್ಷಮ್ಯ ತಪ್ಪು. ಶಿಕ್ಷಕರ / ಶಿಕ್ಷಕಿಯರು ಕರಕುಶಲ ಕಲೆಯನ್ನು ಕಲಿತು ಅದನ್ನು ತಮ್ಮ ಜ್ಞಾನದೊಂದಿಗೆ ಬೆರೆಸುವುದನ್ನೂ ಕಲಿಯಬೇಕು. ಹಾಗಾದಾಗ ವಿದ್ಯಾರ್ಥಿಗಳಿಗೆ ತಮಗೆ ಬೇಕಾದ ನಿರ್ದಿಷ್ಟ ಕಲಾ ಮಾಧ್ಯಮದಲ್ಲಿ ಜ್ಞಾನಧಾರೆಯೆರೆಯಲು ಸಾಧ್ಯವಾಗುತ್ತದೆ. ಉದಾಹರಣೆಗೆ ಹತ್ತಿ ಹಿಂಜುವುದನ್ನು, ನೂಲು ತೆಗೆಯುವುದನ್ನು ತೆಗೆದುಕೊಳ್ಳಿ, ನನಗೆ ಅಂಕಗಣಿತ ಗೊತ್ತಿರದ ಹೊರತು ನಾನು ತಕಲಿ ಮೇಲೆ ಎಷ್ಟು ಯಾರ್ಡ್ ಎಳೆ ತಯಾರಿಸಿದೆ ಅಥವಾ ಅದು ಎಷ್ಟು ನಿಯಮಿತ ಸುತ್ತುಗಳನ್ನು ತೆಗೆದುಕೊಳ್ಳುತ್ತದೆ ಅಥವಾ ನಾನು ನೂಲೆತ್ತುವ ಎಳೆಯ ಗಣಿಕೆ ಎಷ್ಟು ಎಂದು ಹೇಳಲು ಸಾಧ್ಯವಾಗುವುದಿಲ್ಲ.ಹಾಗೆ ಮಾಡಲು ನಾನು ಸಂಖ್ಯೆಗಳನ್ನು ಕಲಿತಿರಬೇಕು. ಸಂಕಲನ, ವ್ಯವಕಲನ, ಗುಣಾಕಾರ, ಭಾಗಾಕಾರ ಎಲ್ಲವೂ ಗೊತ್ತಿರಬೇಕು. ಸಂಕೀರ್ಣ ಲೆಕ್ಕಾಚಾರ ಮಾಡಲು ಸಂಜ್ಞೆಗಳನ್ನು ಬಳಸಬೇಕಾಗುತ್ತದೆ. ಆಗ, ಅಂಕಗಣಿತ ಬರುತ್ತದೆ. ಇಲ್ಲಿ ನಾವು ರೋಮನ್ ಸಂಕೇತಗಳಿಗೆ ಬದಲಾಗಿ ಹಿಂದೂಸ್ಥಾನಿ ಅಕ್ಷರ – ಸಂಖ್ಯೆಗಳನ್ನು ಬಳಸಬೇಕು. ಹಾಗೆಯೆ ಭೂಮಿತಿ ಶಾಸ್ತ್ರ ತೆಗೆದುಕೊಳ್ಳಿ. ತಕಲಿ ಬಿಟ್ಟರೆ, ಬೇರಾವುದು ವೃತ್ತಕ್ಕೆ ಸರಿಹೊಂದುವ ಸೋದಾಹರಣೆಯಾಗಬಲ್ಲದು? ನಾನು ಈ ರೀತಿ, ಯೂಕ್ಲಿಡ್ ಹೆಸರು ಬಳಸದೆ, ವೃತ್ತದ ಬಗ್ಗೆ ಎಲ್ಲ ಮಾಹಿತಿ ನೀಡಬಲ್ಲೆ. ಮತ್ತೆ ನೀವು ಕೇಳಬಹುದು; ಈ ನೂಲು ತೆಗೆಯುವ ಮೂಲಕ ಮಗುವಿಗೆ ಭೂಗೋಲಶಾಸ್ತ್ರ ಮತ್ತು ಇತಿಹಾಸ ಶಾಸ್ತ್ರಗಳನ್ನು ಕಲಿಸುವುದು ಹೇಗೆ? ಕೆಲದಿನಗಳ ಹಿಂದೆ ನಾನು ಕಾಟನ್ – ದ ಹಿಸ್ಟ್ರಿ ಆಫ್ ಮನ್‌ಕೈಂಡ್ ಪುಸ್ತಕವನ್ನು ಓದಿದೆ, ಅದೊಂದು ರೀತಿ ರೋಚಕವಾಗಿತ್ತು.

ಅದರಲ್ಲಿ ಇತಿಹಾಸದೊಂದಿಗೆ ಅಂದರೆ, ಮೊದಲು ಹತ್ತಿಯನ್ನು ಹೇಗೆ ಎಲ್ಲಿ ಬೆಳೆಯಲಾಯಿತು. ಅದು ಹೇಗೆ ಉಚ್ಛ್ರಾಯ ಸ್ಥಿತಿ ಕಂಡಿತು, ವಿವಿಧ ದೇಶಗಳು ಹೇಗೆ ಹತ್ತಿ ವ್ಯಾಪಾರ ನಡೆಸುತ್ತಿದ್ದವು – ಹೀಗೆ ಎಲ್ಲ ಮಾಹಿತಿಗಳಿದ್ದವು. ನಾನು ಮಗುವಿಗೆ ವಿವಿಧ ದೇಶಗಳ ಬಗ್ಗೆ ಹೇಳುವಾಗ, ಸಹಜವಾಗಿ ಆ ದೇಶದ ಭೌಗೋಳಿಕ, ಐತಿಹಾಸಿಕ ವಿವರಗಳನ್ನು ನೀಡಿಯೇ ತೀರುತ್ತೇನೆ. ಯಾರ ಆಳ್ವಿಕೆಯಲ್ಲಿ ಯಾವ – ಯಾವ ರೀತಿಯ ಒಪ್ಪಂದಗಳು ಏರ್ಪಟ್ಟವು? ಯಾವ ಯಾವ ದೇಶಗಳು ಕೇವಲ ಹತ್ತಿಯನ್ನು ಹಾಗೂ ಕೆಲ ದೇಶಗಳು ಬಟ್ಟೆಯನ್ನು ಆಮದು ಮಾಡಿಕೊಳ್ಳುತ್ತವೆ? ಯಾಕೆ ಎಲ್ಲ ದೇಶಗಳಿಗೂ ತಮಗೆ ಬೇಕಾದಷ್ಟು ಹತ್ತಿ ಬೆಳೆದುಕೊಳ್ಳಲಾಗುವುದಿಲ್ಲ? ಹೀಗೆ ಮುಂದುವರೆದರೆ ಅಲ್ಲಿ ಕೃಷಿ ಮತ್ತು ಆರ್ಥಿಕತೆಯ ಬಗ್ಗೆಯೂ ಬೆಳಕು ಚೆಲ್ಲಬಹುದು. ವಿವಿಧ ರೀತಿಯ ಹತ್ತಿ ತಳಿಗಳ ಬಗ್ಗೆ ತಿಳಿಸುವಾಗ ಅದಕ್ಕೆ ಅಗತ್ಯವಿರುವ ಮಣ್ಣಿನ ಗುಣ, ಅವುಗಳನ್ನು ಹೇಗೆ ಬೆಳೆಯಲಾಗುತ್ತದೆ. ಎಲ್ಲವನ್ನು ವಿವರಿಸಬಹುದಾಗಿದೆ. ಹೀಗೆ ತಕಲಿ, ಈಸ್ಟ್ ಇಂಡಿಯಾ ಕಂಪನಿವರೆಗೆ ಕೊಂಡೊಯ್ದು ಅವರು ಇಲ್ಲಿಗೆ ಬರಲು ಕಾರಣ. ಅವರು ತಮ್ಮ ನೂಲು ಉದ್ಯಮವನ್ನು ಹೇಗೆ ಹಾಳುಗೆಡವಿದರು, ಅವರ ಆರ್ಥಿಕ ಉದ್ದೇಶದ ಆಗಮನ, ನಂತರ ಹೇಗೆ ರಾಜಕೀಯ ಆಶೋತ್ತರಗಳ ರೂಪ ಪಡೆಯಿತು. ಮೊಘಲ್, ಮರಾಠರ ಅವನತಿಯಾಯಿತು. ಬ್ರಿಟಿಷ್ ರಾಜ್ ಸ್ಥಾಪನೆಯಾಯಿತು ಮತ್ತು ಈಗ ಜನಜಾಗೃತಿ ಹೇಗೆ ನಡೆಯುತ್ತಿದೆ. ಹೀಗೆ ಹೊಸ ಯೋಜನೆಯಲ್ಲಿ ಶೈಕ್ಷಣಿಕ ಸಾಧ್ಯತೆಗಳಿಗೆ ಅಂತ್ಯವೇ ಇಲ್ಲ.

ಇದನ್ನೆಲ್ಲ ಮಗು ತಲೆಗೆ ಯಾವ ಅನಾವಶ್ಯಕ ಒತ್ತಡವೂ ಇಲ್ಲದೆ ಸರಾಗವಾಗಿ ಗ್ರಹಿಸುತ್ತದೆ. ಈ ವಿಚಾರದ ಬಗ್ಗೆ ಇನ್ನೂ ಹೆಚ್ಚು ಹೇಳಲಿಚ್ಛಿಸುತ್ತೇನೆ. ಒಬ್ಬ ವ್ಯಕ್ತಿ ಉತ್ತಮ ಜೀವಶಾಸ್ತ್ರಜ್ಞನಾಗಲು ಜೀವಶಾಸ್ತ್ರವನ್ನಲ್ಲದೆ, ಇನ್ನಿತರ ವಿಜ್ಞಾನ ವಿಷಯಗಳ ಬಗ್ಗೆಯೂ ತಿಳಿದಿರಬೇಕಾಗುತ್ತದೆ. ಮೂಲ ವಿಷಯ ವಿಜ್ಞಾನವಾಗಿದ್ದರೆ, ಅಲ್ಲಿ ಅಪರಿಮಿತ ಕಲಿಕಾ ಮಾಧ್ಯಮಗಳಿವೆ. ತಕಲಿ ಉದಾಹರಣೆಯನ್ನೇ ಇಲ್ಲಿ ತರುವುದಾದರೆ, ಶಿಕ್ಷಕರು ತಕಲಿಯ ಯಾಂತ್ರಿಕ ಅಂಶಗಳ ಬಗ್ಗೆ ವಿದ್ಯಾರ್ಥಿಗೆ ತಿಳಿಹೇಳಬಹುದು. ತಕಲಿಯ ವೃತ್ತಾಕಾರ ಭಾಗ ಬ್ರಾಸ್‌ನಿಂದ ಮಾಡಿದೆ ಹಾಗೂ ನೂಲೆತ್ತುವ ಭಾಗ ಸ್ಟೀಲಿನಿಂದಾಗಿದೆ. ಹಿಂದೆ ತಕಲಿಯನ್ನು ಮರದಿಂದ, ಮಣ್ಣಿನಿಂದೆಲ್ಲಾ ಮಾಡಲಾಗುತ್ತಿತ್ತು ತಕಲಿಯನ್ನು ವೈಜ್ಞಾನಿಕವಾಗಿ ಅಭಿವೃದ್ಧಿಪಡಿಸಲಾಗಿದೆ. ವೃತ್ತಾಕಾರದ ಭಾಗವನ್ನು ಬ್ರಾಸ್‌ನಿಂದ ಹಾಗೂ ನೂಲೆತ್ತುವ ಭಾಗವನ್ನು ಸ್ಟೀಲಿನಿಂದಲೇ ಮಾಡಲು ಕಾರಣಗಳೇನು? ತಕಲಿಯ ವ್ಯಾಸ ಎಷ್ಟಿರಬೇಕು? ಎಂಬೆಲ್ಲಾ ಬಗ್ಗೆ ವಿದ್ಯಾರ್ಥಿಗಳು ತಿಳಿದುಕೊಳ್ಳುವಂತೆ ಮಾಡಬೇಕು. ಇವೆಲ್ಲ ಪ್ರಶ್ನೆಗಳಿಗೆ ವಿದ್ಯಾರ್ಥಿಗಳು ತೃಪ್ತಿದಾಯಕ ಉತ್ತರ ಕಂಡುಕೊಂಡಾಗ ಅವರೊಬ್ಬ ಉತ್ತಮ ಇಂಜಿನಿಯರ್ ಆಗುತ್ತಾರೆ. **ತಕಲಿ** ಅವರ ಪಾಲಿಗೆ ಕಾಮಧೇನು ಆಗುತ್ತದೆ. 'ಜ್ಞಾನ'ಕ್ಕೆ ಸೀಮೆ, ಮಿತಿ ಇಲ್ಲ. ಅದು ನಮ್ಮ ಶಕ್ತಿ ಹಾಗೂ ನಾವು ಹೇಗೆ ದುಡಿಸಿಕೊಳ್ಳುತ್ತೇವೆ ಎಂಬುದನ್ನು ಅವಲಂಬಿಸಿದೆ. ನೀವು ಇಲ್ಲಿ ಮೂರು ವಾರ ಕಳೆದಿರುವಿರಿ. ನೀವು ಈ ಯೋಜನೆಯನ್ನು ಗಂಭೀರವಾಗಿ ಪರಿಗಣಿಸಿರುವಿರೆಂದರೆ, ಇಲ್ಲಿ ಕಳೆದ ಕಾಲ ಫಲಪ್ರದವಾಗಿದೆ ಎಂದೇ ಅರ್ಥ. ಹಾಗಾದಾಗಲೇ 'ಮಾಡು ಇಲ್ಲವೆ ಮಡಿ' ಎಂಬ ಭಾವನೆ ಬರುತ್ತದೆ. ನಾನಿಲ್ಲಿ ನೂಲೆತ್ತುವ ಉದಾಹರಣೆಯನ್ನು ನೀಡುತ್ತಿದ್ದೇನೆ. ಏಕೆಂದರೆ ನನಗೆ ನೂಲುವುದು ಗೊತ್ತು. ನಾನು ಬಡಗಿಯಾಗಿದ್ದರೆ, ಮಕ್ಕಳಿಗೆ ಮರ ಮಟ್ಟುಗಳ ಮೂಲಕ, ಕಾರ್ಡ್ ಬೋರ್ಡ್ ಕೆಲಸಗಾರನಾಗಿದ್ದರೆ, ಕಾರ್ಡ್‌ಬೋರ್ಡ್ ಮೂಲಕವೇ ಕಲಿಸುತ್ತಿದ್ದೆ. ನಮಗಿಲ್ಲಿ ಬೇಕಾಗಿರುವುದು, ಯಾರೆಂದರೆ ನೈಜ ಕಳವಳಿ ಹೊಂದಿರುವ, ದಿನನಿತ್ಯದ ವ್ಯವಹಾರಗಳಿಂದಲೇ ಚಿಂತಿಸಬಲ್ಲ, ತಮ್ಮ ವಿದ್ಯಾರ್ಥಿಗಳಿಗೆ ಕಲಿಸಬಲ್ಲ ಮೂಲ ಅಸಲೀ ಶಿಕ್ಷಣತಜ್ಞರು. ಬರೀ ಬೃಹತ್ ಗ್ರಂಥಗಳಿಂದ ಜ್ಞಾನಾರ್ಜನೆ ಸಾಧ್ಯವಿಲ್ಲ. ಅವರು ತಮಗಿರುವ ಸೌಲಭ್ಯ ಗ್ರಹಿಕೆಗಳಿಂದ ಚಿಂತನೆ ನಡೆಸಿ, ಮಕ್ಕಳಿಗೆ ಬಾಯ್ಮಾತಿನಿಂದ ಜ್ಞಾನಧಾರೆ ಹರಿಸಬೇಕು. ಅಂದರೆ, ಕಲಿಸುವ ಪದ್ಧತಿಯಲ್ಲಿ ಕ್ರಾಂತಿ. ಶಿಕ್ಷಕರ ಚಿಂತನೆಯಲ್ಲಿ ಕ್ರಾಂತಿ....

**ಪ್ರಶ್ನೆ :** ಶಿಕ್ಷಕರಿಗೆ ತರಬೇತಿ ನೀಡುವಾಗ, ಅವರಿಗೆ ಮೊದಲು ಪ್ರತ್ಯೇಕವಾಗಿ ಕರಕುಶಲಕಲೆ ಕಲಿಸಿ, ನಂತರ ಕರಕುಶಲಕಲೆ ಮೂಲಕ ಹೇಗೆ ಶಿಕ್ಷಣ ನೀಡಬೇಕೆನ್ನುವುದನ್ನು ತಿಳಿಸಿದರೆ ಉತ್ತಮವಲ್ಲವೇ? ಅವರಿಗೆ ತಮ್ಮನ್ನು ತಾವು 7 ರಿಂದ 10 ವರ್ಷದ ವಿದ್ಯಾರ್ಥಿಗಳೆಂದು ಭಾವಿಸಿ ಕಲೆ ಮೂಲಕ ಎಲ್ಲವನ್ನು ಪುನಃ ಕಲಿಯಲು ಸೂಚಿಸಲಾಗುತ್ತಿದೆ. ಈ ಮಾರ್ಗವಾದರೆ, ಅವರು ಹೊಸ ತಂತ್ರ ಕಲಿತು ವಿಶ್ವಾಸದ, ಶಿಕ್ಷಕರಾಗಲು ವರ್ಷಗಳೇ ತೆಗೆದುಕೊಳ್ಳುತ್ತದೆ.

**ಗಾಂಧೀಜಿ :** ಇಲ್ಲ. ವರ್ಷಗಳೇನೂ ಆಗುವುದಿಲ್ಲ. ಒಬ್ಬ ಶಿಕ್ಷಕ ಗಣಿತ, ಇತಿಹಾಸ ಹಾಗೂ ಇನ್ನಿತರ ವಿಷಯಗಳ ಕಾರ್ಯ ನಿರ್ವಹಣಾ ಜ್ಞಾನದೊಂದಿಗೆ ನನ್ನ ಬಳಿ ಬರುತ್ತಾನೆಂದು ಕೊಳ್ಳಿ. ನಾನವನಿಗೆ ಕಾರ್ಡ್ ಬೋರ್ಡ್ ಪೆಟ್ಟಿಗೆ ಮಾಡಲು ಅಥವಾ ನೂಲೆತ್ತಲು ಕಲಿಸುತ್ತೇನೆ ಎಂದುಕೊಳ್ಳಿ. ಅವರು ಹಾಗೆ ಮಾಡುತ್ತಿರುವಾಗಲೇ ಗಣಿತವನ್ನು ಹೇಗೆ ಬಳಸಬಹುದೆಂದು ತೋರಿಸುತ್ತೇನೆ. ಹಾಗೆಯೇ ಇತಿಹಾಸ, ಭೂಗೋಳಶಾಸ್ತ್ರಗಳನ್ನು ನಿರ್ದಿಷ್ಟ ಕುಶಲ ಕಲೆ ಮೂಲಕ ತಿಳಿಸಲಾಗುತ್ತದೆ. ಈ ರೀತಿ ಕುಶಲ ಕಲೆಯೊಂದಿಗೆ ತಮ್ಮ ಜ್ಞಾನವನ್ನು ಹೇಗೆ ಬೆಸೆಯಬಹುದೆಂಬುದನ್ನು ಕಲಿಯುತ್ತಾರೆ. ಇದನ್ನೆಲ್ಲ ಕಲಿಸಲು ಬಹಳ ಕಾಲವೇನೂ ತೆಗೆದುಕೊಳ್ಳುವುದಿಲ್ಲ. ಮತ್ತೊಂದು ಉದಾಹರಣೆ ತೆಗೆದುಕೊಳ್ಳಿ. ನಾನು 7 ವರ್ಷದ ಬಾಲಕನೊಂದಿಗೆ ಶಾಲೆಗೆ ಹೋಗುತ್ತೇನೆಂದುಕೊಳ್ಳಿ, ನಾನು – ಆತ ಇಬ್ಬರೂ ನೂಲುವುದನ್ನು ಕಲಿಯುತ್ತೇವೆ. ನನಗೆ ನೂಲುವ ಹಿಂದಿನ ಅನುಭವ ಇರುತ್ತದೆ. ಮಗುವಿಗೆ ಅದು ಹೊಸತು. 70 ವರ್ಷದ ಅಪ್ಪನಿಗೆ ಇದು ಎಲ್ಲವೂ ಪುನರಾವರ್ತನೆ. ಆದರೆ, ಹೊಸ ವ್ಯವಸ್ಥೆಯಲ್ಲಿ ತನ್ನ ಹಳೆಯ ಜ್ಞಾನ ಬಳಸುತ್ತಾನೆ. ಹೊಸ ಪ್ರಕ್ರಿಯೆ ಕಲಿಯಲು ಆತನಿಗೆ ಒಂದು ವಾರಕ್ಕಿಂತ ಹೆಚ್ಚು ಕಾಲಾವಕಾಶ ಬೇಕಾಗುವುದಿಲ್ಲ. ಹೀಗೆ ಶಿಕ್ಷಕರಿಗೆ ವಾರಕ್ಕಿಂತ ಹೆಚ್ಚು ಕಾಲಾವಕಾಶ ಬೇಕಾಗುವುದಿಲ್ಲ. ಹೀಗೆ ಶಿಕ್ಷಕರು ಏಳು ವರ್ಷದ ಮಗುವಿನ ಗ್ರಹಿಕೆ ಮತ್ತು ಆತುರತೆ ಬೆಳೆಸಿಕೊಂಡ ಹೊರತು ಆತ ಕೇವಲ ಯಾಂತ್ರಿಕ ನೂಲೆತ್ತುವವನಾಗುತ್ತಾನೆ. ಹೊಸ ಪದ್ಧತಿಗೆ ಸರಿಯೆನಿಸಿಕೊಳ್ಳುವುದಿಲ್ಲ.

**ಪ್ರಶ್ನೆ :** ಈ ಮೂಲಭೂತ ಶಿಕ್ಷಣ, ಗ್ರಾಮಗಳನ್ನು ದೃಷ್ಟಿಯಲ್ಲಿ ಇಟ್ಟುಕೊಂಡಿದೆ. ನಗರ ಪ್ರದೇಶಗಳಿಗಾಗಿ ಯಾವುದಾದರೂ ಮಾರ್ಗೋಪಾಯಗಳಿವೆಯೆ? ಅವರು ಹಳೆಯ ಜಾಡಿನ ಶಿಕ್ಷಣದೊಂದಿಗೇ ಸಾಗಬೇಕೆ?

**ಗಾಂಧೀಜಿ :** ಇದು ಅತಿ ಮುಖ್ಯವಾದ ಮತ್ತು ಉತ್ತಮವಾದ ಪ್ರಶ್ನೆ. **ಹರಿಜನದ** ಅಂಕಣದಲ್ಲಿ ಈ ಕುರಿತಂತೆ ಈಗಾಗಲೇ ಉತ್ತರ ಬರೆದಿದ್ದೇನೆ. ನಮಗೆ ಜೀರ್ಣಿಸಿಕೊಳ್ಳಲು ಈಗಾಗಲೇ ಸಾಕಷ್ಟು ವಿಷಯಗಳಿವೆ ಸದ್ಯಕ್ಕೆ ಸುಮಾರು ಏಳುಲಕ್ಷ ಗ್ರಾಮಗಳ ಶೈಕ್ಷಣಿಕ ಸಮಸ್ಯೆಗಳನ್ನು ಪರಿಹರಿಸಿದರೆ ಸಾಕು. ಶಿಕ್ಷಣತಜ್ಞರು ನಗರಗಳ ಬಗ್ಗೆಯೂ ಚಿಂತನೆ ನಡೆಸಬೇಕು. ನಾವು ಗ್ರಾಮಗಳೊಂದಿಗೆ, ನಗರಗಳ ಬಗ್ಗೆಯೂ ಗಮನ ಹರಿದರೆ, ನಮ್ಮ ಶಕ್ತಿ ಈ ಉದ್ದೇಶಗಳಿಗೆ ಆರಿ ಹೋದಂತಾಗುತ್ತದೆ.

**ಪ್ರಶ್ನೆ :** ಒಂದು ಗ್ರಾಮದಲ್ಲಿ ಮೂರು ಶಾಲೆಗಳಿದ್ದು ಪ್ರತಿಯೊಂದರಲ್ಲೂ ಬೇರೆ ಬೇರೆ ಕುಶಲ ಕಲೆಗೆ ಅವಕಾಶಗಳಿರುವಾಗ ಒಂದಕ್ಕಿಂತ ಮತ್ತೊಂದರಲ್ಲಿ ಹೆಚ್ಚಿನ ಕಲಿಕೆಗೆ ಅವಕಾಶವಿರುವುದಲ್ಲವೆ, ಮಗು ಇವುಗಳಲ್ಲಿ ಯಾವ ಶಾಲೆಗೆ ಹೋಗಬೇಕು?

**ಗಾಂಧೀಜಿ :** ಇಂತಹ ಪುನರಾವರ್ತನೆ ಆಗಬಾರದು. ಬಹುತೇಕ ನಮ್ಮ ಗ್ರಾಮಗಳಲ್ಲಿ ಒಂದಕ್ಕಿಂತ ಹೆಚ್ಚು ಶಾಲೆಗಳಿರುವುದಿಲ್ಲ. ಆದರೆ, ದೊಡ್ಡ ಹಳ್ಳಿಗಳಲ್ಲಿರಬಹುದು. ಇಂತಹ ಹಳ್ಳಿಗಳಲ್ಲಿ ಎರಡೂ ಶಾಲೆಗಳಲ್ಲಿ ಒಂದೇ ಕುರಕುಶಲ ಮಾಧ್ಯಮಕ್ಕೆ ಅವಕಾಶ ಕಲ್ಪಿಸಬೇಕು. ಹಾಗಂತ ಕಟ್ಟುನಿಟ್ಟಿನ ನಿರ್ದೇಶನವೇನೂ ಇಲ್ಲ. ಇಲ್ಲಿ ಅನುಭವ ದಾರಿ ತೋರುತ್ತದೆ. ವಿದ್ಯಾರ್ಥಿಗಳನ್ನು ಆಕರ್ಷಿಸಬಲ್ಲ, ಜನಪ್ರಿಯತೆ ಒದಗಿಸಬೇಕಾದ ಕರಕುಶಲಗಳ ಬಗ್ಗೆ ಅಧ್ಯಯನ ನಡೆಸಬೇಕು. ಇಲ್ಲಿರುವ ಉದ್ದೇಶ ಒಂದೇ. ಯಾವುದೇ ಕರಕುಶಲ ಆಯ್ದುಕೊಂಡರೂ ಅದು ಸಂಪೂರ್ಣವಾಗಿ ಮಗುವನ್ನು ತೊಡಗಿಸಿಕೊಂಡಿರಬೇಕು. ಅದು ಆ ಗ್ರಾಮದ ಕರಕುಶಲವಾಗಿರಬೇಕು. ಮಗುವಿಗೆ ಅದು ಉಪಯೋಗವಾಗುವ ಕರಕುಶಲ ಕಲೆಯಾಗಿರಬೇಕು.

**ಪ್ರಶ್ನೆ :** ಮಗುವಿನ ಮುಂದಿನ ಭವಿಷ್ಯವೇ ಬೇರೆಯದಿರುವಾಗ ಅದು ಏಳು ವರ್ಷಗಳನ್ನು ಏಕೆ ಅದರಲ್ಲಿ ಅನಗತ್ಯವಾಗಿ ಕಲಿಯಬೇಕು? ಉದಾಹರಣೆಗೆ ಬ್ಯಾಂಕರ್‌ನ ಮಗ, ಆತ ಮುಂದಿನ ದಿನಗಳಲ್ಲಿ ಬ್ಯಾಂಕಿಂಗ್ ಕ್ಷೇತ್ರ ಆಯ್ದುಕೊಳ್ಳುತ್ತಿದ್ದರೆ, 7 ವರ್ಷಗಳ ಕಾಲ ನೂಲುವುನ್ನು ಏಕೆ ಕಲಿಯಬೇಕು?

**ಗಾಂಧೀಜಿ :** ಇದು ಹೊಸ ಶಿಕ್ಷಣ ಯೋಜನೆಯ ಬಗೆಗಿರುವ ಮೌಢ್ಯವಾಗಿದೆ. ಈ ಯೋಜನೆಯಡಿ ಮಗು ಕರಕುಶಲ ಕಲೆ ಕಲಿಯಲು ಮಾತ್ರ ಶಾಲೆಗೆ ಹೋಗುತ್ತಿಲ್ಲ. ಆತ ಪ್ರಾಥಮಿಕ ಶಿಕ್ಷಣ ಪಡೆಯಲು, ಕರಕುಶಲ ಕಲೆ ಮೂಲಕ ತರಬೇತಿ ಪಡೆಯಲು ಹೋಗುತ್ತಿದ್ದಾನೆ. ಹೊಸ ಶಿಕ್ಷಣ ಪದ್ಧತಿಯಡಿ ಏಳು ವರ್ಷಗಳ ಕಲಿಕೆ ಪೂರೈಸಿದ ಬಾಲಕ, ಸಾಮಾನ್ಯ ಶಾಲಾ ಶಿಕ್ಷಣ ಪಡೆದ ಮಗುವಿಗಿಂತ ಉತ್ತಮ ಬ್ಯಾಂಕರ್‌ನಾಗಬಲ್ಲ. ಸಾಮಾನ್ಯ ಶಾಲಾ ಶಿಕ್ಷಣ ಪಡೆದ ಮಗುವಿಗೆ ಮುಂದಿನ ಶಿಕ್ಷಣ ಸುಲಭವಾಗುವುದಿಲ್ಲ. ಪೂರ್ವಗ್ರಹಿಕೆ ಅಂತ್ಯಕಾಣದು. ಹೊಸಶಿಕ್ಷಣ ಸಾಹಿತ್ಯಿಕ ಶಿಕ್ಷಣ ಅಥವಾ ಕರಕುಶಲಕಲೆಗಳ ಕಲಿಕೆ ಅಲ್ಲ ಎಂಬುದನ್ನು ನಿಮಗೆ ಮನವರಿಕೆ ಮಾಡಿದ್ದಾದರೆ, ಅದು ನನ್ನ ಇಂದಿನ ಕೆಲಸದ ಉತ್ತಮ ಕಾರ್ಯವೆಂದು ಬಗೆದಿದ್ದೇನೆ. ಇದು ಪ್ರಾಥಮಿಕ ಹಂತದವರೆಗೆ ಕರಕುಶಲ ಕಲೆಗಳ ಮೂಲಕ ನೀಡುವ ಶಿಕ್ಷಣ.

**ಪ್ರಶ್ನೆ :** ಪ್ರತಿ ಶಾಲೆಯಲ್ಲಿ ಒಂದಕ್ಕಿಂತ ಹೆಚ್ಚು ಕರಕುಶಲ ಕಲೆ ಕಲಿಸಿದರೆ, ಉತ್ತಮವಲ್ಲವೇ? ಒಂದೇ ಕಲೆಯನ್ನು ತಿಂಗಳಿಡೀ, ವರ್ಷವಿಡೀ ಕಲಿತರೆ ಮಗುವಿಗೆ ಬೇಸರ ಬರುವುದಿಲ್ಲವೇ?

**ಗಾಂಧೀಜಿ :** ಒಬ್ಬ ವಿದ್ಯಾರ್ಥಿ ನೂಲೆತ್ತುವ ವಿಷಯದಲ್ಲಿ ಒಂದು ತಿಂಗಳಲ್ಲಿ ಕಳಾಹೀನನಾದರೆ, ಅಂತಹವರ ಶಿಕ್ಷಕರನ್ನು ಕೆಲಸದಿಂದ ತೆಗೆದುಹಾಕಬೇಕು. ಅದೇ ಸಾಧನವಾದರೂ, ಪ್ರತಿಪಾತದಲ್ಲಿ ಹೊಸತನ, ಹೊಸ ಸಂಗೀತ ಇರಬೇಕು. ಒಂದು ಕರಕುಶಲ ಕಲೆಯಿಂದ ಮತ್ತೊಂದಕ್ಕೆ ಬದಲಾಯಿಸುವುದೆಂದರೆ, ಮನೆಯಿಲ್ಲದ ಮಂಗ ಕೊಂಬೆಯಿಂದ ಕೊಂಬೆಗೆ ಹಾರಿದಂತಿರುತ್ತದೆ. ನಾನು ಈಗಾಗಲೇ ಚರ್ಚೆಯಲ್ಲಿ ನೂಲೆತ್ತುವ ಕಲೆ ಕಲಿಕೆಯಲ್ಲಿ ನೂಲೆತ್ತುವುದಲ್ಲದೆ, ವೈಜ್ಞಾನಿಕ ಸ್ಫೂರ್ತಿಯ ತಳಹದಿಯ ಬಗ್ಗೆ ವಿವರಿಸಿದ್ದೇನೆ. ಮಗು ಶೀಘ್ರವೇ, ತನ್ನ ಸ್ವಂತ ತಕಲಿ ಹಾಗೂ ನೂಲು ಸುತ್ತುವ ಸಾಧನ ತಯಾರಿಸಿಕೊಳ್ಳುವುದನ್ನು ಕಲಿಯುತ್ತದೆ. ಆದ್ದರಿಂದ ಚರ್ಚೆಯ ಆರಂಭದಲ್ಲಿ ಹೇಳಿದ ವಿಚಾರಕ್ಕೆ ಮತ್ತೆ ಬರುತ್ತಿದ್ದೇನೆ. ಒಂದು ವೇಳೆ ಶಿಕ್ಷಕ ಕರಕುಶಲ ಕಲೆಯನ್ನು ವೈಜ್ಞಾನಿಕ ಸ್ಫೂರ್ತಿಯಲ್ಲಿ ಪರಿಗಣಿಸಿದರೆ, ಆತ ತನ್ನ ವಿದ್ಯಾರ್ಥಿಗಳಿಗೆ ಅನೇಕ ಮಾಧ್ಯಮಗಳಲ್ಲಿ ಮಾತನಾಡಬಲ್ಲ, ಅದು ಶಿಕ್ಷಣದ ಅಭಿವೃದ್ಧಿಗೆ ಕೊಡುಗೆ ನೀಡಬಲ್ಲದು.

ಸೆಂಗಾನ್ ಫೆಬ್ರವರಿ 9. 1939
ಹರಿಜನ , 18.2.1939 ಮತ್ತು 4.3.1937
(ಕಲೆಕ್ಟಡ್ ವರ್ಕ್ಸ್ ಆಫ್ ಮಹಾತ್ಮಾಗಾಂಧಿ
– ಸಂಪುಟ LXVIII
ಅಕ್ಟೋಬರ್ 15, 1938 –
ಫೆಬ್ರವರಿ 28, 1939 ಆಯ್ದ ಭಾಗ)

❑

# ಕೃಷಿ ಕೌಶಲ್ಯಗಳು – ಒಂದು ಪರಿಕಲ್ಪನೆ

* ಡಾ. ಶಿವಾನಂದ ಹೊಸಮನಿ



**ಕೃಷಿ ಕ್ಷೇತ್ರದಲ್ಲಿ ಬೀಜ ಉತ್ಪಾದನೆ, ಕೃಷಿ ಹುಟ್ಟುವಳಿ ಉತ್ಪಾದನೆ, ಸಸ್ಯ ಸಂರಕ್ಷಣೆ, ಕಟಾವು, ದಾಸ್ತಾನು, ವಿತರಣೆ, ಹಾಗೂ ರಫ್ತು ಕ್ಷೇತ್ರಗಳಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ರೈತರಿಗೆ ಮತ್ತು ರೈತ ಮಹಿಳೆಯರಿಗೆ ವಿಶ್ವವಿದ್ಯಾಲಯಗಳು ಹಾಗೂ ಕೃಷಿ ವಿಜ್ಞಾನ ಕೇಂದ್ರಗಳು ನೈಪುಣ್ಯತೆ ನೀಡುವಂತಹ ತರಬೇತಿಗಳನ್ನು ಹಮ್ಮಿಕೊಳ್ಳಬಹುದಾಗಿದೆ.**

'ಡಿಜಿಟಲ್ ಇಂಡಿಯಾ' ಮತ್ತು 'ಮೇಕ್ ಇನ್ ಇಂಡಿಯಾ'ದ ನಂತರ ಕೇಂದ್ರ ಸರ್ಕಾರ ಇನ್ನೊಂದು ಕಾರ್ಯಕ್ರಮವನ್ನು ಜಾರಿಗೆ ತಂದಿದೆ. ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರ ಕನಸಿನ ಯೋಜನೆಗಳಲ್ಲಿ 'ಸ್ಕಿಲ್ ಇಂಡಿಯಾ' ಕೂಡಾ ಒಂದು.

### ಸ್ಕಿಲ್ ಇಂಡಿಯಾದ ಉದ್ದೇಶಗಳು

ಕೌಶಲ್ಯ ಯೋಜನೆಯಡಿಯಲ್ಲಿ ಕೆಲವು ಯೋಜನೆಗಳನ್ನು ಜಾರಿಗೆ ತಂದು ಕೌಶಲ್ಯಗಳನ್ನು ಗುರುತಿಸುವ ಹಿನ್ನೆಲೆಯಲ್ಲಿ ಭಾರತದ ಯುವ ಪೀಳಿಗೆಯ ಮೇಧಾವಿಗಳಿಗೆ ಹೆಚ್ಚಿನ ಪ್ರೋತ್ಸಾಹ, ಪ್ರೇರಣೆ ನೀಡುವುದಾಗಿದೆ. 'ಸ್ಕಿಲ್ ಇಂಡಿಯಾ'ದ ಮುಖ್ಯ ಉದ್ದೇಶ ಯುವ ಪೀಳಿಗೆಗೆ ಹೆಚ್ಚಿನ ಅವಕಾಶ ಕೊಡುವದಾಗಿದೆ.ಈ ಕಾರ್ಯಕ್ರಮದ ಉದ್ದೇಶ 2020ರ ವರೆಗೆ ಭಾರತದ ಪ್ರತಿ ಹಳ್ಳಿಯಲ್ಲಿರುವ 500 ಮಿಲಿಯನ್ ಯುವ ಪೀಳಿಗೆಯ ಜನರಿಗೆ ತರಬೇತಿ ನೀಡಿ ಕೌಶಲ್ಯ ನೈಪುಣ್ಯರನ್ನಾಗಿಸುವುದು. ಇದಕ್ಕಾಗಿ ಹಲವಾರು ಹೊಸ ಯೋಜನೆಗಳನ್ನು ರೂಪಿಸಲಾಗಿದೆ.

### 'ಸ್ಕಿಲ್ ಇಂಡಿಯಾ'ದ ವಿಶಿಷ್ಟ ಲಕ್ಷಣಗಳು

ಯುವ ಪೀಳಿಗೆಯನ್ನು ಕೌಶಲ್ಯಭರಿತ ರನ್ನಾಗಿಸಿ ಉದ್ಯೋಗ ಮುಖಿಯಾಗಿಸುವುದರ ಜೊತೆಗೆ ಉದ್ದಿಮೆದಾರರಾಗುವಂತೆ ಮಾಡುವುದು.

ಬಡಿಗ, ಚಮ್ಮಾರ, ಕಮ್ಮಾರ, ಬೆಸುಗೆಗಾರ, ಕಲ್ಲು ಕುಟ್ಟಿಗ, ದಾದಿ, ಹೊಲಿಗೆ, ನೇಕಾರ– ಮುಂತಾದ ಸಾಂಪ್ರದಾಯಿಕ ಕೌಶಲ್ಯಗಳಿಗೆ ತರಬೇತಿಯನ್ನು ನೀಡುವದು. ಭೂಮಿ ವ್ಯವಹಾರ, ಕಟ್ಟಡ ಕಟ್ಟುವಿಕೆ. ಸಾಗಾಣಿಕೆ, ಬಟ್ಟೆ ತಯಾರಿಕೆ, ಹರಳಿನ ವ್ಯಾಪಾರ, ಆಭರಣ ತಯಾರಿಕೆ, (ಬ್ಯಾಂಕಿಂಗ್) ವ್ಯವಹಾರ ಸಂಸ್ಥೆಗಳು, ಪ್ರವಾಸೋದ್ಯಮ ಮುಂತಾದವುಗಳಿಗೆ ಹೆಚ್ಚಿನ ಮಹತ್ವ ನೀಡುವುದು. ಇವುಗಳ ಬಗ್ಗೆ ಕೌಶಲ್ಯ ಇಲ್ಲದಿರುವದರಿಂದ ಈ ಕ್ಷೇತ್ರಗಳನ್ನು ಅತಿ ಹೆಚ್ಚು ಪರಿಗಣಿಸಲಾಗುವದು. ಅಂತಾರಾಷ್ಟ್ರೀಯ ಮಟ್ಟದ ತರಬೇತಿಗಳಿಗೆ ಸಮನಾಗಿದ್ದು, ನಮ್ಮ ದೇಶದ ಯುವಕರು ಇದರಿಂದ ಕೇವಲ ಸ್ವದೇಶದಲ್ಲಲ್ಲದೇ ಇನ್ನಿತರ ದೇಶಗಳಾದ ಅಮೆರಿಕಾ, ಜಪಾನ, ಚೈನಾ, ಜರ್ಮನಿ, ರಷ್ಯಾ ಮತ್ತು ಪಶ್ಚಿಮ ಏಷ್ಯಾದ ಭಾಗಗಳಲ್ಲಿ ಅಗತ್ಯಗಳನ್ನು ಪೂರೈಸುವಲ್ಲಿ ಶಕ್ಯವಾಗುವಂತೆ ಮಾಡುವದು.

ಮತ್ತೊಂದು ಮುಖ್ಯವಾದ ಲಕ್ಷಣವೆಂದರೆ 'ಭಾರತದ ಗ್ರಾಮೀಣ ಕೌಶಲ್ಯ'ಗಳಿಗೆ 'ಸ್ಕಿಲ್ ಇಂಡಿಯಾ' ಮುದ್ರೆಯನ್ನು ನೀಡಿ ತರಬೇತಿಯ ಗುಣಮಟ್ಟದ ಪ್ರಮಾಣ ಪತ್ರ ನೀಡುತ್ತದೆ.

ಭಾಷಾ ಮತ್ತು ಸಂವಹನ ಕೌಶಲ್ಯ, ಜೀವನ ಮತ್ತು ಧನಾತ್ಮಕ ಚಿಂತನಾ ಕೌಶಲ್ಯ, ವ್ಯಕ್ತಿತ್ವ ಸುಧಾರಣಾ ಕೌಶಲ್ಯ, ವ್ಯವಸ್ಥಾಪಕ ಕೌಶಲ್ಯ, ಉದ್ಯೋಗಮುಖಿ ಕೌಶಲ್ಯಗಳನ್ನು ವಯಸ್ಸಿಗನುಗುಣವಾಗಿ, ಅಗತ್ಯಕ್ಕನುಗುಣವಾಗಿ ನೀಡುವುದು.

'ಸ್ಕಿಲ್ ಇಂಡಿಯಾ'ದ ವಿಧಾನವು ಅವಿಷ್ಕಾರಾತ್ಮಕವಾಗಿರುವುದು. ಇದರಲ್ಲಿ ಆಟಗಳು, ಸಮೂಹ ಚರ್ಚೆ, ಮೆದುಳಿಗೆ ಕೆಲಸ ಕೊಡುವ, ಪ್ರಯೋಗಾತ್ಮಕ

* ಕುಲಪತಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ–591156.

ಅನುಭವಗಳು, ವಿವರಣಾತ್ಮಕ ಅಧ್ಯಯನಗಳು ಒಳಗೊಂಡಿರುತ್ತವೆ.

**'ಸ್ಕಿಲ್ ಇಂಡಿಯಾ'ದ ಪ್ರಯೋಜನಗಳು**

ಇದು ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ಉತ್ಪಾದನೆಯನ್ನು ಹೆಚ್ಚಿಸುವುದರ ಜೊತೆಗೆ ಕೌಶಲ್ಯ ನೈಪುಣ್ಯರನ್ನಾಗಿಸುತ್ತದೆ. ಕೌಶಲ್ಯವು ಯುವ ಪೀಳಿಗೆಗೆ ಕರ–ಕುಶಲ ಉದ್ಯೋಗಗಳನ್ನು ನೀಡುತ್ತದೆ. ಸರಿಯಾದ ಸಮಯದಲ್ಲಿ ಯುವ ಪೀಳಿಗೆಗೆ ಶಾಲಾ ಹಂತದಲ್ಲಿಯೇ ಕೌಶಲ್ಯ ನೈಪುಣ್ಯ ತರಬೇತಿಗಳನ್ನು ನೀಡುವದರಿಂದ ಅವರ ಕೌಶಲ್ಯದ ಸದ್ಬಳಕೆಯಾಗಿ ಸರಿಯಾದ ಉದ್ಯೋಗ ಪಡೆಯಲು ಸಾಧ್ಯವಾಗುತ್ತದೆ. ಎಲ್ಲ ರೀತಿಯ ಕೆಲಸಗಳಿಗೆ ಒಂದೇ ತರನಾದ ಪ್ರಾಶಸ್ತ್ಯ ನೀಡಲಾಗುತ್ತದೆ. ಎಲ್ಲ ರೀತಿಯ ಉದ್ಯೋಗಾಕಾಂಕ್ಷಿಗಳಿಗೆ ಸರಿಯಾದ ಕೌಶಲ್ಯ ತರಬೇತಿಗಳನ್ನು ನೀಡಿ ಪ್ರಮಾಣ ಬದ್ಧವಾದ ಯೋಗ್ಯವಾದ ಬದುಕನ್ನು ನಡೆಸಲು ಸಾಧ್ಯ. ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳು ಗ್ರಾಮೀಣ ಮತ್ತು ಅತ್ಯಂತ ಹಿಂದುಳಿದ ಪ್ರವೇಶವನ್ನು ತಲುಪಬೇಕು.

ಶಿಕ್ಷಣ ಸಂಸ್ಥೆಗಳು, ಸರಕಾರೇತರ ಸಂಸ್ಥೆಗಳು, ಸರಕಾರ, ಪಾಂಡಿತ್ಯ–ವಿದ್ಯಾ ಸಂಸ್ಥೆಗಳು ಮತ್ತು ಸೊಸೈಟಿಗಳು ಯುವಕರಿಗೆ ಕೌಶಲ್ಯ ಅಭಿವೃದ್ಧಿಯನ್ನು ತಲುಪಿಸುವಲ್ಲಿ




ಪ್ರಯತ್ನಿಸಿದರೆ ಬಹಳ ಕಡಿಮೆ ಅವಧಿಯಲ್ಲಿ ಉತ್ತಮ ಫಲಿತಾಂಶವನ್ನು ಪಡೆಯಲು ಸಾಧ್ಯ.

**ಕೌಶಲ್ಯ**

ಕೊಟ್ಟಂತಹ ಸಮಯ ಹಾಗೂ ಶಕ್ತಿಯನ್ನು ಬಳಸಿ ಮೊದಲೇ ನಿರ್ಧರಿಸಿದಂತಹ ಗುರಿಯನ್ನು ಕಲಿತಂತಹ ಸಾಮರ್ಥ್ಯದ ಮೂಲಕ ಸಾಧನೆಗೈಯ್ಯುವದನ್ನು ಕೌಶಲ್ಯ ಎನ್ನುತ್ತೇವೆ. ಇನ್ನೊಂದರ್ಥದಲ್ಲಿ ಉದ್ದೇಶಿತ ಕಾರ್ಯಕ್ಕೆ ಬೇಕಾಗುವ ಸಾಮರ್ಥ್ಯ. ಕೌಶಲ್ಯವನ್ನು ಸಾಮಾನ್ಯ ಕ್ಷೇತ್ರ ಹಾಗೂ ನಿಶ್ಚಿತ ಕ್ಷೇತ್ರಗಳಲ್ಲಿ ವಿಭಾಗಿಸಿಕೊಳ್ಳಬಹುದು. ಉದಾಹರಣೆಗೆ, ಸಮಯ ನಿರ್ವಹಣೆ, ಸಮೂಹ ಕಾರ್ಯ ಹಾಗೂ ಮುಂದಾಳತ್ವ, ಸ್ವಯಂ ಪ್ರೇರಿತನಾಗುವುದು ಮತ್ತು ಮುಂತಾದವುಗಳು ಸಾಮಾನ್ಯ ಕ್ಷೇತ್ರದಲ್ಲಿ ಬರುತ್ತವೆ. ಆದರೆ ನಿಶ್ಚಿತಕ್ಷೇತ್ರ ಪರಿಣಿತನಾಗಿದ್ದರೆ ಕೆಲವೇ ತೆರನಾದ ವೃತ್ತಿಗಳಿಗೆ ಮಾತ್ರ ಬಳಕೆಯಾಗುತ್ತದೆ. ಕೌಶಲ್ಯವನ್ನು ಯಾವ ಪ್ರಮಾಣದಲ್ಲಿ ಬಳಸಬೇಕು ಹಾಗೂ ತೋರಿಸಬೇಕೆನ್ನುವುದು ಪ್ರೋತ್ಸಾಹಿಸುವ ಪರಿಸರ ಮತ್ತು ಪರಿಸ್ಥಿತಿಗಳ ಮೇಲೆ ಅವಲಂಬಿತವಾಗಿರುತ್ತದೆ. ಆಧುನಿಕ ಆರ್ಥಿಕತೆಯ ಹೆಚ್ಚಳಕ್ಕೆ ಜನರಿಗೆ ವಿಭಿನ್ನ ಕೌಶಲ್ಯಗಳ ಅವಶ್ಯಕತೆಯಿದೆ.

**ಕೃಷಿ ಕೌಶಲ್ಯ**

ಮಣ್ಣಿನಲ್ಲಿ ಉಳುಮೆ ಮಾಡಿ, ಬೆಳೆಯನ್ನು ಬೆಳೆಯುವುದು ಹಾಗೂ ಜಾನುವಾರುಗಳನ್ನು ಪೋಷಿಸುವಂತಹ ಕಲೆ ಮತ್ತು ವಿಜ್ಞಾನಕ್ಕೆ ಕೃಷಿ ಎನ್ನುವರು. ಕೃಷಿಯು ಸಸ್ಯಜನ್ಯ ಮತ್ತು ಪ್ರಾಣಿಜನ್ಯ ಉತ್ಪಾದನೆಗಳನ್ನು ಉತ್ಪಾದಿಸಿ ಜನರಿಗೆ ಹಾಗೂ ಮಾರುಕಟ್ಟೆಗಳಿಗೆ ವಿತರಿಸುವ ವಿಷಯವನ್ನು ಒಳಗೊಂಡಿದೆ.

ಕೃಷಿಯನ್ನು ಆಹಾರವನ್ನು ಉತ್ಪಾದಿಸಲು ಮತ್ತು ಇನ್ನಿತರ ಮಾನವನ ಅವಶ್ಯಕತೆಗಳಿಗಾಗಿ ಬೇಕಾಗುವ ಬಟ್ಟೆ, ವಸತಿ, ಔಷಧಿ, ಶಸ್ತ್ರ, ಸಲಕರಣೆಗಳು, ಆಭರಣಗಳು ಮುಂತಾದವುಗಳ ಉತ್ಪಾದನೆಗೆ ಬಳಸಲಾಗುವುದು.ಕೃಷಿಯನ್ನು ಉದ್ದಿಮೆಯನ್ನಾಗಿಸಿ ಆರ್ಥಿಕತೆಯವೃದ್ಧಿಗೆ ಬಳಸಬಹುದು. ಕೃಷಿಯ ಉತ್ಪಾದನೆಗಳು ಹಾಗೂ ವಿಧಾನಗಳು ಜಗತ್ತಿನ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ವಿಭಿನ್ನವಾಗಿರುತ್ತವೆ.

**ಈ ಮುಂದೆ ನಮೂದಿಸಿದ ಕೌಶಲ್ಯಗಳು ಕೃಷಿ ಅಭಿವೃದ್ಧಿಗೆ ಪೂರಕವಾಗಿವೆ:**


**1) ಬೀಜ ಉತ್ಪಾದನೆ ಹಾಗೂ ಪುನರುತ್ಪಾದನೆ :** ವಿತರಣೆ, ಸಂಗ್ರಹ ಅಥವಾ ವ್ಯಾಪಾರದ ಉದ್ದೇಶಗಳಿಗಾಗಿ ಸಸ್ಯಗಳಿಂದ ಬೀಜ ಉತ್ಪಾದನೆ ಹಾಗೂ ಕೊಯ್ಲನ್ನು ಮಾಡಲಾಗುವುದು. ಸರಿಯಾದ ಬೀಜಗಳನ್ನು ಉತ್ಪಾದಿಸಲು ಪ್ರತಿಯೊಬ್ಬನಿಗೂ ಪುನರುತ್ಪಾದನೆಯ ಕ್ರಿಯೆ ಹಾಗೂ ವಿಭಿನ್ನ ತಳಿಗಳ ಬಗ್ಗೆ ಮಾಹಿತಿ, ಬೀಜ ಉತ್ಪಾದನೆ,



ಬೀಜ ಸ್ವಚ್ಛತೆ, ಬೀಜಗಳ ಸಂಗ್ರಹದ ತಂತ್ರಗಳ ಜ್ಞಾನವಿರಬೇಕು. ಈ ವಿಷಯದ ಕುರಿತು ಕೃಷಿ ವಿಶ್ವವಿದ್ಯಾಲಯಗಳಲ್ಲಿ ಡಿಪ್ಲೊಮಾ, ಕೃಷಿ ಪದವಿ ಹಾಗೂ ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳಲ್ಲಿ ಜ್ಞಾನವನ್ನು ನೀಡಲಾಗುತ್ತದೆ. ಇದಲ್ಲದೇ ರೈತರಿಗೆ ಹಾಗೂ ರೈತ ಮಹಿಳೆಯರಿಗೆ ಬೀಜೋತ್ಪಾದನೆಯ ಕುರಿತು ಕೌಶಲ್ಯ ಅಭಿವೃದ್ಧಿ ತರಬೇತಿಗಳನ್ನು ನೀಡಲಾಗುತ್ತದೆ.

**2) ಸಸ್ಯಗಳ ಸಂರಕ್ಷಣೆ :** ಹೆಚ್ಚುವರಿ ಧಾನ್ಯ ಉತ್ಪಾದನೆಯನ್ನು ಬಯಸಿದಲ್ಲಿ ಸಸ್ಯಗಳ ಸಂರಕ್ಷಣೆಯ ಪಾತ್ರವೇ ಪ್ರಮುಖವಾಗಿರುತ್ತದೆ. ಕೃಷಿ ನಾಶಗೊಳಿಸುವ ಅಂದರೆ ಪರಸ್ಪರಾವಲಂಬಿಗಳಾದ ಫಂಗೈ, ಬ್ಯಾಕ್ಟೀರಿಯಾ, ವೈರಸ್, ಹುಳ–ಹುಪ್ಪಡಿಗಳು, ಮೈಟ್ಸ್, ನೆಮಟೋಡ,ಕಳೆ, ದಂಶಕ, ಕಾಳು ತಿನ್ನುವ ಪಕ್ಷಿಗಳು–ಇವೆಲ್ಲದರ ಮೇಲೆ ಬೆಳೆಯ ಆರ್ಥಿಕ ಭವಿಷ್ಯ ಅವಲಂಬಿಸಿದೆ. ಸಾಮಾನ್ಯವಾಗಿ ಕೃಷಿಯ ಮೇಲಾಗುವ ಉಪದ್ರವಗಳಿಂದಾಗಿ ಬೆಳೆಯ ಹಾನಿ ಹಾಗೂ ಉತ್ಪಾದನೆಯಲ್ಲಿ ನಿರ್ಬಂಧ ಉಂಟಾಗುತ್ತದೆ. ಪರಿಣಾಮಕಾರಿಯಾದಂಥ ಸಸ್ಯಗಳ ಸಂರಕ್ಷಣೆಯಿಂದಾಗಿ ಬೆಳೆ ಹಾನಿಯನ್ನು ತಡೆಗಟ್ಟುವುದಲ್ಲದೇ ಇನ್ನಿತರ ಫಲಕಾರಿ ಉತ್ಪಾದನೆಗಳ ಪ್ರಯೋಜನ ಪಡೆಯಬಹುದು. ಭೂಮಿಯ ಸ್ವರೂಪವನ್ನು ಪರಿವರ್ತಿಸುವಲ್ಲಿ ಕೃಷಿ ಕೀಟಗಳು ಮತ್ತು





ಸಸ್ಯಗಳ ಸಂರಕ್ಷಣೆ ಪರೋಕ್ಷವಾಗಿ ಪರಿಣಾಮ ಬೀರುತ್ತವೆ.

ಜಗತ್ತಿನ ಅನೇಕ ಭಾಗಗಳಲ್ಲಿ ಕೀಟನಾಶಕಗಳ ಪರಿಚಯವಾದ ಮೇಲೆ ಕೃಷಿ ಉತ್ಪಾದನೆಯಲ್ಲಿ ತೀವ್ರವಾದ ಬದಲಾವಣೆಗಳುಂಟಾದವು. ಏಕ ಮತ್ತು ಬಹು ಕೊಯ್ಲು ಪದ್ಧತಿಗಳನ್ನು ಹೊಸ ನಿಯಂತ್ರಣ ಕ್ರಮಗಳಿಲ್ಲದೇ ಮಾಡಲು ಅಸಾಧ್ಯ.ಪರಿಣಾಮಕಾರಿಯಾದ ಬೆಳೆ ಸಂರಕ್ಷಣೆ ವಿಧಾನ ಇಲ್ಲದೇ, ಕೆಲವು ಬೆಳೆಗಳನ್ನು ಬೆಳೆಯಲು ಸಾಧ್ಯವಿಲ್ಲ.ಸಸ್ಯ ಸಂರಕ್ಷಣಾ ಕ್ರಮಗಳು, ರಸಾಯನಿಕ ಔಷಧಗಳ ಬಳಕೆ ಪ್ರಮಾಣ, ಮುಂಜಾಗ್ರತ ಕ್ರಮಗಳು, ಹತೋಟಿ ಕ್ರಮಗಳು ಮುಂತಾದವುಗಳ ಕುರಿತು ಕೌಶಲ್ಯದ ಅವಶ್ಯಕತೆಯಿದೆ. ಕಡಿಮೆ ಖರ್ಚಿನಲ್ಲಿ ಈ ಕ್ರಮಗಳನ್ನು ಕೈಗೊಳ್ಳುವುದು ಅತೀ ಅವಶ್ಯಕವಿದೆ. ಇದರಿಂದ ಪರಿಸರ ಹಾನಿಯನ್ನು ತಡೆಗಟ್ಟುವುದರ ಜೊತೆಗೆ ಲಾಭವನ್ನು ಪಡೆಯುಬಹುದು.

**3)ಪ್ರಾಣಿ ಸಾಕಾಣಿಕೆ :** ನಾಗರಿಕತೆಯ ಆರಂಭದಿಂದಲೂ, ಮನುಷ್ಯರು ತಮ್ಮ ಅವಶ್ಯಕತೆಗಳಿಗಾಗಿ ಪ್ರಾಣಿಗಳ ಮೇಲೆ ಅವಲಂಬಿತವಾಗಿರುವುದನ್ನು ಕಾಣುತ್ತೇವೆ. ಉದಾಹರಣೆ : ಆಹಾರ (ಹಾಲು, ಮಾಂಸ ಮತ್ತು ಮೊಟ್ಟೆ), ಬಟ್ಟೆ (ಚರ್ಮ ಮತ್ತು ಉಣ್ಣೆ), ದುಡಿಮೆಗಾಗಿ (ಎಳೆಯುವುದಕ್ಕೆ ಭಾರ ಸಾಗಣಿಕೆಗೆ) ಮತ್ತು ಕಾವಲುಗಾರಿಕೆ ಮುಂತಾದವುಗಳು. ಈ ಎಲ್ಲಾ ಪ್ರಾಣಿ ತಳಿಗಳಲ್ಲಿ ಅಗತ್ಯವಾದ ಗುಣಗಳನ್ನು ವರ್ಧಿಸುವುದಕ್ಕೆ ಒಳ್ಳೆಯ ಗುಣಮಟ್ಟದ ಹೊಸ ತಳಿಗಳನ್ನು ಹುಟ್ಟುಹಾಕಿದ್ದು ಮಾನವನ ಮುಖ್ಯವಾದ ಸಾಧನೆ.ಈ ಒಂದು ಕಾರ್ಯಕ್ಕೋಸ್ಕರ ಮಾನವನು ಸಾಕು ಪ್ರಾಣಿಗಳ ಸುಧಾರಿಸಿದ ತಳಿಗಳನ್ನು ಸಂಶೋಧಿಸಿ ಅವುಗಳ ಮುಖಾಂತರ ಹೆಚ್ಚಿನ ಉಪಯೋಗವನ್ನು ತೆಗೆದುಕೊಳ್ಳುವ ನಿಟ್ಟಿನಲ್ಲಿ ನಿರಂತರವಾಗಿ ಪ್ರಯತ್ನಿಸಿದ್ದಾನೆ. ಇದರಿಂದ, ಸಾಮಾನ್ಯ ತಳಿಗಳ ಉಪಯೋಗ ಹಾಗೂ ಅವುಗಳನ್ನು ಸುಧಾರಿಸುವ ವಿಧಾನಗಳನ್ನು ಕಲಿಯುವಂತಾಯಿತು.

ಮನುಷ್ಯನು ತನ್ನ ಲಾಭಕ್ಕಾಗಿ ಪ್ರಾಣಿಗಳನ್ನು ಸಾಕಿ ಕಾಳಜಿವಹಿಸಿದ್ದು, ನಂತರದಲ್ಲಿ ಮನುಷ್ಯನಿಗೆ ಎಷ್ಟು ಉಪಯುಕ್ತವೋ ಅಷ್ಟು ಆ ತಳಿಯ ಉತ್ಪತ್ತಿ ಹಾಗೂ ಗುಣಗಳನ್ನು ವರ್ಧಿಸಲಾಯಿತು. ಮನುಷ್ಯ ತನ್ನ ಉಪಯೋಗಕ್ಕೆ, ಕ್ರೀಡೆ, ಮನರಂಜನೆ ಹಾಗೂ ಸಂಶೋಧನೆಗೆ ಪೂರಕವಾಗುವಂತೆ ಕೆಲವು ವಿಶೇಷ ತಳಿಗಳ ಯೋಗ್ಯವಾದ ವಿಶೇಷ ಲಕ್ಷಣಗಳನ್ನು ಗುರುತಿಸಿ ಜಾನುವಾರುಗಳನ್ನು ವರ್ಧಿಸಿದನು.ಈ ಚಟುವಟಿಕೆಯು ಕೃಷಿಗೆ ಪೂರಕವಾಗಿ ಕಾರ್ಯವನ್ನು ನಿರ್ವಹಿಸುತ್ತಿದ್ದು, ಕೃಷಿಕರಿಗೆ ಹೆಚ್ಚುವರಿ ಆದಾಯ ತಂದುಕೊಡುತ್ತಲಿದೆ. ಕೃಷಿಕರು ತಮ್ಮ ಬಿಡುವಿನ ಸಮಯವನ್ನು ಈ ಪೂರಕ ಚಟುವಟಿಕೆಗಳಿಗೆ ಉಪಯೋಗಿಸಬಹುದಾಗಿದೆ.

ಪಶು ಸಂಗೋಪನೆ ಕುರಿತು ಕೃಷಿ ವಿಶ್ವವಿದ್ಯಾಲಯಗಳು ಮತ್ತು ಸರಕಾರದ ಅನೇಕ ಸಂಸ್ಥೆಗಳು ತರಬೇತಿ ನೀಡುತ್ತಿವೆ.

**4)ಮೀನುಗಾರಿಕೆ :** ಜಲವಸ್ತುಗಳ ಸಂಗ್ರಹ ಕಾರ್ಯಸ್ಥಳವು ಮೀನನ್ನು ಉತ್ಪಾದಿಸುವ ಮತ್ತು ಸಂಗ್ರಹಿಸುವ ಉದ್ದೇಶವನ್ನು ಹೊಂದಿರುವಂತಹ ಅಸ್ತಿತ್ವವನ್ನು ಹೊಂದಿದೆ. ಎಫ್.ಎ.ಓ. ಪ್ರಕಾರ, ಮೀನುಗಾರಿಕೆ ಎಂದರೆ 'ಜನರನ್ನೊಳಗೊಂಡ ಬೇರೆ ಬೇರೆ ಜಾತಿಯ ಮೀನುಗಳು, ಸಮುದ್ರತಳ ಮೀನು ಹಿಡಿಯುವ ವಿಧಾನ, ವಿಭಿನ್ನ ದೋಣಿಗಳು, ಚಟುವಟಿಕೆಯ ಉದ್ದೇಶಗಳು ಅಥವಾ ಇವೆಲ್ಲವುಗಳ ಸಮ್ಮಿಲನ. ಮೀನುಗಾರಿಕೆ ವ್ಯಾಖ್ಯೆ ಒಂದು ಪ್ರದೇಶದ ಮೀನು ಮತ್ತು ಮೀನುಗಾರರ ಸಹಯೋಗ, ನಂತರದಲ್ಲಿ ಒಂದೇ ರೀತಿಯ ಚಾಲಕ ಯಂತ್ರಗಳಿಂದ ಒಂದೇ ತಳಿಯ ಮೀನುಗಳನ್ನು ಹಿಡಿಯುವುದನ್ನು ಒಳಗೊಂಡಿರುತ್ತದೆ. ಜಲವಸ್ತುಗಳ ಸಂಗ್ರಹ ಕಾರ್ಯ ಸ್ಥಳವು ಪಳಗಿಲ್ಲದ ಮೀನುಗಳು, ಅಥವಾ ಮೀನುಗಾರಿಕೆಯಿಂದ ಮೀನುಗಳನ್ನು ಉತ್ಪಾದಿಸುವುದು ಅಥವಾ ಮೀನಿನ ತೊಟ್ಟಿಗಳನ್ನು ಒಳಗೊಂಡಿರುತ್ತದೆ. ಪ್ರತ್ಯಕ್ಷ ಅಥವಾ ಪರೋಕ್ಷವಾಗಿ, ಅಭಿವೃದ್ಧಿ ಹೊಂದಿದ ದೇಶಗಳಲ್ಲಿ 500 ಮಿಲಿಯನ್ ಜನರು ಈ ಉದ್ಯೋಗದ ಮೇಲೆ ಅವಲಂಬಿತರಾಗಿದ್ದಾರೆ. ಮಿತಿಮೀರಿದ ಮೀನು ಹಿಡಿಯುವಿಕೆ ಅಥವಾ ಸಮುದ್ರ ತಳಮಟ್ಟವನ್ನು ಮೀರಿ ಮೀನು ಹಿಡಿಯುವುದರಿಂದ ಮೀನು ಸಂಗ್ರಹ ಕಡಿಮೆಯಾಗುವುದಲ್ಲದೇ, ಮೀನಿನ ಉದ್ಯೋಗವು ಜಗತ್ತಿನ ಹಲವು ಭಾಗಗಳಲ್ಲಿ ಕಡಿಮೆಯಾಗುತ್ತಿದೆ. ಈ ಚಟುವಟಿಕೆಯನ್ನು ಅಳವಡಿಸಿಕೊಳ್ಳಲು ಮೀನು ಸಾಕಾಣಿಕೆಯ ತರಬೇತಿಯ ಅವಶ್ಯಕತೆಯಿದ್ದು ಇದನ್ನು ಕೃಷಿಹೊಂಡಗಳಲ್ಲಿ ರೈತರು ಅಳವಡಿಸಿಕೊಳ್ಳಬಹುದಾಗಿದೆ. ಸಿಗಡಿ ಮೀನು ಮತ್ತು ಇನ್ನಿತರ ಜಲಚರಗಳ ರಫ್ತು ಮಾರುಕಟ್ಟೆಯನ್ನು ಹೊಂದಿವೆ.



**5)ಅರಣ್ಯಶಾಸ್ತ್ರ :** ಭಾರತದಲ್ಲಿನ ಅರಣ್ಯವು ಮಹತ್ವದ ಗ್ರಾಮೀಣ ಕೈಗಾರಿಕೆ ಮತ್ತು ಪ್ರಮುಖವಾದ ಪರಿಸರದ ಸಂಪತ್ತನ್ನು ಹೊಂದಿದೆ.ರಷ್ಯನ್ ಸಂಯುಕ್ತ ಸಂಘ, ಬ್ರೆಜಿಲ್, ಕೆನಡಾ, ಅಮೇರಿಕಾ ಸಂಯುಕ್ತ ಸಂಸ್ಥಾನ, ಚೈನಾ, ಡೆಮೋಕ್ರಟಿಕ್-ರಿಪಬ್ಲಿಕ್ ಕಾಂಗೋ, ಆಸ್ಟ್ರೇಲಿಯಾ, ಇಂಡೋನೇಷಿಯಾ ಮತ್ತು ಸುಡಾನ್ ಮುಂತಾದ ಹತ್ತು ಪ್ರಮುಖ ದೇಶದ ಅರಣ್ಯ ಸಂಪತ್ತುಗಳಲ್ಲಿ ಭಾರತವೂ ಒಂದು. ಜಗತ್ತಿನ ಒಟ್ಟು ಅರಣ್ಯ ಪ್ರದೇಶದಲ್ಲಿ 67% ಭಾರತ ಹಾಗೂ ಈ ಮೇಲಿನ ದೇಶಗಳು ಹೊಂದಿವೆ. ಭಾರತದ ಅರಣ್ಯ ಪ್ರದೇಶವು 1990-2000 ಅವಧಿಯಲ್ಲಿ ಪ್ರತಿವರ್ಷ 0.52% ವಾರ್ಷಿಕ ಅಭಿವೃದ್ಧಿಯನ್ನು



ಹೊಂದಿದ್ದು 2000–2010ರಲ್ಲಿ 0.46% ರಷ್ಟು ಪ್ರತಿವರ್ಷ ಅಭಿವೃದ್ಧಿ ಹೊಂದಿದೆ. ದಶಕಗಳ ನಂತರ ಅರಣ್ಯ ಸವಕಳಿಯು ಚಿಂತಿಸುವ ವಿಷಯವಾಗಿದೆ. ಭಾರತದಲ್ಲಿ ಅರಣ್ಯವನ್ನು ಕೇವಲ ಕಟ್ಟಿಗೆ ಮತ್ತು ಉರುವಲಿಗಾಗಿ ನೋಡಲಾಗುತ್ತಿದೆ. ಭಾರತವು ಕಟ್ಟಿಗೆ ರಹಿತ ಉತ್ಪಾದನಾ ಕೈಗಾರಿಕೆಗಳನ್ನು ವರ್ಧಿಸುವಲ್ಲಿ ಪ್ರಯತ್ನಿಸುತ್ತಿದೆ. ಕಚ್ಚಾ ರಬ್ಬರ್, ಅಂಟು, ಹಲವು ಸಸ್ಯಗಳಿಂದ, ಹೊರಸೂಸುವ ರೆಸಿನ್ಸ್, ಎಣ್ಣೆಗಳು, ಸುವಾಸನೆ, ಪರಿಮಳ ಮತ್ತು ಸುಗಂಧ ರಾಸಾಯನಿಕಗಳು, ಊದಿನ ಕಡ್ಡಿ, ಕರಕುಶಲ, ತೆಂಗಿನ ಗರಿ, ಹುಲ್ಲು ಮತ್ತು ಔಷಧಿ ಸಸ್ಯಗಳು, ಕಟ್ಟಿಗೆ ರಹಿತ ಉತ್ಪಾದನೆಗಳು. ಸುಮಾರು 60% ಕಟ್ಟಿಗೆ ರಹಿತ ಉತ್ಪಾದಿತ ಉತ್ಪನ್ನಗಳನ್ನು ಪ್ರಾದೇಶಿಕ ಜನರು ಬಳಸುತ್ತಾರೆ. ಸುಮಾರು 50% ಆದಾಯವು ಭಾರತದಲ್ಲಿ ಕಟ್ಟಿಗೆ ರಹಿತ ಉತ್ಪಾದಿತ ಉತ್ಪನ್ನಗಳಿಂದ ಬರುತ್ತದೆ.

ಕೃಷಿಯ ಜೊತೆಗೆ ಅರಣ್ಯ ಬೆಳೆಸಿ ಹೆಚ್ಚಿನ ಆದಾಯ ಪಡೆಯಬಹುದು. ಭೂಮಿಯ ಗುಣ ಮತ್ತು ಹವಾಮಾನವನ್ನು ಆಧರಿಸಿ ವಿವಿಧ ಬಗೆಯ ಅರಣ್ಯಗಳನ್ನು ಹಾಗೂ ಮರಗಳನ್ನು ಬೆಳೆಸಬಹುದು. ಇದಕ್ಕೆ ಬೇಕಾದ ತರಬೇತಿಯನ್ನು ಅರಣ್ಯ ಇಲಾಖೆ ಹಾಗೂ ಕೃಷಿ ವಿಶ್ವವಿದ್ಯಾಲಯಗಳು ನೀಡುತ್ತಿವೆ.

**6) ಬ್ಯಾಂಕಿಂಗ್ :** ಬ್ಯಾಂಕಿಂಗ್ ಎಂದರೆ ವೈಯಕ್ತಿಕ ಹಾಗೂ ಸಂಸ್ಥೆಗಳಿಂದ ಹಣವನ್ನು ತೆಗೆದುಕೊಳ್ಳುವುದು ಹಾಗೂ ತೆಗೆದುಕೊಂಡ ಹಣವನ್ನು ಭದ್ರಪಡಿಸುವುದು ಅನಂತರ ಈ ಹಣವನ್ನು ಲಾಭದ ಉದ್ದೇಶಕ್ಕಾಗಿ ಬೇರೆ ಕಡೆ ತೊಡಗಿಸುವುದು. ದಿನಗಳೆದಂತೆ ವ್ಯವಹಾರ ಸಂಸ್ಥೆಗಳು ಮಾಡುವ ವ್ಯವಹಾರಗಳು ವಿಶಾಲವಾಗಿದೆ ಮತ್ತು ಬೇರೆ ಬೇರೆ ಸೌಲಭ್ಯಗಳನ್ನು ಬ್ಯಾಂಕುಗಳು ಒದಗಿಸುತ್ತವೆ. ಇವತ್ತಿನ ದಿನಗಳಲ್ಲಿ ಹಣಕಾಸು ಸಂಸ್ಥೆಯ ಸೇವೆಗಳೆಂದರೆ ಡೆಬಿಟ್ ಕ್ರೆಡಿಟ್ ಕಾರ್ಡ್, ಮೌಲ್ಯಯುತವಾದಂತಹ ವಸ್ತುಗಳಿಗೆ ರಕ್ಷಣೆ, ಲಾಕರ್ಸ್, ಎ.ಟಿ.ಎಂ.ಸೇವೆ ಮತ್ತು ದೇಶ ಹಾಗೂ ಜಗತ್ತಿನಾದ್ಯಂತ ಹಣವನ್ನು ಆನ್‌ಲೈನ್ ವರ್ಗಾವಣೆ ಮಾಡುವುದು.

ನಿಜವಾಗಿಯೂ ಬ್ಯಾಂಕುಗಳು ನಮ್ಮ ನಿತ್ಯ ಜೀವನದಲ್ಲಿ ಮೌನವಾಗಿ ಪ್ರಮುಖ ಪಾತ್ರವನ್ನು ವಹಿಸುತ್ತದೆ.ವ್ಯವಹಾರ ಸಂಸ್ಥೆಗಳು ಹಣಕಾಸಿನ ಮಧ್ಯಸ್ಥಿಕೆಯಿಂದಾಗಿ ಸಂಗ್ರಹಿಸಿದ ಹಣವನ್ನು ಬೇರೆ ಬೇರೆ ಕಡೆಗಳಲ್ಲಿ ಹೂಡಿಕೆ ಮಾಡಿ ಆರ್ಥಿಕತೆಯನ್ನು ಹೆಚ್ಚಿಸುವಂತೆ ಮಾಡುತ್ತವೆ.

ವ್ಯವಹಾರ ಸಂಸ್ಥೆಗಳು ಜಗತ್ತಿನ ಆರ್ಥಿಕತೆಗೆ ಐಶ್ವರ್ಯ ತರುವಂತೆ ಕೈ–ಜೋಡಿಸಿದೆ.ಹಣ ಉಳಿಸುವುದರಿಂದ ಹಣವನ್ನು ಪಡೆದು ಅದೇ ಹಣವನ್ನು ಸಾಲಗಾರರಿಗೆ ಕೊಟ್ಟು ಹಣಕಾಸಿನ



ಚಟುವಟಿಕೆಗಳು ನಡೆಯುವಂತೆ ಮಾಡಿ ಹಣ ಚಲಾವಣೆಯು ಸರಿಯಾದ ರೀತಿಯಲ್ಲಿ ಉಪಯೋಗ ಹಾಗೂ ಹೂಡಿಕೆಯನ್ನು ಮಾಡಿದೆ. ಇದರಿಂದಾಗಿ ಆರ್ಥಿಕತೆಯ ಅಭಿವೃದ್ಧಿ ಆಗುತ್ತದೆ. ಈ ಒಂದು ಬ್ಯಾಂಕಿಂಗ್ ವ್ಯವಸ್ಥೆ ಇಲ್ಲದಿದ್ದರೆ ಉಳಿತಾಯದ ಕಲ್ಪನೆ ಬರೆದೇ ಹಣ ನಮ್ಮ ಮನೆಯಲ್ಲಿಯೇ ಉಳಿಯುತ್ತಿತ್ತು. ಉದ್ದಿಮೆದಾರರು ಹಣವನ್ನು ಅಧಿಕಗೊಳಿಸುವ ಪರಿಸ್ಥಿತಿಯಲ್ಲಿ ಇರುತ್ತಿರಲಿಲ್ಲ. ಸಾಮಾನ್ಯ ಮನುಷ್ಯನಾದವನು ಹೊಸ ಕಾರಿಗಾಗಿ ಅಥವಾ ಮನೆಗಾಗಿ ಕನಸು ಕಾಣುವ ಅಥವಾ ಖರೀದಿಸುವ ಪರಿಸ್ಥಿತಿಯಲ್ಲಿ ಇರುತ್ತಿರಲಿಲ್ಲ.

**7)ಆಹಾರ ಸಂಸ್ಕರಣೆ :** ಆಹಾರ ಸಂಸ್ಕರಣೆ ಎಂದರೆ ಆಹಾರವನ್ನು ಬಳಕೆದಾರರಿಗೋಸ್ಕರ ತಯಾರಿಸುವ ಕ್ರಿಯೆ. ಹೆಚ್ಚಾಗಿ ಈ ಶಬ್ದವನ್ನು ಪೊಟ್ಟಣದ ಆಹಾರಗಳಿಗೆ ಬಳಸಲಾಗುತ್ತದೆ. ಆದರೆ ತಾಂತ್ರಿಕವಾಗಿ ಕಚ್ಚಾವಸ್ತುಗಳನ್ನು ಆಹಾರ ಸಂಸ್ಕರಣೆಗೆ, ಹಿತ್ತಲಿನ ತರಕಾರಿಗಳನ್ನು ಕತ್ತರಿಸಿ



ಅಂತರ್ಜಾಲದ ಮೂಲಕ ಬೇಡಿಕೆ ಇರುವ ಪೊಟ್ಟಣದ ಆಹಾರ ತಯಾರಿಕೆಯ ಸೌಲಭ್ಯಕ್ಕೆ ಬಳಸಲಾಗುತ್ತದೆ. ಈ ಆಹಾರ ಸಂಸ್ಕರಣೆ ಕಾರ್ಯಕ್ಷೇತ್ರದಲ್ಲಿ ಕೆಲಸ ಮಾಡುವಂತಹ ಬಹಳಷ್ಟು ಕೆಲಸಗಾರರು ನೈಪುಣ್ಯತೆಯನ್ನು ಹೊಂದಿದ ದುಡಿಮೆಗಾರರಾಗಿರುವುದಿಲ್ಲ. ಆಹಾರ ಸಂರಕ್ಷಣೆಗಾಗಿ ಬಹಳಷ್ಟು ಉದ್ದೇಶಗಳಿವೆ. ಆಹಾರ ತಯಾರಿಸುವುದರ ಮೂಲ ಉದ್ದೇಶ ಬಾಯಿಗೆ ರುಚಿಯಾಗಿರಬೇಕು. ಸಂಸ್ಕರಣೆಯಲ್ಲಿ ಒಳಗೊಂಡಿರುವಂತಹ ವಸ್ತುಗಳು ನೇರವಾಗಿ ತಿನ್ನಲು ಯೋಗ್ಯವಾಗಿರುವುದಿಲ್ಲ. ಪರಿಮಳಯುಕ್ತ ಪದಾರ್ಥಗಳು ಆಹಾರವನ್ನು ಅಲಂಕಾರಗೊಳಿಸುವುದು, ಆಹಾರಕ್ಕೆ ಸಂಬಂಧಪಟ್ಟಂತೆ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕೋರಿಕೆಗಳು, ಇದಕ್ಕೆ ಸಂಬಂಧಪಟ್ಟಂತೆ ಇತರ ವಿಷಯಗಳಾದ ಅಲರ್ಜಿ ಮುಂತಾದ ವಿಷಯಗಳ ಬಗ್ಗೆ ಕಾಳಜಿಯಿರಬೇಕು. ಆಹಾರ ಸಂಸ್ಕರಣೆಯ ಮುಖ್ಯ ಉದ್ದೇಶ ಆಹಾರವನ್ನು ಪೌಷ್ಠಿಕಗೊಳಿಸುವುದು. ಅಂದರೆ ಜೀವಸತ್ವ ಮತ್ತು ಮಿನರಲ್ಸ್‌ಗಳು ಪೌಷ್ಠಿಕತೆಯ ಮೌಲ್ಯವನ್ನುಹೆಚ್ಚಿಸುವುದು. ಸಂಸ್ಕರಣೆಯಿಂದ ಪದಾರ್ಥಗಳ ಮೌಲ್ಯ ವೃದ್ಧಿಯಾಗುವುದರ ಜೊತೆಗೆ ಹೆಚ್ಚಿನ ಆದಾಯವನ್ನು ಪಡಯಬಹುದಾಗಿದೆ. ಹಲವಾರು ಸಂಸ್ಥೆಗಳಿಂದ ಆಹಾರ ಸಂಸ್ಕರಣೆಯಲ್ಲಿ ತರಬೇತಿ ಪಡೆಯಬಹುದಾಗಿದೆ.

**8)ಮಾರುಕಟ್ಟೆ :** ಹೊಲದಿಂದ ಬಳಕೆದಾರನವರೆಗೆ ಕೃಷಿ ಉತ್ಪಾದನಾ ವಸ್ತುಗಳನ್ನುತಲುಪಿಸುವಂತಹವ್ಯವಸ್ಥೆಯನ್ನು ಮಾರುಕಟ್ಟೆ ಒಳಗೊಂಡಿರುತ್ತದೆ. ಇದರಲ್ಲಿ






ಬಹಳಷ್ಟು ಆಂತರಿಕ ಚಟುವಟಿಕೆಗಳಾದ ಉತ್ಪಾದನಾ ಯೋಜನೆ, ಬೆಳೆಯುವಿಕೆ ಹಾಗೂ ಕೊಯ್ಲುವಿಕೆ, ಯೋಗ್ಯತೆ, ಕಂತೆಕಟ್ಟುವಿಕೆ, ಸಾಗಾಣಿಕೆ, ಸಂಗ್ರಹ, ಕೃಷಿ ಮತ್ತು ಆಹಾರ ಸಂಸ್ಕರಣೆ, ವಿತರಣೆ, ಜಾಹಿರಾತು ಮತ್ತು ಮಾರುವಿಕೆ – ಮುಂತಾದವುಗಳನ್ನು ಹೊಂದಿರುತ್ತದೆ. ಇಂತಹ ಚಟುವಟಿಕೆಗಳು ಮಾಹಿತಿಗಳ ಬದಲಾವಣೆ ಮತ್ತು ಸರಿಯಾದ ಹಣಕಾಸಿನ ವ್ಯವಸ್ಥೆಯ ಅಗತ್ಯದ ಮೇಲೆ ನಿರ್ಭರಿತವಾಗಿರುತ್ತದೆ. ಮಾರುಕಟ್ಟೆಯ ವ್ಯವಸ್ಥೆ ಕ್ರಿಯಾತ್ಮಕವಾಗಿರುತ್ತದೆ. ಅದು ಸ್ಪರ್ಧಾತ್ಮಕ ಹಾಗೂ ನಿರಂತರವಾದ ಬದಲಾವಣೆಯನ್ನು ಮತ್ತು ಪ್ರಗತಿಯನ್ನು ಹೊಂದಿರುತ್ತದೆ.

ಕಡಿಮೆದರದ ವ್ಯವಹಾರಗಳು ಹೆಚ್ಚು ಗುಣಕಾರಿ ಮತ್ತು ಗುಣಮಟ್ಟದ ಉತ್ಪಾದನೆಯನ್ನು ನೀಡುವುದರಿಂದ ಅವು ಹೆಚ್ಚು ಉಚ್ಛ್ರಾಯ ಸ್ಥಿತಿಯಲ್ಲಿರುತ್ತವೆ. ಯಾವುದಕ್ಕೆ ಹೆಚ್ಚು ಬೆಲೆಯಿದೆಯೋ ಅವು ಮಾರುಕಟ್ಟೆಯ ಅಗತ್ಯಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳಲು ಸಫಲವಾಗುತ್ತವೆ ಹಾಗೂ ಕಡಿಮೆ ಗುಣಮಟ್ಟದ ಉತ್ಪಾದನೆಗಳು ವ್ಯವಹಾರದಿಂದ ಹೊರ ಉಳಿಯುತ್ತವೆ.

ಮಾರುಕಟ್ಟೆ ಗ್ರಾಹಕನ ಪರವಾಗಿರಬೇಕು ಹಾಗೂ ರೈತ, ಸಾಗಾಣಿಕೆದಾರ, ವ್ಯವಹಾರಗಾರ, ಕಾರ್ಯವಿಧಾನಗಾರ ಮುಂತಾದವರಿಗೆ ಲಾಭವನ್ನು ಒದಗಿಸಿಕೊಡುವಂತಿರಬೇಕು. ಈ ಮಾರುಕಟ್ಟೆಯ ಸರಪಳಿಯಲ್ಲಿ ಬಂಧಿತರಾದವರೆಲ್ಲ ಖರೀದಿಸುವವರ ಅವಶ್ಯಕತೆಗನುಗುಣವಾಗಿ ಉತ್ಪಾದನೆ ಮತ್ತು ವ್ಯವಹಾರ ನಿಯಮಗಳನ್ನು ಅರಿತುಕೊಂಡಿರಬೇಕು.

ಮಾರಾಟ ಮಾಡುವುದು ಒಂದು ಕಲೆ.ಇತ್ತೀಚಿನ ದಿನಗಳಲ್ಲಿ ಅಂತರ್ಜಾಲದ ಮೂಲಕ ಮತ್ತು ಇ–ಟೆಂಡರ್ ಪದ್ಧತಿಯ ಮೂಲಕ ದೇಶದ ಯಾವುದೇ ಭಾಗದ ಖರೀದಿದಾರರ ಸಂಪರ್ಕವನ್ನು ಹೊಂದಿ ಹೆಚ್ಚಿನ ಬೆಲೆಗೆ ಹುಟ್ಟುವಳಿಗಳನ್ನು ಮಾರಾಟ ಮಾಡಬಹುದಾಗಿದೆ. ಈ ಕೌಶಲ್ಯಗಳನ್ನು ಅರಿತುಕೊಳ್ಳುವುದು ಅವಶ್ಯಕ.

**9) ರಫ್ತು** : ದೇಶದಿಂದ ಸಾಮಾನುಗಳನ್ನು ಹೊರದೇಶಕ್ಕೆ ಸಾಗಿಸುವುದನ್ನು ರಫ್ತು ಎನ್ನಲಾಗುವುದು. ದೇಶದಿಂದ ಸಾಮಾನುಗಳನ್ನು ಹೊರ ಸಾಗಿಸುವುದನ್ನು ರಫ್ತುಗಾರ ಅಥವಾ ಎಕ್ಸ್‌ಪೋರ್ಟರ್ ಎನ್ನುವರು. ಅದೇ ರೀತಿ ಹೊರ ದೇಶದಿಂದ ಸಾಮಾನುಗಳನ್ನು ಬರಮಾಡಿಕೊಳ್ಳುವುದನ್ನು ಆಮದುಗಾರ ಅಥವಾ ಇಂಪೋರ್ಟರ್ ಎನ್ನಲಾಗುವುದು. ಅಂತಾರಾಷ್ಟ್ರೀಯ ವ್ಯಾಪಾರದಲ್ಲಿ 'ರಫ್ತು' ಎಂದರೆ ಸಾಮಾನುಗಳನ್ನು ಮಾರಾಟ ಮಾಡುವುದು ಮತ್ತು ಸ್ವಂತದೇಶದಿಂದ ಬೇರೆ ದೇಶದ ಮಾರುಕಟ್ಟೆಗೆ ಸೇವೆಯನ್ನು ಒದಗಿಸುವುದು. ರಫ್ತು ಮತ್ತು ಆಮದು ಕುರಿತು ಕರ್ನಾಟಕದಲ್ಲಿ ವಿಶ್ವೇಶ್ವರಯ್ಯ ಟ್ರೇಡ್



ಪ್ರೊಮೋಶನ್ ಸೆಂಟರ್ (ವ್ಹಿ.ಟಿ.ಪಿ.ಸಿ) ಕೆಪೆಕ್, ಅಪೇಡಾ ಮುಂತಾದ ಸಂಸ್ಥೆಗಳು ಮಾರ್ಗದರ್ಶನ ಮತ್ತು ತರಬೇತಿ ನೀಡುತ್ತವೆ. ತರಬೇತಿ ಪಡೆದವರು ಈ ಚಟುವಟಿಕೆಯನ್ನು ವ್ಯವಹಾರವನ್ನಾಗಿ ನಡೆಸಬಹುದಾಗಿದೆ.

**10) ಮೊಬೈಲ್ ಮತ್ತು ಅಂತರ್ಜಾಲ ತಂತ್ರಜ್ಞಾನ** : ಇಂದಿನ ಬದಲಾಗುತ್ತಿರುವ ದಿನಗಳಲ್ಲಿ ರೈತರು, ವಿಜ್ಞಾನಿಗಳು, ವಿದ್ಯಾರ್ಥಿಗಳು ಮತ್ತು ಇತರ ಕೃಷಿ ಸಂಬಂಧಿಸಿದ ಸಂಸ್ಥೆಗಳು ಮೊಬೈಲ್ ಮತ್ತು ಅಂತರ್ಜಾಲ ತಂತ್ರಜ್ಞಾನ ಅನೇಕ ಕ್ಷೇತ್ರಗಳಲ್ಲಿ ಬಳಸಬಹುದಾಗಿದೆ.

ಜಾಗತಿಕವಾಗಿ ದೊರೆಯುವ ನೂತನ ತಂತ್ರಜ್ಞಾನವನ್ನು ತ್ವರಿತವಾಗಿ ಪಡೆದುಕೊಂಡು ಉತ್ಪಾದನಾ ಕ್ಷೇತ್ರ, ಸಂಸ್ಕಾರಣೆ, ಮಾರಾಟ, ವಿತರಣೆ ಹಾಗೂ ರಫ್ತು ಕ್ಷೇತ್ರಗಳಲ್ಲಿ ಗಣನೀಯವಾದ ಯಶಸ್ಸು ಕಾಣಬಹುದಾಗಿದೆ. ಈ ದಿಶೆಯಲ್ಲಿ ಸೂಕ್ತವಾದ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದವರಿಗೆ ಜ್ಞಾನಾಭಿವೃದ್ಧಿ ಮತ್ತು ನೈಪುಣ್ಯತೆಯನ್ನು ಹೆಚ್ಚಿಸುವ ಕಾರ್ಯ ತ್ವರಿತಗತಿಯಿಂದ ನಡೆಯಬೇಕಾಗಿದೆ.

ಕೃಷಿ ವೃತ್ತಿಕಾರರುಈ ಕೆಳಗಿನ ನಾಲ್ಕು ಪ್ರಮುಖ ಕೌಶಲ್ಯಗಳನ್ನು ರೂಢಿಯಲ್ಲಿ ತಂದರೆ ಯಶಸ್ವಿಯಾಗಲು ಸಾಧ್ಯ.

**1. ಹೊಂದಾಣಿಕೆ** : ಈ ಕೌಶಲ್ಯವು ಕೈಗಾರಿಕೆಯಿಂದ ಕೈಗಾರಿಕೆಗೆ ವರ್ಗಾವಣೆಯಾಗುವಂತದ್ದು. ಆದರೆ ಕೃಷಿಯಲ್ಲಿ ವೃತ್ತಿಸಾಧನೆ ಮಾಡಬೇಕೆಂದು ಯೋಚಿಸಿದರೆ ಹೊಂದಾಣಿಕೆ ಬಹು ಮುಖ್ಯವಾದದ್ದು.

ಶಾಲೆಯಲ್ಲಿ ಕಲಿತದ್ದು ಹಾಗೂ ವೃತ್ತಿ ಅನುಭವ ವಿಭಿನ್ನವಾಗಿರುತ್ತದೆ. ಉದಾಹರಣೆಗೆ, ತರಗತಿಯಲ್ಲಿ ಮಣ್ಣಿನ ಬಗ್ಗೆ ಅಧ್ಯಯನ ನಡೆಸುವುದು ಹಾಗೂ ಪ್ರಾಯೋಗಿಕವಾಗಿ ಮಣ್ಣಿನ ವಿಶ್ಲೇಷಣೆ ಮಾಡುವುದು ಪ್ರತಿಯೊಬ್ಬರ ಮೌಲ್ಯಮಾಪನದಲ್ಲಿ ಯಶಸ್ವಿ ಹಾಗೂ ವಿಫಲ ವ್ಯತ್ಯಾಸಗಳನ್ನು ಕಾಣಬಹುದು.

ಕೃಷಿ ವ್ಯವಹಾರದಲ್ಲಿ ಹೊಂದಾಣಿಕೆ ಅಗತ್ಯ. ವೃತ್ತಿಗಾರನು ಹೊಸ ವಿಧಾನಗಳನ್ನು ಕಲಿತು ಗ್ರಾಹಕರ ಬದಲಾವಣೆಯ ಅಗತ್ಯಕ್ಕೆತಕ್ಕಂತೆ ಹೊಂದಿಕೊಳ್ಳಬೇಕು. ಹೊಸ ಆಕ್ಷೇಪಗಳನ್ನು ಎದುರಿಸುತ್ತಾ ಕೈಗಾರಿಕೆಗಳು ಕೂಡಾ ತ್ವರಿತವಾಗಿ ಬದಲಾಗುತ್ತಿದೆ. ಇದರರ್ಥವೇನೆಂದರೆ ಕೃಷಿ ವೃತ್ತಿಕಾರರು ಹೊಸ ಅಡೆ–ತಡೆಗಳನ್ನು ತಾಂತ್ರಿಕ ಆವಿಷ್ಕಾರಗಳನ್ನು ಅನುಸರಿಸಿ ಎದುರಿಸುವ ಹೊಸ ವಿಧಾನಗಳನ್ನು ಅನುಸರಿಸಬೇಕು. ಇದರ ಹೊರತಾಗಿ ಮುಂದೆ ಬರುವ ಆಕ್ಷೇಪಗಳ ಬಗ್ಗೆಭವಿಷ್ಯವನ್ನು ನುಡಿಯುವಂತಿರಬೇಕು.



**2. ಅಂತರ – ಸಂಬಂಧಗಳ ಕೌಶಲ್ಯ:** ಸರಪಳಿ ವ್ಯವಸ್ಥೆಯಲ್ಲಿ ಕಾರ್ಯ ಮಾಡುವ ಕೃಷಿ ವೃತ್ತಿಕಾರರಿಗೆ ಅಂತರ–ಸಂಬಂಧಗಳನ್ನು ಕಾಯ್ದುಕೊಳ್ಳುವುದು ಬಹುಮುಖ್ಯವಾದ ಕೌಶಲ್ಯ. ಕಚ್ಚಾ ವಸ್ತುಗಳನ್ನು ತಯಾರುಮಾಡುವ ರೈತರ ಜೊತೆಗೆ ಇವರು ಮೇಲಿಂದ ಮೇಲೆ ಸಂಬಂಧಗಳನ್ನು ಇಟ್ಟುಕೊಳ್ಳಬೇಕಾಗುತ್ತದೆ. ಮತ್ತು ಸರಕುಗಳನ್ನು ವ್ಯಾಪಾರ–ವಾಣಿಜ್ಯ ಸಂಸ್ಥೆಗಳಿಗೆ ತಲುಪಿಸಬೇಕಾಗುತ್ತದೆ.ಈ ಸಂಸ್ಥೆಗಳು ಈ ಸರಕುಗಳನ್ನು ಇನ್ನೊಂದು ಸ್ಥಳಕ್ಕೆ ತಯಾರಿಕೆಗೆ ಅಥವಾ ನೇರವಾಗಿ ಗ್ರಾಹಕರಿಗೆ ತಲುಪಿಸುತ್ತವೆ.

ಗ್ರಾಹಕರು ಮತ್ತು ಸರಕುಗಳನ್ನು ಕಳುಹಿಸುತ್ತಿರುವವರ ಅವಶ್ಯಕತೆಗಳ ಬಗ್ಗೆ ಕಾಳಜಿಯನ್ನು ಕೃಷಿ ವೃತ್ತಿಕಾರರು ವಹಿಸಬೇಕು. ಇದರಿಂದ ಎಲ್ಲ ತರಹದ ಅಗತ್ಯಗಳನ್ನು ಮತ್ತು ನಿಶ್ಚಿತ ಗುರಿಯನ್ನು ತಲುಪಬಹುದು. ಇದರಿಂದ ಸಂಬಂಧಗಳು ಬಹಳ ದಿನಗಳವರೆಗೆ ಉಳಿಯುತ್ತವೆ.



ಕೃಷಿ ಉದ್ಯಮದಲ್ಲಿ ಒಪ್ಪಂದ ಮಾಡಿಕೊಳ್ಳುವುದು ಬಹಳ ಮಹತ್ವದ್ದಾಗಿರುತ್ತದೆ. ರೈತರ ಸಂಘ ಮತ್ತು ಅವರ ಪರವಾಗಿ ಸಮಾಲೋಚಿಸುವ ಪಕ್ಷಗಳು ಸರಕಾರ ಮತ್ತು ದಲ್ಲಾಳಿಗಳು ಹಾಗೂ ಸ್ವತಂತ್ರ ಸಂಸ್ಥೆಗಳ ಜೊತೆ ಔಪಚಾರಿಕ ಹಾಗೂ ಅನೌಪಚಾರಿಕ ಸಂಭಾಷಣೆಯನ್ನು ಮಾಡುವಾಗ ಚಾಣಾಕ್ಷತೆಯನ್ನು ತೋರಿಸಬೇಕು. ಯಾರೂ ಸಾರ್ವಜನಿಕರ ಜೊತೆ ಸಂಬಂಧವನ್ನು ಹೊಂದಿದ್ದಾರೆಯೋ, ವ್ಯಾಪಾರ, ಜಾಹಿರಾತು ಅಥವಾ ಒಂದು ಕ್ಷೇತ್ರದಲ್ಲಿ ಪರಿಣಿತಿ ಹೊಂದಿದವರು ಅಂತರಸಂಬಂಧಗಳ ಕೌಶಲ್ಯವನ್ನು ತಿಳಿದಿರುವುದು ಅತ್ಯವಶ್ಯಕವಾಗಿದೆ.ತಂತ್ರ ಸಂವಹನ ಮಾಡುವ ಚಾಣಕ್ಯತೆಯನ್ನು ಹೊಂದಿರಬೇಕು.

**3) ಸಮಯ ನಿರ್ವಹಣೆ ಮತ್ತು ಸಂಘಟನಾ ಕೌಶಲ್ಯ :** ಶಾಲಾ ಕಾಲಾವಧಿಯಲ್ಲಿ ಈ ಕೌಶಲ್ಯವನ್ನು ಸಾಮಾನ್ಯವಾಗಿ ತಾವೆಲ್ಲರೂ ಕಲಿತಿರುತ್ತೀರಿ, ಕೃಷಿ ಉದ್ಯಮದಲ್ಲಿ ಏನನ್ನಾದರೂ ಸಾಧಿಸಲು ಹೊರಟರೆ ಸಮಯ ನಿರ್ವಹಣೆ ಮತ್ತು ಸಂಘಟನಾ ಕೌಶಲ್ಯವನ್ನು ಕಲಿತಿದ್ದರೆ ಬಹುದೊಡ್ಡ ಆಸ್ತಿ. ಕೃಷಿ ವೃತ್ತಿಕಾರರಿಗೆ ಸ್ಥಳದಿಂದ ಸ್ಥಳಕ್ಕೆ ಸಾಗಿಸುವ ಹಾಗೂ ಸಂಘಟನಾ ಕೌಶಲ್ಯ ಬಹಳ ಮುಖ್ಯ.ಈ ವೃತ್ತಾಕಾರರು ಕಚ್ಚಾವಸ್ತುಗಳನ್ನು ತೆಗೆದುಕೊಳ್ಳುವದು, ಸಂಗ್ರಹಿಸುವುದು ಹಾಗೂ ವಿತರಿಸುವುದನ್ನು ತಯಾರಕನಿಂದ, ಸಗಟು ವ್ಯಾಪಾರಿ ಹಾಗೂ ಗ್ರಾಹಕನವರೆಗೂ ಮುತುವರ್ಜಿಯಿಂದ ತಲುಪಿಸುವ ಜವಾಬ್ದಾರಿಯನ್ನು ಹೊಂದಿರಬೇಕು. ವಿಭಿನ್ನ ಗ್ರಾಹಕರು, ರೈತರು ಹಾಗೂ ಉತ್ಪನ್ನಗಳ ಜೊತೆ ಕಾರ್ಯ ನಿರ್ವಹಿಸುವುದು ಕೃಷಿ ವೃತ್ತಿಕಾರರಿಗೆ ಹೊಸದೇನಲ್ಲ.

ಸಂಕ್ಷಿಪ್ತವಾಗಿ ಹೇಳುವುದಾದರೆ ದೃಢವಾದ ಸಂಘಟನಾ ಕೌಶಲ್ಯವೇ ಒಬ್ಬ ಯಶಸ್ವಿ ಕೃಷಿವೃತ್ತಿಕಾರನ ಗುಣವಾಗಿರುತ್ತದೆ. ಯಂತ್ರಚಾಲಕರು, ರೈತರು, ದುಡಿಮೆಗಾರರಲ್ಲೂ ಸಮಯ ನಿರ್ವಹಣೆ ಮತ್ತು ಸಂಘಟನಾ ಕೌಶಲ್ಯ ಇರಬೇಕಾದದ್ದು ಬಹಳ ಮುಖ್ಯವಾಗಿದೆ. ಬಹಳಷ್ಟು ಸರಕುಗಳು ಕಾಲಕ್ಕೆ ತಕ್ಕಂತೆ ಅವಲಂಬಿತವಾಗಿರುವದರಿಂದ, ಹವಾಮಾನ ಮುಂತಾದ ವಿಷಯಗಳನ್ನು ಪರಿಗಣಿಸುತ್ತಾ, ಅವುಗಳ ಅವಶ್ಯಕತೆ ಇಲ್ಲದಾಗ್ಯೂ ಗ್ರಾಹಕ ಮತ್ತು ರೈತರ ವ್ಯವಹಾರವನ್ನು ಸರಿಯಾಗಿ ನೋಡಿಕೊಂಡು ಹೋಗುವಂತಿರಬೇಕು.

**4. ತಾಂತ್ರಿಕ ತಿಳಿವಳಿಕೆ :** ಮಾರುಕಟ್ಟೆಯಲ್ಲಿ ಪ್ರಸಿದ್ಧಿ ಪಡೆದ ಎಲ್ಲ ತಾಂತ್ರಿಕ ಸಲಕರಣೆಗಳನ್ನು ಖರೀದಿಸಬೇಕೆಂದಿಲ್ಲ. ಆದರೆ ತಾಂತ್ರಿಕತೆ ಕೃಷಿ ಉದ್ಯಮದಲ್ಲಿ ಮುಂದುವರಿಯುತ್ತಿದೆ ಇಲ್ಲವೋ ಎಂಬುದು ಬಹು ಮುಖ್ಯ.ನೀರಾವರಿ, ಕೀಟ ನಾಶಕಗಳ ಬಳಕೆ, ವ್ಯವಸಾಯದಲ್ಲಿ ಸುಧಾರಿತ ವಿಧಾನಗಳು ಮತ್ತು ಕೌಶಲ್ಯಗಳು, ಕೊಯ್ಲು ಸಂಗ್ರಹಿಸುವಿಕೆ ಮತ್ತು ಸಾಗಾಣಿಕೆ ಇವುಗಳೆಲ್ಲವನ್ನು ಕೃಷಿ ಉದ್ಯಮದಲ್ಲಿ ಬಹು ಮುಖ್ಯವಾಗಿ ಗಮನಿಸಬೇಕಾಗುತ್ತದೆ.

ಕೃಷಿ ವೃತ್ತಿಕಾರರು ತಾಂತ್ರಿಕ ಅಭಿವೃದ್ಧಿಯನ್ನು ಒಪ್ಪಿಕೊಳ್ಳಬೇಕು. ತಾಂತ್ರಿಕ ಅಭಿವೃದ್ಧಿಯನ್ನು ಕ್ಷಿಪ್ರವಾಗಿ ಒಪ್ಪಿಕೊಳ್ಳುವವರು ಹೆಚ್ಚಿನ ಉಪಯೋಗವನ್ನು ಪಡೆದುಕೊಳ್ಳುತ್ತಾರೆ. ಇದರರ್ಥ ಜನಪ್ರಿಯವಾದವುಗಳನ್ನೆಲ್ಲ ಒಪ್ಪಿಕೊಳ್ಳಬೇಕಂತಿಲ್ಲ. ಆದರೆ ರೈತರು ಹಾಗೂ ಕೃಷಿ ವೃತ್ತಿಕಾರರು ಯಾವ ಹೊಸ ತಾಂತ್ರಿಕ ಅಭಿವೃದ್ಧಿ ಕೃಷಿಯಲ್ಲಿ ನಡೆಯುತ್ತಿವೆ ಹಾಗೂ ಯಾವ ತಂತ್ರಗಳನ್ನು ತನ್ಮೂಲಕ ವ್ಯವಹಾರಗಳಲ್ಲಿ ಬಳಸಿದರೆ ಪರಿಣಾಮಕಾರಿಯಾಗಬಲ್ಲದು ಎಂಬುದರ ಅರಿವಿರಬೇಕು.

ಕೃಷಿ ಕ್ಷೇತ್ರದಲ್ಲಿ ಬೀಜ ಉತ್ಪಾದನೆ, ಕೃಷಿ ಹುಟ್ಟುವಳಿ ಉತ್ಪಾದನೆ, ಸಸ್ಯ ಸಂರಕ್ಷಣೆ, ಸಂಸ್ಕರಣೆ, ಕಟಾವು, ದಾಸ್ತಾನು, ವಿತರಣೆ, ಹಾಗೂ ರಫ್ತು ಕ್ಷೇತ್ರಗಳಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ರೈತರಿಗೆ ಮತ್ತು ರೈತ ಮಹಿಳೆಯರಿಗೆ ವಿಶ್ವವಿದ್ಯಾಲಯಗಳು ಹಾಗೂ ಕೃಷಿ ವಿಜ್ಞಾನ ಕೇಂದ್ರಗಳು ನೈಪುಣ್ಯತೆ ನೀಡುವಂತಹ ತರಬೇತಿಗಳನ್ನು ಹಮ್ಮಿಕೊಳ್ಳಬಹುದಾಗಿದೆ.

ಇದರ ಜೊತೆಗೆ ಪಶು ಸಂಗೋಪನೆ, ಅರಣ್ಯ ಬೆಳೆಸುವ ತರಬೇತಿ, ಮತ್ಸ್ಯೋದ್ಯಮ, ಜೇನು ಸಾಕಾಣಿಕೆ ಮುಂತಾದ ಕೃಷಿ ಪೂರಕ ಚಟುವಟಿಕಗಳಿಗೂ ಸೂಕ್ತ ತರಬೇತಿ ನೀಡಿ ನಮ್ಮ ಯುವ ಪೀಳಿಗೆಯನ್ನು ಕೃಷಿಯತ್ತ ಆಕರ್ಷಿಸಲು ಸಹಕಾರಿಯಾಗಬಹುದು.

ಇದಲ್ಲದೇ ಬ್ಯಾಂಕಿಂಗ್ ಕ್ಷೇತ್ರ, ಸಮಾಜ ಸೇವೆ, ಸಹಕಾರ ಕ್ಷೇತ್ರ, ಮಾರಾಟ ಮತ್ತು ರಫ್ತು ವಲಯಗಳಿಗೆ ಬೇಕಾದ ಮಾನವ ಸಂಪನ್ಮೂಲವನ್ನು ಸೂಕ್ತ ತರಬೇತಿಯ ಮೂಲಕ ವಿವಿಧ ಚಟುವಟಿಕೆಗಳನ್ನು ಕೈಗೊಳ್ಳಲು ಪ್ರೇರಿಪಿಸಿ ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುವುದರ ಜೊತೆಗೆ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸಬಹುದಾಗಿದೆ.

ದೇಶದಲ್ಲಿ ಸಾಕಷ್ಟು ಅವಕಾಶಗಳಿದ್ದು ನೈಪುಣ್ಯತೆಯಿಂದ ಜೀವನಮಟ್ಟ ಸುಧಾರಿಸುವುದರ ಜೊತೆಗೆ ದೇಶದ ಆರ್ಥಿಕ ಪ್ರಗತಿಗೂ ಪೂರಕವಾಗಿ ಕಾರ್ಯನಿರ್ವಹಿಸಬಹುದಾಗಿದೆ.ನಮ್ಮ ಯುವ ಪೀಳಿಗೆಯು ಸರಕಾರದ ಈ ಯೋಜನೆಯ ಸದುಪಯೋಗ ಪಡಿಸಿಕೊಂಡು ಇಪ್ಪತ್ತೊಂದನೆಯ ಶತಮಾನದ ಬಲಿಷ್ಠ ಭಾರತದ ನಿರ್ಮಾಣದಲ್ಲಿ ಪಾಲುಗಾರರಾಗಬೇಕಾಗಿದೆ. ❑

# ಯುವ ಶಕ್ತಿ : ಅವಕಾಶ ಮತ್ತು ಸವಾಲು

* ಡಾ. ಎಂ. ಲಕ್ಷ್ಮಣ



**ಜನಸಂಖ್ಯಾ ಸ್ಥಿತ್ಯಂತರ ಹಾಗೂ ವಯೋಮಾನ ಜನ ಸಂಖ್ಯೆಯಲ್ಲಿನ ಬದಲಾವಣೆ ಭಾರತದ ಅರ್ಥವ್ಯವಸ್ಥೆಯ ಮೇಲೆ ಗುರುತರವಾದ ಪ್ರಭಾವವನ್ನು ಬೀರಿದೆ. ಇದು ರಾಷ್ಟ್ರದ ಬೆಳವಣಿಗೆಗೆ ಕಾರಣವಾಗಿದೆ. ಬಹುತೇಕ ಕೃಷಿಯಾಧಾರಿತ ಆರ್ಥಿಕ ವ್ಯವಸ್ಥೆಯಿಂದ ಕೂಡಿದ ಭಾರತದ ಇಂದಿನ ನಗರೀಕರಣ ಹಾಗೂ ಕೈಗಾರೀಕರಣ ಅಂಶಗಳು ಕೂಡ ಅಭಿವೃದ್ಧಿಯ ಮೂಲಗಳಾಗಿವೆ.**

ಜನಗಣತಿಯ ಪ್ರಕಾರ 2011ರಲ್ಲಿ ಭಾರತದ ಒಟ್ಟು ಜನಸಂಖ್ಯೆ 121 ಕೋಟಿ, ಕಳೆದ ಹತ್ತು ವರ್ಷಗಳಲ್ಲಿ (2001–2011) ಹೆಚ್ಚಳವಾಗಿರುವ ಒಟ್ಟು ಜನಸಂಖ್ಯೆ ಸುಮಾರು 10 ಕೋಟಿ. ಭಾರತದ ಜನಸಂಖ್ಯೆ ಇತ್ತೀಚಿನ ದಶಕಗಳಲ್ಲಿ ಹೆಚ್ಚಳವಾಗುತ್ತಿದ್ದರು ಬೆಳವಣಿಗೆಯ ಪ್ರಮಾಣದಲ್ಲಿ ಹತೋಟಿ ಹೊಂದಿದ್ದು, 1991–2001 ರ ದಶಕದಲ್ಲಿ ಶೇ 21 ರಷ್ಟಿದ್ದ ಜನಸಂಖ್ಯೆ ಬೆಳವಣಿಗೆಯ ದರ ಇತ್ತೀಚಿನ ದಶಕಗಳಲ್ಲಿ 2001–2011ಅವಧಿಗೆ ಇದು ಶೇ 17 ಕ್ಕೆ ಕುಸಿದಿದೆ. ಭಾರತ ಸರ್ಕಾರ ಹಾಗೂ ರಾಜ್ಯಸರ್ಕಾರಗಳು ಕೈಗೊಂಡ ಜನಸಂಖ್ಯಾ ನೀತಿ, ಸಾಮಾಜಿಕ ಮತ್ತು ಆರ್ಥಿಕ ಪ್ರಗತಿ, ಆರೋಗ್ಯ ಸೇವೆಗಳು ಜನಸಂಖ್ಯಾ ಬೆಳವಣಿಗೆಯ ಮೇಲೆ ಪ್ರತ್ಯಕ್ಷವಾಗಿ ಪ್ರಭಾವ ಬೀರಿದ್ದು ಭಾರತದಲ್ಲಿ ಪ್ರತಿ ವಿವಾಹಿತ ಮಹಿಳೆ ತನ್ನ ಪ್ರಜನನ ಅವಧಿಯಲ್ಲಿ ಪಡೆಯುವ ಮಕ್ಕಳ ಸಂಖ್ಯೆ 1991 ರಲ್ಲಿ ಸರಾಸರಿ 4 ರಿಂದ 5 ರಷ್ಟಿದ್ದು ಈ ಪ್ರಮಾಣ ಇತ್ತೀಚಿಗೆ (2011) ಬಹುತೇಕ 2 ಕ್ಕೆ ಕುಸಿದಿರುವುದು ಜನಸಂಖ್ಯೆ ಬೆಳವಣಿಗೆಯ ಪ್ರಮಾಣದಲ್ಲಿ ಭಾರಿ ಕುಸಿತ ಕಾಣಲು ಕಾರಣವಾಗಿದೆ.

ಈ ಗುರುತರವಾದ ಅಂಶ ವಯೋಮಾನ ಜನಸಂಖ್ಯೆ ಹಂಚಿಕೆಯ ಮೇಲೆ ಪ್ರಭಾವ ಬೀರಿ ಇತ್ತೀಚಿನ ದಶಕಗಳಲ್ಲಿ ಒಟ್ಟು ಜನಸಂಖ್ಯೆಯಲ್ಲಿ, ಮಕ್ಕಳಸಂಖ್ಯೆಯಲ್ಲಿ, (ವಯೋಮಾನ 0–6) ಕುಸಿತ ಕಾಣುತ್ತಿದ್ದು, ಇನ್ನೊಂದೆಡೆ ಯುವಜನತೆ ಮತ್ತು ಕೆಲಸಗಾರರ ಹಾಗೂ ವಯಸ್ಕರ ಜನಸಂಖ್ಯೆಯಲ್ಲಿ ಭಾರಿ ಹೆಚ್ಚಳ ಕಂಡಿದೆ. ಇದನ್ನು ನಾವು ಡೆಮೊಗ್ರಫಿಕ್ ಡಿವಿಡೆಂಟ್, ಏಕೊನೊಮಿಕ್ ಡೆವಲಪ್‌ಮೆಂಟ್ ಎಂದು ವಿಶ್ಲೇಷಿಸಲಾಗುತ್ತಿದೆ. ಭಾರತದ ಮಟ್ಟಿಗೆ ಇದೊಂದು ವರದಾನವಾಗಿದ್ದು, ವಿಶ್ವದ ರಾಷ್ಟ್ರಗಳ ಪೈಕಿ ಅತಿ ಹೆಚ್ಚು ಜನಸಂಖ್ಯಾ ಗಾತ್ರವನ್ನು ಹೊಂದಿರುವ ನೆರೆರಾಷ್ಟ್ರ ಚೀನಾದ ನಂತರ ಭಾರತ 2 ನೇ ಸ್ಥಾನದಲ್ಲಿದೆ. ಆದರೆ ಒಂದು ಅಂದಾಜಿನ ಪ್ರಕಾರ 2025 ರ ವೇಳೆಗೆ ಭಾರತದ ಜನಸಂಖ್ಯೆ ಚೀನಾ ದೇಶದ ಜನಸಂಖ್ಯೆಗಿಂತಲೂ ಹೆಚ್ಚಳವಾಗಿ, ಚೀನಾ ರಾಷ್ಟ್ರವನ್ನು ಭಾರತ ಹಿಂದಿಕ್ಕಲಿದೆ.

ಈ ಸಂದರ್ಭದಲ್ಲಿ ಭಾರತ ಜನಸಂಖ್ಯೆಯಲ್ಲಿ ಹೆಚ್ಚಳ ಕಂಡರೂ, ವಯೋಮಾನ ಜನಸಂಖ್ಯೆಯ ರಚನೆ ಆ ರಾಷ್ಟ್ರದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ದೃಷ್ಟಿಯಲ್ಲಿ ಮುಖ್ಯವಾದದ್ದು ಯಾವುದೇ ಪ್ರದೇಶದಲ್ಲಿ ಮಕ್ಕಳ ಹಾಗೂ ವಯಸ್ಕರ ಪ್ರಮಾಣ ಹೆಚ್ಚಳವಾಗಿದ್ದರೆ ಈ ಅಂಶ ಅಲ್ಲಿನ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯ ಮೇಲೆ ಪರಿಣಾಮ ಬೀರುತ್ತದೆ. ಏಕೆಂದರೆ ಅಲ್ಲಿನ ಸರ್ಕಾರಗಳು, ಮಕ್ಕಳ ವಿದ್ಯಾಭ್ಯಾಸಕ್ಕೆ ಹಾಗೂ ಮಹಿಳ ಮತ್ತು ಮಕ್ಕಳ ಆರೋಗ್ಯ ಕಲ್ಯಾಣಕ್ಕಾಗಿ ಹೆಚ್ಚು ಹಣವನ್ನು ವೆಚ್ಚ ಮಾಡಬೇಕಾಗುತ್ತದೆ. ಇನ್ನೊಂದೆಡೆ ಒಟ್ಟು ಜನಸಂಖ್ಯೆಯಲ್ಲಿ ಯುವಕರ/ ಕೆಲಸಗಾರರ ಸಂಖ್ಯೆ ಹೆಚ್ಚಳವಿದ್ದರೆ, ಈ ಅಂಶ ಆರ್ಥಿಕ ಮತ್ತು ಸಾಮಾಜಿಕ ಅಂಶಗಳ ಮೇಲೆ ಸಕಾರಾತ್ಮಕ ಹಾಗೂ ಗುಣಾತ್ಮಕ ಪರಿಣಾಮವನ್ನು ಬೀರಿ ಅರ್ಥಿಕ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ. ಈಗ ಭಾರತದ ಜನಸಂಖ್ಯಾ ಸ್ಥಿತ್ಯಂತರತೆಯಿಂದ ಒಟ್ಟು ಜನಸಂಖ್ಯೆಯಲ್ಲಿ ಯುವಕರ ಹಾಗೂ ಕೆಲಸಗಾರರ ಸಂಖ್ಯೆ ಹೆಚ್ಚಳವಾಗುತ್ತಿದೆ, ಈ ಅಂಶವನ್ನು ಸರ್ಕಾರ ಸಕಾರಾತ್ಮಕವಾಗಿ ಪರಿಗಣಿಸಿ ಇದರ ಉಪಯೋಗವನ್ನು

* ಅಸೋಸಿಯೇಟ್ ಪ್ರೊಫೆಸರ್, ಜನಸಂಖ್ಯಾ ಸಂಶೋಧನಾ ಕೇಂದ್ರ, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆ, ಬೆಂಗಳೂರು–72

| ಪಟ್ಟಿ 1 : ವಯೋವಾರು ಜನಸಂಖ್ಯೆ (ಭಾರತ 1991–2001 ಮತ್ತು 2014) | | | | | | | | | |
|---|---|---|---|---|---|---|---|---|---|
| | ಭಾರತ 1991 | | | ಭಾರತ 2001 | | | ಭಾರತ 2011 (ನಿರೀಕ್ಷಿತ) | | |
| | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು |
| ವಯೋ ಗುಂಪು | 838567936 | 435208158 | 403359778 | 1028610328 | 532156772 | 496453556 | 1192507000 | 617317000 | 575190000 |
| 0–14 | 312364662 | 161727446 | 150637216 | 363610812 | 189487322 | 174123490 | 346942000 | 182155000 | 164786000 |
| 15–29 | 222746891 | 114291884 | 108455007 | 273402415 | 141818687 | 131583728 | 341720000 | 179839000 | 161882000 |
| 30–44 | 153359693 | 80318310 | 73041383 | 200586426 | 103279358 | 97307068 | 243129000 | 123418000 | 119710000 |
| 45–59 | 88719892 | 46801198 | 41918694 | 111649882 | 58302516 | 53347366 | 162244000 | 83765000 | 78478000 |
| 60 – ಮೇಲ್ಪಟ್ಟು | 56681640 | 29363725 | 27317915 | 76622321 | 37768327 | 38853994 | 98472000 | 48140000 | 50334000 |
| ಮೂಲ : ಜನಗಣತಿ ಹಾಗೂ ಜನಸಂಖ್ಯಾ ಕುರಿತ ರಾಷ್ಟ್ರೀಯ ಆಯೋಗ ವರದಿಗಳು | | | | | | | | | |

ಸದ್ಬಳಕೆ ಮಾಡಿಕೊಳ್ಳುವ ಅವಶ್ಯಕತೆ ಭಾರತಕ್ಕಿದೆ. ಇಂತಹುದೆ ಅನುಭವವನ್ನು ಪ್ರಗತಿಶೀಲ ರಾಜ್ಯ ಕರ್ನಾಟಕದಲ್ಲಿ ಇತ್ತೀಚಿನ ದಶಕಗಳಲ್ಲಿ ಮನಗಾಣಬಹುದಾಗಿದೆ. ಪ್ರಸ್ತುತ ಲೇಖನ ಭಾರತದ ಹಾಗೂ ನಿರ್ದಿಷ್ಟವಾಗಿ ಕರ್ನಾಟಕದ ಯುವಜನತೆ ಬೆಳವಣಿಗೆ ಹಾಗೂ ಪ್ರಮಾಣವನ್ನು ಅಳೆಯುವುದರ ಮೂಲಕ ಕೌಶಲ್ಯ ಭಾರತದಲ್ಲಿ ಹಾಗೂ ಕರ್ನಾಟಕದಲ್ಲಿ ಯುವಜನತೆಯಿಂದ ಮತ್ತು ದುಡಿಯುವ ವರ್ಗದ ಜನಸಂಖ್ಯೆಯಿಂದ ಭಾರತಕ್ಕೆ ಸಿಗುವ ಲಾಭವನ್ನು ಹಾಗೂ ಇದರ ಅವಕಾಶಗಳನ್ನು ವಿಶ್ಲೇಷಿಸುವ ಮೂಲಕ ಮುಂದಿನ ಸವಾಲುಗಳನ್ನು ಕೂಡ ಗಮನಕ್ಕೆ ತರಲಾಗಿದೆ. ಭಾರತದ ಒಟ್ಟು 121 ಕೋಟಿ ಜನಸಂಖ್ಯೆಯಲ್ಲಿ ಸುಮಾರು 80 ಕೋಟಿ ಜನರು ಕೆಲಸಗಾರರಿದ್ದಾರೆ ಇದು ನಿಜಕ್ಕೂ ದೇಶದ ಸಮಗ್ರ ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿದ್ದು, ಈ ಸಂದರ್ಭದಲ್ಲಿ ಈ ವರ್ಗದ ಜನ ಯಾವತರಹದ ಕೌಶಲ್ಯತೆಯನ್ನು ಹೊಂದಿದ್ದಾರೆ ಎಂಬುದನ್ನು ತಿಳಿಯುವುದು ಇಲ್ಲಿ ಬಹು ಮುಖ್ಯವಾದ ಅಂಶ. ಭಾರತದ ಒಟ್ಟು ಕೆಲಸಗಾರರ ಪೈಕಿ ಶೇ 92 ರಷ್ಟು ಕೆಲಸಗಾರರು ಅಸಂಘಟಿತ ವಲಯದಲ್ಲಿ ಉದ್ಯೋಗಿಗಳಾಗಿದ್ದು, ಇವರಲ್ಲಿ ಕೌಶಲ್ಯತೆ ಮತ್ತು ಪರಿಣಿತಿಯನ್ನು ಹೊಂದಿರುವ ಕೆಲಸಗಾರರು ಸುಮಾರು ಶೇ 20 ಎಂಬುದು ಅಂದಾಜಿಸಬಹುದು.

ಈ ಸಂಬಂಧ ಭಾರತ 2008 ರಲ್ಲಿ ಅಂದಿನ ಪ್ರಧಾನ ಮಂತ್ರಿಯವರಿಂದ ರಾಷ್ಟ್ರೀಯ ಕೌಶಲ್ಯ ಅಭಿವೃದ್ದಿ ಸಹಕಾರ ಮಂಡಳಿಯನ್ನು [ಎ ನ್ಯಾಷನಲ್ ಸ್ಕಿಲ್ ಡೆವಲಪ್‌ಮೆಂಟ್ ಕೋ–ಆರ್ಡಿನೇಷನ್ ಬೋರ್ಡ್ (ಎನ್‌ಎಸ್‌ಡಿಸಿಬಿ)] ಸ್ಥಾಪಿಸುವ ಮೂಲಕ 2022 ರ ವೇಳೆಗೆ ಸರಿ ಸುಮಾರು 700 ದಶ ಲಕ್ಷ ಜನರನ್ನು ಕೌಶಲ್ಯತೆ ಪರಿಣಿತಿಯನ್ನು ಸಾಧಿಸುವ ಗುರಿ ಹೊಂದಲಾಗಿದೆ. ದೇಶದಲ್ಲಿ ಸಂಬಂಧ ಪಟ್ಟ ರಾಜ್ಯಗಳು ಈ ಬಗ್ಗೆ ಕೈ ಜೋಡಿಸಿ ಇದರ ಗುರಿ ಮುಟ್ಟಲು ಪ್ರಯತ್ನ ನಡೆಸಿವೆ.

### ಯುವಜನ ಸಂಖ್ಯೆಯಲ್ಲಿ ಬದಲಾವಣೆ : ಒಂದು ನೋಟ

ಕೋಷ್ಟಕ 1 ರಲ್ಲಿ ನೀಡಲಾಗಿರುವ ವಯೋಮಾನ ಜನಸಂಖ್ಯೆಯ ವಿವರಗಳನ್ನು ಪರಿಶೀಲಿಸಿ ನೋಡಿದರೆ, ಭಾರತ 1991 ರಲ್ಲಿ ಒಟ್ಟು 83.85 ಕೋಟಿ ಜನಸಂಖೆಯನ್ನು ಹೊಂದಿದ್ದು ಇದರಲ್ಲಿ ಯುವಜನತೆಯ ಪಾಲು ಶೇ 26.56 ಅಂದರೆ ಒಟ್ಟು ಜನಸಂಖ್ಯೆಯಲ್ಲಿ ಯುವಜನಸಂಖ್ಯೆಯ ಗಾತ್ರ ಸುಮಾರು 22.27 ಕೋಟಿ. 2011 ರ ವೇಳೆಗೆ ಈ ಜನಸಂಖ್ಯೆ ಗಾತ್ರ 34.17 ಕೋಟಿ. ದೇಶದ ಒಟ್ಟು ಜನಸಂಖ್ಯೆಯಲ್ಲಿ ಯುವಜನತೆಯ ಪಾಲು ಶೇ 28. ಇನ್ನೊಂದೆಡೆ ಕೆಲಸಗಾರರ ದೃಷ್ಟಿಯಲ್ಲಿ ಭಾರತದ ಯುವಜನತೆ ಮತ್ತು ಕೆಲಸಗಾರರ ಜನಸಂಖ್ಯೆಯನ್ನು ಒಟ್ಟಾಗಿ ಕ್ರೋಢೀಕರಿಸಿ ನೋಡಿದರೆ 1991 ರಲ್ಲಿ ಶೇ 45 ರಷ್ಟಿದ್ದ ಈ ಪ್ರಮಾಣ 2011 ರಲ್ಲಿ ಶೇ 50 ರಷ್ಟಿದೆ. ಕೆಲಸಗಾರರ ಪ್ರಮಾಣವನ್ನು

| ಪಟ್ಟಿ 1 (ಅ) 2 : ವಯೋವಾರು – ಶೇಕಡ ಜನಸಂಖ್ಯೆ (ಭಾರತ 1991, 2001 ಮತ್ತು 2011) | | | | | | | | | |
|---|---|---|---|---|---|---|---|---|---|
| | ಭಾರತ 1991 | | | ಭಾರತ 2001 | | | ಭಾರತ 2011 (ನಿರೀಕ್ಷಿತ) | | |
| | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು |
| ವಯೋ ಗುಂಪು | | | | | | | | | |
| 0–14 | 37.24 | 37.16 | 37.34 | 35.34 | 35.6 | 35.07 | 29.09 | 29.5 | 28.64 |
| 15–29 | 26.56 | 26.26 | 26.88 | 26.57 | 26.64 | 26.5 | 28.65 | 29.13 | 28.14 |
| 30–44 | 18.28 | 18.45 | 18.1 | 19.5 | 19.4 | 19.6 | 20.38 | 19.99 | 20.81 |
| 45–59 | 10.57 | 10.75 | 10.39 | 10.85 | 10.95 | 10.74 | 13.6 | 13.56 | 13.64 |
| 60 – ಮೇಲ್ಪಟ್ಟು | 6.75 | 6.74 | 6.77 | 7.44 | 7.09 | 7.82 | 8.25 | 7.79 | 8.75 |
| ಮೂಲ : ಜನಗಣತಿ ಹಾಗೂ ಜನಸಂಖ್ಯಾ ಕುರಿತ ರಾಷ್ಟ್ರೀಯ ಆಯೋಗ ವರದಿಗಳು | | | | | | | | | |

| ಪಟ್ಟಿ 2 : ವಯೋವಾರು ಜನಸಂಖ್ಯೆ (ಕರ್ನಾಟಕ 1991–2001 ಮತ್ತು 2014) | | | | | | | | | |
|---|---|---|---|---|---|---|---|---|---|
| | ಕರ್ನಾಟಕ 1991 | | | ಕರ್ನಾಟಕ 2001 | | | ಕರ್ನಾಟಕ 2011 (ನಿರೀಕ್ಷಿತ) | | |
| | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು |
| ವಯೋಗುಂಪು | 44977201 | 22951917 | 22025284 | 52850562 | 26898918 | 25951644 | 59419000 | 30140000 | 29278000 |
| 0–14 | 16198943 | 8209047 | 7989896 | 16845601 | 8620186 | 8225415 | 15084000 | 7745000 | 7338000 |
| 15–29 | 12293989 | 6201913 | 6092076 | 14846116 | 7598566 | 7247550 | 16811000 | 8694000 | 8117000 |
| 30–44 | 8352376 | 4327451 | 4024925 | 10797740 | 5481220 | 5316520 | 13117000 | 6568000 | 6548000 |
| 45–59 | 4744992 | 2518055 | 2226937 | 6247239 | 3246519 | 3000720 | 9944000 | 4534000 | 4409000 |
| 60 – ಮೇಲ್ಪಟ್ಟು | 3142708 | 1560771 | 1581937 | 4062022 | 1923730 | 2138292 | 4463000 | 2599000 | 2866000 |
| ಮೂಲ : ಜನಗಣತಿ ಹಾಗೂ ಜನಸಂಖ್ಯಾ ಕುರಿತ ರಾಷ್ಟ್ರೀಯ ಆಯೋಗ ವರದಿಗಳು | | | | | | | | | |

| ಪಟ್ಟಿ 2 (ಅ) : ವಯೋವಾರು ಶೇಕಡ ಜನಸಂಖ್ಯೆ (ಕರ್ನಾಟಕ 1991–2001 ಮತ್ತು 2014) | | | | | | | | | |
|---|---|---|---|---|---|---|---|---|---|
| | ಕರ್ನಾಟಕ 1991 | | | ಕರ್ನಾಟಕ 2001 | | | ಕರ್ನಾಟಕ 2011 (ನಿರೀಕ್ಷಿತ) | | |
| | ಒಟ್ಟು % | ಗಂಡು % | ಹೆಣ್ಣು % | ಒಟ್ಟು % | ಗಂಡು % | ಹೆಣ್ಣು % | ಒಟ್ಟು % | ಗಂಡು % | ಹೆಣ್ಣು % |
| ವಯೋಗುಂಪು | | | | | | | | | |
| 0–14 | 36.01 | 35.76 | 36.27 | 31.87 | 32.04 | 31.69 | 25.38 | 25.69 | 25.06 |
| 15–29 | 27.33 | 27.02 | 27.65 | 28.09 | 28.24 | 27.92 | 28.29 | 28.84 | 27.72 |
| 30–44 | 18.57 | 18.85 | 18.27 | 20.43 | 20.37 | 20.48 | 22.07 | 21.79 | 22.36 |
| 45–59 | 10.54 | 10.97 | 10.11 | 11.82 | 12.06 | 11.56 | 16.73 | 15.04 | 15.05 |
| 60 – ಮೇಲ್ಪಟ್ಟು | 6.98 | 6.8 | 7.18 | 7.68 | 7.15 | 8.23 | 7.51 | 8.62 | 9.78 |
| ಮೂಲ : ಜನಗಣತಿ ಹಾಗೂ ಜನಸಂಖ್ಯಾ ಕುರಿತ ರಾಷ್ಟ್ರೀಯ ಆಯೋಗ ವರದಿಗಳು | | | | | | | | | |

ನಿರ್ದಿಷ್ಟವಾಗಿ ತಿಳಿಯುವುದಾದರೆ, ವಯೋಮಾನ ಜನಸಂಖ್ಯಾ 15–29,30–44 ಮತ್ತು 45–59 ವರ್ಷದ ವಯೋಮಾನ ಜನಸಂಖ್ಯೆಯನ್ನು ಒಟ್ಟಾಗಿ ಕ್ರೋಢೀಕರಿಸಿ ನೋಡಿದರೆ 1991 ರಲ್ಲಿ ಶೇ 56 ರಷ್ಟಿದ್ದ ಈ ಪ್ರಮಾಣ 2011 ರ ಅವಧಿಯಲ್ಲಿ ಶೇ. 63.64. ಈ ಕಾರಣದಿಂದಾಗಿಯೇ ಇತ್ತೀಚಿಗೆ ಭಾರತವನ್ನು ಯುವಭಾರತ ಎಂದು ಬಿಂಬಿಸಲಾಗುತ್ತಿದೆ.

ಈ ನಿರ್ದಿಷ್ಟ ವಿಷಯದ ಅಂಕಿ ಅಂಶಗಳನ್ನು ಕರ್ನಾಟಕದ ಬಗ್ಗೆ ಕೋಷ್ಟಕ 2 ರಲ್ಲಿ ನೀಡಲಾಗಿದೆ. ದೇಶದ ದಕ್ಷಿಣ ಭಾರತದ ರಾಜ್ಯಗಳ ಪೈಕಿ ಪ್ರಗತಿಪರ ರಾಜ್ಯವೆಂದು ಪರಿಗಣಿಸಿರುವ ಕರ್ನಾಟಕ ಸಾಮಾಜಿಕ ಮತ್ತು ಆರ್ಥಿಕ ಅಂಶಗಳ ಪ್ರಗತಿಯಲ್ಲಿ ದೇಶದ ಸರಾಸರಿಗಿಂತ ಮುಂದಿರುವುದು ರುಜುವಾತಾಗಿದೆ. ಹಾಗೆಯೇ ಯುವ ಜನಸಂಖ್ಯೆಯ ಪಾಲಿನಲ್ಲೂ ಇದನ್ನು ಗಮನಿಸಬಹುದು, ಉದಾಹರಣೆಗೆ 1991 ನೇ ಸಾಲಿನ ಕರ್ನಾಟಕದ ಒಟ್ಟು ಜನಸಂಖ್ಯೆಯಲ್ಲಿ ಯುವ ಜನರ ಪಾಲು ಶೇ. 27.33. ಈ ಪ್ರಮಾಣ 2011 ರಲ್ಲಿ ಶೇ 27.72. ನಿರ್ದಿಷ್ಟವಾಗಿ ವಯೋಮಾನ ಜನಸಂಖ್ಯೆ15–29, 30–44 ಮತ್ತು 45–59, ಇವುಗಳನ್ನು ಕ್ರೋಢೀಕರಿಸಿ ನೋಡಿದರೆ ಈ ಜನಸಂಖ್ಯೆಯ ಪ್ರಮಾಣ ಶೇ 65. ಅಂದರೆ ಕರ್ನಾಟಕದ ಒಟ್ಟು ಜನಸಂಖ್ಯೆಯಲ್ಲಿರುವ ಕೆಲಸಗಾರರಿಗಿಂತ (ಶೇ 63.64) ಹೆಚ್ಚಳವನ್ನು ಹೊಂದಿದೆ (ಶೇ 65) ದಕ್ಷಿಣ ಭಾರತದಲ್ಲಿ ಕೇರಳ, ತಮಿಳುನಾಡು ರಾಜ್ಯಗಳ ನಂತರ ಪ್ರಗತಿ ಕಾಣುತಿರುವ ರಾಜ್ಯಗಳಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ.

ಚಿತ್ರ 1 ರಲ್ಲಿ ಕರ್ನಾಟಕದ ವಿವಿಧ ವಯೋಮಾನ ಜನಸಂಖ್ಯೆಯ ರಚನೆಯನ್ನು ಶೇಕಡಾ ಪ್ರಮಾಣದಲ್ಲಿ ದಕ್ಷಿಣ ಭಾರತದ ಇತರೆ ರಾಜ್ಯಗಳೊಂದಿಗೆ ಹೋಲಿಕೆ ಮಾಡಲಾಗಿದೆ. ಕಳೆದ ಎರಡು ದಶಕಗಳಲ್ಲಿ ಕರ್ನಾಟಕದ ಒಟ್ಟು ಜನಸಂಖ್ಯೆಯಲ್ಲಿ ಹೆಚ್ಚಳವಾಗಿರುವ ಯುವಜನಸಂಖ್ಯೆ ಶೇಕಡಾ ಪ್ರಮಾಣ 1 ರಷ್ಟಿದ್ದರೆ, ಈ ಪ್ರಮಾಣ ನೆರೆಯ ರಾಜ್ಯ ಆಂದ್ರ ಪ್ರದೇಶದಲ್ಲಿ ಶೇ 2.1. ಇದಕ್ಕೆ ವ್ಯತಿರಿಕ್ತವಾಗಿ ತಮಿಳುನಾಡು ಮತ್ತು ಕೇರಳ ರಾಜ್ಯಗಳು ಯುವಜನತೆಯ ಪಾಲಿನಲ್ಲಿ ನಕಾರಾತ್ಮಕ ಪ್ರಮಾಣವನ್ನು ಹೊಂದಿದ್ದು, ಇದಕ್ಕೆ ಮುಖ್ಯ ಕಾರಣ ಈ ರಾಜ್ಯಗಳು ಕುಟುಂಬ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನದೊಂದಿಗೆ ಜನಸಂಖ್ಯಾ ಬೆಳವಣಿಗೆಯಲ್ಲಿ ಹತೋಟಿ ಹೊಂದಿದ್ದು ಗಮನಾರ್ಹ. ಉದಾಹರಣೆಗೆ ಪ್ರತಿ ವಿವಾಹಿತ ಮಹಿಳೆ ಪಡೆಯುವ ಮಕ್ಕಳ ಸಂಖ್ಯೆ 2 ಕ್ಕೆ ಸೀಮಿತ ಗೊಂಡಿದ್ದು (ರಿಪ್ಲೇಸ್‌ಮೆಂಟ್ ಫೆರ್‌ಟಿಲಿಟಿ) ಕೇರಳ ರಾಜ್ಯ ದೇಶದಲ್ಲೇ ಮೊದಲು (1990) ನಂತರದ ಸ್ಥಾನದಲ್ಲಿ ತಮಿಳುನಾಡು (2000), ಆಂಧ್ರ ಪ್ರದೇಶ (2002) ಕರ್ನಾಟಕ (2006) ಈ ಸಾಲಿನಲ್ಲಿ ಸೇರುತ್ತವೆ.

ಒಟ್ಟಾರೆ ದೇಶದ ಅಭಿವೃದ್ಧಿಯಲ್ಲಿ ಯುವಜನತೆಯ ಪಾತ್ರ ಬಹು ಮುಖ್ಯವಾಗಿದ್ದು, ಇದನ್ನು ರಾಷ್ಟ್ರದ ಬೆಳವಣಿಗೆಗೆ ಸದುಪಯೋಗಪಡಿಸಿ

ಕೊಳ್ಳಬೇಕಾಗಿದೆ. ಒಂದು ಅಂದಾಜಿನ ಪ್ರಕಾರ 2045 ಕ್ಕೆ ವಿಶ್ವದ ಒಟ್ಟು ಕೆಲಸಗಾರರ ಪೈಕಿ ಶೇ 25 ರಷ್ಟು ಕೆಲಸಗಾರರು ಭಾರತದಲ್ಲಿ ನೆಲೆಯೂರಲಿದ್ದಾರೆ. ಇದು ಭಾರತದ ಮಟ್ಟಿಗೆ ಒಳ್ಳೆಯ ಬೆಳವಣಿಗೆ ಆದರೂ ಇನ್ನೊಂದೆಡೆ ಯುವ ಭಾರತ ನಿರ್ಮಾಣದೊಂದಿಗೆ, ವಯಸ್ಕರ ಭಾರತವು ಆಗಲಿದೆ ಈ ಹಿನ್ನೆಲೆಯಲ್ಲಿ ಇವೆರಡನ್ನೂ ಸರಿದೂಗಿಸಿ ಯುವಜನ ರಿಂದ ರಾಷ್ಟ್ರಕ್ಕೆ ಆಗಲಿರುವ ಲಾಭವನ್ನು ಮನಗಂಡು ಭಾರತ ಸರಿಯಾದ ರೀತಿಯಲ್ಲಿ, ಯೋಜನೆಯ ಕಾರ್ಯರೂಪಗಳನ್ನು ನಿರೂಪಿಸುವ ಜವಾಬ್ದಾರಿ ದೇಶದ ಆದ್ಯ ಕರ್ತವ್ಯವಾಗಿರುತ್ತದೆ.

ಈ ನಿಟ್ಟಿನಲ್ಲಿ ಯುವಭಾರತದ ಮುಂದಿರುವ ಅವಕಾಶಗಳು ಮತ್ತು ಸವಾಲುಗಳನ್ನು ಮುಂದಿನ ಭಾಗದಲ್ಲಿ ಚರ್ಚಿಸಲಾಗಿದೆ.





Fig 1: A Scenario of Age Structure Shift across Southern States of India (1981-2011)

### ಯುವಜನತೆಯಿಂದ ಭಾರತ ನಿರೀಕ್ಷಿಸಬಹುದಾದ ಅವಕಾಶಗಳು

ಇತ್ತೀಚಿನ ದಶಕಗಳಲ್ಲಿ ಭಾರತ ಕಂಡ ಜನಸಂಖ್ಯಾ ಸ್ಥಿತ್ಯಂತರ ಹಾಗೂ ಮಾನವ ಅಭಿವೃದ್ಧಿಯಿಂದ ದೇಶದ ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಯ ಚಿತ್ರಣ ಬದಲಾಗುತಿದ್ದು ವಿಶ್ವದ ಭೂಪಟದಲ್ಲಿ ಮುಂದಿನ ಬಲಿಷ್ಟ ರಾಷ್ಟ್ರ ಎಂದು ಬಿಂಬಿತವಾಗಿದೆ. ಜನಸಂಖ್ಯಾ ಗಾತ್ರ ಮತ್ತು ಬೆಳವಣಿಗೆಯಲ್ಲಿ ಹತೋಟಿ ಕಾಯ್ದುಕೊಂಡು ವಯೋಮಾನ ರಚನೆಯಲ್ಲಿ ಬದಲಾವಣೆ ಕಂಡಿದೆ. ರಾಷ್ಟ್ರದ ಬಹುತೇಕ ಯುವಕರು ವಿದ್ಯಾವಂತರಾಗುತ್ತಿದ್ದು, ಗಂಡು ಮಕ್ಕಳ ಮದುವೆಯ ವಯಸ್ಸು ಸರಾಸರಿ 27 ರಿಂದ 30 ಕ್ಕೆ ಹೆಚ್ಚಳವಾಗಿದೆ. ಹಾಗೆಯೇ ಹೆಣ್ಣು ಮಕ್ಕಳ ಮದುವೆಯ ವಯಸ್ಸು ಸರಾಸರಿ 25 ರಿಂದ 30. ಈ ನಿರ್ದಿಷ್ಟ ಅಂಶ ಕುಟುಂಬಗಳ ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಯ ಮೇಲೆ ಪರಿಣಾಮ ಬೀರುವುದರ ಮೂಲಕ, ಹೆಚ್ಚು ಹೆಚ್ಚು ಕುಟುಂಬಗಳು ಮಧ್ಯಮ ವರ್ಗದವರಾಗುತ್ತಿದ್ದಾರೆ. ಬಹುತೇಕ ಕನಿಷ್ಠ ಹೆಂಡತಿ ಅಥವಾ ಗಂಡ ಉದ್ಯೋಗ ಪಡೆಯುವ ಮೂಲಕ ವೈವಾಹಿಕ ಜೀವನವನ್ನು ಹೊಂದಲಾಗುತ್ತಿದೆ ಹೀಗೆ ಬಹುತೇಕ ಮಹಿಳೆಯರು ವೈವಾಹಿಕ ಜೀವನದ ಮೊದಲ ಹಂತದಲ್ಲಿ ಮಕ್ಕಳನ್ನು ಪಡೆಯುವ ಮೂಲಕ, ಪ್ರಜನನ ಅವಧಿಯನ್ನು ಮುಗಿಸಿ ಗಂಡ – ಹೆಂಡತಿ ಇಬ್ಬರು ಕೂಡ ದುಡಿಯಲು ಪ್ರಾರಂಭಿಸುತ್ತಾರೆ. ಇದರಿಂದ ಕುಟುಂಬದ ಆದಾಯ ಹೆಚ್ಚಳವಾಗಿ ಉಳಿತಾಯದ ಮನೋಭಾವನೆಯನ್ನು ಹೊಂದುತಿದ್ದಾರೆ. ಅವಿಭಕ್ತ ಕುಟುಂಬಗಳ ಸಂಖ್ಯೆ ನಿಧಾನವಾಗಿ ಇಳಿಮುಖವಾಗುತಿದ್ದು, ವಿಭಕ್ತ ಕುಟುಂಬಗಳು ಹೆಚ್ಚಳವಾಗುತ್ತಿವೆ. ಮಹಿಳಾ ಸಾಕ್ಷರತೆ ವಿದ್ಯಾಭ್ಯಾಸ ದಲ್ಲಿನ ಏರಿಕೆ ಇತ್ಯಾದಿ ಅಂಶಗಳು ಸಣ್ಣ ಕುಟುಂಬಗಳಲ್ಲೂ ಕಂಡುಬಂದಿದ್ದು, ಇಂತಹ ಕುಟುಂಬಗಳು ಕೂಡ ಅಂಚೆ ಕಛೇರಿ, ರಾಷ್ಟ್ರೀಯ ಉಳಿತಾಯ ಖಾತೆ, ನಿಗದಿತ ಠೇವಣಿಯ ಮೂಲಕ ಸಣ್ಣ ಉಳಿತಾಯಗಳಲ್ಲಿ ತೊಡಗಿದ್ದಾರೆ. ಇದು ಒಟ್ಟಾರೆ ರಾಷ್ಟ್ರದ ಅಭಿವೃದ್ದಿಗೆ ಪೂರಕವಾಗಿದೆ.

ಇಂದಿನ ಯುವಜನಾಂಗ ಭಾರಿ ಪ್ರಮಾಣದಲ್ಲಿ ನಿರುದ್ಯೋಗಿಗಳಾಗಿದ್ದು ಜೀವನೋಪಾಯಕ್ಕೆ ಒಂದಲ್ಲ ಒಂದು ಚಟುವಟಿಕೆಯಲ್ಲಿ ನಿರತರಾಗುವ ಮೂಲಕ ದುಡಿಯುವ ಮನೋಭಾವನೆಯನ್ನು ಹೊಂದಿದ್ದಾರೆ. ಹೆಚ್ಚಳವಾಗುತ್ತಿರುವ ನಗರೀಕರಣ ಮತ್ತು ಕೈಗಾರಿಕರಣಗಳ ಅಭಿವೃದ್ಧಿಯ ಅಡಿಯಲ್ಲಿ ಹೆಚ್ಚು ಹೆಚ್ಚು ಯುವಕರು ಅಸಂಘಟಿತ ವಲಯದಲ್ಲಿ ಕಾರ್ಮಿಕರಾಗಿದ್ದು, ಅದರಲ್ಲಿ ನಗರ ಪ್ರದೇಶದ ಯುವಕರು ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಎಲೆಕ್ಟ್ರಾನಿಕ್ ಉಪಕರಣಗಳು, ಮೋಟಾರು ವಾಹನಗಳು ಮತ್ತು ಗೃಹೋಪಯೋಗಿ ವಸ್ತುಗಳನ್ನು ಖರೀದಿ ಮಾಡುವ ಮೂಲಕ ದೇಶದ/ರಾಜ್ಯದ ಬೊಕ್ಕಸಕ್ಕೆ ತೆರಿಗೆ ಪಾವತಿಸುವ ಮೂಲಕ ದೇಶದ ಆರ್ಥಿಕ ಪ್ರಗತಿಗೆ ಕಾರಣರಾಗಿದ್ದಾರೆ. ಈ ಮೇಲಿನ ಎಲ್ಲ ಅಂಶಗಳು ದೇಶದ ಅಭಿವೃದ್ಧಿಯಲ್ಲಿ ತನ್ನದೇ ಆದ ಪ್ರಭಾವವನ್ನು ಬೀರಿವೆ. ಇದರಿಂದ ಯುವಜನಾಂಗವನ್ನು ಈ ದೃಷ್ಟಿಯಲ್ಲಿ ದೇಶದ ಸಂಪತ್ತಾಗಿಸುವಲ್ಲಿ ಎಲ್ಲ ಪ್ರಯತ್ನಗಳನ್ನು ನಡೆಸಬೇಕಿದೆ.

### ಯುವಜನತೆ ಮತ್ತು ಸವಾಲುಗಳು

2025 ರ ಅವಧಿಗೆ ವಿಶ್ವದಲ್ಲಿ ಸುಮಾರು 300 ದ. ಲಕ್ಷ ಯುವಕರು ಕಾರ್ಮಿಕ ವಲಯದಲ್ಲಿ ಸ್ಥಾನ ಪಡೆಯಲಿದ್ದು ಇವರಲ್ಲಿ ಭಾರತದ ಯುವಕರ ಪಾಲು ಶೇ 25. ವಿಶ್ವದ ಕಾರ್ಮಿಕ ವಲಯದಲ್ಲಿರುವ ಭಾರತದ ಯುವಕರ ಪಾಲು 1/4 ಭಾಗ ಎಂಬುದು ಇಲ್ಲಿ ಗಮನಾರ್ಹ. ಕರ್ನಾಟಕದಲ್ಲಿ ಹೆಚ್ಚಳವಾಗುತ್ತಿರುವ ಯುವಕರ ಸಂಖ್ಯೆ ದೇಶದ ಸರಾಸರಿಗಿಂತಲೂ ಹೆಚ್ಚಿದ್ದು, ಇವರನ್ನು ಸಾಮಾನ್ಯ ವಿದ್ಯಾವಂತರನ್ನಾಗಿಸುವ ಜೊತೆಗೆ ಕೌಶಲ್ಯ ಪೂರಿತ ವಿದ್ಯಾವಂತರನ್ನಾಗಿ ಮಾಡುವುದು ಭಾರತದ ಮುಖ್ಯ ಆದ್ಯತೆ. ಹೆಚ್ಚಾಗುತ್ತಿರುವ ಯುವ ಜನಾಂಗಕ್ಕೆ ಸರಿಸಮವಾಗಿ ಉದ್ಯೋಗಗಳನ್ನು ಸೃಷ್ಟಿಸುವ ಮೂಲಕ ಇವರ ಸದುಪಯೋಗ ಪಡೆದುಕೊಳ್ಳುವ ಅನಿವಾರ್ಯತೆ ಇದೆ. ಸರಿಯಾದ ರೀತಿಯಲ್ಲಿ

ಯುವಜನರಿಗೆ ಯೋಜನೆಗಳನ್ನು ರೂಪಿಸಿ, ಕಾರ್ಯಗತ ಮಾಡದೆ ಇದ್ದ ಪಕ್ಷದಲ್ಲಿ ಭಾರಿ ಸಂಖ್ಯೆಯ ಯುವಕರು ಮುಂದಿನ ದಿನಗಳಲ್ಲಿ ಜೀವನೋಪಾಯಕ್ಕೋಸ್ಕರ ಅಪರಾದ ಕೃತ್ಯಗಳಲ್ಲಿ ಭಾಗಿಯಾಗುವ ಸಂಭವ ಹೆಚ್ಚು, ಇದು ಸಮಾಜದ ಪರಿಸರಕ್ಕೆ ದಕ್ಕೆ ಬಂದೊದಗಬಹುದು. ಹೆಚ್ಚು ಹೆಚ್ಚು ಶಿಕ್ಷಣ ಸಂಸ್ಥೆಗಳಲ್ಲಿ ತಾಂತ್ರಿಕತೆ, ನೈಪುಣ್ಯತೆ, ಕೌಶಲ್ಯ ಪೂರಿತ ಹಾಗೂ ವಿಷಯಾಧಾರಿತ ಶಿಕ್ಷಣವನ್ನು ನೀಡುವ ಮೂಲಕ ಯುವಕರ ಪಾಲಿಗೆ ಒಳ್ಳೆಯ ಸಮಾಜವನ್ನು ನಿರ್ಮಾಣ ಮಾಡಬೇಕಾದ ಅನಿವಾರ್ಯತೆ ಇದೆ.

ಹೆಚ್ಚಳವಾಗುತ್ತಿರುವ ಯುವಕರ ಜನಸಂಖ್ಯೆಗೆ ಅನುಗುಣವಾಗಿ ಶಿಕ್ಷಣ, ಉದ್ಯೋಗ ಮತ್ತು ಭದ್ರತೆಯನ್ನು ಒದಗಿಸಬೇಕಾಗಿದೆ. ಒಂದು ಪಕ್ಷ ಉದ್ಯೋಗ ಸೃಷ್ಠಿಯಲ್ಲಿ ಈಗಿನ ಪರಿಸ್ಥಿತಿಯೇ ಮುಂದುವರೆದರೆ 2040 ನೇ ಅವಧಿಗೆ ಹೆಚ್ಚಳವಾಗುವ ಶೇ. 65 ರಷ್ಟು ಯುವಕರು/ ಕಿರಿಯ ವಯಸ್ಕರಿಂದ ಸಮಾಜದ ಮೇಲೆ ಆಗುವ ದುಷ್ಪರಿಣಾಮವನ್ನು ಊಹಿಸಲು ಅಸಾದ್ಯ! ಈಗಾಗಲೇ ಅಸಹಾಯಕ ಮಹಿಳೆಯರು, ಮಕ್ಕಳು, ಮತ್ತು ವೃದ್ದರ ಮೇಲೆ ಆಗುತ್ತಿರುವ ದೌರ್ಜನ್ಯಗಳು ಭಾರತದಲ್ಲಿ/ಕರ್ನಾಟಕದಲ್ಲಿ ಹೆಚ್ಚಳವಾಗುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ ಆದುದರಿಂದ ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಯುವಕರನ್ನು ಹೆಚ್ಚು ಹೆಚ್ಚು ವಿದ್ಯಾವಂತರನ್ನಾಗಿಸುವ ಮೂಲಕ ಕೌಶಲ್ಯ ಆಧಾರಿತ ಹಾಗೂ ವಿಷಯಾಧಾರಿತ ಶಿಕ್ಷಣವನ್ನು ನೀಡುವ ಮೂಲಕ ಮುಂದಿನ ಯುವ ಪೀಳಿಗೆಯನ್ನು ಬಲಿಷ್ಟಗೊಳಿಸುವತ್ತ ಸರ್ಕಾರಗಳು ಚಿಂತನೆ ನಡೆಸಬೇಕಾಗಿದೆ.

ಪ್ರಜೆಗಳಿಂದ ಪ್ರಜೆಗಳಿಗೋಸ್ಕರ ಇರುವ ಸಂವಿಧಾನ ಬದ್ದತೆಯನ್ನು ಅರಿತು ಅಭಿವೃದ್ದಿಯತ್ತ ಗಮನ ಹರಿಸಿ ಮುಂದಿನ ಯುವಕರ ಬಗ್ಗೆ ಆಳವಾದ ಯೋಜನೆಗಳನ್ನು ರೂಪಿಸಬೇಕಿದೆ.

**ಉಪಸಂಹಾರ**

ಜನಸಂಖ್ಯಾ ಸ್ಥಿತ್ಯಂತರ ಹಾಗೂ ವಯೋಮಾನ ಜನ ಸಂಖ್ಯೆಯಲ್ಲಿನ ಬದಲಾವಣೆ ಭಾರತದ ಅರ್ಥವ್ಯವಸ್ಥೆಯ ಮೇಲೆ ಗುರುತರವಾದ ಪ್ರಭಾವವನ್ನು ಬೀರಿದೆ. ಇದು ರಾಷ್ಟ್ರದ ಬೆಳವಣಿಗೆಗೆ ಕಾರಣವಾಗಿದೆ.

ಬಹುತೇಕ ಕೃಷಿಯಾಧಾರಿತ ಆರ್ಥಿಕ ವ್ಯವಸ್ಥೆಯಿಂದ ಕೂಡಿದ ಭಾರತದ ಇಂದಿನ ನಗರೀಕರಣ ಹಾಗೂ ಕೈಗಾರೀಕರಣ ಅಂಶಗಳು ಕೂಡ ಅಭಿವೃದ್ದಿಯ ಮೂಲಗಳಾಗಿವೆ. ಹೆಚ್ಚಳವಾಗುತ್ತಿರುವ ಯುವಕರನ್ನು ಹೆಚ್ಚು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಮೂಲಕ ಮುಂದಿನ ಪೀಳಿಗೆಯನ್ನು ಸದೃಡರನ್ನಾಗಿಸಿ, ವಿಷಯಾಧಾರಿತ ಮತ್ತು ಕೌಶಲ್ಯಭರಿತ ಭಾರತ ನಿರ್ಮಾಣ ಮಾಡುವಲ್ಲಿ ಸರ್ಕಾರಗಳು ಪ್ರಮುಖ ಪಾತ್ರ ವಹಿಸಬೇಕಾದ ಪ್ರಸಂಗ ಎದ್ದು ಕಾಣುತ್ತಿದೆ. ದೇಶದ ಯುವಕರಿಗೆ ತಾಯಿನಾಡಿನಲ್ಲೇ ಉದ್ಯೋಗ ಒದಗಿಸಿಕೊಡುವ ಮೂಲಕ ದೇಶದ ಯುವಕರು ದೇಶದ ಏಳಿಗೆಗಾಗಿ ದುಡಿಯುವಂತೆ ಮಾಡುವ ಮಹತ್ತರ ಜವಾಬ್ದಾರಿ ದೇಶದ ಚುಕ್ಕಾಣಿ ಹಿಡಿದಿರುವ ಪ್ರಜಾಪ್ರಭುತ್ವ ವ್ಯವಸ್ಥೆಯ ಮೂಲ ಧ್ಯೇಯವಾಗಬೇಕು ಎಂಬುದು ನನ್ನ ಆಶಯ. ❑

(36ನೇ ಪುಟದಿಂದ)

## ಕೌಶಲ್ಯ ಮತ್ತು ಮಾನವ ಸಂಪನ್ಮೂಲ



ಮಾಡಬಹುದು ಎಂಬುದನ್ನು ಕಂಡುಹಿಡಿಯಬೇಕಾದರೆ ನೌಕರ ಪಡೆಗೆ ಹೊಸ ಕೌಶಲ್ಯಗಳನ್ನು ಒದಗಿಸಬೇಕು. ಅನೌಪಚಾರಿಕ ವಲಯದಲ್ಲಿ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸಲು ಪರಿಣಾಮಕಾರಿಯಾದ ಮತ್ತು ಮಾರುಕಟ್ಟೆ ಕೇಂದ್ರಿತ ಶಿಕ್ಷಣ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಒದಗಿಸಬೇಕು. ಅನೌಪಚಾರಿಕ ವಲಯದ ನೌಕರ ಪಡೆಯ ಕೌಶಲ್ಯ ಮಟ್ಟ ಹೆಚ್ಚಳದಿಂದ ಆರ್ಥಿಕ ಪ್ರಗತಿ ಮತ್ತು ಸಂಪತ್ತು ಸೃಷ್ಟಿ ಸಾಧ್ಯ. ರಾಷ್ಟ್ರೀಯ ಕೌಶಲ್ಯಾಭಿವೃದ್ಧಿ ಏಜೆನ್ಸಿ ವಿವಿಧ ಸಂಸ್ಥೆಗಳ ಜತೆ ಪಾಲುದಾರಿಕೆಯೊಂದಿಗೆ ತರಬೇತಿ ನೀಡುವ ಪ್ರಯತ್ನಗಳನ್ನು ಮಾಡುತ್ತಿದೆ. ಇದಕ್ಕೆ ವಿವಿಧ ಸಚಿವಾಲಯಗಳು, ರಾಜ್ಯ ಸರ್ಕಾರಗಳು ಮತ್ತು ಕೈಗಾರಿಕೆಗಳು ಕೈಜೋಡಿಸಿವೆ. ಕೌಶಲ್ಯ ತರಬೇತಿಯ ಜತೆಗೆ ನೇಮಕ ಗುರಿ ನಿಗದಿಪಡಿಸಲಾಗಿದೆ. ವಲಯವಾರು ಮಟ್ಟದಲ್ಲಿ ನೇಮಕ ಚಟುವಟಿಕೆಗಳಿಗೆ ಒತ್ತು ನೀಡಲಾಗಿದೆ.

ಭಾರತದ ಪ್ರತಿಭಾವಂತ ಯುವ ಸಮುದಾಯಕ್ಕೆ ಅವಕಾಶಗಳನ್ನು ಸೃಷ್ಟಿಸುವುದೇ ಸ್ಕಿಲ್ ಇಂಡಿಯಾದ ಪ್ರಧಾನ ಗುರಿ. ಕೌಶಲ್ಯ ಅಭಿವೃದ್ಧಿಗಾಗಿ ಹೊಸ ವಲಯಗಳನ್ನು ಗುರುತಿಸುವ ಕೆಲಸವೂ ನಡೆಯುತ್ತಿದೆ. 2020ರ ವೇಳೆಗೆ 500 ದಶಲಕ್ಷ ಯುವ ಸಮುದಾಯಕ್ಕೆ ಕೌಶಲ್ಯ ತರಬೇತಿ ನೀಡುವುದು ಸ್ಕಿಲ್ ಇಂಡಿಯಾದ ಪ್ರಮುಖ ಗುರಿಯಾಗಿದೆ.

ಜಾಗತಿಕ ಗುಣಮಟ್ಟಕ್ಕೆ ತಕ್ಕಂತೆ ತರಬೇತಿ ಕಾರ್ಯಕ್ರಮಗಳನ್ನು ವಿನ್ಯಾಸಗೊಳಿಸಬೇಕಿದೆ. ಹೀಗೆ ಮಾಡುವುದರಿಂದ ನಮ್ಮ ಯುವ ಸಮುದಾಯವನ್ನು ದೇಶೀಯ ಬೇಡಿಕೆಯ ಜತೆಗೆ, ಜಾಗತಿಕ ಮಾರುಕಟ್ಟೆಗೂ ಸಜ್ಜುಗೊಳಿಸಲು ಸಾಧ್ಯವಾಗುತ್ತದೆ. ಅಮೆರಿಕ, ಜಪಾನ್, ಚೀನಾ, ಯುರೋಪ್ ಮತ್ತು ಪಶ್ಚಿಮ ಏಷ್ಯಾ ಮಾರುಕಟ್ಟೆಗಳ ಬೇಡಿಕೆಗೆ ಅಣಿಗೊಳಿಸಬಹುದು.

ಕೇಂದ್ರ ಸರ್ಕಾರ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ರಾಷ್ಟ್ರೀಯ ಆದ್ಯತೆಯಾಗಿ ಪರಿಗಣಿಸಿದೆ. ಆದರೆ ಮೊದಲು ಸಾಂಪ್ರದಾಯಿಕ ಉದ್ಯೋಗಗಳಿಗೆ ಮಾತ್ರ ಒತ್ತು ಸಿಗುತ್ತಿತ್ತು. ಆದರೆ ಇದೀಗ ಸ್ಕಿಲ್ ಇಂಡಿಯಾದಲ್ಲಿ ಎಲ್ಲ ಸ್ವರೂಪದ ಉದ್ಯೋಗಗಳಿಗೂ ಗಮನ ಕೇಂದ್ರೀಕರಿಸಲಾಗಿದೆ.

ಕೌಶಲ್ಯಾಭಿವೃದ್ಧಿ ಕಾರ್ಯಕ್ರಮದಲ್ಲಿ ಪಾರ್ದರ್ಶಕತೆ ತಂದು, ಅದನ್ನು ಪರಿಣಾಮಕಾರಿಯಾಗಿಸಲು ಸರಕಾರ, ವಿವಿಧ ಸಚಿವಾಲಯಗಳನ್ನು ಒಟ್ಟುಗೂಡಿಸಿ, ಕಾರ್ಯಕ್ರಮವನ್ನು ಆದ್ಯತೆಯ ಮೇರೆಗೆ ಅನುಷ್ಠಾನಕ್ಕೆ ಮುಂದಾಗಿದೆ. ❑

# ಕೌಶಲ ಅಭಿವೃದ್ಧಿಯ ಮಹತ್ವ

* ಅಕ್ಕಿಮಂಗಲ ಸುರೇಶ



**ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಸೇರಿದಂತೆ ಖಾಸಗಿ ಮತ್ತು ಸರ್ಕಾರಿ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಪನ್ಮೂಲ ವ್ಯಕ್ತಿಗಳಲ್ಲಿನ ಜ್ಞಾನವನ್ನು ಸದುಪಯೋಗಪಡಿಸಿಕೊಳ್ಳುವ ಉದ್ದೇಶದಿಂದ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ ಶಾಲೆಗೆ ಬನ್ನಿ ಶನಿವಾರ ಕಾರ್ಯಕ್ರಮ ರೂಪಿಸಿದ್ದು, ಶನಿವಾರದಂದು ಯಾರು ಬೇಕಾದರೂ ಶಾಲೆಗೆ ಹೋಗಿ ಪಾಠ ಮಾಡಬಹುದಾಗಿದೆ.**

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಕೇವಲ ಸಾಂಪ್ರದಾಯಿಕ ಶಿಕ್ಷಣ ನೀಡುವುದರಿಂದ ಅಷ್ಟೊಂದು ಉಪಯೋಗ ಆಗುವುದಿಲ್ಲ ಎಂಬುದನ್ನು ಮನಗಂಡಿರುವ ರಾಜ್ಯ ಮತ್ತು ಕೇಂದ್ರ ಸರ್ಕಾರ ವೃತ್ತಿಶಿಕ್ಷಣ ಮತ್ತು ಕೌಶಲಕ್ಕೆ ಹೆಚ್ಚಿನ ಒತ್ತು ನೀಡಿವೆ. ಶಿಕ್ಷಣ ಪಡೆದ ಪ್ರತಿಯೊಬ್ಬರಲ್ಲೂ ಯಾವುದಾದರೂ ಒಂದು ಕೌಶಲ ಇರಬೇಕು. ಆ ಮೂಲಕ ಅವರಿಗೆ ಉದ್ಯೋಗ ಅವಕಾಶ ಸಿಗಬೇಕು ಎಂಬುದು ಸರ್ಕಾರದ ಉದ್ದೇಶ. ಈ ನಿಟ್ಟಿನಲ್ಲಿ ಪ್ರೌಢಶಿಕ್ಷಣ ಹಂತದಿಂದ ಹಿಡಿದು ಸ್ನಾತಕೋತ್ತರ ಪದವಿವರೆಗೂ ಸಾಂಪ್ರದಾಯಿಕ ಶಿಕ್ಷಣದ ಜತೆಗೆ ಕೌಶಲಯುತ ಶಿಕ್ಷಣಕ್ಕೂ ಪ್ರಾಮುಖ್ಯತೆ ನೀಡಲಾಗುತ್ತಿದೆ.

ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ಫಲವಾಗಿ ಕೆಲವು ವರ್ಷಗಳಿಂದ ಈಚೆಗೆ ಖಾಸಗಿ ಕ್ಷೇತ್ರದಲ್ಲಿ ಹೆಚ್ಚಿನ ಉದ್ಯೋಗ ಅವಕಾಶಗಳು ಲಭ್ಯವಾಗುತ್ತಿವೆ. ಅದರಲ್ಲೂ ವಿಶೇಷವಾಗಿ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಕ್ಷೇತ್ರ ಅಗಾಧವಾಗಿ ಬೆಳೆದಿದ್ದು, ಬಹುರಾಷ್ಟ್ರೀಯ ಕಂಪೆನಿಗಳಲ್ಲಿ ವಿಪುಲ ಉದ್ಯೋಗ ಅವಕಾಶಗಳಿವೆ. ಪ್ರತಿ ವರ್ಷ ಸಾವಿರಾರು ಸಂಖ್ಯೆಯಲ್ಲಿ ಹೊಸ ಉದ್ಯೋಗ ಅವಕಾಶಗಳು ಸೃಷ್ಟಿಯಾಗುತ್ತಿವೆ. ಆದರೆ, ಕೌಶಲದ ಕೊರತೆಯಿಂದಾಗಿ ಎಂಜಿನಿಯರಿಂಗ್ ಪದವೀಧರರು ಸಹ ಉದ್ಯೋಗದಿಂದ ವಂಚಿತರಾಗುತ್ತಿದ್ದು, ಕೌಶಲವುಳ್ಳ ಮಾನವ ಸಂಪನ್ಮೂಲದ ಕೊರತೆ ಎದ್ದು ಕಾಣುತ್ತಿದೆ.

ಕರ್ನಾಟಕದಲ್ಲಿ ಪ್ರತಿ ವರ್ಷ ಒಂದು ಲಕ್ಷಕ್ಕೂ ಅಧಿಕ ಮಂದಿ ಎಂಜಿನಿಯರಿಂಗ್ ಪದವೀಧರರು ಕಾಲೇಜುಗಳಿಂದ ಹೊರ ಬರುತ್ತಿದ್ದಾರೆ. ಆದರೆ, ಅವರಲ್ಲಿ ಶೇ 40 ಮಂದಿ ಕೂಡ ಉದ್ಯೋಗಕ್ಕೆ ಅರ್ಹರಲ್ಲ. ಮಾರುಕಟ್ಟೆಯಲ್ಲಿ ಲಭ್ಯವಿರುವ ಉದ್ಯೋಗ ಅವಕಾಶಗಳನ್ನು ತಮ್ಮದಾಗಿಸಿಕೊಳ್ಳಲು ಅವರಲ್ಲಿ ಕೌಶಲ ಇಲ್ಲ. ಪದವಿಯ ಪ್ರಮಾಣ ಪತ್ರ ಹೊಂದಿದ್ದಾರೆಯೇ ಹೊರತು, ಉದ್ಯೋಗಕ್ಕೆ ಬೇಕಾದ ಕೌಶಲ ಇಲ್ಲ ಎಂಬ ಮಾತುಗಳು ಐ.ಟಿ. ಕಂಪೆನಿಗಳ ಮುಖ್ಯಸ್ಥರಿಂದ ಕೇಳಿ ಬರುತ್ತಿವೆ. ಇನ್‌ಫೋಸಿಸ್ ಸಂಸ್ಥಾಪಕ ಎನ್. ಆರ್.ನಾರಾಯಣ ಮೂರ್ತಿ ಅವರು ಅನೇಕ ಬಾರಿ ಈ ಮಾತುಗಳನ್ನು ಆಡಿದ್ದಾರೆ. ಇದು ವಾಸ್ತವದ ಸಂಗತಿಯೂ ಹೌದು.

ಕೇವಲ ಎಂಜಿನಿಯರಿಂಗ್ ಪದವೀಧರರು ಅಷ್ಟೆ ಅಲ್ಲ, ಬಿ.ಎ., ಬಿಎಸ್ಸಿ., ಬಿ.ಕಾಂ., ಬಿಸಿಎ., ಬಿಬಿಎಂ ಮೊದಲಾದ ಪದವಿ ಪಡೆದವರಲ್ಲೂ ಉದ್ಯೋಗಕ್ಕೆ ಬೇಕಾದ ಕೌಶಲ ಇಲ್ಲ. ಇದರಿಂದಾಗಿಯೇ ಕೈಯಲ್ಲಿ ಪದವಿ ಪ್ರಮಾಣ ಪತ್ರ ಇದ್ದರೂ, ಉದ್ಯೋಗವಿಲ್ಲದೆ ಪರದಾಡುವಂತಾಗಿದೆ. ಇನ್ನು ಡಿಪ್ಲೊಮಾ, ಐಟಿಐಗೆ ಸೇರಿದವರಿಗೆ ವ್ಯಾಸಂಗ ಅವಧಿಯಲ್ಲೇ ಸ್ವಲ್ಪಮಟ್ಟಿಗೆ ಪ್ರಾಯೋಗಿಕವಾಗಿಯೂ ಕಲಿಯಲು ಅವಕಾಶ ಇದೆ. ಆದರೆ, ಪೂರ್ಣ ಪ್ರಮಾಣದ ಕೌಶಲ ಪಡೆಯಲು ಇಲ್ಲಿರುವ ಅವಕಾಶಗಳು ಕಡಿಮೆ. ಹೀಗಾಗಿ ಈ ಕೋರ್ಸ್‌ಗಳನ್ನು ಪೂರೈಸಿದವರಲ್ಲೂ ನಿರುದ್ಯೋಗಿಗಳು ಇದ್ದಾರೆ.

ಈ ಲೋಪವನ್ನು ತಡವಾಗಿಯಾದರೂ ಮನಗಂಡಿರುವ ಸರ್ಕಾರ ಪ್ರೌಢಶಾಲಾ ಹಂತದಲ್ಲೇ ಸಾಂಪ್ರದಾಯಿಕ ಶಿಕ್ಷಣದ ಜೊತೆಗೆ ವೃತ್ತಿಶಿಕ್ಷಣಕ್ಕೂ ಆದ್ಯತೆ ನೀಡಿದೆ. ಎಸ್ಸೆಸ್ಸೆಲ್ಸಿ ಆದವರಿಗೆ ಹಿಂದೆ ಇದ್ದ ಎರಡು

ಪತ್ರಕರ್ತರು.

ವರ್ಷಗಳ ಜೆಓಸಿ ಕೋರ್ಸ್ ಕೆಲ ವರ್ಷಗಳ ಹಿಂದೆ ರದ್ದಾಗಿದ್ದು, ಮಾನವ ಸಂಪನ್ಮೂಲ ಇಲಾಖೆಯು ಇಂದಿನ ಅಗತ್ಯಕ್ಕೆ ತಕ್ಕಂತೆ ವೃತ್ತಿಶಿಕ್ಷಣ ಪದ್ಧತಿಯಲ್ಲಿ ಬದಲಾವಣೆಗಳನ್ನು ಮಾಡಿದೆ. ರಾಷ್ಟ್ರೀಯ ವೃತ್ತಿಶಿಕ್ಷಣ ನಿರ್ವಹಣಾ ಚೌಕಟ್ಟು ಯೋಜನೆಯಡಿ 9ನೇ ತರಗತಿಯಿಂದಲೇ ವೃತ್ತಿಕೌಶಲದ ಪ್ರಾಯೋಗಿಕ ತರಬೇತಿ ನೀಡಲಾಗುತ್ತದೆ.

2014–15ನೇ ಶೈಕ್ಷಣಿಕ ಸಾಲಿನಿಂದ ರಾಜ್ಯದ 100 ಸರ್ಕಾರಿ ಪ್ರೌಢಶಾಲೆಗಳಲ್ಲಿ ಪ್ರಾಯೋಗಿಕವಾಗಿ ಈ ಯೋಜನೆಯನ್ನು ಜಾರಿಗೊಳಿಸಿದ್ದು, ಹಂತ ಹಂತವಾಗಿ ಎಲ್ಲ ಶಾಲೆಗಳಿಗೂ ಇದನ್ನು ವಿಸ್ತರಿಸುವ ಉದ್ದೇಶವನ್ನು ಸಾರ್ವಜನಿಕ ಶಿಕ್ಷಣ ಇಲಾಖೆ ಹೊಂದಿದೆ. ಕೇಂದ್ರ ಸರ್ಕಾರದ ಅನುದಾನದಡಿ ನಡೆಯುವ ಈ ಕಾರ್ಯಕ್ರಮವನ್ನು ಪ್ರೌಢಶಾಲೆ ಹಂತದಿಂದ ಪಿಎಚ್.ಡಿವರೆಗೂ ಮುಂದುವರಿಸಲು ಅವಕಾಶವಿದೆ. ಈಗ ಪ್ರಾರಂಭಿಕ ಹಂತದಲ್ಲಿದ್ದು, ಇದು ಎಷ್ಟರ ಮಟ್ಟಿಗೆ ಯಶಸ್ವಿಯಾಗುತ್ತದೆ ಎಂಬುದನ್ನು ಕಾದು ನೋಡಬೇಕು.

ವಿದ್ಯಾರ್ಥಿಗಳ ಅಭಿರುಚಿ, ಸಾಮರ್ಥ್ಯ, ಆಸಕ್ತಿಗಳಿಗೆ ಅನುಗುಣವಾಗಿ ವಿವಿಧ ವೃತ್ತಿಗಳಿಗೆ ಸಂಬಂಧಿಸಿದ ಕೌಶಲವನ್ನು 9ನೇ ತರಗತಿಯಿಂದಲೇ ಬೆಳೆಸಲಾಗುತ್ತದೆ. ತರಬೇತಿ ನಂತರ ಪ್ರತಿ ವರ್ಷ ಪ್ರಮಾಣ ಪತ್ರವನ್ನು ನೀಡಲಾಗುತ್ತದೆ. ವ್ಯಾಸಂಗದ ನಂತರ ಉದ್ಯೋಗ ಪಡೆಯಲು ಈ ಪ್ರಮಾಣ ಪತ್ರ ಅನುಕೂಲವಾಗುತ್ತದೆ ಎಂಬುದು ಇಲಾಖೆಯ ಆಶಯ. ಇದು ಕಡ್ಡಾಯ ಅಲ್ಲ. ಆಸಕ್ತಿ ಇರುವವರು ವ್ಯಾಸಂಗದ ಜತೆಗೆ ಕೌಶಲದ ತರಬೇತಿಯನ್ನೂ ಪಡೆಯಬಹುದು.

ಹರಿಯಾಣದಲ್ಲಿ ಇದು ಯಶಸ್ವಿಯಾಗಿದ್ದು, ಉತ್ತಮ ಫಲಿತಾಂಶ ಬಂದಿದೆ. ಇದರ ಸಾಧಕ– ಬಾಧಕಗಳ



ಬಗ್ಗೆ ಸಾಕಷ್ಟು ಅಧ್ಯಯನ ನಡೆಸಿದ ನಂತರವೇ ಕರ್ನಾಟಕದಲ್ಲೂ ಇದನ್ನು ಜಾರಿಗೊಳಿಸಲಾಗುತ್ತಿದೆ. ಮಾರುಕಟ್ಟೆಯಲ್ಲಿ ಯಾವ ರೀತಿಯ ಉದ್ಯೋಗ ಅವಕಾಶಗಳು ಲಭ್ಯವಿವೆ. ಅದಕ್ಕೆ ಯಾವ ರೀತಿಯ ಕೌಶಲ ಇರಬೇಕು ಎಂಬ ಬಗ್ಗೆ ಉದ್ಯಮಿಗಳೊಂದಿಗೆ ಸಮಾಲೋಚನೆ ನಡೆಸಿ ಪಠ್ಯಕ್ರಮವನ್ನು ರೂಪಿಸಲಾಗಿದೆ. ಆ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಅನುಭವಿಗಳ ಮೂಲಕವೇ ಪಾಠ ಮಾಡಿಸಲಾಗುತ್ತಿದೆ. ಅಲ್ಲದೆ ಅವರೇ ಮೌಲ್ಯಮಾಪನ ಮಾಡುತ್ತಾರೆ. ಲಿಖಿತ ಮತ್ತು ಪ್ರಾಯೋಗಿಕ ಪರೀಕ್ಷೆ ನಂತರ ಪ್ರಮಾಣ ಪತ್ರ (ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಮತ್ತು ಇಂಡಸ್ಟ್ರಿ ಜಂಟಿಯಾಗಿ) ನೀಡಲಾಗುತ್ತದೆ.

ಈ ಯೋಜನೆ ಮೊದಲ ಬಾರಿಗೆ 2011ರಲ್ಲಿ ಹರಿಯಾಣದಲ್ಲಿ ಇದು ಜಾರಿಗೆ ಬಂದಿತು. 2012–13ನೇ ಸಾಲಿನಿಂದಲೇ ಕರ್ನಾಟಕದಲ್ಲೂ ಈ ಯೋಜನೆಯನ್ನು ಜಾರಿಗೊಳಿಸಲು ಉದ್ದೇಶಿಸಲಾಗಿತ್ತು. ಆದರೆ, ವಿವಿಧ ಇಲಾಖೆಗಳು, ಕೈಗಾರಿಕಾ ಸಂಸ್ಥೆಗಳೊಂದಿಗೆ ಸಮಾಲೋಚನೆ ನಡೆಸಿ ಇದಕ್ಕೆ ಅಂತಿಮ ರೂಪ ನೀಡುವುದು ತಡವಾದ ಕಾರಣ ಜಾರಿಯಾಗುವುದು ವಿಳಂಬವಾಯಿತು. ಇದು ಒಟ್ಟು ಐದು ಹಂತಗಳನ್ನು ಹೊಂದಿದ್ದು, ಪ್ರೌಢಶಾಲಾ ಹಂತದಲ್ಲಿ ಬೇಸಿಕ್ ಬಗ್ಗೆ ತಿಳಿಸಿಕೊಡಲಾಗುತ್ತದೆ. ಪಿಯುಸಿ ಹಂತದಲ್ಲಿ ನಿಜವಾದ ತರಬೇತಿ ಆರಂಭವಾಗುತ್ತದೆ.

ಹಾರ್ಡ್‌ವೇರ್ ಕ್ಷೇತ್ರದಲ್ಲಿ ಆಟೊ ಮೊಬೈಲ್, ಸಿಗ್ನಲ್ಸ್, ದ್ವಿಚಕ್ರ ಮತ್ತು ನಾಲ್ಕುಚಕ್ರ ವಾಹನ ಇತ್ಯಾದಿಗೆ ಸಂಬಂಧಿಸಿದ ಪ್ರಾಥಮಿಕ ತಿಳಿವಳಿಕೆ ಬಗ್ಗೆ ಹೇಳಿಕೊಡಲಾಗುತ್ತದೆ. ಇನ್ನು ಸಾಫ್ಟ್‌ವೇರ್ ಕ್ಷೇತ್ರಕ್ಕೆ ಬಂದರೆ ಇ–ಮೇಲ್, ಸಂವಹನ ಇತ್ಯಾದಿ ಬೇಸಿಕ್ ವಿಷಯಗಳ ಕುರಿತು ತಿಳಿಸಿಕೊಡಲಾಗುತ್ತದೆ. ಪಠ್ಯ ವಿಷಯಗಳ ಜತೆಗೆ ಮೃದು ಕೌಶಲ, ಜೀವನ ಕೌಶಲಗಳ ಬಗ್ಗೆಯೂ ಹೇಳಿಕೊಡಲಾಗುತ್ತದೆ. ಪ್ರಾಜೆಕ್ಟ್ ವರ್ಕ್ ಒಳಗೊಂಡ ಬೋಧನಾ ವಿಧಾನ ಇದಾಗಿದ್ದು, ಔದ್ಯಮಿಕ ಕ್ಷೇತ್ರಗಳಿಗೆ ಭೇಟಿ, ಸಂದರ್ಶನ, ತಜ್ಞರಿಂದ ಉಪನ್ಯಾಸ, ಪ್ರಾಯೋಗಿಕ ಕಲಿಕೆಗೂ ಅವಕಾಶ ಇರುತ್ತದೆ.

ಸದ್ಯ ಸರ್ಕಾರಿ ಶಾಲೆಗಳಲ್ಲಿ ಇದನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಅನುದಾನಿತ ಹಾಗೂ ಖಾಸಗಿ ಶಾಲೆಗಳೂ



ಇದರ ಸದುಪಯೋಗ ಪಡೆಯಬಹುದು. ಕೇಂದ್ರದಿಂದ ದೊರೆಯುವ ಅನುದಾನವನ್ನು ಸದುಪಯೋಗ ಪಡಿಸಿಕೊಂಡು ಖಾಸಗಿ ಶಾಲೆಗಳೂ ಈ ಯೋಜನೆ ಜಾರಿಗೊಳಿಸಿದರೆ, ಅಲ್ಲಿನ ಮಕ್ಕಳಿಗೂ ಇದರ ಉಪಯೋಗವಾಗುತ್ತದೆ.

ವ್ಯಾಸಂಗದ ಅವಧಿಯಲ್ಲೇ ಬಹುಕೌಶಲಗಳ ಕಲಿಕೆಗೆ ಹಿಂದೆ ಅವಕಾಶ ಇರಲಿಲ್ಲ. ಆದರೆ, ಈಗ ಅದಕ್ಕೆ ಆಸ್ಪದವಿದ್ದು, ಪಿಯುಸಿ ನಂತರ ಬ್ಯಾಚುಲರ್ ಆಫ್ ವೊಕೇಷನಲ್ ಎಜುಕೇಷನ್‌ಗೂ ಅವಕಾಶವಿದೆ. ಅಲ್ಲದೆ ಪಿಎಚ್.ಡಿಯನ್ನೂ ಪಡೆಯಬಹುದು. ಎಂಜಿನಿಯರ್‌ಗಳು ಮತ್ತು ಟೆಕ್ನಿಷಿಯನ್‌ಗಳ ನಡುವಿನ ಅನುಪಾತ 1:4ರ ಪ್ರಮಾಣದಲ್ಲಿ ಇರಬೇಕು. ಆದರೆ, ಸದ್ಯ 1:1ರ ಪ್ರಮಾಣದಲ್ಲಿದೆ. ಇದನ್ನು ಗಮನಿಸಿದರೆ ಟೆಕ್ನಿಷಿಯನ್‌ಗಳಿಗೆ ಭಾರಿ ಬೇಡಿಕೆ ಇರುವುದು ಕಂಡು ಬರುತ್ತದೆ.

ವೃತ್ತಿಶಿಕ್ಷಣದ ಮೂಲಕ ಗುಣಾತ್ಮಕ ಕೌಶಲಗಳನ್ನು ಕಲಿಸಿ, ಆ ಮೂಲಕ ಉದ್ಯೋಗ ಅವಕಾಶ ಕಲ್ಪಿಸುವುದು. ಉದ್ಯೋಗಶೀಲತೆ, ಉದ್ಯೋಗದ ಅರ್ಹತೆ ಹೊಂದುವಂತೆ ಮಾಡುವುದು. ವಿದ್ಯಾರ್ಥಿಗಳಲ್ಲಿ ಅಂತರ್ಗತವಾಗಿರುವ ಕೌಶಲ ಬೆಳಕಿಗೆ ಬರಲು ಬೇಕಾದ ವಾತಾವರಣ ಕಲ್ಪಿಸಿಕೊಡುವ ಮೂಲಕ ಅವರನ್ನು ಸಮಾಜದ ಆಸ್ತಿಯನ್ನಾಗಿ ಮಾಡುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

### ಉನ್ನತ ಶಿಕ್ಷಣದಲ್ಲಿ ಕೌಶಲ ಅಭಿವೃದ್ಧಿ

ಕರ್ನಾಟಕದ ಸರ್ಕಾರಿ ಪದವಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಕೌಶಲಗಳ ಬಗ್ಗೆ ತರಬೇತಿ ನೀಡಲು ಕಾಲೇಜು ಶಿಕ್ಷಣ ಇಲಾಖೆ ಮುಂದಾಗಿದ್ದು, ಈ ನಿಟ್ಟಿನಲ್ಲಿ ರಾಷ್ಟ್ರೀಯ ಕೌಶಲ ಅಭಿವೃದ್ಧಿ ಕೇಂದ್ರದೊಂದಿಗೆ (ಎನ್‌ಎಸ್‌ಡಿಸಿ) ಮೂರು ತಿಂಗಳ ಹಿಂದೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ.

ಅಕ್ಟೋಬರ್‌ನಲ್ಲಿ ಈ ಕಾರ್ಯಕ್ರಮಕ್ಕೆ ಚಾಲನೆ ನೀಡುತ್ತಿದ್ದು, ಟೆಲಿಕಾಂ, ಬಿ.ಎಫ್.ಎಸ್.ಐ., ಮಾಹಿತಿ ತಂತ್ರಜ್ಞಾನ, ರೀಟೈಲ್, ಎಲೆಕ್ಟ್ರಾನಿಕ್ಸ್ ಮತ್ತು ಹಾರ್ಡ್‌ವೇರ್, ಪ್ರವಾಸೋದ್ಯಮ ಮತ್ತು ಅತಿಥಿ ಸತ್ಕಾರ, ಸೌಂದರ್ಯ ಮತ್ತು ಕ್ಷಮತೆ, ಹೆಲ್ತ್‌ಕೇರ್ ಇತ್ಯಾದಿ ಕ್ಷೇತ್ರಗಳಲ್ಲಿ ತರಬೇತಿ ನೀಡಲಾಗುತ್ತದೆ.

ರಾಜ್ಯದಲ್ಲಿ 419 ಸರ್ಕಾರಿ ಪದವಿ ಕಾಲೇಜುಗಳಿದ್ದು, ಪ್ರತಿ ಕಾಲೇಜಿನಲ್ಲಿ ಎರಡು ವಿಷಯಗಳ ಬಗ್ಗೆ ತರಬೇತಿ ನೀಡಲಾಗುತ್ತದೆ. ವಿದ್ಯಾರ್ಥಿಗಳಿಗೆ ಆಯ್ಕೆಯ ಅವಕಾಶ ನೀಡಲಾಗುತ್ತದೆ. ನೋಂದಾಯಿತ ಸಂಸ್ಥೆಗಳ ಮೂಲಕ 3ರಿಂದ 4 ತಿಂಗಳ ಕಾಲ ಕೌಶಲ ತರಬೇತಿ ನೀಡುವ ವ್ಯವಸ್ಥೆ ಮಾಡಲಾಗುತ್ತದೆ. ತರಬೇತಿ ನಂತರ ಮೌಲ್ಯಮಾಪನ ಮಾಡಿ ಯಶಸ್ವಿಯಾದವರಿಗೆ ಪ್ರಮಾಣ ಪತ್ರ ನೀಡಲಾಗುತ್ತದೆ.

ಎನ್‌ಎಸ್‌ಡಿಸಿ ಮಾರ್ಗಸೂಚಿಗಳಿಗೆ ಅನುಗುಣವಾಗಿ ಪಠ್ಯಕ್ರಮವನ್ನು ಸಿದ್ಧಪಡಿಸಿ,



ಉದ್ಯಮ ವಲಯದ ತಜ್ಞರ ಸಲಹೆಗೆ ಅನುಗುಣವಾಗಿ ತರಬೇತಿ ನೀಡಲಾಗುತ್ತದೆ ಎನ್ನುತ್ತಾರೆ ಕಾಲೇಜು ಶಿಕ್ಷಣ ಇಲಾಖೆಯ ಅಧಿಕಾರಿಗಳು.

ಬಿ.ಎ., ಬಿಕಾಂ., ಬಿಎಸ್ಸಿ ಮೊದಲಾದ ಸಾಂಪ್ರದಾಯಿಕ ಪದವಿ ಪಡೆದ ಕೆಲವರಿಗೆ ಮಾತ್ರ ಉದ್ಯೋಗ ಸಿಗುತ್ತದೆ. ಕೌಶಲ ಇಲ್ಲದ ಕಾರಣ ಬಿ.ಎ ಪಡೆದ ಬಹಳಷ್ಟು ಮಂದಿ ನಿರುದ್ಯೋಗಿಗಳಾಗಿದ್ದಾರೆ. ಆ ರೀತಿ ಆಗಬಾರದು ಎಂಬ ಉದ್ದೇಶದಿಂದ ಪದವಿ ವ್ಯಾಸಂಗ ಅವಧಿಯಲ್ಲೇ ಕೌಶಲ ತರಬೇತಿ ನೀಡಲು ಮುಂದಾಗಿದ್ದೇವೆ. ತರಬೇತಿ ನಂತರ ಪ್ರಮಾಣ ಪತ್ರ ನೀಡಲಾಗುತ್ತದೆ. ಮುಂದೆ ಉದ್ಯೋಗ ಪಡೆಯಲು ಇದು ನೆರವಾಗುತ್ತದೆ ಎನ್ನುತ್ತಾರೆ ಉನ್ನತ ಶಿಕ್ಷಣ ಇಲಾಖೆಯ ಹೆಚ್ಚುವರಿ ಮುಖ್ಯಕಾರ್ಯದರ್ಶಿಗಳು.

ಥಿಯರಿಗಿಂತ ಪ್ರಾಯೋಗಿಕ ಕಲಿಕೆ ಬಹಳ ಮುಖ್ಯ. ಯಾವ ರೀತಿಯ ತರಬೇತಿ ಪಡೆದ ಮಾನವ ಸಂಪನ್ಮೂಲದ ಅಗತ್ಯವಿದೆ ಎಂದು ಔದ್ಯಮಿಕ ವಲಯದ ಮುಖ್ಯಸ್ಥರೊಂದಿಗೆ ಚರ್ಚಿಸಲಾಗಿದೆ. ಅವರ ಸಲಹೆ ಸೂಚನೆಗಳೊಂದಿಗೆ ತರಬೇತಿಯ ಪಠ್ಯಕ್ರಮ ರೂಪಿಸಲಾಗಿದೆ. ಅಲ್ಲದೆ ಕೈಗಾರಿಕಾ ಸಂಸ್ಥೆಗಳೊಂದಿಗೆ ಒಪ್ಪಂದವನ್ನೂ ಮಾಡಿಕೊಂಡಿದ್ದು ವಿದ್ಯಾರ್ಥಿಗಳಿಂದ ಬರುವ ಬೇಡಿಕೆಯನ್ನು ಆಧರಿಸಿ ತರಬೇತಿ ಕಾರ್ಯಕ್ರಮವನ್ನು ಆರಂಭಿಸಲಾಗುತ್ತದೆ.

**ಸಮುದಾಯ ಕಾಲೇಜು**

ವಿವಿಧ ವೃತ್ತಿ ಕೌಶಲಗಳ ಬಗ್ಗೆ ತರಬೇತಿ ನೀಡುವ ಉದ್ದೇಶದಿಂದ ಕೇಂದ್ರ ಸರ್ಕಾರ 12ನೇ ಪಂಚವಾರ್ಷಿಕ ಯೋಜನೆಯಡಿ 200 ಸಮುದಾಯ ಕಾಲೇಜುಗಳನ್ನು ಆರಂಭಿಸಲು ನಿರ್ಧರಿಸಿದ್ದು, ರಾಜ್ಯದಲ್ಲಿ ಸದ್ಯ 14 ಪದವಿ ಕಾಲೇಜುಗಳಿಗೆ, ಸಮುದಾಯ ಕಾಲೇಜುಗಳು ಎಂದು ಮಾನ್ಯತೆ ನೀಡಲಾಗಿದೆ. ಬೆಂಗಳೂರಿನ ಗೃಹ ವಿಜ್ಞಾನ ಕಾಲೇಜು ಸೇರಿದಂತೆ ಎಲ್ಲ 14 ಕಾಲೇಜುಗಳಲ್ಲಿ ಕೋರ್ಸ್‌ಗಳು ಆರಂಭವಾಗಿವೆ.

ಪ್ರಸ್ತುತ ಇರುವ ಪದವಿ ಕಾಲೇಜುಗಳಿಗಿಂತ ಭಿನ್ನವಾಗಿ ಕಾರ್ಯನಿರ್ವಹಿಸುವ ಸಮುದಾಯ ಕಾಲೇಜುಗಳು ಮಾರುಕಟ್ಟೆಯಲ್ಲಿನ ಅಗತ್ಯಕ್ಕೆ ತಕ್ಕಂತೆ ಉದ್ಯೋಗ ಆಧಾರಿತ ಅಲ್ಪಾವಧಿ ಹಾಗೂ ದೀರ್ಘಾವಧಿ ಕೋರ್ಸ್‌ಗಳನ್ನು ಕಲಿಸಲಾಗುತ್ತದೆ. ಆರು ತಿಂಗಳ ಪದವಿ ಸರ್ಟಿಫಿಕೇಟ್ ಕೋರ್ಸ್‌ನಿಂದ ಹಿಡಿದು ಸ್ನಾತಕೋತ್ತರ ಪದವಿವರೆಗೂ ವ್ಯಾಸಂಗ ಮಾಡಲು ಅವಕಾಶ ಇದೆ.

ಸಾಂಪ್ರದಾಯಿಕ ಶಿಕ್ಷಣ ಪದ್ಧತಿಗೆ ವಿದಾಯ ಹೇಳಿ, ಪದವಿ ಜೊತೆಯಲ್ಲೇ ಹೇರ್‌ಕಟಿಂಗ್, ಸೌಂದರ್ಯವರ್ಧನೆ, ರೇಷ್ಮೆ, ಸರ್ವೇ, ವೆಲ್ಡಿಂಗ್, ವುಡ್‌ಸೈನ್ಸ್, ಕಾರ್ಪೆಂಟರ್, ಒಳಾಂಗಣ ವಿನ್ಯಾಸ, ಆಟಿಕೆಗಳು, ಗ್ರೀಟಿಂಗ್ಸ್, ಚಿನ್ನಾಭರಣ ತಯಾರಿಕೆ, ಇವೆಂಟ್ ಮ್ಯಾನೇಜ್‌ಮೆಂಟ್ ಸೇರಿದಂತೆ ಹಲವಾರು ಕೋರ್ಸ್‌ಗಳ ವ್ಯಾಸಂಗಕ್ಕೆ ಸಮುದಾಯ ಕಾಲೇಜುಗಳಲ್ಲಿ ಅವಕಾಶವಿದೆ. ನೀಡಲಾಗುತ್ತಿದೆ. ಹಾಲಿ ಇರುವ ಸಾಂಪ್ರದಾಯಿಕ ಶಿಕ್ಷಣ ಪದ್ಧತಿಯಲ್ಲಿ



ಪದವಿ ಪಡೆದವರಿಗೆ ಸಮರ್ಪಕವಾಗಿ ಉದ್ಯೋಗಾವಕಾಶಗಳು ಲಭ್ಯವಾಗದ ಕಾರಣ ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯ ಪರ್ಯಾಯ ಶಿಕ್ಷಣಕ್ಕೆ ಮುಂದಾಗಿದ್ದು, ಭವಿಷ್ಯದಲ್ಲಿ ಎಲ್ಲ ಪದವಿ ಕಾಲೇಜುಗಳನ್ನು ಸಮುದಾಯ ಕಾಲೇಜುಗಳನ್ನಾಗಿ ಪರಿವರ್ತಿಸುವ ಉದ್ದೇಶವನ್ನು ಸಚಿವಾಲಯ ಹೊಂದಿದೆ. ಸಮುದಾಯ ಕಾಲೇಜುಗಳಿಗೆ ಶೇ 100ರಷ್ಟು ಅನುದಾನವನ್ನು ಕೇಂದ್ರ ಸರ್ಕಾರವೇ ಭರಿಸಲಿದೆ. ಕನಿಷ್ಠ ಪಿಯುಸಿ ವಿದ್ಯಾರ್ಹತೆವುಳ್ಳವರು ಸಮುದಾಯ ಕಾಲೇಜುಗಳಿಗೆ ಪ್ರವೇಶ ಪಡೆಯಬಹುದು.

ಆರು ತಿಂಗಳ ಕೋರ್ಸ್ ಆದರೆ ಸರ್ಟಿಫಿಕೇಟ್, ಒಂದು ವರ್ಷದ ಕೋರ್ಸ್ ಆದರೆ ಡಿಪ್ಲೊಮಾ, ಒಂದೂವರೆ ವರ್ಷದ ಕೋರ್ಸ್ ಆದರೆ ಪೋಸ್ಟ್ ಡಿಪ್ಲೊಮಾ, ಎರಡು ವರ್ಷದ ಕೋರ್ಸ್ ಆದರೆ ಟಡ್ವಾನ್ಸಡ್ ಡಿಪ್ಲೊಮಾ ಹಾಗೂ ಮೂರು ವರ್ಷದ ಕೋರ್ಸ್ ಆದರೆ ಪದವಿ ಎಂದು ಪರಿಗಣಿಸಲಾಗುತ್ತದೆ. ಪದವಿ ನಂತರ ಉನ್ನತ ಶಿಕ್ಷಣ ಪಡೆಯಲು ಬಯಸುವುದಾದರೆ ಸ್ನಾತಕೋತ್ತರ ಪದವಿ ಪಡೆಯಲು ಅವಕಾಶವಿದೆ.

ಸರ್ಟಿಫಿಕೇಟ್, ಡಿಪ್ಲೊಮಾ ಪಡೆದ ನಂತರ ಕೆಲಸಕ್ಕೆ ಹೋಗಬಹುದು. ಉದ್ಯೋಗಕ್ಕೆ ಸೇರಿದ ಕೆಲ ವರ್ಷಗಳ ನಂತರ ಉನ್ನತ ಶಿಕ್ಷಣ ಪಡೆಯಲು ಬಯಸಿದರೆ, ಅದಕ್ಕೂ ಅವಕಾಶ ಇರುತ್ತದೆ. ಯಾವಾಗ ಬೇಕಾದರೂ ಕೆಲಸಕ್ಕೆ ಹೋಗುವ, ಮತ್ತೆ ಕಾಲೇಜಿಗೆ ಬರುವ ಮುಕ್ತ ಅವಕಾಶ ಕಲ್ಪಿಸಲಾಗಿದೆ. ಸ್ಥಳೀಯ ಉದ್ಯಮಿಗಳೊಂದಿಗೆ ಚರ್ಚಿಸಿ, ಅವರ ಅಗತ್ಯಗಳಿಗೆ ಅನುಗುಣವಾಗಿ ಪಠ್ಯಕ್ರಮ ಸಿದ್ಧಪಡಿಸಲಾಗಿದೆ. ನಿರ್ದಿಷ್ಟ ಕ್ಷೇತ್ರದಲ್ಲಿ ಕೌಶಲವುಳ್ಳವರ ಅಗತ್ಯವಿದೆ



ಎಂದು ಉದ್ಯಮಿಗಳು ಹೇಳಿದರೆ, ಅಂತಹ ಕೋರ್ಸ್ ಆರಂಭಿಸಲು ಅವಕಾಶವಿದೆ.

**ಬದಲಾವಣೆ ಅಗತ್ಯ**

ಎರಡು ವರ್ಷದ ಐಟಿಐ, ಮತ್ತು ಮೂರು ವರ್ಷದ ಡಿಪ್ಲೊಮಾ ಕೋರ್ಸ್‌ಗಳಲ್ಲಿ ಪ್ರಾಯೋಗಿಕ ಕಲಿಕೆಗೆ ಅವಕಾಶವಿದ್ದು, ಇವುಗಳನ್ನು ವ್ಯಾಸಂಗ ಮಾಡಿದವರಿಗೆ ಮಾರುಕಟ್ಟೆಯಲ್ಲಿ ಹೆಚ್ಚಿನ ಉದ್ಯೋಗ ಅವಕಾಶಗಳು ಲಭ್ಯವಿವೆ. ವೃತ್ತಿಪರ ಕೋರ್ಸ್‌ಗಳು ಎಂದು ಇವನ್ನು ಪರಿಗಣಿಸಿದ್ದು, ಉನ್ನತ ಶಿಕ್ಷಣ ಪಡೆಯಲು ಸಾಧ್ಯವಾಗದವರು, ಆದಷ್ಟು ಬೇಗ ಆರ್ಥಿಕವಾಗಿ ಸ್ವಾವಲಂಬನೆ ಆಗಬೇಕು ಎಂದು ಬಯಸುವವರು ಈ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಎಸ್ಸೆಸ್ಸೆಲ್ಸಿ ನಂತರ ಪ್ರತಿ ವರ್ಷ ಸಾವಿರಾರು ಮಂದಿ ಈ ಕೋರ್ಸ್‌ಗಳಿಗೆ ಸೇರುತ್ತಿದ್ದಾರೆ. ಆದರೆ, ಬಹಳಷ್ಟು ಕೈಗಾರಿಕಾ ಸಂಸ್ಥೆಗಳು, ಪಾಲಿಟೆಕ್ನಿಕ್‌ಗಳಲ್ಲಿ ಸಮರ್ಪಕವಾದ ಮೂಲಸೌಕರ್ಯಗಳು, ಅನುಭವಿ ಬೋಧನಾ ಸಿಬ್ಬಂದಿ ಇಲ್ಲ. ಹೀಗಾಗಿ ಗುಣಮಟ್ಟದ ಶಿಕ್ಷಣ, ತರಬೇತಿ ಸಿಗುತ್ತಿಲ್ಲ



ಎಂಬ ಮಾತುಗಳು ಕೇಳಿ ಬರುತ್ತಿವೆ. ಈ ನ್ಯೂನತೆಗಳನ್ನು ಸರಿಪಡಿಸುವ ಮೂಲಕ ಇನ್ನಷ್ಟು ಪ್ರಾಯೋಗಿಕ ಕಲಿಕೆಗೆ ಒತ್ತು ನೀಡಿದರೆ ಉದ್ಯೋಗ ಪಡೆಯಲು ಅನುಕೂಲವಾಗಲಿದೆ.

ಇನ್ನು ಕರ್ನಾಟಕದಲ್ಲಿ 200ಕ್ಕೂ ಅಧಿಕ ಎಂಜಿನಿಯರಿಂಗ್ ಕಾಲೇಜುಗಳಿದ್ದು, ಬಹುತೇಕ ಕಾಲೇಜುಗಳಲ್ಲಿ ಮೂಲಸೌಕರ್ಯಗಳು ಇಲ್ಲ. ಅಲ್ಲದೆ ನುರಿತ ಸಿಬ್ಬಂದಿಯೂ ಇಲ್ಲ. ಮಾರುಕಟ್ಟೆಯಲ್ಲಿ ಲಭ್ಯವಿರುವ ಉದ್ಯೋಗ ಅವಕಾಶಗಳಿಗೆ ಪೂರಕವಾದ ಪಠ್ಯಕ್ರಮವೂ ಇಲ್ಲ. ಹೀಗಾಗಿ ಬಹಳಷ್ಟು ಎಂಜಿನಿಯರಿಂಗ್ ಪದವೀಧರರಲ್ಲಿ ಕೌಶಲ ಕೊರತೆ ಎದ್ದು ಕಾಣುತ್ತಿದೆ. ಪದವಿ ಪಡೆದರೂ ಉದ್ಯೋಗ ಇಲ್ಲದೆ ಅಲೆದಾಡುವಂತಾಗಿದೆ.

ಕ್ಯಾಂಪಸ್ ಸಂದರ್ಶನ ಮೂಲಕ ಕೆಲವರಿಗೆ ಮಾತ್ರ ಪ್ರಮುಖ ಕಂಪೆನಿಗಳಲ್ಲಿ ಉದ್ಯೋಗ ಸಿಗುತ್ತಿದ್ದು, ಉಳಿದವರು ಮುಖ್ಯವಾಹಿನಿಯಿಂದ ದೂರವೇ ಉಳಿದಿದ್ದಾರೆ. ಇದನ್ನು ಮನಗಂಡಿರುವ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಕೈಗಾರಿಕಾ ಸಂಸ್ಥೆಗಳು, ಪ್ರಮುಖ ಐ.ಟಿ ಕಂಪೆನಿಗಳೊಂದಿಗೆ ಒಪ್ಪಂದ ಮಾಡಿಕೊಂಡು ಪದವೀಧರರಿಗೆ ಕೌಶಲ ತರಬೇತಿ ನೀಡುತ್ತಿದೆ. ಇದಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದು, ಈ ರೀತಿ ತರಬೇತಿ ಪಡೆದ ಹಲವರು ಉದ್ಯೋಗ ಪಡೆದುಕೊಂಡಿದ್ದಾರೆ. ಇದನ್ನು ಮತ್ತಷ್ಟು ಪರಿಣಾಮಕಾರಿಯನ್ನಾಗಿ ಮಾಡಿದರೆ ಗ್ರಾಮೀಣ ಭಾಗದ ಪದವೀಧರರಿಗೆ ಅನುಕೂಲವಾಗಲಿದೆ.

**ನ್ಯಾಷನಲ್ ಅಕಾಡೆಮಿ ಫಾರ್ ಸ್ಕಿಲ್ ಡೆವಲಪ್‌ಮೆಂಟ್**

ಔದ್ಯಮಿಕ ವಲಯದಲ್ಲಿನ ಬೇಡಿಕೆಗೆ ತಕ್ಕಂತೆ ತರಬೇತಿ ನೀಡುವ ಮೂಲಕ ಕೌಶಲವಿರುವ ಮಾನವ ಸಂಪನ್ಮೂಲದ ಕೊರತೆ ಆಗದಂತೆ ನೋಡಿಕೊಳ್ಳುವ ಉದ್ದೇಶದಿಂದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿ ನ್ಯಾಷನಲ್ ಅಕಾಡೆಮಿ ಫಾರ್ ಸ್ಕಿಲ್ ಡೆವಲಪ್‌ಮೆಂಟ್ ಕೇಂದ್ರವನ್ನು ಆರಂಭಿಸಿದೆ. ಅಲ್ಲಿ ನಾನಾ ಕ್ಷೇತ್ರಗಳ ಬಗ್ಗೆ ಕೌಶಲ ತರಬೇತಿ ನೀಡಲಾಗುತ್ತಿದೆ. ಇದಲ್ಲದೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಕೌಶಲ ಅಭಿವೃದ್ಧಿ ಕೇಂದ್ರವನ್ನು ಬೆಂಗಳೂರಿನಲ್ಲಿ ಆರಂಭಿಸಿದೆ.

ನಾಸ್ಕಾಂ ನಡೆಸಿರುವ ಸಮೀಕ್ಷೆ ಪ್ರಕಾರ ಈಗಾಗಲೇ ದೇಶದಲ್ಲಿ ಕೌಶಲ ಇರುವ ಮಾನವ ಸಂಪನ್ಮೂಲದ ಕೊರತೆ ಇದೆ. ಪ್ರತಿ ವರ್ಷ ಉದ್ಯೋಗಾವಕಾಶಗಳ ಸೃಷ್ಟಿಯಾಗುತ್ತಿದೆ. ಆದರೆ, ಕೌಶಲವುಳ್ಳ



ಮಾನವ ಸಂಪನ್ಮೂಲ ಲಭ್ಯವಿಲ್ಲ. ಇದನ್ನು ಮನಗಂಡು ಪ್ರಧಾನಿ ನರೇಂದ್ರ ಮೋದಿ ಅವರು ಮಹತ್ವಾಕಾಂಕ್ಷೆಯ ಕೌಶಲ ಭಾರತ ಯೋಜನೆ ಘೋಷಿಸಿದ್ದಾರೆ.

ತಾಂತ್ರಿಕ ಪದವೀಧರರಲ್ಲಿ ವೃತ್ತಿಕೌಶಲದ ಕೊರತೆ ನೀಗಿಸಲು 2022ರ ವೇಳೆಗೆ 50 ಲಕ್ಷ ಜನರಿಗೆ ಕೌಶಲ ಅಭಿವೃದ್ಧಿ ತರಬೇತಿ ನೀಡುವ ಉದ್ದೇಶವನ್ನು ಕೇಂದ್ರ ಸರ್ಕಾರ ಹೊಂದಿದೆ. ದೇಶದಲ್ಲಿ ಪ್ರತಿ ವರ್ಷ ಏಳು ಲಕ್ಷ ಮಂದಿ ಎಂಜಿನಿಯರಿಂಗ್ ಹಾಗೂ ಎಂಟು ಲಕ್ಷ ಮಂದಿ ಡಿಪ್ಲೊಮಾ ಮುಗಿಸಿ ಹೊರ ಬರುತ್ತಿದ್ದಾರೆ. ಆದರೆ, ಅವರಲ್ಲಿ ವೃತ್ತಿಕೌಶಲದ ಕೊರತೆ ಇರುವುದರಿಂದ ನಿರೀಕ್ಷಿತ ಮಟ್ಟದ ಅಭಿವೃದ್ಧಿ ಆಗುತ್ತಿಲ್ಲ. ಹೀಗಾಗಿ ಕೌಶಲ ತರಬೇತಿಗೆ ಹೆಚ್ಚಿನ ಒತ್ತು ನೀಡಲು ಸರ್ಕಾರ ಮುಂದಾಗಿದೆ.

**ಜರ್ಮನಿ ನೆರವು**

ಜರ್ಮನಿಯ ಜಿಐಜೆಡ್–ಐಎನ್ ಸಂಸ್ಥೆಯ ತಾಂತ್ರಿಕ ನೆರವಿನೊಂದಿಗೆ ಕಾರ್ಮಿಕ ಇಲಾಖೆಯು ಬೆಂಗಳೂರು ಮತ್ತು ಕಲಬುರ್ಗಿಯಲ್ಲಿ ಬಹುಕೌಶಲ ಅಭಿವೃದ್ಧಿ ಕೇಂದ್ರಗಳನ್ನು 2012ರಲ್ಲಿ ಸ್ಥಾಪಿಸಿದ್ದು, ಆ ಕೇಂದ್ರಗಳಲ್ಲಿ ನಾನಾ ರೀತಿಯ ವೃತ್ತಿ ತರಬೇತಿಗಳನ್ನು ನೀಡಲಾಗುತ್ತಿದೆ. ಕ್ರಮೇಣ ಬೆಳಗಾವಿ ಮತ್ತು ಮಂಗಳೂರಿನಲ್ಲೂ ಈ ಕೇಂದ್ರಗಳು ಆರಂಭವಾಗಿದ್ದು, ನಿರ್ಮಾಣ ತಂತ್ರಜ್ಞಾನ, ಅಡ್ವಾನ್ಸ್‌ಡ್ ವೆಲ್ಡಿಂಗ್ ಟೆಕ್ನಾಲಜಿ, ಮಾಹಿತಿ ತಂತ್ರಜ್ಞಾನ, ಇಂಡಸ್ಟ್ರಿಯಲ್ ಆಟೊಮೇಷನ್ ಮೊದಲಾದ ವಿಷಯಗಳಲ್ಲಿ ತರಬೇತಿ ನೀಡುವ ವ್ಯವಸ್ಥೆ ಇದೆ.

ರಾಜ್ಯದಲ್ಲಿನ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಒಂದೂವರೆ ಲಕ್ಷಕ್ಕೂ ಅಧಿಕ ಅಭ್ಯರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಅವರಿಗೆ ಹೆಚ್ಚಿನ ವೃತ್ತಿ ತರಬೇತಿ ಪಡೆಯಲು ಬಹುಕೌಶಲ ತರಬೇತಿ ಕೇಂದ್ರಗಳು ಸಹಕಾರಿಯಾಗಿವೆ.

**(63ನೇ ಪುಟಕ್ಕೆ)**

# ಗಾಂಧೀ –ಚರಕ – ಸಹಕಾರ – ಸ್ವಾವಲಂಬನೆ

* ಎಸ್.ಸಿ. ದೇವರಮನಿ



ಮಹಿಳಾ ನೇಕಾರರನ್ನು ಸಬಲೀಕರಿಸಿ ಅವರ ಬಾಳಲ್ಲಿ ನಗುವನ್ನು ಮೂಡಿಸುವುದೇ ಚರಕದ ಸದುದ್ದೇಶ

ಸಹಕಾರ ತತ್ವದಿಂದ ಮಹಿಳೆಯರ ಮಾನಸಿಕ ಸ್ಥೈರ್ಯಹೆಚ್ಚಿದೆ. ಅವರೆಲ್ಲ ಸಬಲರಾಗಿದ್ದಾರೆ ಸ್ವಾಯತ್ತತೆ ಹಾಗೂ ಸ್ವಾತಂತ್ರ್ಯ ಚರಕದ ವಿಶೇಷತೆ. ಅದು ಅಲ್ಲದೆ ಸಮಾಜಮುಖಿಯಾಗಿ ಕಾರ್ಯನಿರ್ವಹಿಸುವುದು ಈ ಚಿಕ್ಕ ಹಾಗೂ ಸುಂದರವಾದ ಸಂಸ್ಥೆಯ ಹೆಗ್ಗಳಿಕೆಯಾಗಿದೆ

ಚರಕ ರಾಷ್ಟ್ರೀಯತೆ, ಸ್ವಾವಲಂಬನೆ ಹಾಗೂ ಗುಡಿ ಕೈಗಾರಿಕೆಗಳ ಸಂಕೇತವೆಂಬುವುದು ಗಾಂಧೀಜಿಯವರ ಅಭಿಮತವಾಗಿತ್ತು. ಅರ್ಥವ್ಯವಸ್ಥೆಯ ವಿಕೇಂದ್ರೀಕರಣ, ಶೋಷಣೆರಹಿತ ಶ್ರಮ ಸಂಸ್ಕೃತಿ, ಸಮಾನತೆಯ ನಿರ್ಮಾಣ, ಪರಿಸರಸ್ನೇಹಿ ಅಭಿವೃದ್ಧಿ, ಗ್ರಾಮಗಳ ಪುನರ್‌ನಿರ್ಮಾಣ, ಸ್ವಾವಲಂಬನೆ, ಕೆಳಸ್ತರದವರ ಅಭಿವೃದ್ಧಿ, ಸಮಸ್ತ ಮನುಕುಲದ ಕಲ್ಯಾಣವನ್ನು ಸರ್ವೋದಯದ ಪರಿಧಿಯಲ್ಲಿ ಗಾಂಧೀಜಿಯವರು ವಿವರಿಸಿದ್ದರು. ಈ ಅಂಶಗಳನ್ನು ಪ್ರಸ್ತುತ ಪಡಿಸುತ್ತ ಸ್ವದೇಶಿಯತೆಯನ್ನು ಹುಟ್ಟುಹಾಕಿದ್ದರು, ಸ್ವಾತಂತ್ರ್ಯಾನಂತರದಲ್ಲೂ ಅವರ ಆಶಯಗಳನ್ನು ಮುಂದಿಟ್ಟುಕೊಂಡು ಅನೇಕ ಸಂಘ– ಸಂಸ್ಥೆಗಳು ಕಾರ್ಯನಿರತವಾಗಿವೆ. ಅವುಗಳಲ್ಲಿ ಚರಕ ಮಹಿಳಾ ವಿವಿಧೋದ್ದೇಶ ಕೈಗಾರಿಕಾ ಸಹಕಾರ ಸಂಘ ನಿ. (ಚರಕ), ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಭೀಮನಕೋಣೆಯಲ್ಲಿ ಕಾರ್ಯನಿರ್ವಹಿಸುತ್ತಿದೆ.

### ಪ್ರಸನ್ನರ ದೂರದೃಷ್ಟಿ

ದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯಲ್ಲಿ ಕಾರ್ಯನಿರತ ಪ್ರಸಿದ್ಧ ರಂಗಕರ್ಮಿ, ಲೇಖಕ ಪ್ರಸನ್ನ ಅವರು ಗಾಂಧೀಜಿಯವರ ಆಶಯದ ಗ್ರಾಮಾಭಿವೃದ್ಧಿಯ ಕುರಿತು ಚಿಂತನೆಮಾಡಿ, ನಗರ ಜೀವನ ತೊರೆದು ಹೆಗ್ಗೋಡಿಗೆ ಬಂದು ನೆಲೆಸಿದರು. ದೇಸಿ ಸಂಸ್ಕೃತಿಗೆ ಮಾರುಹೋದರು. ಸಾಹಿತ್ಯ ಹಾಗೂ ಸಂಸ್ಕೃತಿಯ ಉಳಿವು ಹಾಗೂ ಅಭಿವೃದ್ಧಿಗಾಗಿ 'ಕವಿಕಾವ್ಯ' ಟ್ರಸ್ಟ್‌ನ್ನು ಸ್ಥಾಪಿಸಿದರು. ಈ ಸಂಸ್ಥೆಯ ಅಡಿಯಲ್ಲಿ ಗ್ರಾಮೀಣ ಜನಪದ ಕಲೆಯಾದ ಚಿತ್ತಾರ ಹಾಗೂ ದೇಸಿ ಆಹಾರಪದ್ಧತಿಗೆ ಪ್ರೋತ್ಸಾಹ ನೀಡಿದರು. ಗ್ರಾಮೀಣ ಮಹಿಳೆಯರಿಗೆ ನೇಯ್ಗೆ ಹಾಗೂ ಹೊಲಿಗೆಯ ಉದ್ಯೋಗ ಪ್ರಾರಂಭಿಸಿದರು. ಉತ್ಪಾದನೆಯಾದ ವಸ್ತುಗಳನ್ನು ನಗರ ಪ್ರದೇಶಗಳಲ್ಲಿ ನಡೆಯುವ ಸಾಂಸ್ಕೃತಿಕ ಹಾಗೂ ಸಾಹಿತ್ಯ ಸಮಾವೇಶಗಳಲ್ಲಿ ಮಾರಾಟದ ಜವಾಬ್ದಾರಿಯನ್ನು ನಿಭಾಯಿಸಿದರು. ತದನಂತರ 1996 ರಲ್ಲಿ ಚರಕ ಮಹಿಳಾ ವಿವಿದ್ದೋಶ ಔದ್ಯೋಗಿಕ ಸಹಕಾರಿ ಸಂಘವನ್ನು ನೊಂದಣಿ ಮಾಡಿಸಿದರು. ವ್ಯವಸ್ಥಿತವಾದ ಮಾರುಕಟ್ಟೆ ಒದಗಿಸುವ ದಿಸೆಯಲ್ಲಿ 2000 ರಲ್ಲಿ ದೇಸಿ ಟ್ರಸ್ಟ್‌ನ್ನು ಹುಟ್ಟುಹಾಕಿದರು. ಗ್ರಾಮೀಣ ಜನರಿಗೆ ತರಬೇತಿನೀಡಲು ಶ್ರಮಜೀವಿ ಆಶ್ರಮವನ್ನು ಹುಟ್ಟುಹಾಕಿದರು.

### ಸಣ್ಣದ್ದೆಲ್ಲ ಸುಂದರ

ಒಂದು ಚಿಕ್ಕ ಕೊಠಡಿಯಲ್ಲಿ 13 ಜನ ಮಹಿಳೆಯರೊಂದಿಗೆ ಪ್ರಾರಂಭವಾದ ಚರಕ ಸಂಸ್ಥೆ. ಇಂದು 300ಕ್ಕೂ ಹೆಚ್ಚು ಮಹಿಳೆಯರು ಕೈಮಗ್ಗ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಸುಸ್ಥಿರವಾಗಿ ಬದುಕುತ್ತಿದ್ದಾರೆ. ತನ್ನದೇ ಆದ ಬಣ್ಣದಮನೆ, ನೇಯ್ಗೆ, ಹೊಲಿಗೆ, ಕಸೂತಿ, ಕೈ ಅಚ್ಚು, ಚಿತ್ತಾರ, ವಿನ್ಯಾಸ ಹೀಗೆ ವಿವಿಧ



ಸಾಂಪ್ರದಾಯಿಕ ರೀತಿಯಲ್ಲಿ ಇಂಡಿಗೋ (ನೀಲಿ) ಬಣ್ಣ ತಯಾರಿಕೆ

* ನಿವೃತ್ತ ಉಪನಿರ್ದೇಶಕರು (ಕರಕುಶಲ).



ಚರಕ ಸಂಸ್ಥೆಯ ಸುಂದರ ಪರಿಸರ

ವಿಭಾಗಗಳೂ ಒಂದೇ ಸೂರಿನಡಿಯಲ್ಲಿ ಕಾರ್ಯನಿರತವಾಗಿವೆ. ಚರಕ ತನ್ನದೇ ಆದ ಶ್ರಮಜೀವಿ ಆಶ್ರಮವನ್ನು ಗ್ರಾಮೀಣ ಜನರ ತರಬೇತಿಗಾಗಿ ಗಾಂಧೀ ಆಶ್ರಮದ ಮಾದರಿಯಲ್ಲಿ ನಡೆಸಿಕೊಂಡು ಬರುತ್ತಿದೆ. ಹೆಗ್ಗೋಡು ಗ್ರಾಮದ ಪರಿಸರದ ಹಳ್ಳಿಗಳಲ್ಲಿ ಉತ್ಪಾದನಾ ಘಟಕಗಳನ್ನು ಸ್ಥಾಪಿಸಿದೆ. ಬೆಳಗ್ಗೆ ಒಟ್ಟಾಗಿ ಸೇರಿ ಪ್ರಾರ್ಥನೆ ಮಾಡುತ್ತಾರೆ. ತದ ನಂತರ ಕಾಯಕ ಪ್ರಾರಂಭಿಸುತ್ತಾರೆ. ಒಟ್ಟಾಗಿ ಟಿ/ಕಾಫಿ ಕುಡಿಯುತ್ತಾರೆ ಒಟ್ಟಾಗಿ ಊಟಮಾಡುತ್ತಾರೆ. ವರ್ಷಕ್ಕೊಮ್ಮೆ ಚರಕ ಉತ್ಸವ ಆಯೋಜಿಸಿ, ತಮ್ಮಲ್ಲಿ ಹುದುಗಿರುವ ಸಾಂಸ್ಕೃತಿಕ ಪ್ರತಿಭೆಯನ್ನು ಹೊರಹಾಕಿ ಹರ್ಷಪಡುತ್ತಾರೆ. ಹೃದಯಾಳದಿಂದ ಹೊರಹೊಮ್ಮುವ ಭಾವನೆಗಳನ್ನು ಅಕ್ಷರ ರೂಪದಲ್ಲಿ ಹೊರತರಲು ಪ್ರತಿ ಮಾಹೆ 'ಚಿಗುರು' ಪತ್ರಿಕೆಯನ್ನು ಪ್ರಕಟಿಸುತ್ತಾರೆ. ಮಹಿಳೆಯರೇ ಸಂಸ್ಥೆಯ ಆಡಳಿತದ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿಭಾಯಿಸುತ್ತಿದ್ದಾರೆ. ಚುನಾಯಿತ ನಿರ್ದೇಶಕರ ಆಡಳಿತಮಂಡಳಿ ಪ್ರತಿ ತಿಂಗಳು 25 ರಂದು ಸಭೆಸೇರಿ ಕುಂದು ಕೊರತೆಗಳಿಗೆ ಸಮಾಧಾನ ಕಂಡು ಕೊಳ್ಳುತ್ತದೆ.

## ಅಭಿವೃದ್ಧಿಗೆ ಸಹಕಾರವೇ ಹೆಬ್ಬಾಗಿಲು

ಮಾನವ ಮೂಲಭೂತವಾಗಿ ಸಂಘಜೀವಿ ಪರಸ್ಪರ ಸಹಾಯ ಸಹಕಾರವಿಲ್ಲದೆ ಬಾಳುವುದು ಅಸಾಧ್ಯ, ಚರಕದಲ್ಲಿ ಸಹಕಾರವೆಂದರೆ ಸ್ವಸಹಾಯ, ಒಟ್ಟಾಗಿ ಚಿಂತನೆ ಮಾಡುವುದು, ಒಟ್ಟಾಗಿ



ಸಿದ್ಧ ಉಡುಪು ತಯಾರಿಕೆಯಲ್ಲಿ ನಿರತ ಮಹಿಳೆಯರು

ದುಡಿಯುವುದಾಗಿದೆ. ಲಭ್ಯವಿರುವ ಸಾಧನ ಸಾಮಗ್ರಿಗಳನ್ನು ಒಟ್ಟಾಗಿ ಬಳಸಿ ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಭಿವೃದ್ಧಿಯನ್ನು ಹೊಂದುವುದಾಗಿದೆ. ಇಲ್ಲಿ ಶೋಷಣಾರಹಿತ ಬಾಳನ್ನು ಬದುಕುತ್ತಿದ್ದಾರೆ. ಒಗ್ಗಟ್ಟಿನಲ್ಲಿ ಅದಮ್ಯ ಶಕ್ತಿ ಇದೆ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಗಾಂಧೀಜಿಯವರು ಹೇಳಿದಂತೆ "ಭಾರತದ ಆರ್ಥಿಕ ಸ್ವಾತಂತ್ರ್ಯಕ್ಕೆ ಸಹಕಾರವೇ ಹೆಬ್ಬಾಗಿಲು" ಎಂಬುದುನ್ನು ನಿಜವಾಗಿಸಿದ್ದಾರೆ. ಸಹಕಾರ ತತ್ವದಿಂದ ಮಹಿಳೆಯರ ಮಾನಸಿಕ ಸ್ಥೈರ್ಯಹೆಚ್ಚಿದೆ. ಅವರೆಲ್ಲ ಸಬಲರಾಗಿದ್ದಾರೆ ಸ್ವಾಯತ್ತತೆ ಹಾಗೂ ಸ್ವಾತಂತ್ರ್ಯ ಚರಕದ ವಿಶೇಷತೆ. ಅದು ಅಲ್ಲದೆ ಸಮಾಜಮುಖಿಯಾಗಿ ಕಾರ್ಯನಿರ್ವಹಿಸುವುದು ಈ ಚಿಕ್ಕ ಹಾಗೂ ಸುಂದರವಾದ ಸಂಸ್ಥೆಯ ಹೆಗ್ಗಳಿಕೆಯಾಗಿದೆ.

## ಕೈಮಗ್ಗ ಬಟ್ಟೆನೇಯ್ಗೆಯ ಮುಂಚೂಣಿ

ಚರಕ ಪ್ರತಿ ತಿಂಗಳು 20,000 ಮೀಟರನಷ್ಟು ನೈಸರ್ಗಿಕ ಬಣ್ಣದ ಕೈಮಗ್ಗ ಬಟ್ಟೆಯನ್ನು ನೇಯ್ಗೆ ಮಾಡಿ ಅದನ್ನು ಬಳಸಿ ವಿವಿಧ ಬಗೆಯ ಸಿದ್ಧ ಉಡುಪುಗಳನ್ನು ತಯಾರಿಸಿ ಗ್ರಾಹಕರಿಗೆ ಒದಗಿಸುತ್ತಿದೆ. ಈ ಕೈಮಗ್ಗದ ಉಡುಪುಗಳು 'ದೀರ್ಘಬಾಳಿಕೆ, ವಿಭಿನ್ನ ವಿನ್ಯಾಸ ಹಾಗೂ ವಿಶಿಷ್ಟತೆಯಿಂದ ಕೂಡಿದ್ದು, ಜುಬ್ಬಾ, ಪೈಜಾಮ, ಕೋಟು, ಚೂಡಿದಾರ್, ಟಾಪ್ಸ್, ಕೌದಿ, ಫೈಲು, ಬನಿಯನ್, ಬೆಡ್ಶೀಟ್, ಬ್ಯಾಗು ಮುಂತಾದ 159ಕ್ಕೂ ಹೆಚ್ಚಿನ ವಸ್ತುಗಳನ್ನು ಉತ್ಪಾದಿಸುತ್ತದೆ. ವಸ್ತುಗಳ ಮಾರಾಟಕ್ಕಾಗಿ ಹೆಗ್ಗೋಡು ಹಾಗೂ ಸಾಗರದಲ್ಲಿ ಅಂಗಡಿಗಳನ್ನು ಹೊಂದಿದೆ.

## ನೈಸರ್ಗಿಕ ಬಣ್ಣಗಾರಿಕೆ

ನಿಸರ್ಗದತ್ತ ಅಡಿಕೆಚೊಗರು, ಅಳಲೆಕಾಯಿ, ದಾಳಿಂಬೆ ಸಿಪ್ಪೆ, ಇಂಡಿಗೊ, ರಂಗಮಾಲೆ ಬೀಜ ಮುಂತಾದವನ್ನು ಬಣ್ಣಗಾರಿಕೆಗೆ ಬಳಸಲಾಗುತ್ತದೆ. ಹೀಗಾಗಿ, ಚರಕದ ಸಿದ್ಧುಉಡುಪುಗಳು ಸಂಪೂರ್ಣವಾಗಿ ಪರಿಸರ ಸ್ನೇಹಿಯಾಗಿವೆ. ಚರಕದಲ್ಲಿ ಸ್ತ್ರೀಯರು ಕೂಡ ಬಣ್ಣಮಾಡುತ್ತಾರೆ. ಹೊಸ ನಿಸರ್ಗದತ್ತ ಬಣ್ಣಗಳನ್ನು ಶೋಧಿಸುವ ಕೆಲಸ ನಿರಂತರವಾಗಿ ನಡೆಯುತ್ತಿದೆ.

## ಪರಿಸರ ಪ್ರೇಮ

ಚರಕದಲ್ಲಿ ವಿದ್ಯುತ್ ಚಾಲಿತ ಯಂತ್ರಗಳ ಬಳಕೆಯಿಲ್ಲ ಮತ್ತು ಹೆಂಚಿನ



ಕೈಮಗ್ಗ ನೇಯ್ಗೆಯಲ್ಲಿ ನಿರತ ನೇಕಾರರು

ಮನೆಗಳಿವೆ. ಮಳೆ ನೀರನ್ನು ಸಂಗ್ರಹಿಸಿ ಬಳಕೆಮಾಡಲಾಗುತ್ತಿದೆ. ಸೋಲಾರ್ ವಿದ್ಯುತ್ ಬಳಸಲಾಗುತ್ತಿದೆ. ಪರಿಸರವನ್ನು ಕಾಪಾಡುವಲ್ಲಿ ಮುಂಚೂಣಿಯಲ್ಲಿದೆ.

## ಮಾರುಕಟ್ಟೆ ಹಾಗೂ ಸಬಲತೆ

ಚರಕ ಸಂಸ್ಥೆಯ ಸಹೋದರಿ ಸಂಸ್ಥೆಯಾದ ದೇಸಿ ಉತ್ಪಾದನೆಯಾದ ವಸ್ತುಗಳಿಗೆ ಮಾರುಕಟ್ಟೆ ಒದಗಿಸುತ್ತದೆ. ಬೆಂಗಳೂರು, ಮೈಸೂರು, ಧಾರವಾಡ, ಶಿವಮೊಗ್ಗ, ಸಿದ್ದಾಪುರ, ಮಂಗಳೂರು ಹಾಗೂ ಬೆಳಗಾವಿಗಳಲ್ಲಿ ದೇಸಿ ಅಂಗಡಿಗಳ ಮುಖಾಂತರ ಉತ್ತಮ ಮಾರಾಟ ಮಾಡಲಾಗುತ್ತಿದೆ. ಇಂದಿನ ಜಾಗತೀಕರಣ, ಖಾಸಗೀಕರಣ ಹಾಗೂ ಉದಾರೀಕರಣಗಳ ನಡುವೆ ನಲುಗುತ್ತಿರುವ ಗುಡಿ ಕೈಗಾರಿಕೆಗಳಿಗೆ ಒತ್ತಾಸೆಯಾಗಿ ಚರಕ ಹಾಗೂ ದೇಸಿ ಸಂಸ್ಥೆಗಳು. ಕಾರ್ಯನಿರ್ವಹಿಸುತ್ತಿವೆ. ನೇಕಾರರು ಸಂತೃಪ್ತಿಯಿಂದ ಸರಳವಾಗಿ ಬಾಳುವಂತೆ ಅವಕಾಶ ಮಾಡಿಕೊಡಲಾಗಿವೆ. ಚರಕದ ಉತ್ಪಾದನೆ 2005–06ರಲ್ಲಿ 41 ಲಕ್ಷವಿದ್ದದ್ದು, 2014–15 ರಲ್ಲಿ 387.17 ಲಕ್ಷಕ್ಕೆ ಏರಿಕೆಯಾಗಿದೆ ಹೆಚ್ಚಿನ ಬೇಡಿಕೆ ಇರುವುದರಿಂದ ನೇಕಾರರ ಸಾಂದ್ರತೆಇರುವ ಗದಗ, ಗಜೇಂದ್ರಗಡ, ಮಹಾಲಿಂಗಪುರ, ಕೆರೂರುಗಳಿಗೆ, ಬಣ್ಣಮಾಡಿದ ನೂಲನ್ನು ಒದಗಿಸಿ ನೇಯ್ಗೆಮಾಡಿದ ಬಟ್ಟೆಯನ್ನು



ನೂಲು ಸುತ್ತುವುದು



ಚರಕದ ನೈಸರ್ಗಿಕ ಬಣ್ಣದ ಕೈಮಗ್ಗದ ಸೀರೆಗಳನ್ನುಉಟ್ಟ ನೀರೆಯರು

ಕೊಂಡುಕೊಳ್ಳುತ್ತಿದೆ. ಇದರಿಂದಾಗಿ 300ಕ್ಕೂ ಹೆಚ್ಚಿನ ಜನರ ಜೀವನಾಧಾರವಾಗಿದೆ.

### ಶ್ರಮಜೀವಿಗಳಿಗೆ ಪ್ರೋತ್ಸಾಹ

ಕೆಲಸ ಮಾಡುವ ಪ್ರತಿಯೊಬ್ಬರಿಗೂ ಅವರವರ ಗಳಿಕೆಯಂತೆ ಬೋನಸ್ ಕೂಡ ನೀಡುವುದು. ತಾಂತ್ರಿಕ, ವಿನ್ಯಾಸ ಹಾಗೂ ಇನ್ನಿತರ ಸೇವೆಯನ್ನು ಒದಗಿಸುತ್ತದೆ. ದುಡಿಮೆಗೆ ಅನುಕೂಲವಾಗುವಂತೆ ಚರಕದ ಶ್ರಮಜೀವಿಗಳಿಗೆ ರಿಯಾಯಿತಿ ದರದಲ್ಲಿ ಊಟ ಕಾಫೀ ಒದಗಿಸುವುದಲ್ಲದೆ, ದುಡಿಯುವ ಮಹಿಳೆಯರ ಅನುಕೂಲಕ್ಕಾಗಿ ಶಿಶು ವಿಹಾರವನ್ನು ಕೂಡ ನಡೆಸಿಕೊಂಡು ಬರುತ್ತಿದೆ. ಉತ್ತಮ ದುಡಿಮೆಗೆ ಪ್ರೋತ್ಸಾಹವಾಗಲು ಪ್ರತಿವರ್ಷ ಕಾಯಕಪ್ರಶಸ್ತಿ ಯನ್ನು ಕೂಡ ನೀಡುತ್ತಿದೆ. ಚರಕ ಒಂದು ಗ್ರಾಮೀಣ ಕರ್ನಾಟಕದ ಉತ್ತಮ ಮಾದರಿಯಾಗಿದೆ. ಕಾಲೇಜು ಹಾಗೂ ವ್ಯಾಪಾರಿ ಸಂಸ್ಥೆಗಳ ಅಧ್ಯಯನಕ್ಕೆ ಯೋಗ್ಯವಾಗಿದೆ.

### ಯುವ ಶ್ರಮಜೀವಿಗಳ ಕೈಯಲ್ಲಿ ಭವಿಷ್ಯ

ಚರಕದಲ್ಲಿ ಕಾರ್ಯನಿರತ ಪ್ರತಿಶತ 43 ರಷ್ಟು ಮಹಿಳೆಯರು 18 ರಿಂದ 25 ವರ್ಷ ಹಾಗೂ ಪ್ರತಿಶತ 37 ರಷ್ಟು 25–35 ವಯಸ್ಸಿನಲ್ಲಿರುವುದು ಗಮನಿಸಬೇಕಾದ ವಿಷಯವಾಗಿದೆ. ಕೇವಲ ಶೇಕಡ 20 ರಷ್ಟು ಮಹಿಳೆಯರು 35ಕ್ಕೂ ಹೆಚ್ಚಿನ ವಯಸ್ಸಿನವರು ಇದ್ದಾರೆ. ಅಂದರೆ, ಯುವತಿಯರು ಹೆಚ್ಚಾಗಿರುವುದರಿಂದ ಸಾಂಪ್ರದಾಯಿಕ ಕೈಮಗ್ಗ ಕ್ಷೇತ್ರ ಅಭಿವೃದ್ಧಿ ಪಥದಲ್ಲಿರುವದೆಂದು ತಿಳಿದು ಬರುತ್ತದೆ. ಅವರೆಲ್ಲ ಶ್ರಮಸಹಿತ ಜೀವನಮಾಡುತ್ತ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಸಬಲರಾಗಿದ್ದಾರೆ. ಗಾಂಧೀಜಿಯವರ ಆಶಯದ ಬಾಳನ್ನು ಬಾಳುತ್ತಿದ್ದಾರೆ. ಕೈಮಗ್ಗ ನಾಳಿನ ಬಟ್ಟೆಯಾಗುತ್ತದೆ ಎಂಬ ಭರವಸೆ ಚರಕದ್ದಾಗಿದೆ. ಸಾವಿರಾರು ನೇಕಾರರ ಬದುಕಿಗೆ ಕಾಯಕಲ್ಪ ನೀಡುವ ದಿಸೆಯಲ್ಲಿ ಚರಕ ಕರಲಸ ಮಾಡುತ್ತಿದೆ. ಚರಕ ಒಂದು ಉತ್ತಮ ಗ್ರಾಮೀಣ ಅಭಿವೃದ್ದಿಯ ಮಾದರಿಯಾಗಿದೆ. ❑



ಕೈ ಅಚ್ಚು ಮಾಡುವುದರಲ್ಲಿ ನಿರತ ಕುಶಲಕರ್ಮಿ

(60ನೇ ಪುಟದಿಂದ)

## ಕೌಶಲ ಅಭಿವೃದ್ಧಿಯ ಮಹತ್ವ



### ಟೆಕ್ಕಿಗಳ ಮೂಲಕ ಬೋಧನೆ

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಸೇರಿದಂತೆ ಖಾಸಗಿ ಮತ್ತು ಸರ್ಕಾರಿ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಪನ್ಮೂಲ ವ್ಯಕ್ತಿಗಳಲ್ಲಿನ ಜ್ಞಾನವನ್ನು ಸದುಪಯೋಗ ಪಡಿಸಿಕೊಳ್ಳುವ ಉದ್ದೇಶದಿಂದ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ ಶಾಲೆಗೆ ಬನ್ನಿ ಶನಿವಾರ ಕಾರ್ಯಕ್ರಮ ರೂಪಿಸಿದ್ದು, ಶನಿವಾರದಂದು ಯಾರು ಬೇಕಾದರೂ ಶಾಲೆಗೆ ಹೋಗಿ ಪಾಠ ಮಾಡಬಹುದಾಗಿದೆ. ವಿವಿಧ ಕ್ಷೇತ್ರಗಳಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಗಳ ಅನುಭವ, ಜ್ಞಾನ ವಿದ್ಯಾರ್ಥಿಗಳಿಗೆ ಸಿಗಬೇಕು. ಆ ಮೂಲಕ ಅವರ ವ್ಯಕ್ತಿತ್ವ ವಿಕಸನವಾಗಬೇಕು ಎಂಬುದು ಇಲಾಖೆಯ ಆಶಯವಾಗಿದ್ದು, 200ಕ್ಕೂ ಅಧಿಕ ಮಂದಿ ಈ ರೀತಿ ಪಾಠ ಮಾಡಲು ಮುಂದೆ ಬಂದಿದ್ದಾರೆ. ತಾವು ಓದಿದ ಶಾಲೆ ಅಥವಾ ಹತ್ತಿರದ ಯಾವುದಾದರೂ ಸರ್ಕಾರಿ ಶಾಲೆಯನ್ನು ಆಯ್ಕೆ ಮಾಡಿಕೊಂಡು ವಿಜ್ಞಾನ, ಗಣಿತ, ಸಾಮಾನ್ಯ ವಿಷಯ, ಸ್ಪರ್ಧಾತ್ಮಕ ಪರೀಕ್ಷೆಗಳು ಇತ್ಯಾದಿ ವಿಷಯಗಳ ಬಗ್ಗೆ ಬೋಧಿಸಬಹುದಾಗಿದೆ. ಇದೊಂದು ವಿನೂತನ ಕಾರ್ಯಕ್ರಮವಾಗಿದ್ದು, ಶಾಲಾ ಹಂತದಲ್ಲೇ ಮಕ್ಕಳಿಗೆ ನಾನಾ ಕ್ಷೇತ್ರಗಳನ್ನು ಪರಿಚಯಿಸುವ, ಆ ಕ್ಷೇತ್ರಗಳ ಬಗ್ಗೆ ಆಸಕ್ತಿ ಮೂಡುವಂತೆ ಮಾಡುವ ಉದ್ದೇಶವೂ ಇದರ ಹಿಂದೆ ಅಡಗಿದೆ. ಸಾಮಾನ್ಯವಾಗಿ ಸಾಫ್ಟ್‌ವೇರ್ ಮಂದಿಗೆ ಶನಿವಾರ ರಜಾ ಇರುತ್ತದೆ. ಸರ್ಕಾರಿ ನೌಕರರಿಗೆ ಎರಡನೇ ಶನಿವಾರ ರಜಾ ಇರುತ್ತದೆ. ಆ ದಿನಗಳಂದು ಬಿಡುವು ಮಾಡಿಕೊಂಡು ಸ್ವಯಂ ಪ್ರೇರಣೆಯಿಂದ ಪಾಠ ಮಾಡಲು ಮುಂದಾದರೆ, ಮಕ್ಕಳಿಗೆ ಅನುಕೂಲವಾಗಲಿದೆ. ಈ ಯೋಜನೆಯಡಿ ಪಾಠ ಮಾಡಲು ಬಯಸುವವರು, ಹತ್ತಿರದ ಶಾಲೆಯನ್ನು ಆಯ್ಕೆ ಮಾಡಿಕೊಂಡು ಶಾಲೆಯ ಮುಖ್ಯೋಪಾಧ್ಯಾಯರ ಬಳಿ ಹೆಸರು ನೋಂದಾಯಿಸಿಕೊಳ್ಳಬೇಕು. ಅಲ್ಲದೆ ತಾವು ಬೋಧಿಸಲು ಬಯಸುವ ವಿಷಯ, ಶಾಲೆಗೆ ಬರುವ ದಿನವನ್ನು ಮೊದಲೇ ತಿಳಿಸಬೇಕು ಎಂಬುದು ಸೇರಿದಂತೆ ಕೆಲ ಮಾರ್ಗದರ್ಶಿ ಸೂತ್ರಗಳನ್ನು ನಿಗದಿಪಡಿಸಲಾಗಿದೆ. ಪಾಠ ಮಾಡಲು ಆಸಕ್ತಿವುಳ್ಳವರು ಹತ್ತಿರದ ಶಾಲೆಯ ಮುಖ್ಯೋಪಾಧ್ಯಾಯರನ್ನು ಸಂಪರ್ಕಿಸಿ, ಅವರೊಂದಿಗೆ ಈ ಬಗ್ಗೆ ಚರ್ಚಿಸಬಹುದಾಗಿದೆ. ❑

# ಭದ್ರ ಭವಿಷ್ಯಕ್ಕಾಗಿ

* ಹಾಲಸ್ವಾಮಿ ಆರ್. ಎಸ್.



**ಜೈವಿಕ ಇಂಧನ ವೈವಿಧ್ಯಮಯ ಉದ್ಯೋಗ ಅವಕಾಶಗಳನ್ನು ಕಲ್ಪಿಸಿದೆ. ರೈತರು, ಕೃಷಿ ಕಾರ್ಮಿಕರು ಬಿಡುವಿನ ವೇಳೆಯಲ್ಲಿ ಹೊಂಗೆ ಇನ್ನಿತರ ಬೀಜಗಳ ಸಂಗ್ರಹ– ಮಾರಾಟದಿಂದ ಆರ್ಥಿಕ ಲಾಭಗಳಿಸಲು ಸಾಧ್ಯವಾಗುತ್ತದೆ. ಪೆಟ್ರೋಲಿಯಂ ಉತ್ಪನ್ನಗಳು ವಾತಾವರಣಕ್ಕೆ ಕಾರ್ಬನ್ ಡೈಯಾಕ್ಸೈಡನ್ನು ಹೆಚ್ಚಿನ ಪ್ರಮಾಣದಲ್ಲಿ ಸೇರಿಸುತ್ತವೆ. ಈ ಹಿನ್ನೆಲೆಯಲ್ಲಿ ಜೈವಿಕ ಇಂಧನ ಪರಿಸರ ಸ್ನೇಹಿ ಹಾಗೂ ನವೀಕರಿಸಬಹುದಾದ ಇಂಧನ.**

ಇನ್ನು ಹದಿನೈದರಿಂದ ಇಪ್ಪತ್ತು ವರ್ಷಗಳಲ್ಲಿ ಭೂಮಿಯ ಮೇಲಿರುವ ಕಚ್ಚಾತೈಲ ಬರಿದಾಗಲಿದೆ ಎಂದು ತಜ್ಞರು ಅಂದಾಜಿಸಿದ್ದಾರೆ. ಆಗ, ಡಿಸೇಲ್, ಪೆಟ್ರೋಲ್ ಆಧರಿತ ನಮ್ಮ ನಾಗರಿಕತೆಯ ಕತೆ ಏನು ಎಂಬ ಪ್ರಶ್ನೆಗೆ ಪರಿಹಾರ ರೂಪವಾಗಿ ಕಾಣಿಸುತ್ತಿರುವುದು ಜೈವಿಕ ಇಂಧನ. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಮಾರ್ಗದರ್ಶನದಲ್ಲಿ ಜೈವಿಕ ತಂತ್ರಜ್ಞಾನ ಕ್ರಮೇಣ ಅಭಿವೃದ್ಧಿ ಆಗುತ್ತಿದೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಸೇರಿ ಒಟ್ಟು 33 ಜೈವಿಕ ಇಂಧನ ಪ್ರಾತ್ಯಕ್ಷಿಕೆ ಹಾಗೂ ಮಾಹಿತಿ ಕೇಂದ್ರ ಸ್ಥಾಪಿಸಿದೆ. ಇವುಗಳಲ್ಲಿ ಎಲ್ಲಾ ವಿಧದಲ್ಲೂ ಮುಂಚೂಣಿಯಲ್ಲಿರುವುದು ಶಿವಮೊಗ್ಗದ ಜವಾಹರ ಲಾಲ್ ನೆಹರೂ ತಾಂತ್ರಿಕ ಕಾಲೇಜಿನ ಚಿರಂತನ ಗ್ರೀನ್ ಟೆಕ್ನಾಲಜಿ ಸೆಂಟರ್‌ನ ನಿರ್ವಹಣೆಯಲ್ಲಿರುವ ಜಿಲ್ಲಾ ಜೈವಿಕ ಇಂಧನ ಕೇಂದ್ರ. ಈ ಕೇಂದ್ರದಲ್ಲಿ ನಿರಂತರವಾಗಿ ಹೊಂಗೆ ಬೀಜದಿಂದ ಜೈವಿಕ ಇಂಧನ ಉತ್ಪಾದನೆ ಮಾಡಲಾಗುತ್ತಿದೆ. ಅಲ್ಲದೆ, ಈ ಬಗ್ಗೆ ತಾಂತ್ರಿಕ ಸಂಶೋಧನೆಯನ್ನೂ ನಡೆಸುತ್ತಿದೆ. ಇಲ್ಲಿ ಒಂದು ದಿನಕ್ಕೆ 50 ಲೀಟರ್ ಜೈವಿಕ ಇಂಧನ ತಯಾರಿಸಲಾಗುತ್ತಿದೆ. ಇದನ್ನು ಕಾಲೇಜಿನ ಐದು ಬಸ್ಸುಗಳಿಗೆ ಬಳಸಲಾಗುತ್ತಿದೆ. ಡೀಸೆಲ್ ಜೊತೆ ಮಿಶ್ರ ಮಾಡಿ ಬಳಸಲಾಗುತ್ತಿದೆ. ನೀರಿನ ಪಂಪ್‌ಸೆಟ್‌ಗೂ ಇದನ್ನೇ ಬಳಸಲಾಗುತ್ತಿದೆ. ಮುಖ್ಯವಾಗಿ ಶಿವಮೊಗ್ಗದ ಕೆಲ ಕೈಗಾರಿಕೆಗಳೂ ಇಲ್ಲಿಂದ ನಿರಂತರವಾಗಿ ಜೈವಿಕ ಇಂಧನ ಖರೀದಿ ಮಾಡುತ್ತಿದ್ದಾರೆ.

### ಜೈವಿಕ ಇಂಧನ

ಜೈವಿಕ ಮೂಲ ಅಥವಾ ಸಸ್ಯ ಜನ್ಯ ಅಥವಾ ಪ್ರಾಣಿ ಜನ್ಯ ಮೂಲಗಳಿಂದ ಉತ್ಪಾದನೆಯಾಗುವ ಇಂಧನವನ್ನು ಜೈವಿಕ ಇಂಧನ ಎನ್ನಲಾಗುತ್ತದೆ. ಎಣ್ಣೆ ಅಥವಾ ಕೊಬ್ಬನ್ನು ಮೆಥನಾಲ್/ಎಥನಾಲ್ ಜೊತೆ ಸೇರಿಸಿ ರಾಸಾಯನಿಕ ಕ್ರಿಯೆಯ ಮೂಲಕ ಜೈವಿಕ ಡೀಸೆಲ್ ತಯಾರಿಸಲಾಗುತ್ತದೆ. ಇದನ್ನು ಪೂರ್ಣವಾಗಿ ಅಥವಾ ಡೀಸೆಲ್ ಜೊತೆ ವಿವಿಧ ಪ್ರಮಾಣದಲ್ಲಿ ಮಿಶ್ರಣ ಮಾಡಿ ಬಳಸಬಹುದಾಗಿದೆ. ನಮ್ಮ ಗ್ರಾಮೀಣ ಜನತೆ ಹಲವಾರು ವರ್ಷಗಳಿಂದ ಬೆಳೆಸಿಕೊಂಡು ಬರುತ್ತಿರುವ ಅನೇಕ ಸಸ್ಯಗಳು ಜೈವಿಕ ಇಂಧನಕ್ಕೆ ಮೂಲವಾಗಿವೆ. ಹೊಂಗೆ, ಬೇವು, ಸಿಮರುಬಾ, ಹಿಪ್ಪೆ, ಜತ್ರೋಪಾ, ಸುರಹೊನ್ನೆ ಇನ್ನಿತರ ಸಸ್ಯಗಳನ್ನು ಕೃಷಿಗೆ ಯೋಗ್ಯವಲ್ಲದ ಭೂಮಿಯಲ್ಲಿ, ಹೊಲಗದ್ದೆ, ತೋಟಗಳ ಬದುವಿನಲ್ಲಿ ಅತೀ ಕಡಿಮೆ ವೆಚ್ಚದಲ್ಲಿ ಬೆಳೆಯಬಹುದಾಗಿದೆ. ಇವುಗಳಿಂದ ಪರಿಸರ ಆರೋಗ್ಯವೂ ವೃದ್ಧಿಯಾಗುತ್ತದೆ. ಜೈವಿಕ ಇಂಧನಕ್ಕೆ ಉತ್ತಮ ಸಂಪನ್ಮೂಲವೂ ದೊರಕಿದಂತಾಗುತ್ತದೆ. ಭಾರತದಲ್ಲಿ ಬಳಕೆಯಾಗುತ್ತಿರುವ ಒಟ್ಟು ಇಂಧನದಲ್ಲಿ ಶೇ. 85 ರಷ್ಟು ಆಮದು ಮಾಡಿಕೊಳ್ಳುತ್ತಿದ್ದೇವೆ. ದೇಶ ಇಂಧನದಲ್ಲಿ ಸ್ವಾವಲಂಬಿಯಾಗುವ ನಿಟ್ಟಿನಲ್ಲಿ ಹೆಜ್ಜೆ ಇಟ್ಟರೆ ದೊರಕುವ ಲಾಭ ಅಪಾರ. ಒಂದು ಲೀಟರ್ ಇಂಧನ ತಯಾರಿಕೆಗೆ 4–5 ಕೆಜಿ ಹೊಂಗೆ ಬೀಜ ಬೇಕಾಗುತ್ತಿದೆ. ಹೊಂಗೆ ಬೀಜದಿಂದ ತಯಾರಾದ ಒಂದು ಲೀಟರ್ ಕಚ್ಚಾ ತೈಲದಲ್ಲಿ 80 ಮಿಲಿಗ್ರಾಂ ಜೈವಿಕ ಇಂಧನ,



* ಪತ್ರಕರ್ತರು.



200 ಮಿಲಿಗ್ರಾಂ ಗ್ಲಿಸರಿನ್ ಇರುತ್ತದೆ. ನಂತರ ಇವೆರಡನ್ನೂ ಬೇರ್ಪಡಿಸಿ, ಸೋಪು, ಹ್ಯಾಂಡ್ ವಾಶ್ ಇನ್ನಿತರ ಉತ್ಪನ್ನಗಳ ತಯಾರಿಕೆಗೆ ಗ್ಲಿಸರಿನ್ ಬಳಸಲಾಗುತ್ತದೆ. ಉಳಿದ ತೈಲವನ್ನು ಇನ್ನಷ್ಟು ಪರಿಷ್ಕರಿಸಿ, ಜೈವಿಕ ಇಂಧನವಾಗಿ ಬಳಸಲಾಗುತ್ತಿದೆ. ಎಣ್ಣೆ ತೆಗೆದ ನಂತರ ದೊರಕುವ ಹಿಂಡಿಯನ್ನು ಗೊಬ್ಬರವಾಗಿ ಬಳಸಲಾಗುತ್ತದೆ. ಇಂಥ ಗೊಬ್ಬರಕ್ಕೆ ಅಪಾರವಾದ ಬೇಡಿಕೆ ಇದೆ.

### ಪ್ರಯೋಜನಗಳು

ಜೈವಿಕ ಇಂಧನ ವೈವಿಧ್ಯಮಯ ಉದ್ಯೋಗ ಅವಕಾಶಗಳನ್ನು ಕಲ್ಪಿಸಿದೆ. ರೈತರು, ಕೃಷಿ ಕಾರ್ಮಿಕರು ಬಿಡುವಿನ ವೇಳೆಯಲ್ಲಿ ಹೊಂಗೆ ಇನ್ನಿತರ ಬೀಜಗಳ ಸಂಗ್ರಹ– ಮಾರಾಟದಿಂದ ಆರ್ಥಿಕ ಲಾಭಗಳಿಸಲು ಸಾಧ್ಯವಾಗುತ್ತದೆ. ಪೆಟ್ರೋಲಿಯಂ ಉತ್ಪನ್ನಗಳು ವಾತಾವರಣಕ್ಕೆ ಕಾರ್ಬನ್ ಡೈಯಾಕ್ಸೈಡನ್ನು ಹೆಚ್ಚಿನ ಪ್ರಮಾಣದಲ್ಲಿ ಸೇರಿಸುತ್ತವೆ. ಆದರೆ, ಜೈವಿಕ ಇಂಧನಕ್ಕೆ ಬಳಸುವ ಮರಗಿಡಗಳು ಕಾರ್ಬನ್ ಡೈಯಾಕ್ಸೈಡನ್ನು ತಾವೇ ಬಳಸಿಕೊಳ್ಳುತ್ತವೆ.



ಈ ಹಿನ್ನಲೆಯಲ್ಲಿ ಜೈವಿಕ ಇಂಧನ ಪರಿಸರ ಸ್ನೇಹಿ ಹಾಗೂ ನವೀಕರಿಸಬಹುದಾದ ಇಂಧನ. ಈ ಇಂಧನ ಬಳಸಲು ವಾಹನದ ಎಂಜಿನ್ ಮಾರ್ಪಡಿಸುವ, ಬದಲಾಯಿಸುವ ಅಗತ್ಯವಿಲ್ಲ. ನಿರಂತರವಾಗಿ ಜೈವಿಕ ಇಂಧನ ಬಳಸುವುದರಿಂದ ಎಂಜಿನ್ ಬಾಳಿಕೆ ಹೆಚ್ಚುತ್ತದೆ. ಪರಿಸರ ಮಾಲಿನ್ಯ ತಪ್ಪುತ್ತದೆ. ಜೈವಿಕ ಇಂಧನಕ್ಕಾಗಿ ಮರಗಿಡ ಬೆಳೆಸುವುದರಿಂದ ಮಣ್ಣಿನ ತೇವಾಂಶ ಕಾಪಾಡಲು ಸಾಧ್ಯವಾಗುತ್ತದೆ. ಅಲ್ಲದೆ, ಈ ಗಿಡಗಳು ಬೆಳೆದ ಪ್ರದೇಶ ವರ್ಷವಿಡೀ ಹಸಿರಿನಿಂದ ಕಂಗೊಳಿಸುತ್ತದೆ.

### ವಿದ್ಯಾರ್ಥಿಗಳಿಗೆ ಉತ್ತೇಜನ

ಜೆಎನ್ಎನ್‌ಸಿಇಯ ಜಿಲ್ಲಾ ಜೈವಿಕ ಇಂಧನ ಪ್ರಾತ್ಯಕ್ಷಿಕೆ ಹಾಗೂ ಮಾಹಿತಿ ಕೇಂದ್ರವು ಪ್ರತಿ ವರ್ಷ ತಾಂತ್ರಿಕ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿದೆ. ಪ್ರತಿ ಸೆಮಿಸ್ಟರ್‌ನಲ್ಲೂ ವಿದ್ಯಾರ್ಥಿಗಳು ಇಲ್ಲಿಗೆ ಬಂದು ಅನೇಕ ಮಾದರಿಯ ಸಂಶೋಧನೆ ನಡೆಸುತ್ತಿದ್ದಾರೆ. ಶಿವಮೊಗ್ಗ ಮಾತ್ರವಲ್ಲದೆ, ಹೊರಗಿನ ತಾಂತ್ರಿಕ ವಿದ್ಯಾರ್ಥಿಗಳೂ ಇಲ್ಲಿ ಸಂಶೋಧನೆ ನಡೆಸಿದ್ದಾರೆ. ಪ್ರಮುಖವಾಗಿ ಜರ್ಮನಿಯ ಮ್ಯೂನಿಚ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಇಲ್ಲಿಗೆ ಬಂದು ಸಂಶೋಧನೆ ನಡೆಸಿದ್ದಾರೆ. ಕಾಲೇಜು ಕ್ಯಾಂಪಸ್‌ನಲ್ಲೇ ಜೈವಿಕ ಇಂಧನ ಘಟಕ ಇರುವುದು ತಂತ್ರಜ್ಞಾನ ವಿದ್ಯಾರ್ಥಿಗಳಿಗೆ ವರದಾನವಾಗಿದೆ. ಇಲ್ಲಿ ಕೇವಲ ಪ್ರಾತ್ಯಕ್ಷಿಕೆ ಅಷ್ಟೇ ಅಲ್ಲದೆ, ಉತ್ಪಾದನೆಯೂ ನಡೆಯುತ್ತಿರುವುದು ವಿದ್ಯಾರ್ಥಿಗಳಿಗೆ ಅನುಕೂಲಕರವಾಗಿದೆ. ಜೈವಿಕ ಇಂಧನ ತಯಾರಾಗುವ ನಾನಾ ಹಂತಗಳು ಹಾಗೂ ಅವುಗಳನ್ನು ಇನ್ನಷ್ಟು ಉತ್ತಮಪಡಿಸಲು ಸಂಶೋಧನೆಗಳೂ ನಡೆಯುತ್ತಿವೆ.

### ಲಾಭದಾಯಕವೇ?

ಹೊಂಗೆ ಬೀಜದಿಂದ ಜೈವಿಕ ಇಂಧನ ಮಾತ್ರ ತಯಾರಿಸಿ ಮಾರಾಟ ಮಾಡುವ ಮೂಲಕ ಲಾಭಗಳಿಸಲು ಸಾಧ್ಯವಿಲ್ಲ ಎನ್ನುತ್ತಾರೆ ಈ ಕೇಂದ್ರದ ಸಂಚಾಲಕರೂ ಹಾಗೂ ಪ್ರಾಧ್ಯಾಪಕರೂ ಆಗಿರುವ ಡಾ.ಶ್ರೀಪತಿ. ಅವರ ಪ್ರಕಾರ, ಒಂದು ಲೀಟರ್ ಜೈವಿಕ ಇಂಧನ ತಯಾರಿಸಲು ಐದು ಕೆಜಿ ಹೊಂಗೆ ಬೀಜ ಬೇಕು. ಒಂದು ಕೆಜಿ ಹೊಂಗೆ ಬೀಜಕ್ಕೆ 25 ರೂಪಾಯಿ ಇದೆ.



ಇದು ಹಾಗೂ ತಯಾರಿಕಾ ವೆಚ್ಚ ಸೇರಿದರೆ ಒಂದು ಲೀಟರ್ ಜೈವಿಕ ಇಂಧನದ ಬೆಲೆ 130 ರೂಪಾಯಿ ಆಗುತ್ತದೆ. ಈಗ ಸಿಗುತ್ತಿರುವ ಡೀಸೆಲ್ ಬೆಲೆ ಇದಕ್ಕಿಂತ ಕಡಿಮೆ ಇದೆ. ಇದನ್ನೇ ಆಧಾರವಾಗಿಟ್ಟುಕೊಂಡರೆ ಜೈವಿಕ ಇಂಧನ ತಯಾರಿಕೆ ಹಾಗೂ ಮಾರಾಟ ಎರಡೂ ದುಬಾರಿ ಎಂದಾಯಿತು. ಆದರೆ, ಜೈವಿಕ ಇಂಧನ ತಯಾರಿಕೆಯ ನಾನಾ ಹಂತಗಳಲ್ಲಿ ದೊರಕುವ ಉಪ ಉತ್ಪನ್ನಗಳ ಮೌಲ್ಯ ವರ್ಧನೆ ಮಾಡಿ, ಬಳಕೆ ಮಾಡಿದಾಗ ಜೈವಿಕ ಇಂಧನವನ್ನು ಕೇವಲ 50 ರೂಪಾಯಿಗೆ ಲೀಟರ್‌ನಂತೆ ಪೂರೈಕೆ ಮಾಡಲು ಸಾಧ್ಯವಿದೆ ಎನ್ನುವುದು ಡಾ. ಶ್ರೀಪತಿ ಅವರ ಅಭಿಪ್ರಾಯ. ಬೀಜದ ಹೊರ ಸಿಪ್ಪೆಯಿಂದ ಉರುವಲು ಇಟ್ಟಿಗೆ ಮಾಡಬಹುದು, ಕಾಂಪೋಸ್ಟ್ ಮಾಡಿದರೆ ಉತ್ತಮ ಗೊಬ್ಬರಸಿಗುತ್ತದೆ. ಬಯೋಗ್ಯಾಸ್ ತಯಾರಿಸಲೂ ಬಳಸಬಹುದಾಗಿದೆ. ಜೈವಿಕ ಇಂಧನ ತಯಾರಾಗುವಾಗ ಸಿಗುವ ಇನ್ನೊಂದು ಪ್ರಮುಖ ಉಪ ಉತ್ಪನ್ನ ಹಿಂಡಿ. ಇದರಲ್ಲಿರುವ ನಿರೋಧಕ ವಸ್ತುಗಳಿಂದಾಗಿ ಇದು ಸಸ್ಯಗಳಿಗೆ ಉತ್ತಮ ರೋಗಗಳಿಗೆ ಔಷಧವಾಗಿಯೂ ಕೆಲಸ ಮಾಡುತ್ತದೆ. ಇದರಿಂದ ಕೂಡ ಜೈವಿಕ ಅನಿಲ ಪಡೆಯಲು ಸಾಧ್ಯವಿದೆ. ಇನ್ನೊಂದು ಉಪ ಉತ್ಪನ್ನ ಗ್ಲಿಸರಿನ್, ಇದನ್ನು ಸಾಬೂನು ತಯಾರಿಸಲು ಬಳಸಬಹುದು. ಈ ಹಂತದಲ್ಲಿ ದೊರಕುವ ದ್ರವ ಪದಾರ್ಥವನ್ನು ಸೋಪ್ ವಾಟರ್‌ನಂತೆ ಬಳಸಲು ಸಾಧ್ಯವಿದೆ. ಈ ಅಂಶಗಳನ್ನು ಪರಿಗಣಿಸಿದಾಗ ಜೈವಿಕ ಇಂಧನವನ್ನು 50 ರೂಪಾಯಿಗೆ ಲೀಟರ್‌ನಂತೆ ಮಾಡಲು ಹಾಗೂ ಲಾಭಗಳಿಸಲು ಸಾಧ್ಯವಿದೆ. ಭವಿಷ್ಯದ ಭದ್ರತೆಗೆ ಜೈವಿಕ ಇಂಧನ ಅವಲಂಬನೆ ಅನಿವಾರ್ಯ. ಶಿವಮೊಗ್ಗದ ತಾಂತ್ರಿಕ ಕಾಲೇಜು ತಂತ್ರಜ್ಞಾನದ ಜೊತೆ ವಿದ್ಯಾರ್ಥಿಗಳನ್ನೂ ಈ ಬಗ್ಗೆ ಚಿಂತಿಸಲು – ಸಂಶೋಧನೆ ನಡೆಸಲು ಅವಕಾಶ ಮಾಡಿಕೊಟ್ಟಿರುವುದು ಉತ್ತಮ ಬೆಳವಣಿಗೆ. ❑

ಉತ್ತಮ ಹವ್ಯಾಸ

ಸ್ವಾಭಿಮಾನ

# ಮಂಡ್ಯ : ಸಂಪೂರ್ಣ ಸ್ವಚ್ಛತೆಯೆಡೆಗೆ

* ರಾಜು




ಶೌಚಾಲಯ ಇಲ್ಲದ ಮನೆಗಳಲ್ಲಿ ಶೌಚಾಲಯ ನಿರ್ಮಾಣ ಆಗಲೇ ಬೇಕು ಎಂಬ ಪಣತೊಟ್ಟು ಮಂಡ್ಯ ಜಿಲ್ಲಾ ಪಂಚಾಯಿತಿಯ ಸಂಪೂರ್ಣ ಆಡಳಿತ ಟೊಂಕಕಟ್ಟಿ ನಿಂತಿತು. ಇದರ ಪರಿಣಾಮ ಶೌಚಾಲಯ ನಿರ್ಮಾಣದಲ್ಲಿ ಮಂಡ್ಯ ಜಿಲ್ಲೆ ರಾಷ್ಟ್ರದ ಗಮನ ಸೆಳೆದಿದೆ.

ಭಾರತದ ಹಳ್ಳಿಗಳಲ್ಲಿ ಇನ್ನೂ ಬಯಲು ಬಹಿರ್ದೆಸೆ ಪದ್ಧತಿ ಉಳಿದುಕೊಂಡಿದೆ. ಶೌಚಾಲಯ ನಿರ್ಮಿಸಿಕೊಳ್ಳಲು ಸರ್ಕಾರ ಮೊದಲಿನಿಂದಲೂ ಹಲವಾರು ಕಾರ್ಯಕ್ರಮಗಳನ್ನು ರೂಪಿಸುತ್ತಾ ಬಂದಿದ್ದರೂ ಸಮಸ್ಯೆಗೆ ತಾತ್ವಿಕ ಅಂತ್ಯ ದೊರೆತಿಲ್ಲ. ಮನೆಗಳಲ್ಲಿ ಶೌಚಾಲಯ ಇಲ್ಲದಿರುವುದು ಹಲವಾರು ಸಾಮಾಜಿಕ ಸಮಸ್ಯೆಗಳಿಗೆ ಹಾಗೂ ದುರ್ಘಟನೆಗಳಿಗೆ ಕಾರಣವಾಗಿದೆ. ಬಯಲು ಬಹಿರ್ದೆಸೆ (ಮಲ ವಿಸರ್ಜನೆ)ಯಿಂದ ಸಾರ್ವಜನಿಕ ನೈರ್ಮಲ್ಯ ಸಹ ಹಾಳಾಗಿ, ರೋಗರುಜಿನಗಳು ಹರಡುತ್ತಿವೆ. ಶೌಚಾಲಯ ಇಲ್ಲದೆ ಮಹಿಳೆಯರು, ಅದರಲ್ಲೂ ಮುಖ್ಯವಾಗಿ ಯುವತಿಯರು ನಾನಾ ಕಷ್ಟಗಳನ್ನು ಎದುರಿಸಿದ ಘಟನೆಗಳು ನಮ್ಮ ಎದುರೇ ಇವೆ. 2014ರ ಜೂನ್‌ನಲ್ಲಿ ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ಗೊರವನಹಳ್ಳಿಯಲ್ಲಿ 45 ವರ್ಷದ ಮಹಿಳೆಯೊಬ್ಬರು ಬಹಿರ್ದೆಸೆಗಾಗಿ ಬಯಲಿನ ಕಡೆಗೆ ಹೋದಾಗ ಬಿಡಾಡಿ ನಾಯಿಗಳು ಅವರ ಮೇಲೆ ದಾಳಿ ಮಾಡಿ ತೀವ್ರ ಗಾಯಗೊಳಿಸಿದವು. ಇವರನ್ನು ತಕ್ಷಣ ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ನೀಡಿದರೂ ಫಲಕಾರಿಯಾಗದೇ ಮೃತಪಟ್ಟರು.

ಪೊಲೀಸ್ ಅಂಕಿ ಅಂಶಗಳ ಪ್ರಕಾರ ಮಂಡ್ಯ ಜಿಲ್ಲೆಯಲ್ಲಿ ಸಾವಿರಾರು ನಾಯಿ ಕಡಿತದ ಪ್ರಕರಣಗಳು ದಾಖಲಾಗಿವೆ. ಇದರಲ್ಲಿ ಬಯಲು ಬಹಿರ್ದೆಸೆಗೆ ಹೋದ ಸಂದರ್ಭದಲ್ಲಿ ಉಂಟಾದ ಘಟನೆಗಳೂ ಇವೆ. ಅದೇ ವರ್ಷ ಮಾರ್ಚ್ 7 ರಂದು ಪಾಂಡವಪುರ ತಾಲ್ಲೂಕಿನ ನುಗ್ಗಹಳ್ಳಿಯಲ್ಲಿ ಶಾಲೆ ಮುಗಿಸಿ ಮನೆಗೆ ಬಂದ 7 ವರ್ಷದ ಬಾಲಕಿಯೊಬ್ಬಳು ಕಬ್ಬಿನ ಗದ್ದೆಗೆ ಬಹಿರ್ದೆಸೆಗೆ ಹೋದ ಸಂದರ್ಭದಲ್ಲಿ ದೌರ್ಜನ್ಯ ನಡೆಸಿ, ಹತ್ಯೆ ಮಾಡಿದ ಘಟನೆ ವರದಿಯಾಗಿದೆ. ಇಂತಹ ಘಟನೆಗಳು ಕಲಿಸಿದ ಪಾಠದಿಂದ ಪ್ರತಿ ಮನೆ–ಮನೆಗಳಲ್ಲೂ ಶೌಚಾಲಯ ನಿರ್ಮಿಸಿಕೊಳ್ಳಬೇಕು ಎಂಬ ಕೆಚ್ಚು ಮಂಡ್ಯ ಜಿಲ್ಲಾದ್ಯಂತ ವ್ಯಾಪಕವಾಗಿ ಹರಡಿತು. ಸ್ವಾಭಿಮಾನಕ್ಕಾಗಿ ಶೌಚಾಲಯ ನಿರ್ಮಿಸಿಕೊಳ್ಳಬೇಕು ಎಂಬುದು ಆಂದೋಲನದ ಸ್ವರೂಪ ಪಡೆದುಕೊಂಡಿತ್ತು.

ಶೌಚಾಲಯ ಇಲ್ಲದ ಮನೆಗಳಲ್ಲಿ ಶೌಚಾಲಯ ನಿರ್ಮಾಣ ಆಗಲೇ ಬೇಕು ಎಂಬ ಪಣತೊಟ್ಟು ಮಂಡ್ಯ ಜಿಲ್ಲಾ ಪಂಚಾಯಿತಿಯ ಸಂಪೂರ್ಣ ಆಡಳಿತ ಟೊಂಕಕಟ್ಟಿ ನಿಂತಿತು. ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳಿಂದ ಹಿಡಿದು ಗ್ರಾಮ ಪಂಚಾಯಿತಿಯ ಬಿಲ್ ಕಲೆಕ್ಟರ್ ವರೆಗೆ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿಯ ಎಲ್ಲಾ ಸದಸ್ಯರು ಸೇರಿಕೊಂಡು ಜನರ ಮನವೊಲಿಸಲು ಮುಂದಾದರು. ಇದರ ಪರಿಣಾಮ ಶೌಚಾಲಯ ನಿರ್ಮಾಣದಲ್ಲಿ ಮಂಡ್ಯ ಜಿಲ್ಲೆ ರಾಷ್ಟ್ರದ ಗಮನ ಸೆಳೆದಿದೆ.

2014–15ನೇ ಸಾಲಿನಲ್ಲಿ ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ)ನಲ್ಲಿ ಸುಮಾರು ಶೇ. 248 ರಷ್ಟು ಪ್ರಗತಿ ಸಾಧಿಸಿದೆ. ಪ್ರಸಕ್ತ 2015–16ನೇ ಸಾಲಿನಲ್ಲಿ ಸೆಪ್ಟೆಂಬರ್‌ವರೆಗೆ ಶೇ. 74 ರಷ್ಟು ಸಾಧನೆ ಮಾಡಲಾಗಿದೆ. ಈ ಒಂದೂವರೆ ವರ್ಷದ ಅವಧಿಯಲ್ಲಿ 1,18,401 ಶೌಚಾಲಯಗಳು ನಿರ್ಮಾಣವಾಗಿವೆ. ಇಷ್ಟು ಕಡಿಮೆ ಅವಧಿಯಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಶೌಚಾಲಯಗಳನ್ನು ನಿರ್ಮಾಣ

* ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಮಂಡ್ಯ.

ಮಾಡಿದ್ದು ಮಂಡ್ಯ ಜಿಲ್ಲಾ ಪಂಚಾಯಿತಿಯು ಸಾಧನೆಯ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿ ನಿಲ್ಲುವಂತೆ ಆಗಿದೆ.

ಇದೇ ವೇಗದಲ್ಲಿ ಸಾಗಿದರೆ 2019ರಲ್ಲಿ ನಡೆಯುವ ಮಹಾತ್ಮ ಗಾಂಧೀಜಿಯವರ 150ನೇ ಜನ್ಮ ವರ್ಷಾಚರಣೆ ವೇಳೆಗೆ ಜಿಲ್ಲೆಯನ್ನು ಬಯಲು ಬಹಿರ್ದೆಸೆ ಮುಕ್ತ ಜಿಲ್ಲೆ ಮಾಡುವಲ್ಲಿ ಯಶಸ್ವಿಯಾಗಬಹುದು ಎಂಬುದರಲ್ಲಿ ಸಂಶಯವಿಲ್ಲ. ಮಂಡ್ಯ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ 374445 ಕುಟುಂಬಗಳಿವೆ.

2012ರ ಬೇಸ್‌ಲೈನ್ ಸಮೀಕ್ಷೆಯಲ್ಲಿ 123416 ಕುಟುಂಬಗಳು ಮಾತ್ರ ಶೌಚಾಲಯ ಹೊಂದಿದ್ದವು. ಅಂದರೆ ಇನ್ನೂ 2,51,029 ಕುಟುಂಬಗಳು ಮಲ ವಿಸರ್ಜನೆಗೆ ಬಯಲನ್ನೇ ಆಶ್ರಯಿಸಿದ್ದವು. 2013–14ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಕೇವಲ 17033 ಶೌಚಾಲಯ ನಿರ್ಮಾಣ ಮಾಡಲಾಗಿತ್ತು. ಇಷ್ಟು ಕಡಿಮೆ ಪ್ರಮಾಣದ ಪ್ರಗತಿ ಮಾಡಿದರೆ ಇನ್ನೂ 20 ವರ್ಷಗಳಾದರೂ ಮನೆಗೊಂದು ಶೌಚಾಲಯ ನಿರ್ಮಾಣ ಮಾಡುವ ಗುರಿ ತಲುಪಲು ಸಾಧ್ಯವಿಲ್ಲ. ಇದನ್ನು ಮನಗಂಡು 2014–15ನೇ ಸಾಲಿನಲ್ಲಿ 1 ಲಕ್ಷ ಶೌಚಾಲಯ ನಿರ್ಮಾಣ ಮಾಡುವ ಗುರಿಯನ್ನು ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಹಂಚಿಕೆ ಮಾಡಿದರು. 2014ರ ಏಪ್ರಿಲ್‌ನಲ್ಲಿ 549, ಮೇನಲ್ಲಿ 838 ಶೌಚಾಲಯ ನಿರ್ಮಾಣವಾದವು.

ಬಯಲು ಬಹಿರ್ದೆಸೆ ಮುಕ್ತ ಜಿಲ್ಲೆಯ ಆಂದೋಲನ ಮೊಳಕೆಯೊಡೆದಿದ್ದು ಜೂನ್ ಎರಡನೇ ವಾರದಲ್ಲಿ. ಆ ತಿಂಗಳು ಸ್ವಲ್ಪ ಹೆಚ್ಚು ಪ್ರಗತಿಯಾಗಿ, 2511 ಶೌಚಾಲಯಗಳು ನಿರ್ಮಾಣವಾಯಿತು. ಇಡಿ ಜಿಲ್ಲೆಯ ಪಂಚಾಯತ್ ರಾಜ್ ಆಡಳಿತ ನಿರ್ಮಲ ಭಾರತ ಅಭಿಯಾನ ಅನುಷ್ಠಾನಕ್ಕೆ (ಗ್ರಾಮೀಣ ಪ್ರದೇಶದಲ್ಲಿ ಅನೈರ್ಮಲ್ಯಗಳನ್ನು ತೊಡೆದು ಹಾಕಿ, ಸಂಪೂರ್ಣ ಸ್ವಚ್ಛತೆಯನ್ನು ಸಾಧಿಸಲು 2005ರ ಅಕ್ಟೋಬರ್ 5 ರಂದು ಸಂಪೂರ್ಣ ಸ್ವಚ್ಛತಾ ಆಂದೋಲನಾ ಕಾರ್ಯಕ್ರಮ ಜಾರಿಗೆ ಬಂದಿತು. 2012ರ ಏಪ್ರಿಲ್‌ನಲ್ಲಿ ಈ ಯೋಜನೆಯನ್ನು ನಿರ್ಮಲ ಭಾರತ ಅಭಿಯಾನ ಎಂದು ಹೆಸರಿಸಲಾಯಿತು. 2014ರ ಅಕ್ಟೋಬರ್ 2ರಿಂದ ಸ್ವಚ್ಛ ಭಾರತ ಮಿಷನ್ ಎಂದು ಕರೆಯಲಾಗುತ್ತಿದೆ) ವಿಶೇಷ ಆದ್ಯತೆ ನೀಡಿದ ಪರಿಣಾಮ 2014ರ ಜುಲೈನಲ್ಲಿ 10550 ಕುಟುಂಬಗಳು ಶೌಚಾಲಯ ನಿರ್ಮಿಸಿಕೊಂಡವು. ಈ ಪ್ರಗತಿಯ ವೇಗದಲ್ಲಿ ಸುಸ್ಥಿರತೆಯನ್ನು ಕಾಯ್ದುಕೊಳ್ಳಲಾಯಿತು.

ಸ್ವಚ್ಛ ಭಾರತ ಮಿಷನ್ ಯೋಜನೆಯಡಿ ಪರಿಶಿಷ್ಟ ಫಲಾನುಭವಿಗಳಿಗೆ ರೂ. 15,000 ಹಾಗೂ ಸಾಮಾನ್ಯ ಫಲಾನುಭವಿಗಳಿಗೆ ರೂ. 12,000 ಪ್ರೋತ್ಸಾಹ ಧನ ನೀಡಲಾಗುತ್ತಿದೆ.

ಆಗಸ್ಟ್‌ನಲ್ಲಿ 4334, ಸೆಪ್ಟೆಂಬರ್‌ನಲ್ಲಿ 7071, ಅಕ್ಟೋಬರ್‌ನಲ್ಲಿ 5216 ನವೆಂಬರ್‌ನಲ್ಲಿ 5697, ಡಿಸೆಂಬರ್‌ನಲ್ಲಿ 7738, 2015ರ ಜನವರಿಯಲ್ಲಿ 6594 ನಿರ್ಮಾಣವಾದವು. ಆರ್ಥಿಕ ವರ್ಷದ ಕೊನೆಯಲ್ಲಿ ಸಹಜವಾಗಿ ಎಲ್ಲಾ ಯೋಜನೆಗಳಲ್ಲಿ ಹೆಚ್ಚು ಪ್ರಗತಿಯಾಗುವಂತೆ 2015ರ ಫೆಬ್ರವರಿಯಲ್ಲಿ 19130, ಮಾರ್ಚ್‌ನಲ್ಲಿ 7807 ಕುಟುಂಬಗಳು ಶೌಚಾಲಯ ಕಟ್ಟಿಸಿಕೊಂಡವು. ಒಟ್ಟಾರೆ 2014–15ನೇ ಸಾಲಿನಲ್ಲಿ 78035 ಶೌಚಾಲಯಗಳು ಸೃಷ್ಟಿಯಾದವು. ಆ ಸಾಲಿಗೆ ರಾಜ್ಯ ಸರ್ಕಾರ 31425 ವೈಯಕ್ತಿಕ ಶೌಚಾಲಯಗಳ ನಿರ್ಮಾಣದ ಗುರಿ ನಿಗದಿ ಮಾಡಿತ್ತು. ಆದರೆ ಜಿಲ್ಲಾ ಪಂಚಾಯಿತಿ ವಿಶೇಷ ಆಂದೋಲನ ಕೈಗೊಂಡು 102000 ವೈಯಕ್ತಿಕ ಶೌಚಾಲಯದ ಗುರಿ ಇಟ್ಟುಕೊಂಡಿತ್ತು.

ರಾಜ್ಯ ಸರ್ಕಾರ ಕೊಟ್ಟಿದ್ದ 31425 ಗುರಿಯನ್ನು ಮೀರಿ 78035 ಶೌಚಾಲಯ ನಿರ್ಮಿಸಿದ್ದರಿಂದ ಶೇ. 248.32 ರಷ್ಟು ಪ್ರಗತಿಯಾಗಿ ರಾಜ್ಯದಲ್ಲಿ ಅಗ್ರಸ್ಥಾನ ಪಡೆದಿದೆ. 2015–16ನೇ ಸಾಲಿನಲ್ಲಿಯೂ ಸಹ ಮಂಡ್ಯ ಜಿಲ್ಲಾ ಪಂಚಾಯಿತಿ ಸ್ವಚ್ಛ ಭಾರತ ಮಿಷನ್ ಕಾರ್ಯಕ್ರಮದಲ್ಲಿ ಅಗ್ರಸ್ಥಾನದಲ್ಲಿಯೇ ಮುಂದುವರಿದೆ. ಈ ವರ್ಷ ರಾಜ್ಯ ಸರ್ಕಾರ 54000 ಗುರಿ ನೀಡಿದೆ. ಸೆಪ್ಟೆಂಬರ್ ಮೂರನೇ ವಾರದ ವೇಳೆಗೆ 40196 ಕುಟುಂಬಗಳು ಶೌಚಾಲಯ ಕಟ್ಟಿಸಿಕೊಂಡಿವೆ. ಜಿಲ್ಲೆಯ 374445 ಕುಟುಂಬಗಳ ಪೈಕಿ ಈವರೆಗೆ 258914 ಕುಟುಂಬಗಳು ಈಗ ಶೌಚಾಲಯ ಹೊಂದಿದಂತಾಗಿದೆ. ಇನ್ನೂ 115531 ಕುಟುಂಬಗಳು ಶೌಚಾಲಯ ಹೊಂದಬೇಕಾಗಿದೆ.

ಕಳೆದ ಒಂದೂವರೆ ವರ್ಷದಿಂದ ಸಾಧಿಸಿರುವ ವೇಗದಲ್ಲಿ ಮುಂದುವರಿದರೆ ಇಡೀ ಜಿಲ್ಲೆಯನ್ನು ಬಯಲು ಬಹಿರ್ದೆಸೆ



ಮುಕ್ತ ಜಿಲ್ಲೆಯಾಗಿ ಪರಿವರ್ತಿಸುವಲ್ಲಿ ಸಂಶಯವಿಲ್ಲ. ಈ ಅವಧಿಯಲ್ಲಿ ಜಿಲ್ಲಾ ಪಂಚಾಯತ್‌ನ ಯೋಜನೆಯ ಪ್ರಚಾರಕ್ಕೆ ಜಿಲ್ಲಾದ್ಯಂತ ಸಂಚರಿಸಿ, ಹಲವಾರು ಸಭೆ, ಸಮಾರಂಭಗಳನ್ನು ನಡೆಸಿದರು.

### ಸಾಧನೆಯ ಹಾದಿಯಲ್ಲಿ ಕೈಗೊಂಡ ಕ್ರಮಗಳು

ಮಂಡ್ಯ ಜಿಲ್ಲೆಯಲ್ಲಿ 7 ತಾಲ್ಲೂಕುಗಳಿವೆ. ಈ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ 2014ರ ಜೂನ್ ಮೂರನೇ ವಾರದಲ್ಲಿ ನಿರ್ಮಲ ಭಾರತ ಅಭಿಯಾನವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು ಎಂದು ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮ ಪಂಚಾಯತಿ ಚುನಾಯಿತ ಪ್ರತಿನಿಧಿಗಳು, ಸಂಘ ಸಂಸ್ಥೆಗಳು, ಎಲ್ಲಾ ತಾಲ್ಲೂಕು ಮಟ್ಟದ ಅಧಿಕಾರಿಗಳನ್ನು ಸೇರಿಸಿ ಕಾರ್ಯಾಗಾರ ನಡೆಸಲಾಯಿತು.

ಅಂದು ಶೌಚಾಲಯ ನಿರ್ಮಾಣಕ್ಕೆ ನಿರ್ಮಲ ಭಾರತ ಅಭಿಯಾನ ಯೋಜನೆಯಡಿ ಪ್ರತಿ ಫಲಾನುಭವಿಗೆ 4700 ರೂ.ಗಳು ಹಾಗೂ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 5400 ರೂ.ಗಳ ವರೆಗೂ ಸರ್ಕಾರದ ಸಹಾಯಧನ ಪಡೆಯಲು ಅವಕಾಶವಿತ್ತು. ಈ ಬಗ್ಗೆ ಎಲ್ಲಾ ಕಡೆ ತಿಳಿಸಲಾಯಿತು.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಬೇಸ್‌ಲೈನ್ ಸಮೀಕ್ಷೆ ಹಾಗೂ ಪಂಚತಂತ್ರದಲ್ಲಿ ಅಳವಡಿಸಿದ್ದ ಸಮೀಕ್ಷೆ ಮಾಹಿತಿಯಲ್ಲಿ ಇದ್ದ ಲೋಪದೋಷಗಳನ್ನು ಸರಿಪಡಿಸಿಕೊಂಡು, ಕ್ರಿಯಾಯೋಜನೆಯನ್ನು ತಯಾರಿಸಿದರು. ಯೋಜನೆಯ ಪ್ರಗತಿ ಪರಿಶೀಲನೆಗಾಗಿ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಪ್ರತಿ ತಾಲ್ಲೂಕಿಗೆ ನೋಡಲ್ ಅಧಿಕಾರಿಗಳಾಗಿ ನೇಮಿಸಲಾಯಿತು. ಜಿಲ್ಲಾ ಸಮಾಲೋಚಕರು, ಶಿಕ್ಷಣ ಇಲಾಖೆಯ

ಬಿ.ಆರ್.ಸಿ., ಸಿ.ಆರ್.ಸಿಗಳು, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ (ಎನ್.ಆರ್.ಎಲ್.ಎಂ.)ನ ತಾಲ್ಲೂಕು ಸಂಯೋಜಕರು, ಭಾರತ್ ನಿರ್ಮಾಣ್ ಸ್ವಯಂ ಸೇವಕರು, ಹಾಗೂ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ತಾಲ್ಲೂಕು ಸಾಮಾಜಿಕ ಲೆಕ್ಕ ಪರಿಶೋಧಕರು ಶೌಚಾಲಯ ನಿರ್ಮಾಣದ ವಿಶೇಷ ಆಂದೋಲನದಲ್ಲಿ ತೊಡಗಿಕೊಂಡರು.

**ಸ್ವಚ್ಛತಾ ದಿನ :** ಮಂಡ್ಯ ಜಿಲ್ಲೆಯಲ್ಲಿ ಪ್ರತಿ ತಿಂಗಳು ಸ್ವಚ್ಛತಾ ದಿನವನ್ನು ಆಚರಿಸಲು ನಿರ್ಧರಿಸಲಾಯಿತು. ಶೌಚಾಲಯ ನಿರ್ಮಿಸಿಕೊಳ್ಳಲು ಮುಂದೆ ಬರುವವರಿಗೆ ಅನುಕೂಲ ಕಲ್ಪಿಸುವುದು ಹಾಗೂ ತನ್ಮೂಲಕ ಪ್ರಚಾರ ಮಾಡುವುದು ಈ ದಿನ ವಿಶೇಷ. ಹಾಗಾಗಿ ಪ್ರತಿ ತಿಂಗಳ ಮೊದಲ ಶನಿವಾರವನ್ನು ಸ್ವಚ್ಛತಾ ದಿನವಾಗಿ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಆಚರಿಸಲಾಯಿತು. ಅಂದು ಅರ್ಜಿಗಳನ್ನು ಸ್ವೀಕರಿಸುವುದು, ಅದೇ ದಿನ ಕಾರ್ಯಾದೇಶ ನೀಡುವುದು ಹಾಗೂ ಮಸ್ಟರ್ ರೋಲ್ ತೆಗೆಯುವುದು ಪ್ರತಿ ತಿಂಗಳ ಮೊದಲ ಶನಿವಾರ ನಿರಂತರವಾಗಿ ನಡೆಯಿತು.

ಶೌಚಾಲಯ ಕಾಮಗಾರಿ ಆರಂಭಿಸಿದ 9 ದಿನ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುವ ಕಿರಿಯ ಇಂಜಿನಿಯರ್‌ಗಳು ಕಾಮಗಾರಿಯ ಸ್ಥಳ ಪರಿಶೀಲಿಸಿ ಅಳತೆ ಪುಸ್ತಕದಲ್ಲಿ ದಾಖಲಿಸುವರು. ಇದಾದ 10 ದಿನಗಳಲ್ಲಿ ಪೂರ್ಣಗೊಂಡ ಶೌಚಾಲಯಗಳಿಗೆ ಪ್ರೋತ್ಸಾಹಧನ ಪಾವತಿಯಾಗುವಂತೆ ಕ್ರಮ ವಹಿಸಲಾಯಿತು. ಪ್ರೋತ್ಸಾಹಧನ ಪಾವತಿ ಪ್ರಕ್ರಿಯೆಗಳು ಯೋಜಿಸಿದಂತೆ ನಡೆದವು. ಇದರಿಂದ ಪ್ರೋತ್ಸಾಹಧನ ಸಿಕ್ಕೇ ಸಿಗುತ್ತದೆ ಎಂಬ ವಿಶ್ವಾಸ ಸಾರ್ವಜನಿಕರಿಗೆ ಉಂಟಾಗಿ, ಹೆಚ್ಚು ಜನರು ಶೌಚಾಲಯ ಹೊಂದಲು ಮುಂದಾದರು.

**ಸವಾಲುಗಳು**

ಶೌಚಾಲಯ ಕಟ್ಟಿಸಿಕೊಳ್ಳಲು ಗ್ರಾಮೀಣ ಪ್ರದೇಶದಲ್ಲಿ ಹಿಂಜರಿಕೆ ಇತ್ತು. ಇದಕ್ಕೆ ಸಾಮಾಜಿಕ, ಆರ್ಥಿಕ, ಧಾರ್ಮಿಕ ಕಾರಣಗಳೂ ಇವೆ. ಬಡ ಕುಟುಂಬಗಳಿಗೆ ಶೌಚಾಲಯ ಬೇಕು ಎನಿಸಿದರೂ ಬಂಡವಾಳ ಹೂಡಲು ಕಷ್ಟವಾಗುತ್ತಿತ್ತು. ಆದರೆ ಸರ್ಕಾರ ಪ್ರೋತ್ಸಾಹಧನ ಕೊಡುತ್ತದೆ ಎಂಬ ಅರಿವಿರಲಿಲ್ಲ. ಅರಿವಿದ್ದರೂ ಈ ವ್ಯವಸ್ಥೆಯಲ್ಲಿ ಅದನ್ನು ಸುಲಭವಾಗಿ ಪಡೆದುಕೊಳ್ಳಲು ಸಾಧ್ಯವಿಲ್ಲ ಎಂಬ ಭಾವನೆ ಇತ್ತು. ಎಲ್ಲಿ, ಯಾರಿಗೆ ಅರ್ಜಿ ಕೊಡಬೇಕು ಎಂದು ತಿಳಿದಿರಲಿಲ್ಲ.

ಅನಕ್ಷರಸ್ಥ ಕುಟುಂಬಗಳಿಗೆ ಸರ್ಕಾರದ ನೆರವಿನ ಬಗ್ಗೆ ತಿಳಿಸುವವರು ಇರಲಿಲ್ಲ. ಹಿಂದಿನ ವರ್ಷಗಳಲ್ಲಿ ಶೌಚಾಲಯ ಕಟ್ಟಿಸಿಕೊಂಡವರಿಗೆ ಪ್ರೋತ್ಸಾಹಧನ ಬಾಕಿ ಉಳಿಸಿಕೊಂಡ ಪ್ರಕರಣ ತುಂಬಾ ದೊಡ್ಡದೇ ಇತ್ತು. ಫಲಾನುಭವಿಗಳು ಬ್ಯಾಂಕ್ ಖಾತೆ ಹೊಂದದಿರುವುದು ಸಹ ಬಾಕಿ ಪಾವತಿಗೆ ಅಡಚಣೆಯಾಗಿತ್ತು. ಕೆಲವರದು ಮಡಿವಂತಿಕೆ. ಮನೆಯೊಳಗೆ ಶೌಚಾಲಯ ಇರುವುದನ್ನು ಅವರು ಒಪ್ಪುತ್ತಿರಲಿಲ್ಲ. ಕೆಲವರು ವಾಸ್ತು ನೋಡುತ್ತಿದ್ದರು. ಇದ್ದ ಶೌಚಾಲಯಗಳನ್ನು ಸಹ ಕೆಲವರು ಬಳಸುತ್ತಿರಲಿಲ್ಲ. ಒಲೆಗೆ ಬೇಕಾದ ಕಟ್ಟಿಗೆಗಳನ್ನು, ಸಾಮಾನುಗಳನ್ನು ತುಂಬಿದ ಚೀಲಗಳನ್ನು ಶೌಚಾಲಯಗಳಲ್ಲಿ ದಾಸ್ತಾನು ಮಾಡಿ ನಿರುಪಯುಕ್ತಗೊಳಿಸಿದ್ದರು. ಈ ಸಮಸ್ಯೆಗಳನ್ನು ಮೆಟ್ಟಿನಿಂತು ಗುರಿಯೆಡೆಗೆ ಸಾಗುವುದು ದೊಡ್ಡ ಸವಾಲೇ ಆಗಿತ್ತು. ಹಣ ಪಾವತಿ ಅಭಿಯಾನ, ಜಾಗೃತಿ ಅಭಿಯಾನಗಳ ಮೂಲಕ ಸಾರ್ವಜನಿಕರ ಸಹಭಾಗಿತ್ವವನ್ನು ಹೆಚ್ಚಿಸಲಾಯಿತು.

**ಪ್ರಚಾರ**

ಯಾವುದೇ ಯೋಜನೆ–ಕಾರ್ಯಕ್ರಮ ಯಶಸ್ವಿ ಆಗಬೇಕಾದರೆ ಸೂಕ್ತ ಹಾಗೂ ಯೋಜಿತ ಪ್ರಚಾರ ಬಹಳ ಮುಖ್ಯ. ಯೋಜನೆಯ ಅನುಷ್ಠಾನಕ್ಕೆ ಕೊಟ್ಟ ಆದ್ಯತೆಯನ್ನು ಪ್ರಚಾರಕ್ಕೂ ಸಹ ಕೊಟ್ಟಿದ್ದು ಹೆಚ್ಚು ಸಾರ್ವಜನಿಕರ ಸಹಭಾಗಿತ್ವ ಪಡೆದುಕೊಳ್ಳಲು ನೆರವಾಯಿತು.

ಈ ಬಗ್ಗೆ ಮುದ್ರಣ ಹಾಗೂ ವಿದ್ಯುನ್ಮಾನ ಮಾಧ್ಯಮಗಳಲ್ಲಿ ವ್ಯಾಪಕ ಪ್ರಚಾರ ಮಾಡಲಾಯಿತು. ಎಲ್ಲಾ ಸಭೆ ಸಮಾರಂಭಗಳಲ್ಲಿ ಪ್ರಕಟಿಸಲಾಯಿತು. ಗ್ರಾಮ ಮಟ್ಟದಲ್ಲಿ ಕರ ಪತ್ರಗಳನ್ನು ಮುದ್ರಿಸಿ ಹಂಚಲಾಯಿತು. ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಂ.ಎಚ್. ಅಂಬರೀಷ್ ಅವರು ಶೌಚಾಲಯ ನಿರ್ಮಿಸಿಕೊಳ್ಳುವಂತೆ ಮಾಡಿದ ಮನವಿಯ ಧ್ವನಿ ಮುದ್ರಣವನ್ನು ಆಟೋ ರಿಕ್ಷಾಗಳ ಮೂಲಕ ಹಳ್ಳಿ ಹಳ್ಳಿಗಳಲ್ಲಿ ಪ್ರಸಾರ ಮಾಡಲಾಯಿತು. ರೇಡಿಯೊ ಜಿಂಗಲ್ಸ್‌ಗಳನ್ನು ತಯಾರಿಸಿ ಪ್ರಸಾರ ಮಾಡಲಾಯಿತು. ಮೈಸೂರಿನಲ್ಲಿರುವ ನಜೀರ್ ಸಾಬ್ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಸಹಯೋಗದಲ್ಲಿ ಜಾಗೃತಿ ಗೀತೆಗಳನ್ನು ರಚಿಸಿ, ಆಟೋ ರಿಕ್ಷಾಗಳ ಮೂಲಕ ಪ್ರಚಾರ ಮಾಡಲಾಯಿತು.

ಜಿಲ್ಲೆಯ ಸುಮಾರು 50 ಸಾವಿರ ಬಿ.ಎಸ್.ಎನ್.ಎಲ್. ಮೊಬೈಲ್‌ಗಳಲ್ಲಿ ಮುದ್ರಿತ ಸಂದೇಶ ಪ್ರಸಾರವಾಯಿತು. ಜನರ ಗಮನ ಸೆಳೆಯುವುದಕ್ಕಾಗಿ 2014ರ ಜುಲೈ ಮೊದಲ ವಾರ ಮಂಡ್ಯ ಜಿಲ್ಲೆಯ ಪ್ರತಿ ಹಳ್ಳಿಯಲ್ಲೂ ತಲಾ ಎರಡೆರಡು ಶೌಚಾಲಯಗಳನ್ನು ಉದ್ಘಾಟಿಸುವ ವಿನೂತನ ಆಂದೋಲವನ್ನು ಹಮ್ಮಿಕೊಳ್ಳಲಾಯಿತು. ಈ ಆಂದೋಲನಕ್ಕೆ ನಿರೀಕ್ಷೆಗೂ ಮೀರಿ ಯಶಸ್ವಿ ದೊರೆಯಿತು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಹೆಚ್. ಕೆ.ಪಾಟೀಲ್ ಅವರು ಜುಲೈ 7 ರಂದು ಮಂಡ್ಯ ತಾಲ್ಲೂಕು ಕೀಲಾರದಲ್ಲಿ ನಿರ್ಮಿಸಲಾದ 2 ಶೌಚಾಲಯಗಳನ್ನು ಉದ್ಘಾಟಿಸಿ ಹೆಚ್ಚಿನ ಪ್ರೋತ್ಸಾಹ ನೀಡಿದರು.

ಜಿಲ್ಲೆಯಲ್ಲಿ ಒಟ್ಟು 1658 ಗ್ರಾಮಗಳಿವೆ. ಅಂದು (2014ರ ಜುಲೈ 7) ಒಂದೇ ದಿನ ಸುಮಾರು 3300 ಕುಟುಂಬಗಳ ಶೌಚಾಲಯಗಳನ್ನು ಉದ್ಘಾಟನೆ ಮಾಡಿದ್ದು ಇತಿಹಾಸ. ಮಕ್ಕಳ ಪ್ರೀತಿಯ ನುಡಿಗಳನ್ನು ಪೋಷಕರು ಕೇಳುತ್ತಾರೆ. ಆದ್ದರಿಂದ ಶಾಲಾ ಮಕ್ಕಳ ಮೂಲಕವೂ ಪೋಷಕರ ಮನವೊಲಿಸಲು ಪ್ರಯತ್ನಿಸಲಾಯಿತು.

ಶಾಲೆಗಳಲ್ಲಿ ಪ್ರತಿ ದಿನ ನಡೆಯುವ ಶಾಲಾ ಪ್ರಾರ್ಥನೆ ವೇಳೆ ಎಲ್ಲಾ ಮಕ್ಕಳು ಒಂದೆಡೆ ಸೇರುತ್ತಾರೆ. ಅಲ್ಲಿ ಪ್ರತಿಜ್ಞಾವಿಧಿ ಘೋಷಣೆ ಮಾಡಿ, ಯಾರ ಮನೆಗಳಲ್ಲಿ ಶೌಚಾಲಯ ಇಲ್ಲ ಅವರು ಶೌಚಾಲಯ ನಿರ್ಮಿಸುವಂತೆ ಪೋಷಕರ ಮನವೊಲಿಸಬೇಕೆಂದು ಪ್ರಕಟಿಸಲಾಯಿತು. ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು ಮನೆ ಮನೆಗೆ ತೆರಳಿ ಮಹಿಳೆಯರ ಮನವೊಲಿಸಿ ಶೌಚಾಲಯ ನಿರ್ಮಿಸಿಕೊಳ್ಳುವಂತೆ ಪ್ರೇರೇಪಣೆ ಮಾಡಿದರು.

**(71ನೇ ಪುಟಕ್ಕೆ)**

# ಬೀದರ ಖರೇಜ್ : ಪ್ರವಾಸೋದ್ಯಮಕ್ಕೆ ಹೊಸಬಲ

* ರವಿರಾಜ್ ಎಚ್.ಜಿ





ನೌಬಾದ್ ಸಿದ್ದೇಶ್ವರ ಮಂದಿರದ ಹತ್ತಿರದ ಖರೇಜ್‌ನಲ್ಲಿ ಇದೇ ಸೆಪ್ಟಂಬರ್ 14ರ ಸೋಮವಾರ ಸಂಜೆಯಿಂದ ನೀರು ಹರಿಯಲು ಆರಂಭಿಸಿದ್ದು, ಜಿಲ್ಲಾಡಳಿತ ಯತ್ನಕ್ಕೆ ಮೊದಲ ಯಶದೊರೆತಿದೆ ಎನ್ನಬಹುದಾಗಿದೆ. ಇದರಿಂದ ಬೀದರ ಖರೇಜ್‌ಗೆ ಹೊಸ ಜೀವಕಳೆ ಬಂದಿದ್ದು, ಇಲ್ಲಿನ ಪ್ರವಾಸೋದ್ಯಮಕ್ಕೂ ಇದು ಹೊಸ ಆಯಾಮ ನೀಡಬಹುದು ಎಂದು ಅಂದಾಜಿಸಲಾಗಿದೆ.

ಕರ್ನಾಟಕದ ಕಿರೀಟ ಬೀದರ ಹಲವು ವಿಶೇಷಣಗಳ ನಾಡು. ಇಲ್ಲಿನ ಮಣ್ಣು, ಮಳೆ, ಹವಾಗುಣ, ಸಂಸ್ಕೃತಿ, ಆಚಾರ-ವಿಚಾರ, ಊಟ-ಉಪಚಾರ, ಭಾಷೆ ಎಲ್ಲವೂ ಭಿನ್ನವೆ. ಹೇಳಿಕೇಳಿ ಇದು ಲ್ಯಾಟರೈಟ್ ಮಣ್ಣಿನ ಬೀಡು. ಈ ನಾಡಿನ ಮಣ್ಣು ಅತಿ ಹೆಚ್ಚು ನೀರನ್ನು ಇಂಗಿಕೊಳ್ಳುವ ಅತಿ ವಿಶೇಷ ಗುಣ ಪಡೆದಿದೆ. ದೇಶದ ಕೆಲವೇ ಬೆರಳೆಣಿಕೆಯಷ್ಟು ಲ್ಯಾಟರೈಟ್ ಮಣ್ಣಿರುವ ಜಿಲ್ಲೆಗಳಲ್ಲಿ ಬೀದರ ಒಂದಾಗಿರುವುದು ರಾಜ್ಯದ ಅಗ್ಗಳಿಕೆ. ಜಿಲ್ಲೆಯ ಜಲ ಜಿನುಗುವ ತಾಣಗಳು ಹಲವಾರು. ಅವುಗಳಲ್ಲಿ ಪ್ರಸಿದ್ದ ನರಸಿಂಹ ಝರ್ಣಾ, ಪಾಪನಾಶ ಲಿಂಗೇಶ್ವರ, ಗುರುನಾನಕ್ ಝರ್ಣಾ..... ಪ್ರಸಿದ್ಧ. ಇಂತಹ ಬೀದರ ಬಹಮನಿ ಸುಲ್ತಾನರ ಕಾಲದಲ್ಲಿ ಭೂಮಿಯೊಳಗಿನ ಸುರಂಗ ಮಾರ್ಗದಲ್ಲಿ ನೀರು ಹರಿಯುವ – ಖರೇಜ್ ವ್ಯವಸ್ಥೆಗೆ ಹೆಸರಾಗಿತ್ತು. ಖರೇಜ್ ಎಂದರೆ: ಖರೇಜ್ ಎಂಬುದು ವಿಶಿಷ್ಟ ನೀರಿನ ಸುರಂಗ ಮಾರ್ಗ ಎನ್ನಬಹುದು. ಇದು ಮೂಲತಃ ಪರ್ಷಿಯನ್ ತಂತ್ರಜ್ಞಾನ. ನಿರಂತರವಾಗಿ ನೀರು ಜಿನುಗುವ, ಅಂತರ್ಜಲ ಮೂಲಗಳೂ ಹಾಗೂ ನೀರಿನ ಝರಿಗಳಿಂದ ಸುರಂಗದೊಳಗೆ ನೀರು ಸಂಗ್ರಹಗೊಂಡು ಒಂದೆಡೆಯಿಂದ ಮತ್ತೊಂದೆಡೆಗೆ ನೀರನ್ನು ಹರಿಸುವ ವ್ಯವಸ್ಥೆಯಾಗಿದೆ. ಅಂತರ್ಜಲ ಮಟ್ಟವನ್ನು ಗಣನೀಯವಾಗಿ ಹೆಚ್ಚಿಸುವ ತಂತ್ರಜ್ಞಾನ ಹೊಂದಿರುವುದು ವಿಶೇಷವಾಗಿದೆ. ಪರ್ಷಿಯಾದ ಖಾರೀಜ್ ಪದದಿಂದ ಖರೇಜ್ ಶಬ್ದ ಉತ್ಪತ್ತಿಗೊಂಡಿದೆ. ಖಾರೀಜ್ ಎಂದರೆ ನೀರಿನಲ್ಲಿ ಹುಲ್ಲು ಹಾಕುವುದು ಎಂದರ್ಥ. ಸುಮಾರು ಆರುನೂರು ವರ್ಷಗಳ ಹಿಂದೆ ಬಹಮನಿ ಸುಲ್ತಾನರು ಆಡಳಿತ ನಡೆಸುತ್ತಿದ್ದ ಸಂದರ್ಭದಲ್ಲಿ ಬೀದರ ನಗರಕ್ಕೆ ವರ್ಷವಿಡಿ ಕುಡಿಯುವ ನೀರು ಹಾಗೂ ಕೃಷಿ ಚಟುವಟಿಕೆಗಳಿಗೆ ನೀರು ಪೂರೈಸಿಕೊಳ್ಳಲು ಖರೇಜ್ ವ್ಯವಸ್ಥೆಯನ್ನು ನಿರ್ಮಿಸಿದರು. ಅಂದಿನ ಇರಾನ್ ಹಾಗೂ ಪರ್ಷಿಯಾದ ತಂತ್ರಜ್ಞಾನ ಬೀದರಿನಲ್ಲಿರುವ ಸುಮಾರು 14 ಖರೇಜ್ ವ್ಯವಸ್ಥೆಗಳ ನಿರ್ಮಾಣಕ್ಕೆ ಬಳಕೆಯಾಯಿತು. ಬೃಹತ್ ಸುರಂಗಗಳನ್ನು ನಿರ್ಮಿಸಿ ಅಂತರ್ಜಲ ಸಂಪರ್ಕವನ್ನು ಸಾಧಿಸಿಕೊಂಡು ಜಲಸಂಪತನ್ನು ಅಮೂಲ್ಯವಾಗಿ ಸಂಗ್ರಹಿಸಲಾಗುತ್ತಿತ್ತು ಹಾಗೂ ಈ ಮೂಲಕ ಅಂತರ್ಜಲ ಮಟ್ಟದ ಏರಿಕೆಗೂ ಕಾರಣವಾಗುತ್ತಿತ್ತು. ಅಂದಿನ ಖರೇಜ್‌ನಲ್ಲಿ ಇಳಿಜಾರಿನಿಂದ ಎತ್ತರಕ್ಕೆ ವರ್ಷದ ಹನ್ನೆರಡು ತಿಂಗಳು ಬೀದರ ನಗರಕ್ಕೆ ಸಮೃದ್ಧವಾಗಿ ನೀರು ಲಭಿಸುತ್ತಿತ್ತು. ಇದೇ ರೀತಿಯ 36 ಸಾವಿರ ಕರೇಜ್‌ಗಳು ಇರಾನ್ ದೇಶದಲ್ಲಿದ್ದವು. ಈ ಕರೇಜ್‌ಗಳಲ್ಲಿ ಮೇಲ್ಮಟ್ಟದಿಂದ ಕೆಳಮಟ್ಟಕ್ಕೆ ನೀರು ಹರಿಯುತ್ತಿದ್ದರೆ, ಬೀದರಿನಲ್ಲಿ ಕೆಳಮಟ್ಟದಿಂದ ಮೇಲ್ಮಟ್ಟಕ್ಕೆ ನೀರು ಹರಿಯುತ್ತಿದ್ದದ್ದು ಅಂದಿನ ತಾಂತ್ರಿಕತೆಯ ಉತ್ತುಂಗಕ್ಕೆ ಹಿಡಿದ ಕನ್ನಡಿ. ವಿಶ್ವದ ಹಲವು ರಾಷ್ಟ್ರಗಳಲ್ಲಿ ಖರೇಜ್ ಇರುವುದು ಬೆಳಕಿಗೆ ಬಂದಿದೆ. ರಾಜ್ಯದ ವಿಜಯಪುರದಲ್ಲೂ ಖರೇಜ್ ವ್ಯವಸ್ಥೆ ಇರುವುದು ಪತ್ತೆಯಾಗಿದೆ. ಖರೇಜ್ ಮೂಲಕ ನಗರದ ಯಾವ ಭಾಗಗಳಿಗೆ ನೀರು ಅಗತ್ಯವಿದೆಯೋ ಆ ಭಾಗಕ್ಕೆ ಟೇರಾಕೋಟಾ ಪೈಪ್ ಮೂಲಕ ನೀರನ್ನು ಸಾಗಿಸಲಾಗುತ್ತಿತ್ತು. ಅಂದು ಸುಮಾರು 14 ಖರೇಜ್ ವ್ಯವಸ್ಥೆಗಳಿದ್ದು, ಅವು ಎಂದಿಗೂ ಬೀದರ ನಗರಕ್ಕೆ ಬರ ಕಾಡದಂತೆ ನೀರೊದಗಿಸುತ್ತಿದ್ದವು ಎಂದು ಪ್ರಸಿದ್ದ ಲೇಖಕ ಗುಲಾಂ ಯಾಜ್ದಾನಿ ತಮ್ಮ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ. ಬೀದರ ನಗರದಲ್ಲಿ ನೂತನವಾಗಿ ರೂಪುಗೊಂಡಿರುವ ಈಗಿನ ನೌಬಾದ್

* ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೀದರ್.

ಈ ಹಿಂದೆ ಬೃಹತ್ ಕೆರೆಯಾಗಿತ್ತು ಎಂದು ಹೇಳಲಾಗುತ್ತದೆ. ಈ ಖರೇಜ್ ವ್ಯವಸ್ಥೆಗೆ ನೀರಿನ ಅಂತರ್ಜಲ ಮೂಲವೇ ಆ ನೌಬಾದ್ ಕೆರೆಯಾಗಿತ್ತು. ಈ ಅಂತರ್ಜಲ ವ್ಯವಸ್ಥೆಗೆ ಕೆರೆ ಹಾಗೂ ಖರೇಜ್ ಒಂದಕ್ಕೊಂದು ನೇರ ಸಂಪರ್ಕಹೊಂದಿವೆ ಎಂಬುದು ಇತಿಹಾಸ ತಜ್ಞರ ಅಭಿಮತವಾಗಿದೆ. ಇಂತಿಪ್ಪ ಖರೇಜ್ ಕಾಲಕ್ರಮೇಣ ಭೂಗರ್ಭದೊಳಗೆ ಹೂತು ಹೋದವು, ಮತ್ತೆ ಕೆಲವು ಒತ್ತುವರಿಯಾದವು. ಮತ್ತೆ ಕೆಲವು ಅನೈತಿಕ ಚಟುವಟಿಕೆಗಳಿಗೆ ಕಾರಣವಾಗುತ್ತಿವೆ ಎಂದು ಮುಚ್ಚಲಾಯಿತು ಎಂದು ಬೀದರ ಹಿರಿಯರು ನೆನಪು ಮಾಡಿಕೊಳ್ಳುತ್ತಾರೆ. ಕಳೆದ ಮೂರು ವರ್ಷಗಳಿಂದ ಖರೇಜ್ ಪುನರುಜ್ಜೀವನಕ್ಕೆ ಜಿಲ್ಲಾಡಳಿತದ ವತಿಯಿಂದ ಯತ್ನಿಸಲಾಗುತ್ತಿತ್ತು. ಇದಕ್ಕಾಗಿ ಸಾಕಷ್ಟು ಇತಿಹಾಸಕಾರರನ್ನು, ಅಂತರ್ಜಲ ತಜ್ಞರನ್ನು ಆಹ್ವಾನಿಸಿ ಬೀದರಿನಲ್ಲಿರಬಹುದಾದ ಖರೇಜ್ ವ್ಯವಸ್ಥೆಗಳ ಅಧ್ಯಯನ ನಡೆಸಲಾಯಿತು.





ಒಟ್ಟು 14 ಖರೇಜ್‌ಗಳ ಪೈಕಿ 6 ಖರೇಜ್‌ಗಳ ಜಾಲವನ್ನು ಭೇದಿಸಿದ ನಂತರ ಅಂತಿಮವಾಗಿ ಖರೇಜ್‌ನಿಂದ ಸಮೃದ್ಧವಾದ ನೀರು ಲಭಿಸುವುದು ಸ್ಪಷ್ಟವಾಯಿತು. ನಂತರ ಜಿಲ್ಲಾಡಳಿತ 2015ರ ಮೇ ನಲ್ಲಿ ಖರೇಜ್ ಸುರಂಗಗಳಲ್ಲಿ ಹೂಳೆತ್ತುವ ಕಾಮಗಾರಿಗಳನ್ನು ಆರಂಭಿಸಿತು. ಇದೀಗ ನಗರದಲ್ಲಿ ಪತ್ತೆಯಾಗಿರುವ ಖರೇಜ್‌ನ ಒಟ್ಟು ಮಾರ್ಗ ಸುಮಾರು 3.3 ಕಿ.ಮೀ. ಉದ್ದವಿದೆ. ಅಲಿಯಾಬಾದ್ ಸಿದ್ದೇಶ್ವರ ಮಂದಿರದ ಹತ್ತಿರದಿಂದ ನೌಬಾದ್ ವರೆಗೆ ಇದು ವ್ಯಾಪಿಸಿದೆ. ಸಿದ್ದೇಶ್ವರ ಮಂದಿರದಿಂದ ನೌಬಾದ್ ರಸ್ತೆ ಹತ್ತಿರದವರೆಗೆ ಸದ್ಯ (1.5 ಕಿ.ಮೀ.) ಸುರಂಗ ಮಾರ್ಗ ತೋಡಲಾಗಿದೆ. ನೆಲಮಟ್ಟದಿಂದ 35–40 ಅಡಿಗಳ ವರೆಗೆ ಕೆಳಗಡೆ ಈ ಸುರಂಗ ಮಾರ್ಗವಿದೆ. ಈ ಮಾರ್ಗಮಧ್ಯೆ ಒಟ್ಟು 31 ದಾರಿ ಬಾವಿ(ವೆಂಟ್)ಗಳಿವೆ. ಈ ಪೈಕಿ ಇದೂವರೆಗೆ 22 ಬಾವಿಗಳನ್ನು ಗುರುತಿಸಲಾಗಿದ್ದು, 15 ಬಾವಿಗಳನ್ನು ತೆರೆಯಲಾಗಿದೆ. ಖರೇಜ್ ವ್ಯವಸ್ಥೆ ಸಂಪೂರ್ಣವಾಗಿ ಮೂಲಸ್ಥಿತಿಗೆ ಬಂದಲ್ಲಿ ಬೀದರ ನಗರಕ್ಕೆ ನೀರು 24/7 ಮಾದರಿಯಲ್ಲಿ ಪೂರೈಕೆಯಾಗುವಲ್ಲಿ ಯಾವುದೇ ಅನುಮಾನಗಳಿರುವುದಿಲ್ಲ. ಖರೇಜ್ ಪುನರುಜ್ಜೀವನದ ಪೂರ್ವ ಕಾರ್ಯ ಸುರಂಗ ಮಾರ್ಗ ತೋಡಲು, ಹೂಳೆತ್ತಲು ಸ್ಥಳೀಯ ಕಾರ್ಮಿಕರನ್ನೆ ಬಳಸಿಕೊಳ್ಳಲಾಗುತ್ತಿದೆ. ಕಾರ್ಮಿಕ ಸಮದ್ ಎಂಬುವರ ಮಾರ್ಗದರ್ಶನದಲ್ಲಿ ಸುಮಾರು 150ಕ್ಕೂ ಹೆಚ್ಚಿನ ಕಾರ್ಮಿಕರು ಎಲ್ಲಾ ಸುರಕ್ಷಾ ಕ್ರಮಕೈಗೊಂಡು ಸುರಂಗ ತೋಡುತ್ತಿದ್ದಾರೆ. ಸುರಂಗ ತೋಡಲು ಅನುಕೂಲಕ್ಕಾಗಿ ವಿದ್ಯುತ್ ದೀಪಗಳ ವ್ಯವಸ್ಥೆ ಮಾಡಲಾಗಿದೆ. 10 ಮಂದಿ ಮೇಲುಸ್ತುವಾರಿ ಕಾರ್ಯಕ್ಕೈ**ಗೊಂಡಿದ್ದಾರೆ. ಇದಕ್ಕೆಂದು** 9 ಚೈನ್ ಪುಲ್ಲಿ ಕ್ರೇನ್‌ಗಳನ್ನು ಬಳಸಲಾಗುತ್ತಿದೆ. ನೌಬಾದ್ ಸಿದ್ದೇಶ್ವರ ಮಂದಿರದ ಹತ್ತಿರದ ಖರೇಜ್‌ನಲ್ಲಿ ಇದೇ ಸೆಪ್ಟಂಬರ್ 14ರ ಸೋಮವಾರ ಸಂಜೆಯಿಂದ ನೀರು ಹರಿಯಲು **ಆರಂಭಿಸಿದ್ದು, ಜಿಲ್ಲಾಡಳಿತ ಯತ್ನಕ್ಕೆ ಮೊದಲ** ಯಶದೊರೆತಿದೆ ಎನ್ನಬಹುದಾಗಿದೆ. ಇದರಿಂದ ಬೀದರ ಖರೇಜ್‌ಗೆ ಹೊಸ ಜೀವಕಳೆ ಬಂದಿದ್ದು, ಇಲ್ಲಿನ ಪ್ರವಾಸೋದ್ಯಮಕ್ಕೂ ಇದು ಹೊಸ ಆಯಾಮ ನೀಡಬಹುದು ಎಂದು ಅಂದಾಜಿಸಲಾಗಿದೆ. ಸಿದ್ದೇಶ್ವರ ಮಂದಿರ ಹತ್ತಿರದ ಜಲಕುಂಡ ಖರೇಜ್ ಮಾರ್ಗದ ನೀರಿನಿಂದ ಇದೀಗ ತುಂಬಿ ಹರಿಯುತ್ತಿದೆ. ಈ ಮಾರ್ಗವಾಗಿ ನೀರು ಮುಂದೆ ಬಾಗ್–ಎ–ಹಮಾಮ್‌ವರಗೆ ಸಾಗುತ್ತದೆ. ಅಲ್ಲಿರುವ ಚೆಕ್‌ಡ್ಯಾಂ ಸಹ ನೀರಿನಿಂದ ಭರ್ತಿಯಾಗಿದೆ. ಈಗ ಖರೇಜ್ ಮಾರ್ಗದಲ್ಲಿ ಬಂದ ನೀರಿನ ಪ್ರಮಾಣ ಗಮನಿಸಿದರೆ ಮುಂದೆ ಅಗಾಧ ಪ್ರಮಾಣದ ಅಂತರ್ಜಲ ಮಟ್ಟ ಸಂಗ್ರಹವಾಗಲಿದೆ ಎಂಬ ಭರವಸೆ ಮೂಡಿಸಿದೆ.

ಸರ್ಕಾರದ ಸಹಾಯ : ಬೀದರ ಪ್ರವಾಸೋದ್ಯಮದ ಅಭಿವೃದ್ಧಿಗೆ ಖರೇಜ್ ಸಾಕಷ್ಟು ಸಹಕರಿಸುವ ನಿರೀಕ್ಷೆಯಿದ್ದು, ಖರೇಜ್ ಪುನರುಜ್ಜೀವನಕ್ಕೆ ಜಿಲ್ಲಾಡಳಿತ ಅಗತ್ಯ ಅನುದಾನ ಕಲ್ಪಿಸಲು ಮುಂದಾಗಿದೆ.

ಪ್ರವಾಸೋದ್ಯಮದ ಅಭಿವೃದ್ಧಿಗೆ ಹೊಸಬಲ : ವಿದೇಶಿಗರು ಸೇರಿದಂತೆ ದೇಶವಾಸಿಗಳನ್ನು ಸೆಳೆಯುವ ಬೀದರ ಜಿಲ್ಲೆಯ ಪ್ರವಾಸೋದ್ಯಮ ತಾಣಗಳು ಹಲವು. ಅವುಗಳಲ್ಲಿ ಬೀದರಿನ ಬಹುಮನಿ ಸುಲ್ತಾನರ ಬೃಹತ್ ಕೋಟೆ, ಮಹಮದ್ ಗವಾನ್ ಮದ್ರಸಾ, ಚೌಬಾರ, ಜಲಸಿಂಗ್ಗಿ, ನರಸಿಂಹ ಝರ್ಣಾ, ಗುರುನಾನಕ್ ಝರ್ಣಾ, ಪಾಪನಾಶಿನಿ, ಬಸವಕಲ್ಯಾಣದ ಕೋಟೆ, ಅನುಭವ ಮಂಟಪ, ವಚನಕಾರರ ಗುಹೆಗಳು, ಸಂಜೀವಿನಿ ಬೆಟ್ಟ, ಅಷ್ಟೂರಿನ ಗುಂಬಜ್‌ಗಳು ಸೇರಿದಂತೆ ಸಾಕಷ್ಟು ತಾಣಗಳು ಪ್ರವಾಸಿಗರನ್ನು ಕೈಬೀಸಿ ಕರೆಯುತ್ತವೆ. ಇದೀಗ ಅವುಗಳ ಸಾಲಿಗೆ ಖರೇಜ್ ನೂತನ ಸೇರ್ಪಡೆಯಾಗಿದೆ. ಬೀದರಿನ ಪ್ರವಾಸೋದ್ಯಮದ ಬೆಳವಣಿಗೆ ದೃಷ್ಟಿಯಿಂದ ಖರೇಜ್‌ಗಳ ಅಧ್ಯಯನ, ಸರ್ವೇಕ್ಷಣೆ ಹಾಗೂ ಭೂಗರ್ಭದಲ್ಲಿ ಹೂತು ಹೋಗಿರುವ ಕರೇಜ್‌ಗಳನ್ನು ಗುರುತಿಸುವ ಕಾರ್ಯ ಸಾಗಿದೆ, ಗುರುತಿಸಲಾಗಿರುವ ಖರೇಜ್‌ಗಳಲ್ಲಿ ಹೂಳೆತ್ತುವ ಕಾರ್ಯ ಭರದಿಂದ ಸಾಗಿದೆ. ಮುಂದಿನ ಎರಡು ತಿಂಗಳಲ್ಲಿ ಈ ಕಾರ್ಯ ಪೂರ್ಣಗೊಳ್ಳುವ ನಿರೀಕ್ಷೆ ಇದೆ. ❑

# ನಿಮಗಿದು ತಿಳಿದಿದೆಯೇ?

**ಡಿಜಿಲಾಕರ್ :** ಡಿಜಿಲಾಕರ್, ಡಿಜಿಟಲ್ ಇಂಡಿಯಾ ಕಾರ್ಯಕ್ರಮದಡಿ ಕೈಗೊಳ್ಳಲಾದ ಉಪಕ್ರಮವಾಗಿದೆ. ಇದೊಂದು ಉಚಿತ ಸೇವೆಯಾಗಿದ್ದು, ಜನನ ಪ್ರಮಾಣ ಪತ್ರ, ಆಸ್ತಿ ಪ್ರಮಾಣ ಪತ್ರ ಮೊದಲಾದ ಮುಖ್ಯವಾದ ದಾಖಲೆಗಳನ್ನು ಹಂಚಿಕೊಳ್ಳಬಹುದಾದ ನಮೂನೆಯಲ್ಲಿ ಸುರಕ್ಷಿತವಾಗಿ ಒಂದೆಡೆ ಇಟ್ಟುಕೊಡಲಾಗುತ್ತದೆ.

ಡಿಜಿಲಾಕರ್‌ನಲ್ಲಿ ಎರಡು ಮುಖ್ಯ ಘಟಕಗಳಿವೆ. ಒಂದು ಸಂಗ್ರಹಣೆ, ದಾಸ್ತಾನು ಮತ್ತೊಂದು ಸುಲಭ ಲಭ್ಯತೆ. ಗೇಟ್‌ವೇ ಸಂಗ್ರಹಣೆಯಲ್ಲಿ, ಗ್ರಾಹಕರು ನೀಡಿದ ಇ–ದಾಖಲೆಗಳು ಒಂದು ನಿರ್ದಿಷ್ಟವಾದ ನಮೂನೆಯಲ್ಲಿ ಸಂಗ್ರಹವಾಗಿದ್ದು ಒಂದಿಷ್ಟು ನಮೂದಿತ ಎಪಿಐಗಳನ್ನು ರಿಯಲ್ ಟೈಂ ಸರ್ಚ್ ಇ ದಾಖಲೆ ಯುಆರ್‌ಐ ಬಳಸಿ, ರಿಯಲ್ ಟೈಂನಲ್ಲಿ ವಿವಿಧ ಸಂಗ್ರಹಣೆಯಿಂದ ಆನ್‌ಲೈನ್ ವ್ಯವಸ್ಥೆ ಹೊಂದಲು ಸಾಧ್ಯ ಮಾಡುತ್ತದೆ. ನೀಡಿಕೆದಾರರು ಅಪ್‌ಲೋಡ್ ಮಾಡಿದ ಇ–ದಾಖಲೆಗೆ ಯುಆರ್‌ಐ ಒಂದು ಲಿಂಕ್ ಆಗಿರುತ್ತದೆ. ಗೇಟ್‌ವೇ ಸಂಗ್ರಹಣೆಯ ವಿಳಾಸ ಹುಡುಕಿ ಗುರುತಿಸಿ ಬೇಕಾದ್ದನ್ನು ಆಯ್ದುಕೊಳ್ಳುತ್ತದೆ.

ಇ ದಾಖಲೆಗಳನ್ನು ನೊಂದಾಯಿತ ಸಂಗ್ರಹಕಗಳ ಮೂಲಕ ಶೇರ್ ಮಾಡಿಕೊಳ್ಳುವುದರಿಂದ ಇವು ವಿಶ್ವಾಸಾರ್ಹವಾಗಿರುತ್ತದೆ. ಕ್ಲೌಡ್ ಅಥವಾ ಸೈಬರ್ ಸ್ಪೇಸ್ ಮೇಲೆ ಉಚಿತ ಡಿಜಿಟಲ್ ಲಾಕರ್ ಸೌಲಭ್ಯ ಪಡೆಯುವುದೇನೆಂದರೆ ಇಮೇಲ್ ಖಾತೆ ತೆರೆದಷ್ಟು ಸುಲಭವಾದ ಕೆಲಸ. ಇದು ಅಧಿಕೃತ, ಪ್ರಮಾಣಪತ್ರಗಳನ್ನು ಇ ದಾಖಲೆಯಲ್ಲಿ ಸುರಕ್ಷಿತವಾಗಿ ಕಾಪಾಡಿಕೊಳ್ಳುವ ವೈಯಕ್ತಿಕ ಸ್ಟೋರೇಜ್ ಸೌಲಭ್ಯವಾಗಿದೆ.

ಸೈನ್ ಅಪ್‌ಗೆ ನಿಮ್ಮ ಆಧಾರ್ ಕಾರ್ಡ್ ಸಂಖ್ಯೆ ದಾಖಲಿಸಬೇಕಾಗುತ್ತದೆ ಹಾಗೂ ನಿಮ್ಮ ಮೊಬೈಲ್‌ಗೆ ದಾಖಲಾತಿ ಕೇಂದ್ರದಿಂದ ಪಾಸ್‌ವರ್ಡ್ ಸಂದೇಶ ಬರುತ್ತದೆ.

ಡಿಜಿಲಾಕರ್ ಒಳಗೆ ಪ್ರವೇಶಿಸಲು ಈ ಪಾಸ್‌ವರ್ಡ್ ಬೇಕಾಗುತ್ತದೆ. ನಂತರ ನೀವೇ ಸ್ವಂತ ಪಾಸ್‌ವರ್ಡ್ ಹಾಕಿಕೊಳ್ಳಬಹುದು ಅಥವಾ ನಿಮ್ಮ ಗೂಗಲ್ ಫೇಸ್ ಬುಕ್ ಲಾಗಿನ್‌ಗೆ ಡಿಜಿಲಾಕರ್ ಲಿಂಕ್ ಕೊಟ್ಟುಕೊಳ್ಳಬಹುದು.

**ಇ– ಬಸ್ತಾ :** ಇದು ಡಿಜಿಟಲ್ ಇಂಡಿಯಾ ವೇದಿಕೆಯಡಿ ಕೇಂದ್ರ ಸರ್ಕಾರ ಇತ್ತೀಚೆಗೆ ಆರಂಭಿಸಿದ ಉಪಕ್ರಮಗಳಲ್ಲಿ ಒಂದಾಗಿದೆ. ಇದು ವಿದ್ಯಾರ್ಥಿ ಸಮುದಾಯಕ್ಕೆ ನೆರವಾಗುವ ಉಪಕ್ರಮವಾಗಿದೆ. ಬಸ್ತಾ ಎಂದರೆ ಹಿಂದಿಯಲ್ಲಿ ಪಾಠೀ ಚೀಲ ಎಂದರ್ಥ.

ವಿದ್ಯಾರ್ಥಿಗಳಿಗೆ, ಶಾಲಾ ಪಠ್ಯಪುಸ್ತಕ ಹಾಗೂ ಅಧ್ಯಯನ ಸಾಮಗ್ರಿಗಳ ಇ ಅವತರಣಿಯನ್ನು ಈ ಹೊಸ ವೇದಿಕೆ ಒದಗಿಸುತ್ತದೆ. ಶಿಕ್ಷಕ ವೃಂದ ಹಾಗೂ ವಿದ್ಯಾರ್ಥಿ ವೃಂದಗಳನ್ನು ಒಂದೇ ವೇದಿಕೆಗೆ ಕರೆತರುವ ಸಹಯೋಗದ ವೇದಿಕೆ ಇದಾಗಿದೆ. ಉಚಿತ ಹಾಗೂ ವಾಣಿಜ್ಯಿಕ ಉದ್ದೇಶದ ಪ್ರಕಾಶಕರು ಹಾಗೂ ಶಾಲೆಗಳನ್ನು ಕೂಡಾ ಇದು ಒಟ್ಟಿಗೇ ತರುತ್ತದೆ.

ಪೋರ್ಟಲ್ ಜತೆಗೆ ಇಂತಹ ಸಂಪನ್ಮೂಲಗಳು ದಕ್ಷ ನಿರ್ವಹಣೆಗೆ ಅಗತ್ಯ. ಬೆಂಬಲವಿರುವ ಚೌಕಟ್ಟನ್ನು ರೂಪಿಸಲಾಗಿದ್ದು ಇದನ್ನು ಟ್ಯಾಬ್ಲೆಟ್‌ಗಳ ಮೇಲೆ ಸಂಸ್ಥಾಪಿಸಿಕೊಳ್ಳಬಹುದಾಗಿದೆ. ಈ ಚೌಕಟ್ಟು, ವಿದ್ಯಾರ್ಥಿ, ಶಾಲೆ, ಪ್ರಕಾಶಕರು– ಈ ಮೂವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತದೆ.

ಶಿಕ್ಷಕ ವರ್ಗ ಪೋರ್ಟಲ್‌ನಿಂದ ಇ ಪುಸ್ತಕವನ್ನು ಹಾಗೂ ಇತರ ಡಿಜಿಟಲ್ ಸಾರ ಸಾಮಗ್ರಿಯನ್ನು ವಿದ್ಯಾರ್ಥಿಗಳ ಅನುಕೂಲಕ್ಕೆ ತಕ್ಕಂತೆ ರೂಪಿಸಿಕೊಳ್ಳಬಹುದಾಗಿದೆ. ಒಂದರ್ಥದಲ್ಲಿ ಅದು ಪ್ರತಿ ತರಗತಿ ಹಾಗೂ ಪ್ರತಿ ಕೋರ್ಸ್‌ಗಳಿಗೆ ಅಗತ್ಯವಾಗಿರುವ ಮಾಹಿತಿ ಚೀಲವಾಗಿರುತ್ತದೆ. ಶಾಲಾ ಪಠ್ಯ, ಚಿತ್ರವಿವರಣೆ, ಧ್ವನಿ, ದೃಶ್ಯ ಶ್ರಾವ್ಯ, ಪಟ್ಟಿ ಗ್ರಾಫಿಕ್ ಹೀಗೆ ವಿವಿಧ ಪ್ರತಿಕ್ರಿಯಾತ್ಮಕ ಮಾಹಿತಿ ವಿನಿಮಯದ ಕಲಿಕಾ ಸಾಮಗ್ರಿ ಅಲ್ಲಿರುತ್ತದೆ. ವಿದ್ಯಾರ್ಥಿಗಳು ತಮಗೆ ಬೇಕಾದ ಕಲಿಕಾ ವಿಧಾನದ ಮೂಲಕ ಮಾಹಿತಿ ಪಡೆಯಬಹುದಾಗಿದೆ.

ಶಿಕ್ಷಕರು ರೂಪಿಸಿದ ಇ–ಬಸ್ತಾವನ್ನು ಡೌನ್ ಲೋಡ್ ಮಾಡಿಕೊಳ್ಳಬಹುದಾಗಿದೆ. ಇದು ಡಿಜಿಟಲ್ ನಮೂನೆಯಲ್ಲಿರುವ ಕಾರಣ ಇದನ್ನು ಯಾವುದೇ ಸಾಧನದ ಮೇಲೆ ಸಂಗ್ರಹಿಸಬಹುದಾಗಿದೆ. ಕಾಪಿ ಮಾಡಿಕೊಳ್ಳಬಹುದಾಗಿದೆ, ಹಂಚಿಕೊಳ್ಳಬಹುದಾಗಿದೆ.

ವಿದ್ಯಾರ್ಥಿಗಳು ಪುಸ್ತಕಗಳ ಹೊರೆ ಹೊರುವ ಬಗ್ಗೆ ಚಿಂತಿಸಬೇಕಾಗಿಲ್ಲ. ಯಾವುದೇ ವೇಳೆ, ಯಾವುದೇ ಪ್ರದೇಶದಲ್ಲಿ ಕಲಿಕೆ ಸಾಧ್ಯವಾಗುತ್ತದೆ. ಮುದ್ರಣ, ಸಾಗಾಟ, ಮಾರಾಟದ ಗೋಜೇ ಇರುವುದಿಲ್ಲ. ಪ್ರಕಾಶಕರು ಕೂಡಾ ಮುದ್ರಣ ಪುಸ್ತಕಗಳ ಸಾಗಾಟ, ವಿಲೇವಾರಿ ಬಗ್ಗೆ ಚಿಂತಿಸಬೇಕಿಲ್ಲ. ಅವರು ಪಟ್ಟಿ ಮಾಡಿಕೊಂಡು ದೇಶಾದ್ಯಂತ ವಿವಿಧ ಶಾಲೆಗಳಿಗೆ ಡಿಜಿಟಲ್ ನಮೂನೆಯಲ್ಲೆ ಮಾಹಿತಿ ವಿತರಿಸಬಹುದಾಗಿದೆ.

ಪ್ರಕಾಶಕರು, ವಿದ್ಯಾರ್ಥಿಗಳಿಂದ ಮತ್ತು ಶಿಕ್ಷಕ ವೃಂದದಿಂದ, ಪ್ರತಿಕ್ರಿಯೆ ಪಡೆದುಕೊಳ್ಳಬಹುದಾಗಿದೆ. ಪ್ರಕಾಶಕರಿಗೆ ಇದರಲ್ಲಿ ನಕಲಿ, ನಕಲುಗಳ ನಷ್ಟವಿರುವುದಿಲ್ಲ. ಇ – ಬಸ್ತಾ ಆ್ಯಪ್‌ನ್ನು ಪೋರ್ಟಲ್‌ನಿಂದ ಉಚಿತವಾಗಿ ಡೌನ್‌ಲೋಡ್ ಮಾಡಿಕೊಂಡು ಆ್ಯಂಡ್ರೋಯ್ಡ್ ಸಾಧನ ಉಪಯೋಗಿಸಿ, ಬಳಸಬಹುದಾಗಿದೆ. ❑

(68ನೇ ಪುಟದಿಂದ)

## ಮಂಡ್ಯ : ಸಂಪೂರ್ಣ ಸ್ವಚ್ಛತೆಯೆಡೆಗೆ

**ಹಾಫ್ ಮ್ಯಾರಥಾನ್**

2014ರ ಸೆಪ್ಟೆಂಬರ್‌ನಲ್ಲಿ ಕ್ರೀಡಾ ಮಾಸಾಚರಣೆ ಮಾಡಲಾಗುತ್ತಿತ್ತು. ಈ ಸಂದರ್ಭವನ್ನು ಸಹ ನಿರ್ಮಲ ಭಾರತ ಅಭಿಯಾನದ ಪ್ರಚಾರಕ್ಕಾಗಿ ಬಳಸಿಕೊಳ್ಳಲು 'ಸ್ವಾಭಿಮಾನಕ್ಕಾಗಿ ಶೌಚಾಲಯ, ಆರೋಗ್ಯಕ್ಕಾಗಿ ಆಟೋಟ' ಎನ್ನುವ ಘೋಷ ವಾಕ್ಯದೊಂದಿಗೆ ಮಂಡ್ಯ ಹಾಫ್ ಮ್ಯಾರಥಾನ್ ಆಯೋಜಿಸಲಾಯಿತು. ಖ್ಯಾತ ಅಥ್ಲಿಟ್ ಅಶ್ವಿನಿ ನಾಚಪ್ಪ ಅವರು ಮ್ಯಾರಥಾನ್‌ಗೆ ಚಾಲನೆ ನೀಡಿ ಸ್ಪರ್ಧಾಳುಗಳೊಂದಿಗೆ ತಾವೂ ಹೆಜ್ಜೆ ಹಾಕಿದರು. ಹೀಗೆ, ಬಯಲು ಬಹಿರ್ದೆಸೆ ಮುಕ್ತ ಜಿಲ್ಲೆ ಮಾಡುವ ನಿಟ್ಟಿನಲ್ಲಿ ಸಾಧ್ಯವಾದ ಎಲ್ಲಾ ಅವಕಾಶಗಳನ್ನು ಬಳಸಿಕೊಂಡು ಮಂಡ್ಯ ಜಿಲ್ಲಾ ಪಂಚಾಯಿತಿ ರಾಷ್ಟ್ರದ ಗಮನ ಸೆಳೆದಿದೆ. ❑

# ವಾರ್ತಾ ವಿಶೇಷ

ದೇಶದ ತಯಾರಿಕಾ ವಲಯದ ಚಟುವಟಿಕೆ ಮತ್ತು ಪ್ರಧಾನ ಸರಕುಗಳ ಉತ್ಪಾದನೆ ಉತ್ತಮವಾಗಿದೆ. ಹೀಗಾಗಿ, ಕೈಗಾರಿಕಾ ತಯಾರಿಕೆ ಜುಲೈ ತಿಂಗಳಿನಲ್ಲಿ ಶೇ. 4.2 ರಷ್ಟು ಗರಿಷ್ಠ ಪ್ರಗತಿ ಸಾಧಿಸಿದೆ. ಕಳೆದ ವರ್ಷ ಜುಲೈನಲ್ಲಿ ಕೈಗಾರಿಕಾ ಪ್ರಗತಿ ಶೇ. 0.9 ರಷ್ಟಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಉತ್ತಮ (ಶೇ. 3.3 ರಷ್ಟು ಹೆಚ್ಚು) ಪ್ರಗತಿ ದಾಖಲಾಗಿದೆ ಎಂದು ಕೇಂದ್ರ ಅಂಕಿಅಂಶ ಕಚೇರಿ (ಸಿಎಸ್‌ಒ) ಮಾಹಿತಿ ಪ್ರಕಟಿಸಿದೆ. ಜೂನ್ ತಿಂಗಳಿಗೆ ಐಐಪಿ ಪ್ರಗತಿಯನ್ನು ಶೇ. 3.8 ರಿಂದ ಶೇ. 4.36ಕ್ಕೆ ಪರಿಷ್ಕರಿಸಲಾಗಿದೆ. ಒಟ್ಟು ಕೈಗಾರಿಕಾ ಪ್ರಗತಿಯಲ್ಲಿ ಶೇ. 75 ರಷ್ಟು ಕೊಡುಗೆ ನೀಡುವ ತಯಾರಿಕಾ ವಲಯದ ಪ್ರಗತಿ ಕಳೆದ ವರ್ಷದ ಶೇ. 0.3 ರಿಂದ ಶೇ. 4.7 ಕ್ಕೆ ಏರಿಕೆಯಾಗಿದೆ. ಪ್ರಧಾನ ಸರಕುಗಳ ವಲಯವೂ ಶೇ. 10.6 ರಷ್ಟು ಉತ್ತಮ ಪ್ರಗತಿಯನ್ನೇ ಸಾಧಿಸಿದೆ. ಅಂತೆಯೇ ಗಣಿ ವಲಯ ಶೇ. 1.3 ರಷ್ಟು ಪ್ರಗತಿ ಕಂಡಿವೆ. ಆದರೆ, ದೇಶದ ವಿದ್ಯುತ್ ವಲಯದ ಪ್ರಗತಿ ಶೇ. 11.4 ರಿಂದ ಶೇ. 3.5 ಕ್ಕೆ ಇಳಿಕೆಯಾಗಿದೆ. ಒಟ್ಟಾರೆ ಗ್ರಾಹಕ ಬಳಕೆ ವಸ್ತುಗಳ ತಯಾರಿಕೆ ಶೇ. 1.3 ರಷ್ಟಿದೆ. ತಯಾರಿಕಾ ವಲಯದ ಪ್ರಮುಖ 22 ವಲಯಗಳಲ್ಲಿ 12 ವಲಯಗಳ ಉತ್ತಮ ಪ್ರಗತಿ ದಾಖಲಿಸಿವೆ.

* * *

ದೇಶದ ಚಾಲ್ತಿ ಖಾತೆ ಕೊರತೆ (ಆಮದು–ರಫ್ತು ನಡುವಿನ ಅಂತರ) ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ಶೇ. 1.2 ಕ್ಕೆ ತಗ್ಗಿದ್ದು, ರೂ. 4.09 ಲಕ್ಷ ಕೋಟಿಗಳಷ್ಟಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ಶೇ. 1.6 ರಷ್ಟು ಅಂದರೆ ರೂ. 5.14 ಲಕ್ಷ ಕೋಟಿಗಳಷ್ಟಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಚಾಲ್ತಿ ಖಾತೆ ಕೊರತೆ ಅಂತರ ಶೇ. 0.4 ರಷ್ಟು ತಗ್ಗಿದೆ. ಆದರೆ 2015ರ ಮಾರ್ಚ್ ತಿಂಗಳಿಗೆ ಹೋಲಿಸಿದರೆ ಶೇ. 02. ರಷ್ಟು ಏರಿಕೆಯಾಗಿದೆ ಎಂದು ರಿಸರ್ವ್ ಬ್ಯಾಂಕ್ ತಿಳಿಸಿದೆ. ಸೇವಾ ವಲಯದ ರಫ್ತು ವಹಿವಾಟಿನಿಂದ ಗರಿಷ್ಠ ಲಾಭ ಬಂದಿರುವುದರಿಂದ ಸಿಎಡಿ ತಗ್ಗಲು ನೆರವಾಯಿತು ಎಂದು ಆರ್‌ಬಿಐ ಹೇಳಿದೆ.

* * *

ದೇಶದ ಉದ್ಯಮ ಸ್ನೇಹಿ ರಾಜ್ಯಗಳ ಪಟ್ಟಿಯನ್ನು ವಿಶ್ವ ಬ್ಯಾಂಕ್ ಬಿಡುಗಡೆ ಮಾಡಿದ್ದು, ಈ ಪಟ್ಟಿಯಲ್ಲಿ ಕರ್ನಾಟಕ ಒಂಬತ್ತನೇ ಸ್ಥಾನದಲ್ಲಿದೆ. ಉದ್ಯಮಸ್ನೇಹಿ ರಾಜ್ಯಗಳ ಪಟ್ಟಿಯಲ್ಲಿ ಗುಜರಾತ್ ಮೊದಲ ಸ್ಥಾನದಲ್ಲಿದೆ. ಆಂಧ್ರಪದ್ರದೇಶ ಹಾಗೂ ಜಾರ್ಖಂಡ್ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿವೆ. ರಾಜ್ಯಗಳಲ್ಲಿ ಉದ್ಯಮಕ್ಕೆ ಅನುಕೂಲಕರವಾದ ವಾತಾವರಣ ಆಧರಿಸಿ ವಿಶ್ವಬ್ಯಾಂಕ್ ಉದ್ಯಮ ಸುಧಾರಣೆಗಾಗಿ ರಾಜ್ಯಗಳು ಕೈಗೊಂಡ ಕ್ರಮದ ಮೌಲ್ಯಮಾಪನ' ಎಂಬ ವರದಿಯನ್ನು ಬಿಡುಗಡೆ ಮಾಡಿದೆ.

* * *

ರಾಷ್ಟ್ರಪತಿ ಪ್ರಣವ್ ಮುಖರ್ಜಿ ಅವರು ಶ್ರೀ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಗೆ (ಇಸ್ರೊ) 2014ನೇ ಸಾಲಿನ ಗಾಂಧಿ ಶಾಂತಿ ಪ್ರಶಸ್ತಿಯನ್ನು ಪ್ರದಾನ ಮಾಡಿದ್ದಾರೆ. ಬಾಹ್ಯಾಕಾಶ ಆಧಾರಿತ ಸೇವೆಗಳ ಮೂಲಕ ಭಾರತದ ಪರಿವರ್ತನೆಗೆ ನೀಡಿದ ಕೊಡುಗೆಯನ್ನು ಪರಿಗಣಿಸಿ ಈ ಪ್ರಶಸ್ತಿ ನೀಡಲಾಗಿದೆ. ❑


## Subscription Coupon

**[For New membership /Renewal/Change of Address]**

I want to subscribe to :

| | | |
|---|---|---|
| Yojana / Kurukshetra / Ajkal / | : | 1 yr. Rs.100/-; 2 yrs, Rs.180/- ; 3 yrs, Rs.250/- |
| Bal Bharati | : | 1 yr. Rs.80/-; 2 yrs, Rs.150/- ; 3 yrs, Rs.200/- |

**(Circle the magazine of your choice and the period of subscription)**

DD/PO/MO No.________________________________________ date ________________

Name (in block letters) : ________________________________________

Subscriber's profile : Student / Academician / Institution / Others

Address : ________________________________________

________________________________________

PIN : ______________________________

The amount may kindly be sent in the form of D.D. It should be drawn in favour of ADG (I/C), Publications Division, Min. of I & B, GOI and payable at New Delhi. The D.D. along with duly filled cupon may kindly be sent to The Business Manager (Journals), Publications Division, Ministry of Information & Broadcasting, Room No. 48-53, Soochna Bhawan, CGO Complex, Lodi Road, New Delhi – 110 003.

Please allow us 4 to 6 weeks for the dispatch of the first issue.
P.S. : For Renewal / change in address, please quote your subscription number